ಬುಧವಾರ, ಫೆಬ್ರುವರಿ 24, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 55 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

‘ಪ್ಲೇ ಮ್ಯೂಸಿಕ್’ನಿಂದ ‘ಯೂಟ್ಯೂಬ್ ಮ್ಯೂಸಿಕ್’ಗೆ ಹಾಡುಗಳನ್ನು ವರ್ಗಾಯಿಸುವ ವ್ಯವಸ್ಥೆಯನ್ನೂ ಗೂಗಲ್ ಸುಲಭ ಮಾಡಿಕೊಟ್ಟದೆ...



ಅನುಭವ ಮಂಟಪ
ಕುರುಬರನ್ನು ‘ಬುಡಕಟ್ಟು’ ಎಂದು ಪರಿಗಣಿಸಬೇಕೇ?

ಮಾಸ್ಕ್ ಧರಿಸಲು ಜನರ ಅಸಡ್ಡೆ 8

‘ಪೊಗರು’ ವಿವಾದಾತ್ಮಕ ದೃಶ್ಯಗಳಿಗೆ ಕತ್ತರಿ 7

ಸೆನ್ಸೆಕ್ಸ್	ನಿಫ್ಟಿ	₹/$
49,751 ▲	14,708 ▲	72.46 ▲

ಶಿವಮೊಗ್ಗದ ಹುಣಸೋಡು ಪ್ರಕರಣ ಮಾಸುವ ಮುನ್ನವೇ ಗುಡಿಬಂಡೆ ಬಳಿ ದುರಂತ

6 ಜೀವ ಬಲಿ ಪಡೆದ ಜಿಲೆಟಿನ್ ಸ್ಫೋಟ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ದಾಳಿಯ ವೇಳೆ ಅಧಿಕಾರಿಗಳ ಕೈಗೆ ಸಿಗದಂತೆ ಸ್ಫೋಟಕಗಳನ್ನು ಬೇರೆಡೆ ಸಾಗಿಸಿ, ಅಡಗಿಸಿಡಲು ಮುಂದಾಗಿದ್ದೇ ಚಿಕ್ಕಬಳ್ಳಾಪುರ ಜಿಲ್ಲೆಯ ಹಿರೇನಾಗವಲ್ಲಿ ಬಳಿ ಸೋಮವಾರ ತಡರಾತ್ರಿ ಸಂಭವಿಸಿದ ಜಿಲೆಟಿನ್ ಸ್ಫೋಟಕ್ಕೆ ಕಾರಣ ಎಂದು ಶಂಕಿಸಲಾಗಿದೆ. ಈ ಸ್ಫೋಟದಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ.

ಒಂದು ತಿಂಗಳ ಹಿಂದೆ ಶಿವಮೊಗ್ಗ ಜಿಲ್ಲೆಯ ಹುಣಸೋಡಿನಲ್ಲಿ ನಡೆದ ಪ್ರಕರಣದ ನಂತರ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕ್ರಷರ್ ಮತ್ತು ಕಲ್ಲುಗಣಿಗಳ ಮೇಲೆ ಅಧಿಕಾರಿಗಳ ದಾಳಿ ಹೆಚ್ಚಾಗಿತ್ತು. ಫೆಬ್ರುವರಿಯಲ್ಲಿಯೇ ಕ್ರಷರ್ ಮೇಲೆ ಅಧಿಕಾರಿಗಳು ಎರಡು ಬಾರಿ ದಾಳಿ ನಡೆಸಿದ್ದರು.

ಹಾಗಾಗಿ ಕ್ರಷರ್ ಮಾಲೀಕರು ಅಪಾರ ಪ್ರಮಾಣದ ಜಿಲೆಟಿನ್ ಮತ್ತು ಇತರ ಸ್ಫೋಟಕ ಸಾಮಗ್ರಿಗಳನ್ನು ಸಮೀಪದ ಅರಣ್ಯ ಪ್ರದೇಶದಲ್ಲಿ ಅಡಗಿಸಿಡುವಂತೆ ಸಿಬ್ಬಂದಿಗೆ ಸೂಚಿಸಿದ್ದರು. ಆದರೆ ಸಾಗಣೆಯ ಸಮಯದಲ್ಲಿ ನಿರ್ಲಕ್ಷ್ಯದಿಂದಾಗಿ ಈ ದುರಂತ ಸಂಭವಿಸಿದೆ ಎಂದು ಹೇಳಲಾಗುತ್ತಿದೆ.

ಸ್ಫೋಟಕ್ಕೆ ಬಲಿಯಾದ ಆರು ಜನರಲ್ಲಿ ಮೂವರು ನೆರೆಯ ಆಂಧ್ರ ಪ್ರದೇಶದವರು. ಇಬ್ಬರು ಸ್ಥಳೀಯರು ಮತ್ತು ಒಬ್ಬ ನೇಪಾಳದ ವ್ಯಕ್ತಿ.

ಸ್ಫೋಟದ ರಭಸಕ್ಕೆ ವಾಹನದಲ್ಲಿದ್ದವರ ದೇಹಗಳ ಛಿದ್ರಗೊಂಡು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಕೆಲವು ಗುರುತು ಸಿಗದಷ್ಟು ವಿಕಾರಗೊಂಡಿವೆ.

ಮೃತಪಟ್ಟ ಅಭಿಲಾಷ ನಾಯಕ್ ಮತ್ತು ರಾಮು ಸ್ಥಳೀಯರು. ಕ್ರಷರ್‌ನಲ್ಲಿ ಕೆಲಸಕ್ಕಿದ್ದ ಮಹೇಶ್ ಸಿಂಗ್ ಬೋರಾ ನೇಪಾಳದವರು ಮತ್ತು ಕ್ವಾರಿ ಮ್ಯಾನೇಜರ್ ಮುರಳಿ, ಉಮಾಕಾಂತ ಮತ್ತು ಗಂಗಾಧರ ಬಾಬು ಆಂಧ್ರ ಪ್ರದೇಶದವರು. ದುರಂತದಲ್ಲಿ ಬದುಕುಳಿದ ವಾಹನ ಚಾಲಕ ಮೊಹಮ್ಮದ್ ರಿಯಾಜ್ ಅನ್ಸಾರಿ ತೀವ್ರವಾಗಿ ಗಾಯಗೊಂಡಿದ್ದು, ಅವರನ್ನು ಚಿಕ್ಕಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಎರಡನೇ ದಾಳಿ: ಫೆಬ್ರುವರಿ 7 ರಂದು ಈ ಕ್ರಷರ್ ಮೇಲೆ ದಾಳಿ ನಡೆಸಿದ್ದ ಅಧಿಕಾರಿಗಳ ತಂಡ ಪಾಲುದಾರರಾದ ಗುಡಿಬಂಡೆಯ ನಾಗರಾಜ್ ರೆಡ್ಡಿ ಮತ್ತು ಆಂಧ್ರ ಪ್ರದೇಶದ ಶಿವಾರೆಡ್ಡಿ ವಿರುದ್ಧ ಪ್ರಕರಣ ದಾಖಲಿಸಿತ್ತು. ಜಿಲೆಟಿನ್ ಮತ್ತು ಇತರ ಸ್ಫೋಟಕಗಳನ್ನು ಸಾಗಿಸುತ್ತಿದ್ದ ಆರೋಪದ ಮೇಲೆ ಗಂಗೋಜಿ ರಾವ್ ಎಂಬಾತನನ್ನು ಪೊಲೀಸರು ಬಂಧಿಸಿದ್ದರು.

ಭಯಾನಕ ದೃಶ್ಯ: ಸ್ಫೋಟ ಸಂಭವಿಸಿದ ಸ್ಥಳದ ದೃಶ್ಯ ಭಯಾನಕವಾಗಿತ್ತು. ಅರ್ಧ ತುಂಡಾದ ಅರೆಬೆಂದ ಶವಗಳು, ಅವಯವಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

ಘಟನಾ ಸ್ಥಳದಿಂದ ಮೃತದೇಹಗಳನ್ನು ಕೊಂಡೊಯ್ಯಲಾಯಿತು

ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3bsfCXQ

ಕರ್ನಾಟಕದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಅನಧಿಕೃತ ಕ್ರಷರ್, ಕ್ವಾರಿಗಳಿವೆ ಎಂದು ಹೇಳಲಾಗುತ್ತಿದೆ. ಇವುಗಳ ಪಟ್ಟಿಯನ್ನು @CMofKarnataka ಅವರು ತಕ್ಷಣ ಬಿಡುಗಡೆಗೊಳಿಸಬೇಕು ಮತ್ತು ಅವುಗಳನ್ನು ನಿರ್ದಾಕ್ಷಿಣ್ಯವಾಗಿ ಮುಚ್ಚುವ ಕೆಲಸ ಶುರು ಮಾಡಬೇಕು

ಸಿದ್ದರಾಮಯ್ಯ
ಕಾಂಗ್ರೆಸ್ ಮುಖಂಡ

ಸಿಐಡಿ ತನಿಖೆಗೆ ಆದೇಶ

ಹಿರೇನಾಗವಲ್ಲಿ ಸ್ಫೋಟ ಪ್ರಕರಣ ಮತ್ತು ಅಧಿಕಾರಿಗಳ ಪಾತ್ರ ಕುರಿತು ಸಿಐಡಿ ತನಿಖೆ ನಡೆಸಲು ಆದೇಶಿಸಿದ್ದೇನೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

‘ಹುಣಸೋಡು ದುರಂತದ ಬಳಿಕ ಸರ್ಕಾರ ಕಲ್ಲು ಗಣಿಗಾರಿಕೆ ಸಂಬಂಧ ಕಠಿಣ ಕ್ರಮಗಳನ್ನು ತೆಗೆದುಕೊಂಡಿದೆ. ಮೊದಲು ಮೂರು ತಿಂಗಳಿಗೊಮ್ಮೆ ಪರಿಶೀಲನೆ ನಡೆಸಲಾಗುತ್ತಿತ್ತು. ಹುಣಸೋಡು ಘಟನೆ ಬಳಿಕ ಪ್ರತಿ ತಿಂಗಳು ಕ್ರಷರ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದು ತಿಳಿಸಿದರು.

ತಲಾ ₹5 ಲಕ್ಷ ಪರಿಹಾರ: ಸ್ಫೋಟದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಮುಖ್ಯಮಂತ್ರಿ ತಲಾ ₹ 5 ಲಕ್ಷ ಪರಿಹಾರ ಘೋಷಿಸಿದ್ದಾರೆ. ಕಾರ್ಮಿಕ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದಲೂ ಮೃತರ ಕುಟುಂಬಗಳಿಗೆ ಹೆಚ್ಚುವರಿ ಪರಿಹಾರ ಹಾಗೂ ಸಹಾಯ ಸೌಲಭ್ಯ ಒದಗಿಸುವಂತೆ ಸಚಿವ ಮುರುಗೇಶ್ ನಿರಾಣಿ ಅವರಿಗೆ ಮನವಿ ಮಾಡುವುದಾಗಿ ಸಂಸದ ಬಚ್ಚೇಗೌಡ ತಿಳಿಸಿದರು.

ಟೂಲ್‌ಕಿಟ್: ದಿಶಾ ಬಿಡುಗಡೆ

‘ಆರೋಪಿ ವಿರುದ್ಧದ ಅತ್ಯಲ್ಪ ಸಾಕ್ಷ್ಯದಲ್ಲಿಯೂ ಹುರುಳಿಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಟೂಲ್‌ಕಿಟ್ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ಬೆಂಗಳೂರಿನ ಪರಿಸರ ಕಾರ್ಯಕರ್ತೆ ದಿಶಾ ರವಿ ಅವರಿಗೆ ದೆಹಲಿಯ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು ಜಾಮೀನು ನೀಡಿದ್ದು, ಮಂಗಳವಾರ ರಾತ್ರಿಯೇ ಅವರು ತಿಹಾರ್ ಜೈಲಿನಿಂದ ಬಿಡುಗಡೆಗೊಂಡಿದ್ದಾರೆ.



ದಿಶಾ ರವಿ

‘22 ವರ್ಷ ವಯಸ್ಸಿನ ಆರೋಪಿಯ ವಿರುದ್ಧ ಅತ್ಯಲ್ಪ ಮತ್ತು ಹುರುಳಿಲ್ಲದ ಸಾಕ್ಷ್ಯಗಳಷ್ಟೇ ಇವೆ. ಸಮಾಜದಲ್ಲಿ ಬಲವಾದ ಬೇರುಗಳನ್ನು ಹೊಂದಿರುವ ಅವರಿಗೆ ಅಪರಾಧ ಹಿನ್ನೆಲೆ ಇಲ್ಲವೇ ಇಲ್ಲ’ ಎಂದು ಜಾಮೀನು ಮಂಜೂರು ಮಾಡಿದ ನ್ಯಾಯಾಧೀಶ ಧರ್ಮೇಂದ್ರ ರಾಣಾ ಹೇಳಿದ್ದಾರೆ.

ಜಾಮೀನು ಅರ್ಜಿಯ ವಿಚಾರಣೆ ನಡೆಸಿದ್ದ ರಾಣಾ ಅವರು ಶನಿವಾರ ಆದೇಶವನ್ನು ಕಾಯ್ದಿರಿಸಿದ್ದರು. ರೈತರ ಪ್ರತಿಭಟನೆಗೆ ಬೆಂಬಲ ಕ್ರೋಡೀಕರಿಸಲು ರೂಪಿಸಲಾಗಿದ್ದ ಟೂಲ್‌ಕಿಟ್ ಅನ್ನು ಪರಿಶೀಲಿಸಿದರೆ, ಹಿಂಸೆಗೆ ಕಾರಣವಾಗುವ ಯಾವ ಅಂಶವೂ ಅದರಲ್ಲಿ ಇಲ್ಲ ಎಂದು ಹೇಳಿದ್ದರು.

ದಿಶಾ ಅವರು ಟೂಲ್‌ಕಿಟ್ ಮೂಲಕ ಜನರು ದೇಶದ ಬಗ್ಗೆ ಅಸಮಾಧಾನಗೊಳ್ಳುವಂತೆ ಮಾಡಿದ್ದರು ಎಂದು ದೆಹಲಿ ಪೊಲೀಸರು ಮಾಡಿದ ಆರೋಪವನ್ನೇ ನ್ಯಾಯಾಲಯವು ತನ್ನ 18 ಪುಟಗಳ ಆದೇಶದಲ್ಲಿ ತರಾಟೆಗೆ ತೆಗೆದುಕೊಂಡಿದೆ. ‘ಪ್ರಜಾಪ್ರಭುತ್ವ ವ್ಯವಸ್ಥೆ ಇರುವ ಯಾವುದೇ ದೇಶದಲ್ಲಿ ಪ್ರಜೆಗಳು ಸರ್ಕಾರದ ಆತ್ಮಸಾಕ್ಷಿ ಸಂರಕ್ಷಕರಂತೆ ಕೆಲಸ ಮಾಡುತ್ತಾರೆ. ಸರ್ಕಾರದ ನೀತಿಗಳನ್ನು ಒಪ್ಪಿಲ್ಲ ಎಂಬ ಒಂದೇ ಕಾರಣಕ್ಕೆ ಜನರನ್ನು ಜೈಲಿಗೆ ತಳ್ಳಲಾಗದು ಎಂಬುದು ನನ್ನ ಅಭಿಪ್ರಾಯ’ ಎಂದು ನ್ಯಾಯಾಧೀಶರು ಹೇಳಿದರು.

ಐದು ಸಾವಿರ ವರ್ಷಗಳ ನಮ್ಮ ನಾಗರಿಕತೆಯು ವಿವಿಧ ರೀತಿಯ ಚಿಂತನೆಗಳ ಬಗ್ಗೆ ಯಾವತ್ತೂ ಅಸಡ್ಡೆ ಹೊಂದಿರಲಿಲ್ಲ ಎಂದು ಋಗ್ವೇದವನ್ನು ಉಲ್ಲೇಖಿಸಿ ರಾಣಾ ಅವರು ಹೇಳಿದ್ದಾರೆ.

ಭಿನ್ನಮತ, ವೈವಿಧ್ಯ, ಅಸಮಾಧಾನ ಮತ್ತು ಅಸಮ್ಮತಿಗಳೆಲ್ಲವೂ ಸರ್ಕಾರದ ನೀತಿಯಲ್ಲಿ ವಸ್ತುನಿಷ್ಠತೆ ಮೂಡಿಸುವ ನ್ಯಾಯಬದ್ಧ ಸಾಧನಗಳು ಎಂಬುದನ್ನು ಒಪ್ಪಿಕೊಳ್ಳಲಾಗಿದೆ. ಸರ್ಕಾರದ ಒಣ ಜಂಭವನ್ನು ತೃಪ್ತಿಪಡಿಸುವುದಕ್ಕಾಗಿ ದೇಶದ್ರೋಹ ಕಾಯ್ದೆಯನ್ನು ಬಳಸಿಕೊಳ್ಳಲಾಗದು ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಜಾಮೀನಿಗೆ ಅರ್ಜಿ ಸಲ್ಲಿಸಿದ ಶಾಂತನು

ಟೂಲ್‌ಕಿಟ್ ಪ್ರಕರಣದ ಆರೋಪಿ ಶಾಂತನು ಮುಲುಕ್ ಅವರು ದೆಹಲಿಯ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನಿಗಾಗಿ ಮಂಗಳವಾರ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಯು ನ್ಯಾಯಾಧೀಶ ರಾಣಾ ಅವರ ಮುಂದೆ ಬುಧವಾರ ವಿಚಾರಣೆಗೆ ಬರುವ ಸಾಧ್ಯತೆ ಇದೆ.

ಮುಂಬೈ ಹೈಕೋರ್ಟ್ ಶಾಂತನು ಅವರಿಗೆ ಇದೇ 16ರಂದು 10 ದಿನಗಳ ಜಾಮೀನು ನೀಡಿತ್ತು. ದೆಹಲಿಯ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಜಾಮೀನಿಗೆ ಅರ್ಜಿ ಸಲ್ಲಿಸುವುದಕ್ಕಾಗಿ ಈ ತಾತ್ಕಾಲಿಕ ಜಾಮೀನು ನೀಡಲಾಗಿತ್ತು. ಟೂಲ್‌ಕಿಟ್ ಪ್ರಕರಣದಲ್ಲಿ ಶಾಂತನು ಮತ್ತು ಮುಂಬೈನ ವಕೀಲೆ ನಿಕಿತಾ ಜೇಕಬ್ ಅವರನ್ನು ಆರೋಪಿಗಳನ್ನಾಗಿ ಹೆಸರಿಸಲಾಗಿದೆ.

ಇನ್ನೊಂದು ಸುದ್ದಿ 8

ಎಸಿಬಿ ಕಾರ್ಯವೈಖರಿ: ಕೆಆರ್‌ಎಸ್‌ನಿಂದ ದಾಖಲೆ ಬಿಡುಗಡೆ

₹120 ಕೋಟಿ ಖರ್ಚು: 4 ಪ್ರಕರಣಗಳಲ್ಲಿ ಶಿಕ್ಷೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಆರಂಭವಾದ ದಿನದಿಂದ ಐದು ವರ್ಷಗಳ ಅವಧಿಯಲ್ಲಿ ನಾಲ್ಕು ಪ್ರಕರಣಗಳಲ್ಲಿ ಮಾತ್ರ ಅಪರಾಧಿಗಳಿಗೆ ಶಿಕ್ಷೆಯಾಗಿದೆ. ಆದರೆ ಎಸಿಬಿಗಾಗಿ ಈ ಅವಧಿಯಲ್ಲಿ ₹120 ಕೋಟಿ ವೆಚ್ಚವಾಗಿದೆ!

ಎಸಿಬಿ ಕಾರ್ಯವೈಖರಿಗೆ ಸಂಬಂಧಿಸಿದಂತೆ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಕಾರ್ಯಕಾರಿ ಸಮಿತಿ ಸದಸ್ಯ ಡಾ.ಕೆ. ಶಿವರಾಮ್ ಅವರು ಸಂಸ್ಥೆಯಿಂದ ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದಿರುವ ದಾಖಲೆಗಳನ್ನು ಪಕ್ಷದ ಮುಖಂಡರು ಮಂಗಳವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು.

‘2016–17ರಿಂದ 2020–21ರವರೆಗೆ ಎಸಿಬಿಗಾಗಿ ₹120 ಕೋಟಿ ವೆಚ್ಚ ಮಾಡಲಾಗಿದೆ. ಬೆಂಗಳೂರು ಕಚೇರಿಯೊಂದಕ್ಕೆ ₹ 60.57 ಕೋಟಿ ವೆಚ್ಚವಾಗಿದೆ. 1,445 ಪ್ರಕರಣಗಳನ್ನು ದಾಖಲಿಸಿ, ಇಷ್ಟು ಖರ್ಚು ಮಾಡಿದ್ದರೂ, ಭ್ರಷ್ಟಾಚಾರ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ವಿಷಯದಲ್ಲಿ ಎಸಿಬಿಯಿಂದ ಸಾಧನೆಯೇನೂ ಆಗಿಲ್ಲ’ ಎಂದು ಶಿವರಾಮ್ ತಿಳಿಸಿದರು.

2016ರಲ್ಲಿ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ 31 ಮತ್ತು ಸರ್ಕಾರದ ಸೇವೆ ಒದಗಿಸಲು ಲಂಚಕ್ಕೆ ಬೇಡಿಕೆ ಇಟ್ಟು, ಪಡೆದ ಆರೋಪದಡಿ 99 ಪ್ರಕರಣಗಳನ್ನು ದಾಖಲಿಸಲಾಗಿತ್ತು. ಈ ಪೈಕಿ ನಾಲ್ಕರಲ್ಲಿ ಮಾತ್ರ ಅಪರಾಧಿಗಳಿಗೆ ನ್ಯಾಯಾಲಯದಿಂದ ಶಿಕ್ಷೆಯಾಗಿದೆ. ಉಳಿದ ಯಾವುದೇ ಪ್ರಕರಣಗಳೂ ಗುರಿ ಮುಟ್ಟಿಲ್ಲ ಎಂದರು.

‘ಜೆಸಿಬಿ (ಜೆಡಿಎಸ್, ಕಾಂಗ್ರೆಸ್ ಮತ್ತು ಬಿಜೆಪಿ) ಪಕ್ಷಗಳು ಒಟ್ಟಾಗಿ ಕ್ಲೋನಿಂಗ್ ವಿಧಾನದಲ್ಲಿ ಅಸ್ತಿತ್ವಕ್ಕೆ ತಂದ ಬಿಳಿಯಾನೆಯೇ ಎಸಿಬಿ. 2016ರಿಂದ ಈವರೆಗೆ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ 186, ಲಂಚ ಪಡೆದ ಆರೋಪದಡಿ 957 ಸೇರಿದಂತೆ 1,445 ಪ್ರಕರಣಗಳನ್ನು ದಾಖಲಿಸಲಾಗಿದೆ. ಎಸಿಬಿ ಬೆಂಗಳೂರು ನಗರ ಠಾಣೆಯಲ್ಲಿ 213 ಪ್ರಕರಣಗಳನ್ನು ದಾಖಲಿಸಲಾಗಿದೆ. ಆದರೆ, ಶೇ 1ರಷ್ಟು ಪ್ರಕರಣಗಳಲ್ಲೂ ಶಿಕ್ಷೆಯಾಗಿಲ್ಲ’ ಎಂದರು.

ಹಣ ಲೂಟಿಗೆ ದುರ್ಬಳಕೆ: ಕೆಆರ್‌ಎಸ್ ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್ ಮಾತನಾಡಿ, ‘ಎಸಿಬಿಯನ್ನು ಬೆದರು ಬೊಂಬೆಯಂತೆ ಬಳಸಲಾಗುತ್ತಿದೆ. ಸರ್ಕಾರಿ ಅಧಿಕಾರಿಗಳ ವಿರುದ್ಧದ ದೂರುಗಳನ್ನು ಮುಚ್ಚಿ ಹಾಕುವುದಕ್ಕೆ ಎಸಿಬಿ ಅಸ್ತಿತ್ವದಲ್ಲಿದೆ. 19,000ಕ್ಕೂ ಹೆಚ್ಚು ದೂರುಗಳು ಸಂಸ್ಥೆಗೆ ಬಂದಿದ್ದು, ಬಹುತೇಕ ಪ್ರಕರಣಗಳನ್ನು ಮುಕ್ತಾಯಗೊಳಿಸಲಾಗಿದೆ’ ಎಂದು ದೂರಿದರು.

ಲೋಕಾಯುಕ್ತ ಬಲಪಡಿಸಲಿ: ಹಲವು ಕಾರಣಗಳನ್ನು ನೀಡಿ ಭ್ರಷ್ಟರ ವಿರುದ್ಧದ ವಿಚಾರಣೆ ಕೈಬಿಡಲಾಗುತ್ತಿದೆ. ದೊಡ್ಡ ಹಗರಣಗಳ ಕುರಿತು ಮಾಹಿತಿ ಹೊರಬಿದ್ದರೂ ತನಿಖೆ ನಡೆಸುತ್ತಿಲ್ಲ. ನೇರವಾಗಿ ಸರ್ಕಾರದ ಹಿಡಿತದಲ್ಲೇ ಕೆಲಸ ಮಾಡುತ್ತಿರುವ ಎಸಿಬಿಯಿಂದ ಜನರಿಗೆ ನ್ಯಾಯ ದೊರಕುವುದಿಲ್ಲ. ಹಿಂದಿನಂತೆ ಲೋಕಾಯುಕ್ತವನ್ನು ಬಲಪಡಿಸಬೇಕು ಎಂದು ಆಗ್ರಹಿಸಿದರು.

‘ಸಿದ್ದರಾಮಯ್ಯ ಪಾಪದ ಕೂಸು’

‘ಲೋಕಾಯುಕ್ತವನ್ನು ದುರ್ಬಲಗೊಳಿಸಿ, ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸ್ಥಾಪಿಸಿದವರು ಸಿದ್ದರಾಮಯ್ಯ. ಎಸಿಬಿ ಅವರ ಪಾಪದ ಕೂಸು. ಭ್ರಷ್ಟಾಚಾರದ ಪ್ರಕರಣಗಳನ್ನು ಮುಚ್ಚಿ ಹಾಕಲೆಂದೇ ಈ ಸಂಸ್ಥೆಯನ್ನು ಅಸ್ತಿತ್ವಕ್ಕೆ ತರಲಾಗಿತ್ತು’ ಎಂದು ಕೆಆರ್‌ಎಸ್ ಕಾರ್ಯದರ್ಶಿ ಮಲ್ಲಿಕಾರ್ಜುನ ಭಟ್ಟರಹಳ್ಳಿ ಆರೋಪಿಸಿದರು. ಅಧಿಕಾರಕ್ಕೆ ಬಂದರೆ 24 ಗಂಟೆಗಳೊಳಗೆ ಎಸಿಬಿ ರದ್ದು ಮಾಡಿ, ಲೋಕಾಯುಕ್ತದ ಬಲವರ್ಧನೆ ಮಾಡುವುದಾಗಿ ಹೇಳಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮೌನಕ್ಕೆ ಶರಣಾಗಿದ್ದಾರೆ ಎಂದರು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–9

ಇಂದಿನ ಪಾಡ್‌ಕಾಸ್ಟ್ ವಿಶೇಷ

ಕನ್ನಡ ಧ್ವನಿ

ಝಣ ಝಣ ಕಾಂಚಾಣ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ರಾಜಕೀಯ ರಸಪ್ರಸಂಗ

ದೇವೇಗೌಡರ ಭಕ್ತಿಯ ಪರಾಕಾಷ್ಠೆ

ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ

ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

‘ಬಡವರಿಗೆ ಪೆಟ್ ಸ್ಕ್ಯಾನ್ ಉಚಿತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಡತನ ರೇಖೆಗಿಂತ ಕೆಳಗಿರುವವರಿಗೆ ಪೊಸಿಟ್ರಾನ್ ಎಮಿಷನ್ ಟೊಮೊಗ್ರಫಿ (ಪಿಇಟಿ) ಪರೀಕ್ಷೆಯನ್ನು ಉಚಿತವಾಗಿ ನಡೆಸಲು ತೀರ್ಮಾನಿಸಿದ್ದೇವೆ’ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ಮಂಗಳವಾರ ತಿಳಿಸಿದರು.

7ನೇ ಪುಟ ನೋಡಿ

ಮಹಾರಾಷ್ಟ್ರ ಸಾರಿಗೆ ಸಂಸ್ಥೆ ಬಸ್ ವಾಪಸ್

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಬಳೂರ್ಗಿ–ಮಾಶಾಳ ಗ್ರಾಮದ ಗಡಿಯಲ್ಲಿ ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ಬಸ್ ಹಾಗೂ ಕೆಲ ಖಾಸಗಿ ವಾಹನಗಳನ್ನು ಮಂಗಳವಾರ ವಾಪಸ್ ಕಳಿಸಲಾಯಿತು.

‘ಬಳೂರ್ಗಿ–ಮಾಶಾಳ ಗಡಿಯ ಮೂಲಕ ಮಹಾರಾಷ್ಟ್ರದಿಂದ ನಿತ್ಯ ಐವತ್ತಕ್ಕೂ ಹೆಚ್ಚು ಬಸ್‌ಗಳು ಸಂಚಾರ ಮಾಡುತ್ತಿದ್ದವು. ನಮ್ಮ ಚೆಕ್‌ಪೋಸ್ಟ್‌ನಲ್ಲಿ ಕೋವಿಡ್ ಪರೀಕ್ಷೆಯ ಪ್ರಮಾಣಪತ್ರ ಕೇಳುತ್ತಿರುವುದರಿಂದ ಮಧ್ಯಾಹ್ನದ ಬಳಿಕ ಬಸ್‌ಗಳು ಬರಲಿಲ್ಲ’ ಎಂದು ಅಫಜಲಪುರ ತಹಶೀಲ್ದಾರ್ ನಾಗಮ್ಮ ಎಂ.ಕೆ. ತಿಳಿಸಿದರು.

4ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು

ಖಾಸಗಿ ಶಿಕ್ಷಣ ಸಂಸ್ಥೆಗಳ ಬೃಹತ್ ರ‍್ಯಾಲಿ 3A

ನೇಪಾಳ: ಜನಪ್ರತಿನಿಧಿ ಸಭೆ ಪುನರ್ ಸ್ಥಾಪನೆ 4

ತುಟ್ಟಿ ಭತ್ಯೆ ಬಿಡುಗಡೆಗೆ ಒತ್ತಾಯ

ಸಿ.ಎಸ್‌. ಷಡಾಕ್ಷರಿ

ಬೆಂಗಳೂರು: ತಡೆ ಹಿಡಿದಿರುವ ತುಟ್ಟಿಭತ್ಯೆಯ ಕಂತುಗಳನ್ನು ತಕ್ಷಣವೇ ಮಂಜೂರು ಮಾಡಲು ಕೇಂದ್ರಕ್ಕೆ ಶಿಫಾರಸು ಮಾಡುವಂತೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದೆ.

ಕೇಂದ್ರ ಸರ್ಕಾರ ತುಟ್ಟಿಭತ್ಯೆ ಬಿಡುಗಡೆಗೊಳಿಸಿದ ದಿನಾಂಕದಿಂದಲೇ ಪೂರ್ವಾನ್ವಯವಾಗಿ ರಾಜ್ಯ ಸರ್ಕಾರಿ ನೌಕರರಿಗೂ ತುಟ್ಟಿಭತ್ಯೆ ಬಿಡುಗಡೆ ಮಾಡಬೇಕು ಎಂದು ಸಂಘದ ಅಧ್ಯಕ್ಷ ಸಿ.ಎಸ್‌.ಷಡಾಕ್ಷರಿ ಒತ್ತಾಯಿಸಿದ್ದಾರೆ.

ರಾಷ್ಟ್ರ ಮತ್ತು ರಾಜ್ಯದಲ್ಲಿ ಆರ್ಥಿಕ ಹಿಂಜರಿತ, ಕೋವಿಡ್ ಕಾರಣದಿಂದಾಗಿ ಸರ್ಕಾರಿ ನೌಕರರು ಶ್ರೀ ಸಾಮಾನ್ಯನ ಸಂಕಷ್ಟಗಳಿಗೆ ಸ್ಪಂದಿಸಿ ಕರ್ತವ್ಯ ನಿರ್ವಹಿಸಿದ್ದಾರೆ. ಆದರೆ ಈಗ ಬೆಲೆ ಏರಿಕೆಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಕಷ್ಟ ಎದುರಿಸುತ್ತಿದ್ದಾರೆ. ತುಟ್ಟಿಭತ್ಯೆ ನೀಡದೇ ಇರುವುದರಿಂದ ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಬೇಕಾಗಿದೆ ಎಂದು ಅವರು ಹೇಳಿದ್ದಾರೆ.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಬೆಂ. ಮ. ಪ್ರ. ಪ್ರಾ.
ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು
ಸಂಖ್ಯೆ :ಬಿಎಂಆರ್‌ಡಿಎ/ಸಿಬ್ಬಂದಿ/52A/2020-21 ದಿನಾಂಕ: 23.02.2021

ಟೆಂಡರ್ ಪ್ರಕಟಣೆ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ **House Keeping, Pest Control & Rat Control** ಸೇವೆಗಳನ್ನು ಒದಗಿಸಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು, **ದಿನಾಂಕ:24.02.2021** ರಿಂದ **ದಿನಾಂಕ:17.03.2021ರವರೆಗೆ ಅಪರಾಹ್ನ 4.00 ಗಂಟೆಯೊಳಗೆ** ದಾಖಲಿಸಲು ಅವಕಾಶವಿರುತ್ತದೆ. ಆಸಕ್ತಿಯುಳ್ಳವರು ಹೆಚ್ಚಿನ ಮಾಹಿತಿ/ವಿವರಗಳನ್ನು ವೆಬ್‌ಸೈಟ್ ವಿಳಾಸ: **https://eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಸಹಾಯಕ ಮಹಾನಗರ ಆಯುಕ್ತರು,
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಪುರಸಭಾ ಕಾರ್ಯಾಲಯ, ಬೊಮ್ಮಸಂದ್ರ
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560099
ಸ್ವಚ್ಛ ಭಾರತ
ಸಂಖ್ಯೆ : TMCB/MF/Tender/09/2020-21 ದಿನಾಂಕ: 20.02.2021

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ KW ರ ನಿಬಂಧನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ)

ಬೊಮ್ಮಸಂದ್ರ ಪುರಸಭಾ ವ್ಯಾಪ್ತಿಯ 2020-21ನೇ ಸಾಲಿನಲ್ಲಿ ಪುರಸಭೆ ಸಾಮಾನ್ಯ ಅನುದಾನದಡಿ ಒಟ್ಟು ಮೊತ್ತ **ರೂ.397.80** ಲಕ್ಷದ ಒಟ್ಟು 19 (ಹತ್ತೊಂಭತ್ತು) ಕಾಮಗಾರಿಯನ್ನು ಐಟಂವಾರು ಮತ್ತು ಇ-ಪ್ರೊಕ್ಯೂರ್‌ಮೆಂಟ್ ಏಕಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ : **www.eproc.karnataka.gov.in** ಮೂಲಕ ಅರ್ಜಿ ಸಲ್ಲಿಸುವುದು. ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ (As per E-Procurement) ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ (As per E-Procurement) ಹೆಚ್ಚಿನ ವಿವರಗಳಿಗಾಗಿ ಪುರಸಭೆಯ ಅಭಿಯಂತರರನ್ನು ವಿಚಾರಿಸಬಹುದು ಅಥವಾ ಪುರಸಭೆಯ ಅಂತರ್‌ಜಾಲ **www.bommasandratown.mrc.gov.in** ರಲ್ಲಿ ಪಡೆಯಬಹುದು.

ಸಹಿ/- ಅಧ್ಯಕ್ಷರು, ಪುರಸಭೆ, ಬೊಮ್ಮಸಂದ್ರ | ವಾಸಾಸಂಇ/ಬೆಂ.ನ/ಶಿರಡಿಸಾಯಿ/2890/2020-21 | ಸಹಿ/- ಮುಖ್ಯಾಧಿಕಾರಿ, ಪುರಸಭೆ, ಬೊಮ್ಮಸಂದ್ರ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ **ಹೆಚ್ಚುವರಿ ನಿಧಿ ರೂ. 1.30 ಕೋಟಿಗಳನ್ನು** ಒಂದು ವರ್ಷದ ಅವಧಿಗೆ ಮೀರದಂತೆ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡುವ ಸಲುವಾಗಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ UDD/2020-21/AUCTION 1974 ರಲ್ಲಿ ಇ-ಹರಾಜು ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಆಸಕ್ತಿಯುಳ್ಳ ರಾಷ್ಟ್ರೀಕೃತ ಬ್ಯಾಂಕ್‌ನವರು ದಿನಾಂಕ: 01/03/2021 ರಂದು ಸಮಯ ಸಂಜೆ 4.00 ಗಂಟೆ ಒಳಗೆ ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದು ಹಾಗೂ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ವಿಳಾಸ: **https://eproc.karnataka.gov.in** ನಲ್ಲಿ ಪರಿಶೀಲಿಸಿಕೊಳ್ಳಬಹುದು.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/361/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಇಲ್ಲಿ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಲಾಗಿರುವ ಸ್ವತ್ತನ್ನು ಅದರ ಪ್ರಸ್ತುತ ಮಾಲಿಕರಾದ ಶ್ರೀ. **ಉಮೇಶ್** ಬಿನ್ ಶ್ರೀ. ಟಿ.ಎಸ್.ಬೆಟ್ಟಯ್ಯ, ವಯಸ್ಸು ಸುಮಾರು 50 ವರ್ಷ, ವಿಳಾಸ ನಂ.281, "ಸಂಪತ್ ನಿಲಯ", 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಪಶ್ಚಿಮ ಕಾರ್ಡ್ ರಸ್ತೆ, ಸಾಯಿಬಾಬಾ ದೇವಸ್ಥಾನದ ಹತ್ತಿರ, ಮಂಜುನಾಥನಗರ, ಬೆಂಗಳೂರು-560010 ಇವರಿಂದ ಖರೀದಿಸಲು ಉದ್ದೇಶಿಸಿದ್ದಾರೆ. ಸದರಿ ಷೆಡ್ಯೂಲ್ ಸ್ವತ್ತು ಅದರ ಪ್ರಸ್ತುತ ಮಾಲಿಕರ ಶುದ್ಧ ಮಾರಾಟ ಹಕ್ಕುಗಳಿಂದ ಪ್ರತಿನಿಧಿಸಲ್ಪಡುತ್ತಿದೆ. ಯಾವುದೇ ವ್ಯಕ್ತಿಗೆ/ವ್ಯಕ್ತಿಗಳಿಗೆ ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು, ಬಾಧ್ಯತೆ ಅಥವಾ ಯಾವುದೇ ಸ್ವರೂಪದ ಹಿತಾಸಕ್ತಿ ಅಥವಾ ಯಾವುದೇ ಲೀನ್, ಚಾರ್ಜ್ ಅಥವಾ ಜಾರಿಗೊಳಿಸಬಲ್ಲ ಹಕ್ಕು ಹೊಂದಿದ್ದಲ್ಲಿ ಮತ್ತು/ಅಥವಾ ಸದರಿ ಸ್ವತ್ತಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಆಕ್ಷೇಪಣೆಗಳನ್ನು ಹೊಂದಿದ್ದಲ್ಲಿ, ಅಂತಹವರು ತಮ್ಮ ಕ್ಲೇಮ್ ಮತ್ತು/ಅಥವಾ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಗತ್ಯ ಪೂರಕ ದಾಖಲೆಗಳ ಸಮೇತ ಈ ಕೆಳಗೆ ಸಹಿ ಹಾಕಿರುವವರಿಗೆ ತಹಲ್ ದಿನಾಂಕದಿಂದ ಹದಿನೈದು (15) ದಿನಗಳೊಳಗೆ ಸಲ್ಲಿಸುವುದು, ಇಲ್ಲವಾದಲ್ಲಿ ಯಾವುದೇ ಅಧಿಕೃತ ಕ್ಲೇಮ್‌ಗಳು ಅಥವಾ ಆಕ್ಷೇಪಣೆಗಳು ಇರುವುದಿಲ್ಲವೆಂದು ಭಾವಿಸಲಾಗುತ್ತದೆ ಹಾಗೂ ಅವಶ್ಯಕ ಕಾನೂನಾತ್ಮಕ ಮತ್ತು ಶಾಸನಬದ್ಧ ಔಪಚಾರಿಕತೆಗಳೊಂದಿಗೆ ನನ್ನ ಕಕ್ಷಿದಾರರು ಸದರಿ ವ್ಯವಹಾರವನ್ನು ಪ್ರಸ್ತುತ ಮಾಲಿಕರೊಂದಿಗೆ ಪೂರ್ಣಗೊಳಿಸಲು ಮುಂದಾಗುತ್ತಾರೆ.

ಷೆಡ್ಯೂಲ್ ಪ್ರಾಪರ್ಟಿ

ಐಟಂ ನಂ.1: ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ತಾಳೆಕೆರೆ ಗ್ರಾಮದ ಸರ್ವೆ ನಂ. 119/8 ರಲ್ಲಿ ಸಂಯೋಜಿತ (ಈ ಮೊದಲು ಸರ್ವೆ ನಂ.119/4ರ ಭಾಗವಾಗಿದ್ದು) 1 ಎಕರೆ 36 $^{3}/_{4}$ ಗುಂಟಾ ವಿಸ್ತೀರ್ಣದ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ **ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.119/4, **ಪಶ್ಚಿಮಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.119/5, **ಉತ್ತರಕ್ಕೆ:** ರಾ.ಹೆ.48, **ದಕ್ಷಿಣಕ್ಕೆ:** ಸರ್ವೆ ನಂ.118

ಐಟಂ ನಂ.2: ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ತಾಳೆಕೆರೆ ಗ್ರಾಮದ ಸರ್ವೆ ನಂ. 119/8 ರಲ್ಲಿ ಸಂಯೋಜಿತ (ಈ ಮೊದಲು ಸರ್ವೆ ನಂ.119/4ರ ಭಾಗವಾಗಿದ್ದು) 3 $^{1}/_{4}$ ಗುಂಟಾ ವಿಸ್ತೀರ್ಣವುಳ್ಳ ಜಮೀನು ಹಾಗೂ ಅದರಲ್ಲಿ ನಿರ್ಮಿಸಲಾಗಿರುವ ಕಟ್ಟಡದ ಸಮೇತ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು **ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.119/3, **ಪಶ್ಚಿಮಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.119/4, **ಉತ್ತರಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.119/4, **ದಕ್ಷಿಣಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.119/4

ಐಟಂ ನಂ.3: ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ತಾಳೆಕೆರೆ ಗ್ರಾಮದ ಸರ್ವೆ ನಂ. 119/4 ರಲ್ಲಿ ಸಂಯೋಜಿತ 12 ಗುಂಟಾ ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು **ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.119/3, **ಪಶ್ಚಿಮಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.119/8, **ಉತ್ತರಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.119/4, **ದಕ್ಷಿಣಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.118/4, 118/15 ಮತ್ತು 118/7

ಐಟಂ ನಂ.4: ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ, ತಾಳೆಕೆರೆ ಗ್ರಾಮದ ಸರ್ವೆ ನಂ. 118/15 ರಲ್ಲಿ ಸಂಯೋಜಿತ (ಈ ಮೊದಲು ಸರ್ವೆ ನಂ.118/4ರ ಭಾಗವಾಗಿದ್ದು) 20 ಗುಂಟಾ ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು **ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.118/4 **ಪಶ್ಚಿಮಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.118/7, **ಉತ್ತರಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.119ರ ಭಾಗ, **ದಕ್ಷಿಣಕ್ಕೆ:** ತಾಳೆಕೆರೆ ಗ್ರಾಮದ ಸರ್ವೆ ನಂ.118/3

ಸಹಿ/- ಅರವಿಂದ್ ರಾಘವನ್
ವಕೀಲರು
ನಂ.48, "ಇಷಿತಾ", 2ನೇ ಮಹಡಿ, 2ನೇ ಮುಖ್ಯರಸ್ತೆ, ವೈಯಾಲಿಕಾವಲ್, ಬೆಂಗಳೂರು - 560 003.
ಮೊಬೈಲ್: 98450 04419

ಬೆಂಗಳೂರು
ದಿನಾಂಕ: 24/02/2021

ಅಕಾಲಿಕ ಮಳೆಯಿಂದ ಬೆಳೆಗಳಿಗೆ ಹಾನಿ • ಸೊಪ್ಪಿನ ದರಗಳಲ್ಲಿ ವ್ಯತ್ಯಾಸವಿಲ್ಲ

ಹಣ್ಣು–ತರಕಾರಿ ದರ ಏರುಪೇರು

ಪ್ರಜಾವಾಣಿ ವಾರ್ತೆ

ಕೆ.ಆರ್‌.ಮಾರುಕಟ್ಟೆ (ಸಾಂದರ್ಭಿಕ ಚಿತ್ರ)

ಬೆಂಗಳೂರು: ಅಕಾಲಿಕ ಮಳೆಯ ಪರಿಣಾಮ ನಗರದಲ್ಲಿ ತರಕಾರಿ ಮತ್ತು ಹಣ್ಣಿನ ದರಗಳಲ್ಲಿ ಏರುಪೇರು ಕಂಡುಬಂದಿದೆ.

ಭಾರಿ ಮಳೆಯಿಂದ ಕೆಲವು ತರಕಾರಿ ಬೆಳೆಗಳು ಹಾನಿಗೊಂಡಿರುವುದರಿಂದ ದರಗಳಲ್ಲಿ ತುಸು ಏರಿಳಿತ ಕಂಡು ಬಂದಿದೆ. ಕಳೆದ ಒಂದು ತಿಂಗಳಿನಿಂದ ಸ್ಥಿರವಾಗಿದ್ದ ದರಗಳು, ಶಿವರಾತ್ರಿ ವೇಳೆಗೆ ಏರಿಕೆ ದರ ಏರುವ ನಿರೀಕ್ಷೆ ಇದೆ ಎನ್ನುತ್ತಾರೆ ತರಕಾರಿ ವ್ಯಾಪಾರಿಗಳು.

ಬೆಳ್ಳುಳ್ಳಿ, ಈರುಳ್ಳಿ, ಬೀಟ್‌ರೂಟ್, ಮೆಣಸಿನಕಾಯಿ, ಬೀನ್ಸ್, ಬದನೆ ಹಾಗೂ ಬೆಂಡೆಕಾಯಿ ದರಗಳು ಏರಿಕೆ ಕಂಡಿವೆ. ಟೊಮೆಟೊ, ಮೂಲಂಗಿ, ಆಲೂಗೆಡ್ಡೆ, ಶುಂಠಿ, ಹೂಕೋಸು ಸೇರಿದಂತೆ ಹಲವು ತರಕಾರಿ ದರ ₹50 ಒಳಗಿದೆ.

'ಕಳೆದ ವಾರ ಸುರಿದ ಅಕಾಲಿಕ ಮಳೆಯನ್ನು ಯಾರೂ ನಿರೀಕ್ಷಿಸಿರಲಿಲ್ಲ. ಮಳೆಯಿಂದ ಅಲ್ಪಸ್ವಲ್ಪ ಬೆಳೆಗಳು ಹಾನಿಗೆ ಒಳಗಾಗಿರಬಹುದು. ಇದರಿಂದ ಮಾರುಕಟ್ಟೆಗಳಿಗೆ ತರಕಾರಿ ಆವಕ ಸ್ವಲ್ಪ ಕಡಿಮೆಯಾಗಿತ್ತು. ಈಗ ಮಾರುಕಟ್ಟೆಯಲ್ಲಿ ಎಂದಿನಂತೆ ಅಗತ್ಯ ಪ್ರಮಾಣದ ತರಕಾರಿ ಪೂರೈಕೆಯಾಗುತ್ತಿದೆ' ಎಂದು ದಾಸನಪುರ ಎಪಿಎಂಸಿ ಪ್ರಾಂಗಣದ ತರಕಾರಿ ಮತ್ತು ಸೊಪ್ಪಿನ ವರ್ತಕ ಕುಮಾರ್ ತಿಳಿಸಿದರು.

'ರಾಜ್ಯದಲ್ಲಿ ಕೆಲವೆಡೆ ಮಾತ್ರ ಭಾರಿ ಮಳೆಯಾಗಿದೆ. ಇನ್ನುಳಿದ ಭಾಗದಲ್ಲಿ ಸಾಮಾನ್ಯ ಹಾಗೂ ತುಂತುರು ಮಳೆ ಬಂದಿದ್ದರಿಂದ ಬತ್ತಿದ್ದ ಬೆಳೆಗಳಿಗೂ ಜೀವ ಬಂದಿದೆ. ಶಿವರಾತ್ರಿಗೆ ಉಪವಾಸ ವ್ರತ ಇರುವುದರಿಂದಲೂ ಹಬ್ಬದ ವೇಳೆ ಅಷ್ಟೇನೂ ತರಕಾರಿ ದರಗಳು ಏರುವುದು ಅನುಮಾನ. ಆದರೆ, ಮುಂದಿನ ಒಂದು ತಿಂಗಳವರೆಗೆ ತರಕಾರಿ ದರಗಳಲ್ಲಿ ಸ್ಥಿರತೆ ಕಾಣಬಹುದು' ಎಂದರು.

'ಶಿವರಾತ್ರಿ ಬಳಿಕ ಬೇಸಿಗೆ ಶುರುವಾಗಲಿದ್ದು, ಆಗ ಸೊಪ್ಪು ಹಾಗೂ ತರಕಾರಿಗಳು ತಾಪಕ್ಕೆ ತಡೆಯುವುದಿಲ್ಲ. ಈ ವೇಳೆ ಸೊಪ್ಪು ಮತ್ತು ಕೆಲ ತರಕಾರಿಗಳಿಗೆ ಬೇಡಿಕೆ ಸೃಷ್ಟಿಯಾಗಲಿದೆ' ಎಂದೂ ಹೇಳಿದರು.

ಸೊಪ್ಪಿನ ದರಗಳು ಸ್ಥಿರ: 'ಒಂದು ತಿಂಗಳಿನಿಂದ ಸೊಪ್ಪಿನ ದರಗಳು ವ್ಯತ್ಯಾಸ ಕಂಡಿಲ್ಲ. ಕೊತ್ತಂಬರಿ ಹಾಗೂ ಸಬ್ಬಸ್ಸಿಗೆ ಸೊಪ್ಪಿಗೆ ಬೇಡಿಕೆ ಇರುವುದರಿಂದ ದರ ಸ್ವಲ್ಪ ಹೆಚ್ಚಿದೆ. ಪಾಲಕ್, ಮೆಂತ್ಯ, ದಂಟಿನ ಸೊಪ್ಪು ಸೇರಿದಂತೆ ಉಳಿದ ಸೊಪ್ಪಿನ ದರಗಳು ಪ್ರತಿ ಕಟ್ಟಿಗೆ ₹10ರ ಒಳಗಿದೆ' ಎಂದು ಸೊಪ್ಪಿನ ವ್ಯಾಪಾರಿ ಮೋಹನ್ ತಿಳಿಸಿದರು.

ಹಣ್ಣಿನ ದರ ಏರಿಕೆ ಸಾಧ್ಯತೆ: 'ಬೇಸಿಗೆ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಇವೆ. ಸದ್ಯ ಈಗಿನ ಹಣ್ಣುಗಳ ಪೈಕಿ ಸೇಬು, ದ್ರಾಕ್ಷಿ, ಸಪೋಟ, ಕಿತ್ತಳೆ, ಮೂಸಂಬಿ ದರಗಳು ಪ್ರತಿ ಕೆ.ಜಿ.ಗೆ ₹50ಕ್ಕಿಂತ ಹೆಚ್ಚೇ ಇದೆ. ಬೇಸಿಗೆಯಲ್ಲಿ ಹಣ್ಣುಗಳ ಸೇವನೆ ಹಾಗೂ ಪಾನೀಯ ಸೇವಿಸುವುದು ಹೆಚ್ಚು. ಬೇಸಿಗೆಗೂ ಮುನ್ನವೇ ಮಾರುಕಟ್ಟೆಗಳಲ್ಲಿ ಕಲ್ಲಂಗಡಿ, ಪಪ್ಪಾಯ ರಾಶಿ ಬಿದ್ದಿವೆ. ಸದ್ಯಕ್ಕೆ ಈ ಎರಡೂ ಹಣ್ಣಿನ ದರ ಕಡಿಮೆ ಇದ್ದು, ಒಂದು ತಿಂಗಳಿನಲ್ಲಿ ಹಣ್ಣಿನ ದರಗಳೆಲ್ಲ ಏರಲಿವೆ' ಎಂದು ಹಣ್ಣಿನ ವ್ಯಾಪಾರಿ ಫಯಾಜ್ ಮಾಹಿತಿ ನೀಡಿದರು.

ದರ ಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ತರಕಾರಿ	ಹಾಪ್‌ಕಾಮ್ಸ್ ದರ	ಚಿಲ್ಲರೆ ದರ
ಬೆಳ್ಳುಳ್ಳಿ	145	120
ಕ್ಯಾರೆಟ್	34	20
ಈರುಳ್ಳಿ	66	50
ಆಲೂಗಡ್ಡೆ	30	30
ಶುಂಠಿ	40	30
ಎಲೆಕೋಸು	14	10
ಹೂಕೋಸು	36	40
ಮೆಣಸಿನ ಕಾಯಿ	52	40
ಬೀಟ್‌ರೂಟ್	40	42
ಬದನೆ	35	40
ಬೀನ್ಸ್	39	50
ಬೆಂಡೆಕಾಯಿ	49	30
ಮೂಲಂಗಿ	28	30
ಟೊಮೆಟೊ	28	40

ಸೊಪ್ಪು	ಹಾಪ್‌ಕಾಮ್ಸ್ (ಕೆ.ಜಿ.ಗೆ)	ಚಿಲ್ಲರೆ (ಕಟ್ಟಿಗೆ)
ಕೊತ್ತಂಬರಿ	45	12
ಪಾಲಕ್	41	10
ದಂಟು	42	8
ಮೆಂತ್ಯೆ	42	8
ಸಬ್ಬಕ್ಕಿ	46	12

ಹಣ್ಣುಗಳು	ಹಾಪ್‌ಕಾಮ್ಸ್ ದರ	ಚಿಲ್ಲರೆ ದರ
ಪಪಾಯ	35	50
ಕಲ್ಲಂಗಡಿ	21	25
ಸೇಬು	180	200
ದ್ರಾಕ್ಷಿ	124	130
ಸಪೋಟ	63	70
ಕಿತ್ತಳೆ	86	60
ಮೂಸಂಬಿ	88	70
ಬಾಳೆಹಣ್ಣು (ಏಲಕ್ಕಿ)	46	55

ಸುದ್ದಿ 2 ನಿಮಿಷ

ಒಣ ಕಣ್ಣು: ಸಮಸ್ಯೆ ಶೇ 30ಕ್ಕೆ ಏರಿಕೆ

ಬೆಂಗಳೂರು: ಮನೆಯಲ್ಲಿಯೇ ಕಚೇರಿ ಕೆಲಸ, ಸುದೀರ್ಘ ಅವಧಿ ಲ್ಯಾಪ್‌ಟಾಪ್, ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ಬಳಕೆಯಿಂದಾಗಿ ನಗರದಲ್ಲಿ ಕೋವಿಡ್‌ಗೂ ಮೊದಲು ಶೇ 10 ರಷ್ಟಿದ್ದ ಒಣ ಕಣ್ಣಿನ ಸಮಸ್ಯೆ (ಡ್ರೈ ಐ), ಈಗ ಶೇ 30ಕ್ಕೆ ಏರಿಕೆಯಾಗಿದೆ ಎಂದು ಡಾ.ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯ ತಜ್ಞರು ತಿಳಿಸಿದ್ದಾರೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ಪ್ರಾದೇಶಿಕ ಮುಖ್ಯಸ್ಥ ಡಾ. ರಾಮ್ ಮಿರ್ಲೆ ಮಾತನಾಡಿ, 'ಲಾಕ್‌ಡೌನ್ ಅವಧಿಯಲ್ಲಿ ಕಣ್ಣಿನ ಸಮಸ್ಯೆ ಎದುರಿಸುತ್ತಿದ್ದವರು ಆಸ್ಪತ್ರೆಗಳಿಗೆ ತೆರಳಿ, ತಪಾಸಣೆ ಮಾಡಿಸಿಕೊಳ್ಳಲು ಹಿಂದೇಟು ಹಾಕಿದರು. ಇದರಿಂದಾಗಿ ಸಮಸ್ಯೆ ಈಗ ತೀವ್ರ ಸ್ವರೂಪ ಪಡೆದುಕೊಂಡಿದೆ. ಕೆಲ ತಿಂಗಳಿನಿಂದ ಮನೆಯಲ್ಲಿಯೇ ಕಚೇರಿ ಕೆಲಸ ನಿರ್ವಹಿಸುತ್ತಿರುವುದರಿಂದ ಕೂಡ ಸಮಸ್ಯೆ ಉಲ್ಬಣವಾಗಿದೆ' ಎಂದರು.

ನೇತ್ರತಜ್ಞೆ ಡಾ. ಅರ್ಚನಾ ಎಸ್., 'ಸುದೀರ್ಘ ಅವಧಿ ಡಿಜಿಟಲ್ ಪರದೆಯನ್ನು ನೋಡುವುದರಿಂದ ಕಣ್ಣಿನ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಡಿಜಿಟಲ್ ಪರದೆ ಮುಂದೆ ಕೆಲಸ ಮಾಡುವವರು ಸಾಮಾನ್ಯವಾಗಿ ಕಣ್ಣಿನ ರೆಪ್ಪೆಯನ್ನು ಮಿಟುಕಿಸುವುದು ಕಡಿಮೆ. ಇದರ ಜೊತೆಗೆ ಪರದೆಯಿಂದ ಹೊರಹೊಮ್ಮುವ ಬೆಳಕು ಕಣ್ಣಿನ ಮೇಲೆ ನೇರ ಪರಿಣಾಮ ಬೀರುತ್ತದೆ. ಇದನ್ನು ತಪ್ಪಿಸಲು 20 ನಿಮಿಷಗಳಿಗೊಮ್ಮೆ ದೂರದ ವಸ್ತುಗಳನ್ನು ವೀಕ್ಷಿಸಬೇಕು. ಉತ್ತಮವಾದ ಗಾಳಿ-ಬೆಳಕು ಇರುವ ಸ್ಥಳದಲ್ಲಿ ಕೆಲಸ ಮಾಡಬೇಕು' ಎಂದರು.

ನಿಗ್ಲಿ ಕಿರುಚಿತ್ರ ಸ್ಪರ್ಧೆ: 28ಕ್ಕೆ ಪ್ರಶಸ್ತಿ ಪ್ರದಾನ

ಬೆಂಗಳೂರು: ನಿಗ್ಲಿಸ್ ಅಡ್ವರ್ಟೈಸಿಂಗ್ ಸಂಸ್ಥೆಯು ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಏರ್ಪಡಿಸಿದ್ದ ನಿಗ್ಲಿ ಕಿರುಚಿತ್ರ ಸ್ಪರ್ಧೆಯ ವಿಜೇತರಿಗೆ ಫೆ.28ರಂದು ಸಂಜೆ 4.30ಕ್ಕೆ ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆವರಣದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

ಅತಿಥಿಗಳಾಗಿ ಪ್ರವಾಸೋದ್ಯಮ ಸಚಿವ ಸಿ.ಪಿ.ಯೋಗೇಶ್ವರ್, ಪ್ರವಾಸೋದ್ಯಮ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ.ಅನಿಲ್ ಕುಮಾರ್, ಕೆ.ರಾಕೇಶ್ ಕುಮಾರ್, ನಿರ್ದೇಶಕ ಗಿರೀಶ್ ಕಾಸರವಳ್ಳಿ, ಹಿರಿಯ ನಟ ಜೈಜಗದೀಶ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.

'ಪ್ರವಾಸೋದ್ಯಮ ಇಲಾಖೆಯ ಘೋಷವಾಕ್ಯವಾದ 'ಒಂದು ರಾಜ್ಯ-ಹಲವು ಜಗತ್ತು' ವಿಷಯದಡಿ ಕಾಲೇಜು ವಿದ್ಯಾರ್ಥಿಗಳು ತಮ್ಮ ಮೊಬೈಲ್‌ನಲ್ಲೇ ಕಿರುಚಿತ್ರ ತಯಾರಿಸಲು ಸ್ಪರ್ಧೆ ಆಯೋಜಿಸಲಾಗಿತ್ತು. ರಾಜ್ಯದಾದ್ಯಂತ 100ಕ್ಕೂ ಹೆಚ್ಚು ಕಾಲೇಜುಗಳಿಂದ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ವಿಜೇತರಿಗೆ ನಗದು ಬಹುಮಾನ, ಟ್ರೋಫಿ ಹಾಗೂ ಪ್ರಶಸ್ತಿ ಪತ್ರ ಪ್ರದಾನ ಮಾಡಲಾಗುವುದು' ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಫೆ.24 ಮತ್ತು 26ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು (ಫೆ.24): ಅರೇಹಳ್ಳಿ ಗ್ರಾಮ, ಕುಂಟು ಮಾರಮ್ಮ ದೇವಸ್ಥಾನ, ಬೃಂದಾವನ ಅಪಾರ್ಟ್‌ಮೆಂಟ್ ರಸ್ತೆ ಹಾಗೂ ಅರೇಹಳ್ಳಿ ಸುತ್ತಮುತ್ತಲಿನ ಪ್ರದೇಶಗಳು.

ಫೆ.26: ಅರೇಹಳ್ಳಿ ಮುಖ್ಯರಸ್ತೆ, ಸ್ಫೂರ್ತಿನಗರ, ಎಜಿಎಸ್ ಬಡಾವಣೆ, ಚೈತನ್ಯ ಶಾಲೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

27ಕ್ಕೆ ಮೆಗಾ ಲೋಕ ಅದಾಲತ್

ಬೆಂಗಳೂರು: ರಾಜ್ಯದಾದ್ಯಂತ ಫೆ.27ರಂದು 'ಮೆಗಾ ಲೋಕ ಅದಾಲತ್' ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವಂತೆ ಬೆಂಗಳೂರು ನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ತಿಳಿಸಿದೆ.

ಪ್ರಕರಣಗಳ ಇತ್ಯರ್ಥಕ್ಕೆ ಇಚ್ಛಿಸುವವರು ಮುಂಚಿತವಾಗಿ ಪ್ರಾಧಿಕಾರಕ್ಕೆ ಆನ್‌ಲೈನ್, ವಿಡಿಯೊ ಕಾನ್ಫರೆನ್ಸ್, ಇಮೇಲ್, ವಾಟ್ಸ್‌ಆ್ಯಪ್ ಅಥವಾ ಖುದ್ದು ಹಾಜರಾಗಿ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಮಾಹಿತಿಗೆ dlsabangaloreurban@gmail.com ಅಥವಾ 080-22215143 ಅನ್ನು ಸಂಪರ್ಕಿಸಬಹುದು.

ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಫೆ.25ರಂದು 10ರಿಂದ ಸಂಜೆ 5.30ರವರೆಗೆ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು:ಕತ್ರಿಗುಪ್ಪೆ ವಾಟರ್ ಟ್ಯಾಂಕ್, ಕೆಂಪೇಗೌಡ ಬಡಾವಣೆ, ಕತ್ರಿಗುಪ್ಪೆ, ರಾಮರಾವ್ ಬಡಾವಣೆ, ಶ್ರೀನಿವಾಸ ನಗರ, ಪಿಪಿ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಅಸ್ಸಾಂ: 1,040 ಉಗ್ರರ ಶರಣಾಗತಿ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಐದು ಉಗ್ರಗಾಮಿ ಸಂಘಟನೆಗಳಿಗೆ ಸೇರಿದ ಒಟ್ಟು 1,040 ಮಂದಿ ಮಂಗಳವಾರ ಶಸ್ತ್ರತ್ಯಾಗ ಮಾಡಿದ್ದಾರೆ.

ಮುಖ್ಯಮಂತ್ರಿ ಸರ್ಬಾನಂದ ಸೋನೊವಾಲ್ ಅವರ ಸಮ್ಮುಖದಲ್ಲಿ ಶಸ್ತ್ರತ್ಯಾಗ ಮಾಡಿದ ಇವರು, ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳುವ ವಾಗ್ದಾನ ಮಾಡಿದರು.

ಶರಣಾಗತರಾದವರು ಪೀಪಲ್ ಡೆಮಾಕ್ರಟಿಕ್ ಕೌನ್ಸಿಲ್ ಆಫ್ ಕರ್ಬಿ ಲೋಂಗ್ರಿ ಮತ್ತು ಇತರ ನಾಲ್ಕು ಸಂಘಟನೆಗಳಲ್ಲಿ ಸಕ್ರಿಯರಾಗಿದ್ದರು.

SAI
SPORTS AUTHORITY OF INDIA
ಭಾರತೀಯ ಕ್ರೀಡಾ ಪ್ರಾಧಿಕಾರ
(ಪರ್ಸನಲ್ ಡಿವಿಜನ್)
ನಂ. ಎಸ್‌ಎಐ/ಪರ್ಸ್/776/2010/ವಾಲ್ಯ್.4 2ನೇ ಫೆಬ್ರವರಿ, 2021

ತಿದ್ದುಪಡಿ
ಡೆಪ್ಯೂಟೇಶನ್ ಆಧಾರದಲ್ಲಿ ಇಡಿ (ಫೈನಾನ್ಸ್) ಹುದ್ದೆಯ ಅವಧಿ ವಿಸ್ತರಣೆ ಕುರಿತ ಪ್ರಕಟಣೆ

ಯುವಜನ ವ್ಯವಹಾರಗಳು ಮತ್ತು ಕ್ರೀಡಾ (ಎಂವೈಎಎಸ್) ಸಚಿವಾಲಯ ಅಡಿಯಲ್ಲಿನ ಮತ್ತು ಸೊಸೈಟೀಸ್ ರಜಿಸ್ಟ್ರೇಶನ್ ಆಕ್ಟ್, 1860 ಅಡಿಯಲ್ಲಿ ನೊಂದಾಯಿತ ಸೊಸೈಟಿಗಳಲ್ಲಿ ಒಂದಾಗಿರುವ ನೊಂದಾಯಿತ ಸೊಸೈಟಿಯಾದ ಭಾರತೀಯ ಕ್ರೀಡಾ ಪ್ರಾಧಿಕಾರ (ಎಸ್‌ಎಐ), ಇವರು, ಡೆಪ್ಯೂಟೇಶನ್ ಆಧಾರದಲ್ಲಿ ಎಕ್ಸಿಕ್ಯೂಟಿವ್ ಡೈರೆಕ್ಟರ್ (ಫೈನಾನ್ಸ್) ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 30.12.2020 ರಂದು ಹೊರಡಿಸಲಾದ ಅಧಿಸೂಚನೆ ಮತ್ತು ಅನುಕ್ರಮವಾಗಿ ದಿನಾಂಕ 15.01.2021 ರಂದು ಹೊರಡಿಸಲಾದ ತಿದ್ದುಪಡಿಯನ್ನು ಗಮನಿಸಬೇಕೆಂದು ಸೂಚಿಸಲಾಗಿದೆ.

ನವದೆಹಲಿ, ಲೋಧಿ ರಸ್ತೆಯಲ್ಲಿರುವ ಎಸ್‌ಎಐ ಪ್ರಧಾನ ಕಚೇರಿಯಲ್ಲಿನ ಎಕ್ಸಿಕ್ಯೂಟಿವ್ ಡೈರೆಕ್ಟರ್ (ಫೈನಾನ್ಸ್) ಎಂಬ ಹುದ್ದೆಗೆ ಜಿಪಿ ರೂ. 8900/- ಜೊತೆಗೆ ಪಿಬಿ 4ಗೆ ಸಮನಾದ 7ನೇ ಸಿಪಿಸಿಯ ವೇತನ ಶ್ರೇಣಿ 13ಎ ಶ್ರೇಣಿಯಲ್ಲಿ ನೇಮಕ ಮಾಡಿಕೊಳ್ಳಲಿರುವ **ಡೆಪ್ಯೂಟೇಶನ್ ನಿಬಂಧನೆಯ ಮೇರೆಗಿನ ಎಕ್ಸಿಕ್ಯೂಟಿವ್ ಡೈರೆಕ್ಟರ್ (ಫೈನಾನ್ಸ್) ಹುದ್ದೆಯ ಅವಧಿಯನ್ನು 01 ವರ್ಷ ಬದಲಾಗಿ ಇನ್ನೆರಡು ವರ್ಷಗಳವರೆಗೆ ವಿಸ್ತರಿಸಲಾಗುತ್ತದೆ ಎಂಬುದರ ಬದಲಾಗಿ, ಇನ್ನೆರಡು ವರ್ಷಗಳವರೆಗೆ ಬದಲಾಗಿ 03 ವರ್ಷಗಳ ಕಾಲ ವಿಸ್ತರಿಸಲಾಗುತ್ತದೆ ಎಂದು ಓದಿಕೊಳ್ಳುವುದು.** ಸಂಬಂಧಿತ ವಿವರಗಳು ಮತ್ತು ಅರ್ಜಿ ನಮೂನೆ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ www.yas.nic.in ವೆಬ್‌ಸೈಟ್‌ನಲ್ಲಿ ಹಾಗೂ ಭಾರತೀಯ ಕ್ರೀಡಾ ಪ್ರಾಧಿಕಾರದ www.sportsauthorityofindia.inic.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ. ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳು 02.03.2021 ರೊಳಗಾಗಿ ಡೈರೆಕ್ಟರ್ (ಪರ್ಸನಲ್), ಭಾರತೀಯ ಕ್ರೀಡಾ ಪ್ರಾಧಿಕಾರ, ಜವಾಹರಲಾಲ್ ನೆಹರು ಸ್ಟೇಡಿಯಂ, (ಈಸ್ಟ್ ಗೇಟ್), 2ನೇ ಮಹಡಿ, ಲೋಧಿ ರಸೆ, ನವದೆಹಲಿ-110003 ವಿಳಾಸಕ್ಕೆ ಸಲ್ಲಿಸುವುದು.

davp 47103/11/0005/2021 ನಿರ್ದೇಶಕರು (ಪರ್ಸನಲ್)

'ರೋಗ ನಿರೋಧಕ ಶಕ್ತಿ ಹೆಚ್ಚಳಕ್ಕೆ ಇಮ್ಯುನೊಥೆರಪಿ ಸಹಕಾರಿ'

ಪ್ರಜಾವಾಣಿ ವಾರ್ತೆ

ಲಯನ್ಸ್ ಕ್ಲಬ್‌ನಿಂದ ಡಾ.ಸಿ.ರಾಮಚಂದ್ರ ಅವರನ್ನು ಹೂಗುಚ್ಛ ನೀಡಿ ಗೌರವಿಸಲಾಯಿತು. (ಎಡದಿಂದ) ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್‌ನ ಕೆ. ವಂಶಿಧರ್ ಬಾಬು, ಡಿಸ್ಟ್ರಿಕ್ಟ್ ಗವರ್ನರ್ ಎಂ.ಬಿ ದೀಪಕ್ ಸುಮನ್, ಸೆಕೆಂಡ್ ವೈಸ್ ಡಿಸ್ಟ್ರಿಕ್ಟ್ ಗವರ್ನರ್ ಬಿ.ಎಸ್.ರಾಜಶೇಖರಯ್ಯ ಮತ್ತು ರೀಜನ್ ಚೇರ್ ಪರ್ಸನ್ (ರಿಜನ್ ವಿ) ಡಾ.ಸಿಂಹ ಶಾಸ್ತ್ರಿ ಇದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ವ್ಯಕ್ತಿಯ ದೇಹದೊಳಗೆ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಹಾಗೂ ಕ್ಯಾನ್ಸರ್ ಕಾರಕಗಳು ಬೆಳೆಯದಂತೆ ತಡೆಯಲು ಇಮ್ಯುನೊಥೆರಪಿ ಸಹಕಾರಿ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಸಿ.ರಾಮಚಂದ್ರ ಮಂಗಳವಾರ ತಿಳಿಸಿದರು.

ಲಯನ್ಸ್ ಕ್ಲಬ್ಸ್ ಇಂಟರ್‌ನ್ಯಾಷನಲ್ ಹಾಗೂ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಸಂಸ್ಥೆ ಮತ್ತು ಭಾರತೀಯ ವಿದ್ಯಾ ಭವನ ಆಯೋಜಿಸಿದ್ದ 'ಇಮ್ಯುನೊಥೆರಪಿ' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ಕ್ಯಾನ್ಸರ್ ಲಸಿಕೆಗಳ ಬಗ್ಗೆ ಇಂದು ಬಹುತೇಕರಿಗೆ ಗೊತ್ತಿಲ್ಲ. ಗರ್ಭಕೋಶದ ಕ್ಯಾನ್ಸರ್ ಸೇರಿದಂತೆ ಇನ್ನಿತರ ರೋಗಗಳನ್ನು ಅವುಗಳ ಮೂಲದಲ್ಲೇ ಪತ್ತೆಹಚ್ಚಿ ಗುಣಪಡಿಸಲು ಈ ಲಸಿಕೆಗಳು ಪ್ರಯೋಜನಕಾರಿ. ಕೆಲ ವರ್ಷಗಳ ಹಿಂದೆ ಗರ್ಭಕೋಶದ ಕ್ಯಾನ್ಸರ್ ದೊಡ್ಡ ಸವಾಲಾಗಿ ಪರಿಣಮಿಸಿತ್ತು. ಈಗ ಇದಕ್ಕೆ ಕಡಿವಾಣ ಹಾಕಲಾಗಿದೆ' ಎಂದರು.

'ಕಿದ್ವಾಯಿ ಆಸ್ಪತ್ರೆಯ ಆವರಣದಲ್ಲಿ ಮಕ್ಕಳಿಗೆಂದೇ 100 ಹಾಸಿಗೆಗಳ ಸುಸಜ್ಜಿತ ಕ್ಯಾನ್ಸರ್ ವಾರ್ಡ್ ನಿರ್ಮಿಸುತ್ತಿದ್ದೇವೆ. ಇದು ವಿಶ್ವದ ಅತ್ಯುನ್ನತ ಗುಣಮಟ್ಟದ ವಾರ್ಡ್‌ಗಳಲ್ಲಿ ಒಂದೆನಿಸಿದೆ. ವಾರ್ಡ್‌ನಲ್ಲಿ ಅತ್ಯಾಧುನಿಕ ತೀವ್ರ ನಿಗಾ ಘಟಕವೂ (ಐಸಿಯು) ಇರಲಿದೆ. ಮೂಳೆ ಮಜ್ಜೆಯ ಕಸಿ ಚಿಕಿತ್ಸಾ ಕೇಂದ್ರಕ್ಕೂ ಹೈಟೆಕ್ ಸ್ಪರ್ಶ ನೀಡಲಾಗಿದೆ. ಇದನ್ನು ಮೇ ತಿಂಗಳಲ್ಲಿ ಉದ್ಘಾಟಿಸಲಿದ್ದೇವೆ' ಎಂದು ಮಾಹಿತಿ ನೀಡಿದರು.

'ಇನ್ಫೊಸಿಸ್ ಪ್ರತಿಷ್ಠಾನದ ನೇತೃತ್ವದಲ್ಲಿ ₹50 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದ್ದ ಒಪಿಡಿ ಘಟಕದ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಐದು ಸುಸಜ್ಜಿತ ಶಸ್ತ್ರಚಿಕಿತ್ಸಾ ಕೊಠಡಿಗಳ ನಿರ್ಮಾಣಕ್ಕೂ ಇನ್ಫೊಸಿಸ್ ನೆರವು ನೀಡಿದೆ. ಈ ಕಾರ್ಯಗಳಿಗಾಗಿ ಸುಧಾಮೂರ್ತಿ ಅವರು ಸುಮಾರು ₹75 ಕೋಟಿ ದೇಣಿಗೆ ಕೊಟ್ಟಿದ್ದಾರೆ' ಎಂದರು.

ಕ್ಯಾನ್ಸರ್ ತಡೆಗಟ್ಟಲು ಇರುವ ವಿವಿಧ ಮಾರ್ಗೋಪಾಯಗಳ ಕುರಿತು ಡಾ.ಲೋಕನಾಥ್, ವಸುಧಾ ರಾವ್, ಅರುಣ್ ಕುಮಾರ್, ಅಶ್ವಿನಿ ಗೊಡಬೋಲೆ, ಎಚ್.ಎಸ್.ಪದ್ಮರಾಜು, ರಾಜ್ ರುಮಾಲೆ ಹಾಗೂ ಪ್ರೀತಿ ಪೊಟುಪುರೆಡ್ಡಿ ಅವರು ಉಪನ್ಯಾಸ ನೀಡಿದರು.

ನಗರದಲ್ಲಿ ಇಂದು

ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ: ಸಮ್ಮೇಳನ ಅಧ್ಯಕ್ಷರು-ಸಮತಾ ಬಿ.ದೇಶಮಾನೆ, ಭಾಗವಹಿಸುವವರು-ಮನು ಬಳಿಗಾರ್, ಮಾಯಣ್ಣ, ಮಂಜುನಾಥ್, ಆಯೋಜನೆ-ಕನ್ನಡ ಸಾಹಿತ್ಯ ಪರಿಷತ್ತು ಶಾಂತಿನಗರ ವಿಧಾನಸಭಾ ಕ್ಷೇತ್ರ ಘಟಕ, ಸ್ಥಳ-ಮಡ್ ಟ್ಯಾಂಕ್ ಮೈದಾನ, ಶಾಂತಿನಗರ, ಬೆಳಿಗ್ಗೆ 7ರಿಂದ

ರಕ್ತದಾನ ಶಿಬಿರ: ಅತಿಥಿಗಳು-ಬಿ.ಎಸ್.ಶ್ರೀನಿವಾಸ್, ಬಿ.ಎಸ್.ಸತ್ಯನಾರಾಯಣ, ಉಮೇಶ್ ಹೆಬ್ಬಾರ್, ಸುರೇಶ್ ಅಂಬಲಿ, ರಾಜು ಚಂದ್ರಶೇಖರ್, ಆಯೋಜನೆ-ಎಪಿಎಸ್ ಶೈಕ್ಷಣಿಕ ಟ್ರಸ್ಟ್, ರೋಟರಿ, ಕರ್ನಾಟಕ ಯೂತ್ ರೆಡ್ ಕ್ರಾಸ್, ಸ್ಥಳ-ಆಚಾರ್ಯ ಪಾಠಶಾಲಾ ಕಾಲೇಜ್ ಆಫ್ ಕಾಮರ್ಸ್ ಆವರಣ, ಎನ್.ಆರ್.ಕಾಲೊನಿ, ಬೆಳಿಗ್ಗೆ 9.30

ರಾಷ್ಟ್ರೀಯ ವೃತ್ತಿ ಸೇವಾ ಯೋಜನೆಯಡಿ ಉದ್ಯೋಗ ಮೇಳ: ಆಯೋಜನೆ-ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಸಹಯೋಗ ಮತ್ತು ಸ್ಥಳ-ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10ರಿಂದ ಸಂಜೆ 5

ಶ್ರೀಯೋಗ ದಕ್ಷಿಣಾಮೂರ್ತಿ ದೇವಸ್ಥಾನ ನವಗ್ರಹ ಹಾಗೂ ಧನ್ವಂತರಿ ದೇವರ ಪ್ರತಿಷ್ಠಾಪನೆ, ಕುಂಭಾಭಿಷೇಕ: ಸಾನ್ನಿಧ್ಯ-ನಿರ್ಮಲಾನಂದ ನಾಥ ಸ್ವಾಮೀಜಿ, ಯತೀಶ್ವರ ಶಿವಾಚಾರ್ಯ ಸ್ವಾಮೀಜಿ, ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಅತಿಥಿಗಳು-ಕೆ.ಸುಧಾಕರ್, ವಿ.ಆರ್.ಗೌರಿಶಂಕರ್, ಎಂ.ಕೃಷ್ಣಪ್ಪ, ಆರ್.ರವಿಚಂದ್ರನ್, ಎಂ.ಟಿ.ನಾಣಯ್ಯ, ಅಧ್ಯಕ್ಷತೆ-ಎಚ್.ಆರ್.ನಾಗೇಂದ್ರ, ಆಯೋಜನೆ-ಎಸ್.ವ್ಯಾಸ ವಿಶ್ವವಿದ್ಯಾಲಯ, ಸ್ಥಳ-ಪ್ರಶಾಂತಿ ಕುಟೀರ, ಎಸ್.ವ್ಯಾಸ ಮಾನಿತ ವಿಶ್ವವಿದ್ಯಾಲಯದ ಪ್ರಧಾನ ಆವರಣ, ಜಿಗಣಿ, ಬೆಳಿಗ್ಗೆ 11

ನಿರ್ಮಲಾ ನಂದನಾಥ ಸ್ವಾಮೀಜಿ

ಡಾ.ಶಿವರಾಮ ಕಾರಂತರ 20 ಇ-ಪುಸ್ತಕಗಳ ಬಿಡುಗಡೆ: ಅತಿಥಿಗಳು-ಮಾಲಿನಿ ಮಲ್ಯ, ಎಸ್.ಆರ್.ವಿಜಯಶಂಕರ್, ಟಿ.ಎನ್.ರಘುಪತಿ, ಪವಮಾನ್ ಅಥಣಿ, ಆಯೋಜನೆ-ಮೈಲ್ಯಾಂಗ್ ಬುಕ್ಸ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)



ಶಿವರಾಮ ಕಾರಂತ

ಭಗವಾನ್ ಶ್ರೀ ಜಿಹ್ವೇಶ್ವರರ ಕಲ್ಯಾಣೋತ್ಸವ: ಆಯೋಜನೆ-ಸಂಯುಕ್ತ ಸ್ವಕುಳಸಾಳಿ ಸಂಘ, ಸ್ಥಳ-ಕಲ್ಯಾಣ ವೇದಿಕೆ, ದತ್ತಾತ್ರೇಯ ಸ್ವಾಮಿ ದೇವಸ್ಥಾನ, ಗಾಂಧಿನಗರ, ಬೆಳಿಗ್ಗೆ 11

'ಸಂಸದೀಯ ಮೌಲ್ಯಗಳ ಕುಸಿತ ತಡೆಗಟ್ಟಲು ಒಂದು ಆತ್ಮಾವಲೋಕನ' ಕುರಿತು ಸಭೆ: ಉಪಸ್ಥಿತಿ-ವಿಶ್ವೇಶ್ವರ ಹೆಗಡೆ ಕಾಗೇರಿ, ಬಸವರಾಜ ಹೊರಟ್ಟಿ, ಆಯೋಜನೆ-ಕಾಮನ್‌ವೆಲ್ತ್ ಸಂಸದೀಯ ಸಂಘದ ಕರ್ನಾಟಕ ಶಾಖೆ, ಸ್ಥಳ-ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

'ನಬಾರ್ಡ್ ರಾಜ್ಯ ಸಾಲ' ವಿಚಾರ ಸಂಕಿರಣ: ಅತಿಥಿ-ಪಿ.ರವಿಕುಮಾರ್, ಆಯೋಜನೆ-ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್), ಸ್ಥಳ-ಹೋಟೆಲ್ ಲಲಿತ್ ಅಶೋಕ್, ಬೆಳಿಗ್ಗೆ 11.45

ಆಶಿಯಾನ ಕೌಶಲ ಅಭಿವೃದ್ಧಿ ಸಂಸ್ಥೆ ಹಾಗೂ ಜಾಮಿಯಾ ಅಮೀನಾ ಲಿಬಾನತ್ ಉದ್ಘಾಟನೆ: ಅತಿಥಿ-ಇಮಾಮ್ ಉಮರ್ ಅಹ್ಮದ್ ಇಲ್ಯಾಸಿ, ಆಯೋಜನೆ-ಅಲ್ ಅಮನ್ ಶೈಕ್ಷಣಿಕ ಮತ್ತು ಕ್ಷೇಮಾಭಿವೃದ್ಧಿ ಟ್ರಸ್ಟ್, ಸ್ಥಳ-ಸಿಎಂಎ ಗ್ರ್ಯಾಂಡ್, ಗಾಂಧಿನಗರ, ಕೆ.ಜಿ.ಹಳ್ಳಿ, ಸಂಜೆ 4

ರಂಗಬೆಳಕು ವಿ.ರಾಮಮೂರ್ತಿ ಪ್ರಶಸ್ತಿ ಪ್ರದಾನ: ಪುರಸ್ಕೃತರು-ದಾಕ್ಷಾಯಿಣಿ ಭಟ್, ಮುದ್ದಣ್ಣ ರಟ್ಟೀಹಳ್ಳಿ, ಉದ್ಘಾಟನೆ-ಟಿ.ಎಸ್.ನಾಗಾಭರಣ, ಅತಿಥಿಗಳು-ವಿ.ರಾಮಮೂರ್ತಿ, ಬಿ.ವಿ.ರಾಜಾರಾಂ, ವೈಜಯಂತಿ ಕಾಶಿ, ರಂಗಗೌರವ-ಎಂ.ಎಸ್.ವಿದ್ಯಾ, ಶೇಖರ್, ಎ.ಕೃಷ್ಣಯ್ಯ, ಆಯೋಜನೆ-ಲಾಸ್ಯವರ್ಧನ ಟ್ರಸ್ಟ್, ವಿ.ರಾಮಮೂರ್ತಿ ರಂಗ ಬಳಗ, ಸ್ಥಳ-ಕೇಶವ ಕಲ್ಪ, ಮಲ್ಲೇಶ್ವರ, ಸಂಜೆ 5

ಟಿ.ಎಸ್ ನಾಗಾಭರಣ

ಜೋಗಿಲ ಸಿದ್ದರಾಜು ಹಾಗೂ ಸಿ.ಎಂ.ನರಸಿಂಹಮೂರ್ತಿ ಅವರಿಗೆ ಅಭಿನಂದನಾ ಕಾರ್ಯಕ್ರಮ: ಅಧ್ಯಕ್ಷತೆ-ವೇಮಗಲ್ ನಾರಾಯಣಸ್ವಾಮಿ, ಅತಿಥಿಗಳು-ಕಾ.ವೆಂ.ಶ್ರೀನಿವಾಸಮೂರ್ತಿ, ಉಷಾ ಬಸಪ್ಪ, ಶ್ರೀನಿವಾಸ ಜಿ. ಕಪ್ಪಣ್ಣ, ಆಯೋಜನೆ-ಅಂಕುರ ಸಾಂಸ್ಕೃತಿಕ ಟ್ರಸ್ಟ್, ಸಹಕಾರ-ಕನ್ನಡ ಮತ್ತು ಸಂಸ್ಕೃತಿ ಇಲಾಖೆ , ಸ್ಥಳ-ಕಪ್ಪಣ್ಣ ಅಂಗಳ, ಜೆ.ಪಿ.ನಗರ 1ನೇ ಹಂತ, ಸಂಜೆ 6.30

ಪರ್ಯಾಯ 'ಸೂತ್ರ' ಸೂಚಿಸಿದರೆ ಮಾತುಕತೆಗೆ ಸಿದ್ಧ– ಸಚಿವ ಎಸ್‌. ಸುರೇಶ್‌ಕುಮಾರ್ ಭರವಸೆ

ಖಾಸಗಿ ಶಿಕ್ಷಣ ಸಂಸ್ಥೆಗಳ ಬೃಹತ್ ರ‍್ಯಾಲಿ

ಪ್ರಜಾವಾಣಿ ವಾರ್ತೆ

ರಾಜ್ಯ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಸಂಘಟನೆಯ (ಕ್ಯಾಮ್ಸ್) ಮತ್ತು ಇತರ 10ಕ್ಕೂ ಹೆಚ್ಚು ಸಂಘಟನೆಗಳನ್ನು ಒಳಗೊಂಡ 'ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿಗಳು, ಶಿಕ್ಷಣ– ಶಿಕ್ಷಕೇತರ ಸಿಬ್ಬಂದಿಯ ಸಮನ್ವಯ ಸಮಿತಿ'ಯ ನೇತೃತ್ವದಲ್ಲಿ ಮಂಗಳವಾರ ಇಲ್ಲಿ ಬೃಹತ್ ರ‍್ಯಾಲಿ ನಡೆಯಿತು

ಬೆಂಗಳೂರು: ಖಾಸಗಿ ಶಾಲೆಗಳ ಬೋಧನಾ ಶುಲ್ಕ ಶೇ 30ರಷ್ಟು ಕಡಿತ ಆದೇಶ ಮರು ಪರಿಶೀಲಿಸುವಂತೆ ಆಗ್ರಹಿಸಿ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಮಂಗಳವಾರ ಇಲ್ಲಿ ಬೃಹತ್ ರ‍್ಯಾಲಿ ಹಾಗೂ ಪ್ರತಿಭಟನಾ ಸಮಾವೇಶ ನಡೆಸಿ ಸರ್ಕಾರದ ಮೇಲೆ ಒತ್ತಡ ಹೇರುವ ಯತ್ನ ಮಾಡಿತು.

ಖಾಸಗಿ ಸಂಸ್ಥೆಗಳ ಒಕ್ಕೂಟಕ್ಕೆ ಮಣಿಯದ ಸರ್ಕಾರ, 'ತನ್ನ ನಿರ್ಧಾರದಿಂದ ಹಿಂದೆಸರಿಯುವ ಪ್ರಶ್ನೆಯೇ ಇಲ್ಲ' ಎಂದು ಪ್ರತಿಪಾದಿಸಿದೆ.

ರಾಜ್ಯ ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಸಂಘಟನೆಯ (ಕ್ಯಾಮ್ಸ್) ಮತ್ತು ಇತರ 10ಕ್ಕೂ ಹೆಚ್ಚು ಸಂಘಟನೆಗಳನ್ನು ಒಳಗೊಂಡ 'ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿಗಳು, ಶಿಕ್ಷಣ– ಶಿಕ್ಷಕೇತರ ಸಿಬ್ಬಂದಿಯ ಸಮನ್ವಯ ಸಮಿತಿ'ಯ ನೇತೃತ್ವದಲ್ಲಿ ಈ ಪ್ರತಿಭಟನೆ ನಡೆಯಿತು. ಖಾಸಗಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ, ಶಿಕ್ಷಕರು, ವ್ಯವಸ್ಥಾಪಕರು ಸೇರಿ 10 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

'ಖಾಸಗಿ ಶಿಕ್ಷಣ ಸಂಸ್ಥೆ ಹಾಗೂ ಅಲ್ಲಿನ ಶಿಕ್ಷಕರನ್ನು ಸರ್ಕಾರ ಮಲತಾಯಿ ಧೋರಣೆಯಿಂದ ಕಾಣುತ್ತಿದೆ. ಕೊರೊನಾದಿಂದ ಖಾಸಗಿ ಶಾಲೆಗಳಿಗೆ ಶೇ 60ರಿಂದ 70ರಷ್ಟು ಆರ್ಥಿಕ ಸಂಕಷ್ಟ ಉಂಟಾಗಿದೆ. ಈ ಮಧ್ಯೆಯೂ ಪಾಲಕ, ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆ. ಶೇ 30ರಷ್ಟು ಶುಲ್ಕ ಕಡಿತ ಮಾತ್ರವಲ್ಲ, ವಿವಿಧ ವಿನಾಯಿತಿ ಹೆಸರಿನಲ್ಲಿ ಶೇ 50ರಿಂದ 55ರಷ್ಟು ಶುಲ್ಕ ವಿನಾಯತಿ ಮಾಡಲಾಗಿದೆ. ಶಿಕ್ಷಕರಿಗೆ, ಶಿಕ್ಷಕೇತರ ಸಿಬ್ಬಂದಿಗೆ ವೇತನ ನೀಡಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಶುಲ್ಕ ಕಡಿತ ತೀರ್ಮಾನವನ್ನು ಮರು ಪರಿಶೀಲಿಸಬೇಕು. ಮರುಪರಿಶೀಲಿಸದಿದ್ದರೆ ಮತ್ತೊಂದು ಬೃಹತ್ ಪ್ರತಿಭಟನೆ ನಡೆಸಲಾಗುವುದು' ಎಂದು ಪ್ರತಿಭಟನಕಾರರು ಎಚ್ಚರಿಕೆ ನೀಡಿದರು.

ಸಮಾವೇಶ ಸ್ಥಳಕ್ಕೆ ತೆರಳಿ ಅಹವಾಲು ಸ್ವೀಕರಿಸಿ ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್, 'ಪೋಷಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಪೂರಕವಾಗುವಂತೆ ಶುಲ್ಕ ಕಡಿತ ನಿರ್ಧಾರ ತೆಗೆದುಕೊಂಡಿದ್ದೇವೆ. ಇದನ್ನು ಬಿಟ್ಟರೆ ಬೇರೆ ಮಾರ್ಗ ಇಲ್ಲ. ಶುಲ್ಕ ವಿಚಾರದಲ್ಲಿ ನನಗೆ, ಸರ್ಕಾರಕ್ಕೆ ಪ್ರತಿಷ್ಠೆಯಿಲ್ಲ. ಪೋಷಕರ ಮತ್ತು ಆಡಳಿತ ಮಂಡಳಿಗಳು ಒಮ್ಮತದ ನಿರ್ಧಾರಕ್ಕೆ ಬರಲಿಲ್ಲವಾದ್ದರಿಂದ ಸರ್ಕಾರ ಮಧ್ಯಪ್ರವೇಶ ಮಾಡಬೇಕಾದ ಅನಿವಾರ್ಯ ಉಂಟಾಯಿತು' ಎಂದರು.

ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಮರಿತಿಬ್ಬೇಗೌಡ, ರಮೇಶ್ ಗೌಡ, ಮಾಜಿ ಸಂಸದ ಶಿವರಾಮೇಗೌಡ, ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಪ್ರತಿಭಟನೆಯಲ್ಲಿ ಭಾಗವಹಿಸಿದರು.

ಪೋಷಕರೊಂದಿಗೆ ಕುಳಿತು, ಮಾತನಾಡಿಕೊಂಡು ಪರ್ಯಾಯ ಸೂತ್ರವೊಂದನ್ನು ತಂದರೆ ನನ್ನದೇನೂ ಅಭ್ಯಂತರವಿಲ್ಲ

ಎಸ್. ಸುರೇಶ್‌ಕುಮಾರ್,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

ಮುಖ್ಯಮಂತ್ರಿ ಜತೆಗೂ ಚರ್ಚೆ

'ಶುಲ್ಕ ಕಡಿತ ನಿರ್ಧಾರ ಮರು ಪರಿಶೀಲಿಸುವಂತೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪತ್ರ ಬರೆದಿದ್ದಾರೆ. ಅವರ ಜೊತೆಗೂ ಈ ವಿಷಯ ಚರ್ಚೆ ಮಾಡಿದ್ದೇನೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಶೀಘ್ರ ಸಭೆ ನಡೆಸುತ್ತೇನೆ. ಈ ಬಗ್ಗೆ ಮುಖ್ಯಮಂತ್ರಿ ಜತೆಗೂ ಚರ್ಚಿಸುತ್ತೇನೆ' ಎಂದು ಸುರೇಶ್‌ಕುಮಾರ್ ಹೇಳಿದರು.

ಸುದ್ದಿ 2 ನಿಮಿಷ

ಕಲಾಗ್ರಾಮ: ಅಭಿವೃದ್ಧಿಗೆ ₹ 10 ಕೋಟಿ ಪ್ರಸ್ತಾವನೆ

ಬೆಂಗಳೂರು: ಮಲ್ಲತ್ತಹಳ್ಳಿಯ ಕಲಾಗ್ರಾಮದ ಸಮಗ್ರ ಅಭಿವೃದ್ಧಿಗೆ ಬಜೆಟ್‌ನಲ್ಲಿ ₹ 10 ಕೋಟಿ ಮೀಸಲಿಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಸ್ತಾವನೆ ಸಲ್ಲಿಸಿದೆ.

30 ಎಕರೆಯಲ್ಲಿ ವ್ಯಾಪಿಸಿಕೊಂಡಿರುವ ಕಲಾಗ್ರಾಮವನ್ನು ಸಂಸ್ಕೃತಿ ಇಲಾಖೆ ನಿರ್ವಹಣೆ ಮಾಡುತ್ತಿದೆ. ಸೂಕ್ತ ಮೂಲಸೌಕರ್ಯ ಇಲ್ಲದ ಕಾರಣ ಕಲಾಗ್ರಾಮದಲ್ಲಿ ಪ್ರತಿವರ್ಷ ಬೆರಳಣಿಕೆಯಷ್ಟು ಕಾರ್ಯಕ್ರಮಗಳಷ್ಟೇ ನಡೆಯುತ್ತಿವೆ.

ಈ ಹಿಂದೆ ಸಚಿವರಾಗಿದ್ದ ಸಿ.ಟಿ. ರವಿ ಅವರು ಸಮಗ್ರ ಅಭಿವೃದ್ಧಿಗೆ ರೂಪರೇಷೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು. ಅದರಂತೆ ಈಗ ಇಲಾಖೆಯು ರೂಪರೇಷೆ ಸಿದ್ಧಪಡಿಸುತ್ತಿದೆ.

ಇತ್ತೀಚೆಗೆ ಬಜೆಟ್ ಪೂರ್ವಭಾವಿಯಾಗಿ ಸಚಿವ ಅರವಿಂದ ಲಿಂಬಾವಳಿ ಅವರು ಅಧಿಕಾರಿಗಳ ಜತೆಗೆ ಸಭೆ ನಡೆಸಿದ್ದರು. ಈ ವೇಳೆ ಕಲಾಗ್ರಾಮದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಬೇಕೆಂಬ ಅಭಿಪ್ರಾಯ ವ್ಯಕ್ತವಾಗಿತ್ತು. ಅದರಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

ಈಗ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದ್ದು, ₹ 10 ಕೋಟಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ರಾಮಯ್ಯ ವಿ.ವಿ: 1,047 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಬೆಂಗಳೂರು: ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯವು ನಗರದಲ್ಲಿ ಆಯೋಜಿಸಿದ್ದ ಐದನೇ ಘಟಿಕೋತ್ಸವದಲ್ಲಿ 1,047 ವಿದ್ಯಾರ್ಥಿಗಳಿಗೆ ಪದವಿ ಹಾಗೂ 16 ಅಭ್ಯರ್ಥಿಗಳಿಗೆ ಪಿಎಚ್‌.ಡಿ ಪದವಿ ಪ್ರದಾನ ಮಾಡಲಾಯಿತು.

ಘಟಿಕೋತ್ಸವ ಭಾಷಣ ಮಾಡಿದ ಇಸ್ರೊ ಮಾಜಿ ಅಧ್ಯಕ್ಷ ಡಾ.ಕೆ. ಕಸ್ತೂರಿರಂಗನ್, 'ಯಶಸ್ಸಿಗೆ ಅನ್ಯ ಮಾರ್ಗಗಳಿಲ್ಲ. ಶ್ರದ್ಧೆ ಮತ್ತು ಕಠಿಣ ಪರಿಶ್ರಮದಿಂದಲೇ ಅದನ್ನು ಸಾಧಿಸಬೇಕು. ಆತ್ಮವಿಶ್ವಾಸ ಹೆಚ್ಚಿಸಿಕೊಂಡರೆ ಉದ್ಯೋಗಾವಕಾಶಗಳು ಹೇರಳವಾಗಿ ಲಭ್ಯವಾಗುತ್ತವೆ' ಎಂದರು.

ವಿಶ್ವವಿದ್ಯಾಲಯದ ಕಾರ್ಯಕಾರಿ ಕುಲಪತಿ ಪ್ರೊ. ಗೋವಿಂದ್ ಆರ್. ಕಡಂಬಿ ಮಾತನಾಡಿ, 'ವಿವಿಯಲ್ಲಿ ಕಲಿಕೆಗೆ ಪೂರಕವಾದ ವಾತಾವರಣವಿದೆ. ವಿದ್ಯಾರ್ಥಿಗಳು ಇದರ ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ಹೇಳಿದರು. ಕುಲಪತಿ ಎಂ.ಆರ್. ಜಯರಾಮ್ ಅವರು ಪದವಿ ಪ್ರದಾನ ಮಾಡಿದರು. ಸಹ ಕುಲಪತಿ ಪ್ರೊ.ಡಿ.ಸಿ. ಸುಂದರೇಶ್ ಇದ್ದರು.

ಆತ್ಮಾರಾಮ ಸ್ವಾಮಿ ಜಾತ್ರೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ನರಸೀಪುರ ತೋಪಿನಲ್ಲಿರುವ ಶ್ರೀಆತ್ಮಾರಾಮ ಸ್ವಾಮಿ ದೇವಾಲಯದ ಬ್ರಹ್ಮರಥೋತ್ಸವ ಹಾಗೂ ದನಗಳ ಜಾತ್ರೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಫೆ.24ರಿಂದ ಆರಂಭಗೊಂಡು, ಮಾರ್ಚ್ 2ರವರೆಗೆ ನಡೆಯಲಿದೆ.

24ರಂದು ಅಂಕುರಾರ್ಪಣೆ, ಸ್ವಸ್ತಿವಾಚನ ರಕ್ಷಬಂಧನ, ಮೃತಿಕಾ ಸಂಗ್ರಹಣ, ಯಾಗಾಶಾಲಾ ಪ್ರವೇಶ, ಚಪ್ಪರ ಸೇವೆ, 25ರಂದು ಧ್ವಜಾರೋಹಣ, ಬೆಟ್ಟದ ಉತ್ಸವ ಹಾಗೂ ದೇವರ ಉತ್ಸವ, 26ರಂದು ಕಲ್ಯಾಣೋತ್ಸವ, ಗಜೇಂದ್ರ ಮೋಕ್ಷ ದೇವರ ಉತ್ಸವ ನಡೆಯಲಿದೆ.

27ರಂದು ಶ್ರೀಆತ್ಮಾರಾಮ ಸ್ವಾಮಿ ದೇವರ ಬ್ರಹ್ಮ ರಥೋತ್ಸವ ನಡೆಯಲಿದೆ. ಈ ದಿನ ಭಕ್ತಾಧಿಗಳಿಂದ ಅರವಟ್ಟಿಗೆಗಳನ್ನು ತೆರೆದು ಪಾನಕ ಪೂಜೆ, ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

28ರಂದು ಭಾನುವಾರ ಪಾಡ್ಯಮಿ ಕುದುರೆ ಉತ್ಸವ, ಮಾರ್ಚ್ 1ರಂದು ಗರುಡೋತ್ಸವ ಮುತ್ತಿನ ಪಲ್ಲಕ್ಕಿ ಉತ್ಸವ, ಶೇಷವಾಹನೋತ್ಸವ, ಮಾರ್ಚ್ 2ರಂದು ಅವಭೃತ ಸ್ನಾನ ಕಾರ್ಯಕ್ರಮ ನಡೆಯಲಿದೆ.

ಖಾಸಗಿ ಶಾಲೆಗಳ ಒಕ್ಕೂಟದಿಂದ ಪ್ರತಿಭಟನೆ,ನಗರದಲ್ಲಿ ಸಂಚಾರ ದಟ್ಟಣೆ

ಮೈಲುದ್ದ ಸಾಲುಗಟ್ಟಿ ನಿಂತ ವಾಹನಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಶಾಲೆಗಳ ಒಕ್ಕೂಟದಿಂದ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಮೆರವಣಿಗೆಯಿಂದಾಗಿ ನಗರದಲ್ಲಿ ವಿಪರೀತ ದಟ್ಟಣೆ ಉಂಟಾಯಿತು. ಸ್ವಾತಂತ್ರ್ಯ ಉದ್ಯಾನ ಹಾಗೂ ಸುತ್ತಮುತ್ತ ವಾಹನಗಳು ಕಿಲೋಮೀಟರ್‌ಗಟ್ಟಲೆ ಸಾಲುಗಟ್ಟಿ ನಿಲ್ಲಬೇಕಾಯಿತು.

ಒಕ್ಕೂಟದ ಸದಸ್ಯರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಗರ ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಬೃಹತ್ ಮೆರವಣಿಗೆ ನಡೆಸಿದರು. ಶಾಲಾ ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು ಹಾಗೂ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೇಲ್ಸೇತುವೆ ಮೂಲಕ ಮೆರವಣಿಗೆ ಸಾಗಿತು. ಮೇಲ್ಸೇತುವೆಯಲ್ಲಿ ಸಾರ್ವಜನಿಕರ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಯಿತು. ಮೇಲ್ಸೇತುವೆ ಮೂಲಕ ಹೋಗಬೇಕಿದ್ದ ವಾಹನಗಳು, ಕಿ.ಮೀ.ಗಟ್ಟಲೇ ನಿಂತಲ್ಲೇ ನಿಲ್ಲಬೇಕಾದ ಸ್ಥಿತಿ ನಿರ್ಮಾಣವಾಯಿತು. ಮೆರವಣಿಗೆಯುದ್ದಕ್ಕೂ ಶಾಲಾ ವಾಹನಗಳೂ ಹೆಚ್ಚಿದ್ದವು. ಹೀಗಾಗಿ, ಮೆರವಣಿಗೆ ನಿಧಾನವಾಗಿ ಸಾಗಿತು. ಇತರೆ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಿ, ಚಾಲಕರು ಹಾಗೂ ಪ್ರಯಾಣಿಕರು ಪರದಾಡಿದರು.

ಮೆಜೆಸ್ಟಿಕ್, ಆನಂದರಾವ್ ವೃತ್ತ, ಓಕಳಿಪುರ, ಮಲ್ಲೇಶ್ವರ, ಶೇಷಾದ್ರಿಪುರ, ಕುಮಾರಕೃಪಾ ರಸ್ತೆ, ಅರಮನೆ ರಸ್ತೆ, ರೇಸ್‌ಕೋರ್ಸ್ ರಸ್ತೆ, ಶಿವಾನಂದ ವೃತ್ತ, ಬಸವೇಶ್ವರ ವೃತ್ತ, ಶೇಷಾದ್ರಿ ರಸ್ತೆ, ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಮೈಸೂರು ಬ್ಯಾಂಕ್ ವೃತ್ತ, ಕೆಂಪೇಗೌಡ ರಸ್ತೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ವಾಹನಗಳ ದಟ್ಟಣೆ ಪ್ರಮಾಣ ಹೆಚ್ಚಿತ್ತು. ವಾಹನಗಳು ನಿಧಾನವಾಗಿ ಚಲಿಸಿದವು. ಬಸ್ಸಿನಲ್ಲಿದ್ದ ಕೆಲ ಪ್ರಯಾಣಿಕರು, ನಡೆದುಕೊಂಡೇ ಮುಂದಕ್ಕೆ ಹೋದರು.

ಪ್ರತಿಭಟನೆಗೆ ಜನರನ್ನು ಕರೆತಂದಿದ್ದ ಶಾಲಾ ವಾಹನಗಳನ್ನೂ ಎಲ್ಲೆಂದರಲ್ಲಿ ನಿಲ್ಲಿಸಲಾಗಿತ್ತು. ಇದು ಸಹ ದಟ್ಟಣೆಗೆ ಕಾರಣವಾಯಿತು. ದಟ್ಟಣೆ ನಿಯಂತ್ರಣಕ್ಕೆ ಪೊಲೀಸರು ಹರಸಾಹಸಪಟ್ಟರು.

ಶೇಷಾದ್ರಿ ರಸ್ತೆಯಲ್ಲಿ ದಟ್ಟಣೆ ಉಂಟಾಗಿ ಸಾಲುಗಟ್ಟಿ ನಿಂತಿದ್ದ ವಾಹನಗಳು – ಪ್ರಜಾವಾಣಿ ಚಿತ್ರ

'ನಮಗೇಕೆ ಶಿಕ್ಷೆ; ಪೊಲೀಸರು ಏನು ಮಾಡುತ್ತಿದ್ದಾರೆ'

ವಿಪರೀತ ದಟ್ಟಣೆಯಲ್ಲಿ ಸಿಲುಕಿದ್ದ ಸವಾರರು, ಕೆಲವೆಡೆ ಪೊಲೀಸರ ಜೊತೆಯೇ ವಾಗ್ವಾದ ನಡೆಸಿದರು. 'ಬೆಂಗಳೂರಿನ ಹೃದಯಭಾಗದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲು ಹೇಗೆ ಅನುಮತಿ ನೀಡಿದ್ದೀರಾ' ಎಂದು ಸಾರ್ವಜನಿಕರು ಪ್ರಶ್ನಿಸಿದರು.

ಓಕಳಿಪುರ ಕೆಳ ಸೇತುವೆಯಲ್ಲಿ ದಟ್ಟಣೆಯಲ್ಲಿ ಸಿಲುಕಿದ್ದ ಸವಾರ ಪ್ರಕಾಶ್, 'ರಸ್ತೆಯ ಒಂದು ಬದಿಯಲ್ಲಿ ಮೆರವಣಿಗೆಗೆ ಅವಕಾಶ ನೀಡಬೇಕಿತ್ತು. ಆದರೆ, ಎರಡೂ ಕಡೆಯೂ ನೀಡಿರುವುದು ಸರಿಯಲ್ಲ. ನಿತ್ಯವೂ ನಾವು ಇದೇ ರಸ್ತೆ ಮೂಲಕ ಓಡಾಡುತ್ತೇವೆ. ಹೀಗೆ, ಗಂಟೆಗಟ್ಟಲೇ ರಸ್ತೆಯಲ್ಲಿ ನಿಂತರೆ ನಮ್ಮ ಕೆಲಸ ಮಾಡುವುದಾದರೂ ಹೇಗೆ' ಎಂದು ಪ್ರಶ್ನಿಸಿದರು.

'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮೇಲ್ಸೇತುವೆ, ಬೆಂಗಳೂರಿನ ಹೃದಯ. ಇದರ ಮೂಲಕವೇ ಶೇ 50ರಷ್ಟು ವಾಹನಗಳು ನಗರದ ವಿವಿಧ ಭಾಗಕ್ಕೆ ಸಂಚರಿಸುತ್ತವೆ. ಇಂಥ ಸ್ಥಳದಲ್ಲಿ ಮೆರವಣಿಗೆಗೆ ಅನುಮತಿ ನೀಡುವ ಮೊದಲು ಪೊಲೀಸರು ಯೋಚಿಸಬೇಕು. ಶಾಲಾ ಒಕ್ಕೂಟದ ಸದಸ್ಯರು, ನಿಯಮ ಉಲ್ಲಂಘಿಸಿದ್ದರೆ ಅವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು' ಎಂದೂ ಅವರು ಒತ್ತಾಯಿಸಿದರು.

ತೆರೆದಿರುವ ಬಾರ್ ಅಂಡ್ ರೆಸ್ಟೋರೆಂಟ್ ಮುಚ್ಚಬೇಕೆಂದು ಆಗ್ರಹಿಸಿ ಮಹಿಳೆಯರು ಪ್ರತಿಭಟನೆ ನಡೆಸಿದರು.

ಚಿಕ್ಕಗೊಲ್ಲರಹಟ್ಟಿಯಲ್ಲಿ ಮದ್ಯದಂಗಡಿ ತೆರೆಯದಂತೆ ಸ್ಥಳೀಯರ ಪ್ರತಿಭಟನೆ

ರಾಜರಾಜೇಶ್ವರಿನಗರ: ಕೊಡಿಗೇಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಚಿಕ್ಕಗೊಲ್ಲರಹಟ್ಟಿ ಜನವಸತಿ ಪ್ರದೇಶದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಬಾರದು ಎಂದು ಆಗ್ರಹಿಸಿ ಸ್ಥಳೀಯರು ಸೋಮವಾರವೂ ಪ್ರತಿಭಟನೆ ನಡೆಸಿದರು.

ಮದ್ಯದಂಗಡಿ ತೆರೆಯಲು ಉದ್ದೇಶಿಸಿರುವ ಸ್ಥಳದ ಅಕ್ಕ–ಪಕ್ಕ ಶಾಲೆ, ದೇವಸ್ಥಾನವಲ್ಲದೆ, ವಸತಿ ಪ್ರದೇಶವಿದೆ. ಮದ್ಯದಂಗಡಿ ತೆರೆಯಲು ಈ ಹಿಂದೆಯೂ ಉದ್ದೇಶಿಸಿದ್ದಾಗ, ಸ್ಥಳೀಯರು ಪ್ರತಿಭಟನೆ ನಡೆಸಿದ್ದರು. ಆಗ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಬಾರ್ ತೆರೆಯದಿರುವ ಬಗ್ಗೆ ಭರವಸೆ ನೀಡಿದ್ದರು. ಆದರೆ, ಈಗ ಮದ್ಯದಂಗಡಿ ತೆರೆದಿದ್ದರಿಂದ ಸ್ಥಳೀಯರು ಪ್ರತಿಭಟನೆ ನಡೆಸಿದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಜಯಣ್ಣ, ಸಿದ್ದಗಂಗಮ್ಮ, ಚಿಕ್ಕರಾಜು, ಕೋಮಲಾ, ವಿಜಯಲಕ್ಷ್ಮಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ತಾವರೆಕೆರೆ ಇನ್‌ಸ್ಪೆಕ್ಟರ್ ನರೇಂದ್ರಬಾಬು ಸ್ಥಳಕ್ಕೆ ಬಂದು ಪ್ರತಿಭಟನೆಕಾರರ ಮನವೊಲಿಸಿ, ತೆರೆದಿದ್ದ ಬಾರ್ ಅಂಡ್ ರೆಸ್ಟೋರೆಂಟ್ ಮುಚ್ಚಿಸಿದರು.



ಆಧುನೀಕರಣಗೊಂಡ ತಹಶೀಲ್ದಾರ್ ಕಚೇರಿ.

ತಹಶೀಲ್ದಾರ್ ಕಚೇರಿ ನವೀಕರಣಕ್ಕೆ ದುಂದುವೆಚ್ಚ: ಆಕ್ರೋಶ

ಕೆ.ಆರ್.ಪುರ: ಕೊರೊನಾ ಸಂದರ್ಭದಲ್ಲಿ ಹಾಗೂ ಸರ್ಕಾರದ ಅನುಮತಿ ಇಲ್ಲದೇ ಕೆ.ಆರ್.ಪುರ ತಹಶೀಲ್ದಾರ್ ಕಚೇರಿಯ ನವೀಕರಣಕ್ಕೆ ದುಂದುವೆಚ್ಚ ಮಾಡಿರುವುದಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎರಡು ತಿಂಗಳ ಹಿಂದೆ ಪೂರ್ವ ತಾಲ್ಲೂಕು ತಹಶೀಲ್ದಾರ್ ತೇಜಸ್ ಕುಮಾರ್ ಅವರನ್ನು ವರ್ಗಾವಣೆ ಮಾಡಲಾಗಿತ್ತು. ಅವರ ಜಾಗಕ್ಕೆ ಬಂದ ಎಸ್.ಅಜಿತ್ ಕುಮಾರ್ ಅವರು ಚೆನ್ನಾಗಿಯೇ ಇದ್ದ ತಮ್ಮ ಕಚೇರಿಯನ್ನು ಆಧುನೀಕರಣಗೊಳಿಸಿದ್ದಾರೆ. ಕಬೋರ್ಡ್, ರೆಸ್ಟ್ ರೂಮ್, ಶೌಚಾಲಯ, ಮೀಟಿಂಗ್ ಹಾಲ್, ಡೈನಿಂಗ್ ಟೇಬಲ್, ಸೋಫಾ ಅಳವಡಿಸಿದ್ದಾರೆ.

'ಕೊರೊನಾ ಬಂದ ಬಳಿಕ ಸರ್ಕಾರಕ್ಕೆ ನಿರೀಕ್ಷಿತ ವರಮಾನ ಬರುತ್ತಿಲ್ಲ. ಸರ್ಕಾರಿ ನೌಕರಿಗೆ ವೇತನ ನೀಡಲು ಹೆಣಗಾಡುತ್ತಿರುವ ಪರಿಸ್ಥಿತಿ ಇದೆ. ಇಂತಹ ವೇಳೆಯಲ್ಲಿ ದುಂದುವೆಚ್ಚ ಮಾಡಿರುವುದು ಸರಿಯಲ್ಲ. ತಾಲ್ಲೂಕು ಕಚೇರಿಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು, ಸಿಬ್ಬಂದಿವರ್ಗದವರು ಬಳಸುವ ಶೌಚಾಲಯಗಳಲ್ಲಿ ಕನಿಷ್ಠ ನೀರು ಕೂಡಾ ಬರುವುದಿಲ್ಲ. ಪೈಪ್ ಲೈನ್ ವ್ಯವಸ್ಥೆ ಇಲ್ಲ. ಈ ಶೌಚಾಲಯಗಳನ್ನು ಬಳಸುವುದನ್ನೇ ನೌಕರರು ಬಿಟ್ಟಿದ್ದಾರೆ. ಆದರೆ, ತಹಶೀಲ್ದಾರ್ ಈ ಬಗ್ಗೆ ಗಮನ ಹರಿಸದೆ ತಮ್ಮ ಕೊಠಡಿಯಲ್ಲಿ ಮಾತ್ರ ಎಲ್ಲವನ್ನೂ ಹೈಟೆಕ್ ಆಗಿ ನಿರ್ಮಿಸಿಕೊಂಡಿದ್ದಾರೆ' ಎಂದು ಭೀಮನುಡಿ ದಲಿತ ಕ್ಷೇಮಾಭಿವೃದ್ಧಿ ಸಮಿತಿಯ ಅಧ್ಯಕ್ಷ ಎಸ್. ಕೆ.ಮಾದೇಶ್ ತಿಳಿಸಿದರು.

ಸಾವಿರಾರು ಜನರು ಬರುವ ತಾಲ್ಲೂಕು ಕಚೇರಿಯಲ್ಲಿ ಸಾರ್ವಜನಿಕರಿಗೆ ಒಂದೇ ಒಂದು ಶೌಚಾಲಯವಿಲ್ಲ. ಆದರೆ, ತಹಶೀಲ್ದಾರ್ ಈ ಬಗ್ಗೆ ಗಮನ ಹರಿಸುತ್ತಿಲ್ಲ' ಎಂದು ಸಾರ್ವಜನಿಕ ವಿಲಾಸ್ ದೂರಿದರು.

'ಕಚೇರಿಯ ಹೊರಭಾಗದಲ್ಲಿ ಸಾರ್ವಜನಿಕರಿಗೆ ನಿರ್ಮಾಣವಾಗಿದ್ದ ಶೌಚಾಲಯಗಳು ಪಾಳು ಬಿದ್ದಿವೆ. ಸಾರ್ವಜನಿಕರು ಬಳಸುವ ಶೌಚಾಲಯಗಳನ್ನು ನಿರ್ವಹಣೆ ಮಾಡಿಸದೆ ತಹಶೀಲ್ದಾರ್ ಅವರು ತಮ್ಮ ಕಚೇರಿಯನ್ನು ರಿಯಲ್ ಎಸ್ಟೇಟ್ ಮಾದರಿಯಲ್ಲಿ ಸಿದ್ದಪಡಿಸುತ್ತಿರುವುದು ದುರದೃಷ್ಟಕರ' ಎಂದು ಸಾರ್ವಜನಿಕ ಆರ್.ಮಂಜುನಾಥ್ ಹೇಳಿದರು.

'ಕಚೇರಿಯ ಗೋಡೆಯ ಬಣ್ಣ ಹೋಗಿತ್ತು ಹಾಗೂ ಶೌಚಾಲಯ ಸರಿ ಇರಲಿಲ್ಲ ಇದನ್ನು ಸರಿ ಮಾಡಲು ಸರ್ಕಾರದ ಅನುಮತಿ ಬೇಕಾಗಿಲ್ಲ. ಅದಕ್ಕೆ ದುಂದುವೆಚ್ಚ ಮಾಡಿಲ್ಲ. ಯಾವುದೇ ಬಿಲ್ಡರ್‌ಗಳ ಸಹಕಾರ ತೆಗೆದುಕೊಂಡಿಲ್ಲ. ಗುತ್ತಿಗೆದಾರನ ಸಹಕಾರ ಪಡೆದು ಕಚೇರಿ ನವೀಕರಣ ಮಾಡಲಾಗಿದೆ' ಎಂದು ತಹಶೀಲ್ದಾರ್ ಎಸ್. ಅಜಿತ್ ಕುಮಾರ್ ಹೇಳಿದರು.



ತಹಶೀಲ್ದಾರ್ ಕುಳಿತುಕೊಳ್ಳುವ ಕೋಣೆಯಲ್ಲಿನ ಸೋಫಾಗಳು

ಮತ್ತೆ 554 ನಿವಾಸಿಗಳನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿದ ಬಿಬಿಎಂಪಿ

ಬೆಳ್ಳಂದೂರು: ಕೋವಿಡ್ ಸಂಖ್ಯೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳ್ಳಂದೂರು ವಾರ್ಡ್ ವ್ಯಾಪ್ತಿಯ ಎಸ್‌ಜೆಆರ್ ವಾಟರ್‌ಮಾರ್ಕ್ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳಲ್ಲಿ ಕೋವಿಡ್ ಪತ್ತೆಯಾದವರ ಸಂಖ್ಯೆ 20ಕ್ಕೆ ಹೆಚ್ಚಳವಾಗಿದೆ.

ಈ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳಲ್ಲಿ 10 ಮಂದಿಗೆ ಸೋಂಕು ಇರುವುದು ಸೋಮವಾರ ದೃಢಪಟ್ಟಿತ್ತು. ಹಾಗಾಗಿ 501 ನಿವಾಸಿಗಳನ್ನು ಬಿಬಿಎಂಪಿ ಸೋಮವಾರ ಕೋವಿಡ್ ಪರೀಕ್ಷೆಗೆ ಒಳಪಡಿಸಿತ್ತು. ಅವರಲ್ಲಿ 10 ಮಂದಿ ಸೋಂಕು ಹೊಂದಿರುವುದು ಮಂಗಳವಾರ ಪತ್ತೆಯಾಗಿದೆ. ಹಾಗಾಗಿ ಮತ್ತೆ ಇಲ್ಲಿನ 554 ನಿವಾಸಿಗಳನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದರ ಫಲಿತಾಂಶ ಇನ್ನಷ್ಟೇ ಬರಬೇಕಿದೆ.

ಈ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಒಂಬತ್ತು ಬ್ಲಾಕ್‌ಗಳಿದ್ದು, ಒಟ್ಟು 504 ವಸತಿಗಳಿವೆ. ಇವುಗಳಲ್ಲಿ 470 ಫ್ಲ್ಯಾಟ್‌ಗಳಲ್ಲಿ ಕುಟುಂಬಗಳು ವಾಸ ಇವೆ. ಆರು ಬ್ಲಾಕ್‌ಗಳಲ್ಲಿ ಈ ಪ್ರಕರಣಗಳು ವರದಿಯಾಗಿವೆ. ಈ ಆರು ಬ್ಲಾಕ್‌ಗಳನ್ನು ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಲಾಗಿದೆ. ನಿವಾಸಿಗಳ ಗಂಟಲು ದ್ರವದ ಮಾದರಿ ಪಡೆಯಲು ಬಿಬಿಎಂಪಿ 9 ತಂಡಗಳನ್ನು ನಿಯೋಜಿಸಿದೆ.

'ಒಂದೇ ಕ್ಲಸ್ಟರ್‌ನಲ್ಲಿ ಐದಕ್ಕಿಂತ ಹೆಚ್ಚು ಕೋವಿಡ್ ಪ್ರಕರಣಗಳು ಪತ್ತೆಯಾದರೆ ಅದನ್ನು ಕಂಟೈನ್‌ಮೆಂಟ್ ಪ್ರದೇಶ ಎಂದು ಗುರುತಿಸುತ್ತೇವೆ. ಆದರೆ, ಹಿಂದಿನಂತೆ ಅಲ್ಲಿ ಬ್ಯಾರಿಕೇಡ್ ಅಳವಡಿಸುವುದಿಲ್ಲ. ಭಿತ್ತಿಪತ್ರಗಳನ್ನು ಅಂಟಿಸುವುದಿಲ್ಲ. ಸೋಂಕಿತರಲ್ಲಿ ರೋಗ ಲಕ್ಷಣ ಇರುವವರನ್ನು ಆಸ್ಪತ್ರೆಗೆ ದಾಖಲಿಸುತ್ತೇವೆ. ರೋಗ ಲಕ್ಷಣಗಳಿಲ್ಲದ ಸೋಂಕಿತರು ಮನೆಯಲ್ಲೇ ಪ್ರತ್ಯೇಕವಾಸಕ್ಕೆ ಒಳಗಾಗಲು ಅವಕಾಶ ಕಲ್ಪಿಸಲಾಗುತ್ತದೆ' ಬಿಬಿಎಂಪಿ ಆಯುಕ್ತ ಎನ್. ಮಂಜುನಾಥಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಸೋಂಕು ಹೊಂದಿರುವವರ ನೇರ ಹಾಗೂ ಪರೋಕ್ಷ ಸಂಪರ್ಕಕ್ಕೆ ಬಂದವರನ್ನೂ ಪತ್ತೆ ಹಚ್ಚಿ ಅವರನ್ನೂ ಕೋವಿಡ್ ಪರೀಕ್ಷೆಗೆ ಒಳಪಡಿಸಲಿದ್ದೇವೆ. ಪರೀಕ್ಷೆಯ ಫಲಿತಾಂಶ ಬರುವವರೆಗೆ ಅವರು ಹೊರಗಡೆ ಅಡ್ಡಾಡದಂತೆ ಸೂಚನೆ ನೀಡುತ್ತೇವೆ. ಅವರ ಮೇಲೂ ನಿಗಾ ಇಡುತ್ತೇವೆ' ಎಂದರು.

ಬೆಳ್ಳಂದೂರಿನಲ್ಲಿ ಸೋಂಕು ಪತ್ತೆಯಾದವರು ಕೇರಳ ಅಥವಾ ಮಹಾರಾಷ್ಟ್ರದಿಂದ ಬಂದವರಲ್ಲ ಎಂದು ಬಿಬಿಎಂಪಿ ಹೇಳಿದೆ.

ಕೋವಿಡ್ ಅಂಕಿ ಅಂಶ

	ಜಿಲ್ಲೆಯಲ್ಲಿ ಒಟ್ಟು	ಸಕ್ರಿಯ ಪ್ರಕರಣ	ಗುಣಮುಖ	ಸಾವು
	39,226	33	38,596	597
ದಿನದ ಏರಿಕೆ		05 ಹೊಸ ಪ್ರಕರಣ	02	00

ಆಧಾರ: ಆರೋಗ್ಯ ಇಲಾಖೆ

ಸೋಂಕು ನಿಯಂತ್ರಣಕ್ಕೆ: ಅಧಿಕಾರಿಗಳ ನಿಟ್ಟುಸಿರು

ಈ ತಿಂಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪತ್ತೆಯಾದ ಎರಡು ಪ್ರಕರಣಗಳಲ್ಲೂ ಸೋಂಕು ಹರಡುವಿಕೆ ನಿಯಂತ್ರಣಕ್ಕೆ ಬಂದಿರುವುದು ಬಿಬಿಎಂಪಿ ಅಧಿಕಾರಿಗಳು ತುಸು ನಿಟ್ಟುಸಿರು ಬಿಡುವಂತೆ ಮಾಡಿದೆ.

ಕಾವಲ್‌ಭೈರಸಂದ್ರದ ನರ್ಸಿಂಗ್ ಕಾಲೇಜಿನಲ್ಲಿ 40 ವಿದ್ಯಾರ್ಥಿಗಳಲ್ಲಿ ಕೊರೊನಾ ಸೋಂಕು ಕಂಡುಬಂದಿದ್ದು ಹಾಗೂ ಬೊಮ್ಮನಹಳ್ಳಿ ವಲಯದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ 103 ಮಂದಿಯಲ್ಲಿ ಕೋವಿಡ್ ಪತ್ತೆಯಾಗಿದ್ದು ಅಧಿಕಾರಿಗಳ ಆತಂಕಕ್ಕೆ ಕಾರಣವಾಗಿತ್ತು.

'ಕಾವಲ್‌ಭೈರಸಂದ್ರದ ಕಾಲೇಜಿನ ಬೇರೆ ವಿದ್ಯಾರ್ಥಿಗಳಲ್ಲಿ ಯಾರಲ್ಲೂ ಸೋಂಕು ಪತ್ತೆಯಾಗಿಲ್ಲ. ಬೊಮ್ಮನಹಳ್ಳಿಯ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲೂ ಬಳಿಕ ಯಾವುದೇ ವ್ಯಕ್ತಿಗಳಲ್ಲೂ ಸೊಂಕು ಕಂಡುಬಂದಿಲ್ಲ' ಎಂದು ಮಂಜುನಾಥ ಪ್ರಸಾದ್ ತಿಳಿಸಿದರು.

ಚಿತ್ರಾವಳಿ

ಬಿಜೆಪಿ ಸಾಮಾಜಿಕ ಮಾಧ್ಯಮ ವಿಭಾಗದ ವತಿಯಿಂದ ಬೆಂಗಳೂರು ಉತ್ತರ ಜಿಲ್ಲಾ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಾಗಾರವನ್ನು ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಉದ್ಘಾಟಿಸಿದರು. ಬಿಜೆಪಿ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಇದ್ದರು.

ವಚನಜ್ಯೋತಿ ಬಳಗದ ವತಿಯಿಂದ ನಗರದಲ್ಲಿ ಹಮ್ಮಿಕೊಂಡಿದ್ದ ಸಂಸ್ಥಾಪಕರ ದಿನಾಚರಣೆಯಲ್ಲಿ ಗಾಯಕ ಅಂಬಯ್ಯ ನುಲಿ ಅವರಿಗೆ 'ಶಿವಲಿಂಗ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್‌.ರಂಗಪ್ಪ, ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್‌. ಪಿನಾಕಪಾಣಿ, ಗಂಗಾಂಬಿಕೆ, ಕನ್ನಡ ಮಾಣಿಕ್ಯ ಸಮೂಹದ ವೀರಕಪುತ್ರ ಶ್ರೀನಿವಾಸ್, ಎಂ.ಪ್ರಕಾಶ ಮೂರ್ತಿ ಇದ್ದರು.

ಸರ್ವಿಸ್ ರಸ್ತೆಗಳನ್ನು ಬಿಡದೆ ಟೋಲ್ ಸುಂಕ ವಸೂಲಿ ಮಾಡುತ್ತಿರುವುದಕ್ಕೆ ಖಂಡಿನೆ

ಫಾಸ್ಟ್ ಟ್ಯಾಗ್ ಕಡ್ಡಾಯ: ಧರಣಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಟೋಲ್‌ಗಳಲ್ಲಿ ಫಾಸ್ಟ್ ಟ್ಯಾಗ್ ಕಡ್ಡಾಯ ವಿರೋಧಿಸಿ ಹಾಗೂ ಸರ್ವಿಸ್ ರಸ್ತೆಗಳನ್ನು ಬಿಡದೆ ಟೋಲ್ ಸುಂಕ ವಸೂಲಿ ಮಾಡುತ್ತಿರುವುದನ್ನು ಖಂಡಿಸಿ 8ನೇ ಮೈಲಿಯ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮುಂದೆ ಜಯ ಕರ್ನಾಟಕ ಜನಪರ ವೇದಿಕೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಚಂದ್ರಪ್ಪ ಮಾತನಾಡಿ, 'ಸ್ಥಳೀಯ ವಾಹನ ಸವಾರರಿಗೆ ಫಾಸ್ಟ್ ಟ್ಯಾಗ್‌ನಿಂದ ವಿನಾಯತಿ ಕೊಡಬೇಕು ಸರ್ವಿಸ್ ರಸ್ತೆ ಮಾಡಬೇಕು ಎಂದು ಮನವಿ ಸಲ್ಲಿಸಲಾಗುತ್ತಿದೆ. ಮನವಿಗೆ ಸ್ಪಂದಿಸದಿದ್ದಲ್ಲಿ ಮುಂದಿನ ದಿನದಲ್ಲಿ ರಾಜ್ಯದ ಎಲ್ಲ ಟೋಲ್ ಪ್ಲಾಜಾ ಮುಂದೆ ಹೋರಾಟ ನಡೆಸಲಾಗುತ್ತದೆ' ಎಂದು ತಿಳಿಸಿದರು.

ಸಂಘಟನೆಯ ನಗರ ಜಿಲ್ಲಾ ಘಟಕದ ಅಧ್ಯಕ್ಷ ಜೆ. ಶ್ರೀನಿವಾಸ್ ಮಾತನಾಡಿ, ' ಸಾರ್ವಜನಿಕರಿಂದ ದುಪ್ಪಟ್ಟು ಸುಂಕ ವಸೂಲಿ ಮಾಡುತ್ತಿದ್ದಾರೆ. ನಾಮಫಲಕಗಳಲ್ಲಿ ಸರಿಯಾದ ಮಾಹಿತಿ ಇರುವುದಿಲ್ಲ. ಕಚೇರಿಗಳಲ್ಲಿ ಸರಿಯಾಗಿ ಕನ್ನಡ ಮಾತನಾಡುವವರು ಕೂಡ ಇರುವುದಿಲ್ಲ' ಎಂದು ದೂರಿದರು.

ಬೆಂಗಳೂರು ನಗರ ಜಿಲ್ಲಾ ಉಪಾಧ್ಯಕ್ಷ ರಾಧಾಕೃಷ್ಣ ಡಿ. (ವೆಂಕಿ), ಕ್ಷೇತ್ರ ಅಧ್ಯಕ್ಷ ವಿಜಯಕುಮಾರ್, ರಾಜ್ಯ ಸಂಚಾಲಕ ಪ್ರಕಾಶ್ ಗೌಡ, ರಾಜ್ಯ ಉಪಾಧ್ಯಕ್ಷ ಉದಯ ಶೆಟ್ಟಿ, ಕ್ಷೇತ್ರದ ಕಾರ್ಯದರ್ಶಿ ಮಧು ಗೌಡ, ಯೋಗೇಶ್ ಬಾಬು, ಜಯರಾಮ್, ಶಾರದಾ ಸಿಂಗ್, ರೇಖಾ ಮುಂತಾದವರಿದ್ದರು.

ಜಯ ಕರ್ನಾಟಕ ಜನಪರ ವೇದಿಕೆಯಿಂದ ಪ್ರತಿಭಟನೆ ನಡೆಸಲಾಯಿತು

ಚಿಣ್ಣರ ಬದುಕು ಹಸನಾಗಿಸಲು ದೇಶದ 25 ನಗರಗಳಲ್ಲಿ ಕಾರ್ಯಕ್ರಮ ಜಾರಿ

ನೆರೆಹೊರೆ ನೆರವು ಸವಾಲು– ಬೆಂಗಳೂರು ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಣ್ಣರ ಬದುಕು ಹಸನಾಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ 'ನೆರೆ-ಹೊರೆಯವರಿಗೆ ನೆರವು-ಸವಾಲು' ಕಾರ್ಯಕ್ರಮದ ಅನುಷ್ಠಾನಕ್ಕೆ ಬೆಂಗಳೂರು ನಗರ ಆಯ್ಕೆಯಾಗಿದೆ.

ಈ ಸವಾಲಿನಲ್ಲಿ ಭಾಗವಹಿಸುವ ಪ್ರಸ್ತಾವನೆ ಸಲ್ಲಿಸಲು ಫೆ.7ರವರೆಗೆ ಕಾಲಾವಕಾಶ ನೀಡಲಾಗಿತ್ತು. ಒಟ್ಟು 60 ನಗರಗಳು ಪ್ರಸ್ತಾವನೆ ಸಲ್ಲಿಸಿದ್ದವು. ಪರಿಶೀಲನಾ ಸಮಿತಿಯು 25 ನಗರಗಳ ಒಕ್ಕೂಟವನ್ನು ಅಂತಿಮಗೊಳಿಸಿದೆ. ಅವುಗಳಲ್ಲಿ ರಾಜ್ಯದ ಬೆಂಗಳೂರು ಹಾಗೂ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳು ಸೇರಿವೆ. ಈ ಕಾರ್ಯಕ್ರಮ ಅನುಷ್ಠಾನಕ್ಕೆ ಈಗಾಗಲೇ ಸಲ್ಲಿಕೆಯಾ-ಗಿರುವ ಪ್ರಸ್ತಾವನೆಗೆ ಪೂರಕವಾಗಿ ಕೇಂದ್ರ ಸರ್ಕಾರ ಇನ್ನು ಆರು ತಿಂಗಳು ಬೆಂಬಲ ಹಾಗೂ ತಾಂತ್ರಿಕ ನೆರವನ್ನು ಒದಗಿಸಲಿದೆ.

ಸ್ಮಾರ್ಟ್ ಸಿಟಿ ಅಭಿಯಾನದ ಅಡಿ ರೂಪಿಸಲಾದ ಈ ಕಾರ್ಯಕ್ರಮ-ವನ್ನು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಬರ್ನಾರ್ಡ್ ವ್ಯಾನ್ ಲೀರ್ ಫೌಂಡೇಷನ್ ಸಹಯೋಗದಲ್ಲಿ ಜಾರಿಗೊಳಿಸಲಿದೆ. ವರ್ಲ್ಡ್ ರಿಸೋರ್ಸಸ್ ಇನ್‌ಸ್ಟಿಟ್ಯೂಟ್ (ಡಬ್ಲ್ಯುಆರ್‌ಐ) ಇಂಡಿಯಾ ಇದಕ್ಕೆ ತಾಂತ್ರಿಕ ನೆರವು ಒದಗಿಸಲಿದೆ. ಶಿಶುಗಳ, ಚಿಣ್ಣರ ಹಾಗೂ ಅವರ ಬಗ್ಗೆ ಕಾಳಜಿ ವಹಿಸುವವರ ದೈಹಿಕ ಮತ್ತು ಮಾನಸಿಕ ಆರೋಗ್ಯ ಸಾರ್ವಜನಿಕ ಸುಧಾರಣೆಗಾಗಿ ಸಾರ್ವಜನಿಕ ಸ್ಥಳಗಳು, ಸಂಚಾರ, ಸೇವೆಗಳ ಲಭ್ಯತೆ ಹಾಗೂ ಸುಧಾರಣೆಗಾಗಿ ಹಮ್ಮಿಕೊಳ್ಳುವ ಪ್ರಾಯೋಗಿಕ ಕಾರ್ಯಕ್ರಮಗಳಿಗೆ ಇದರ ಅಡಿ ನೆರವು ನೀಡಲಾಗುತ್ತದೆ.

ಸುಗಮ ಪ್ರಯಾಣ ಒದಗಿಸುವಂತಹ ಚಿಣ್ಣರಸ್ನೇಹಿ ಸಂಚಾರ ಹಬ್ ರೂಪಿಸುವುದು, ಶಿಶುಗಳ ಆರೈಕೆ ಸೌಕರ್ಯಗಳನ್ನು ಅಳವಡಿಸುವುದು, ಮಕ್ಕಳು ಚಟುವಟಿಕಾ ತಾಣಗಳ ಅಭಿವೃದ್ಧಿ, ಈಗಿರುವ ಅಂಗನವಾಡಿಗಳ ಪುನರುಜ್ಜೀವನ, ಒಳಾಂಗಣ ಮತ್ತು ಹೊರಾಂಗಣಗಳಲ್ಲಿ ಸೂಕ್ತ ಸೌಕರ್ಯ ಒದಗಿಸುವುದು ಈ ಕಾರ್ಯಕ್ರಮದಲ್ಲಿ ಸೇರಿವೆ.

ಈ ಒಕ್ಕೂಟಕ್ಕೆ ಆಯ್ಕೆಯಾದ ನಗರಗಳು ಚಿಣ್ಣರ ಸೌಕರ್ಯಗಳ ಸಾಮರ್ಥ್ಯವರ್ಧನೆಗೆ ತಾಂತ್ರಿಕ ಮುಂದಿನ ಆರು ತಿಂಗಳು ಕೇಂದ್ರದಿಂದ ನೆರವನ್ನು ಪಡೆಯಲಿವೆ. ಪ್ರಯೋಗಗಳ ಮೂಲಕ ಚಟುವಟಿಕೆ ರೂಪಿಸುವುದಕ್ಕೆ, ಸಲ್ಲಿಸಿರುವ ಪ್ರಸ್ತಾ-ವನೆಗಳಿಗೆ ಸಂಬಂಧಿಸಿದಂತೆ ಆರಂಭಿಕ ಯಶಸ್ಸು ಗಳಿಸುವುದಕ್ಕೆ, ನಾಗರಿಕರ ಸಹಭಾಗಿತ್ವ ಪಡೆಯುವುದಕ್ಕೆ ಹಾಗೂ ಒಮ್ಮತ ಮೂಡಿಸುವುದಕ್ಕೆ ಕೂಡಾ ಕೇಂದ್ರವು ಅಗತ್ಯ ಸಹಾಯ ಒದಗಿಸಲಿದೆ.

ಮಕ್ಕಳ ಸಂಭ್ರಮ (ಸಾಂದರ್ಭಿಕ ಚಿತ್ರ)

ಕಾರ್ಯಕ್ರಮದ ಪ್ರಮುಖ ಅಂಶಗಳೇನು?

- ನಗರದ ಬೀದಿಗಳನ್ನು ಸುರಕ್ಷಿತ ಹಾಗೂ ಚಿಣ್ಣರು ನಡೆದಾಡುವುದಕ್ಕೆ ಅನುಕೂಲಕರವಾಗಿ ರೂಪಿಸಲಾಗುತ್ತದೆ
- ಚಿಣ್ಣರ ನಡುವೆ ಒಡನಾಟ ಹೆಚ್ಚಿಸುವುದಕ್ಕೆ ಹಾಗೂ ಅವರು ಆಡುವುದಕ್ಕೆ ಹೆಚ್ಚು ಮೈದಾನಗಳು ಲಭ್ಯವಿರುವಂತೆ ನೋಡಿಕೊಳ್ಳಲಾಗುತ್ತದೆ
- ಬಾಲ್ಯದ ಆರಂಭಿಕ ಅವಧಿಯಲ್ಲಿ ಅಗತ್ಯವಿರುವ ಸೌಕರ್ಯಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಕಲ್ಪಿಸಲಾಗುತ್ತದೆ
- ಬಾಲ್ಯದ ಆರಂಭಿಕ ಅವಧಿಯಲ್ಲಿ ಅಗತ್ಯವಿರುವ ಸೇವೆಗಳ ಲಭ್ಯತೆಯನ್ನು ಹೆಚ್ಚಿಸಲಾಗುತ್ತದೆ

ಏನಿದು ನೆರೆಹೊರೆಯವರ ಪೋಷಣೆ ಸವಾಲು?

ನಗರದ ಪ್ರದೇಶಗಳಲ್ಲಿ ವಿಶೇಷವಾಗಿ ಎಳೆಯರಿಗೆ ಅವಕಾಶಗಳನ್ನು ಹೆಚ್ಚಿಸುವ ಸಲುವಾಗಿ ಕೇಂದ್ರ ಸರ್ಕಾರವು 2020ರ ನ. 4ರಂದು ಈ ಕಾರ್ಯಕ್ರಮ ಪ್ರಕಟಿಸಿತು. ಮೂರು ವರ್ಷಗಳ ಈ ಸವಾಲಿನ ಜಾರಿಗೆ ದೇಶದ ಎಲ್ಲ ಸ್ಮಾರ್ಟ್ ಸಿಟಿಗಳು, ರಾಜ್ಯದ ಹಾಗೂ ಕೇಂದ್ರಾಡಳಿತ ಪ್ರದೇಶಗಳ ರಾಜಧಾನಿಗಳು ಹಾಗೂ 5 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳು ಅರ್ಹತೆ ಪಡೆದಿದ್ದವು.

ಎಳೆಯರ ಜೀವನ ಗುಣಮಟ್ಟ ಸುಧಾರಣೆಗೆ ಮಾಡಿಕೊಂಡಿರುವ ಸಿದ್ಧತೆ ಹಾಗೂ ಈ ನಗರಗಳ ಬದ್ಧತೆಗಳ ಆಧಾರದಲ್ಲಿ ಕೇಂದ್ರ ಸರ್ಕಾರವು ತಾಂತ್ರಿಕ ನೆರವನ್ನು ಒದಗಿಸಲಿದೆ. ಎಲ್ಲರನ್ನು ಒಳಗೊಂಡ ಅಭಿವೃದ್ಧಿ ಈ ಕಾರ್ಯಕ್ರಮದ ಪ್ರಮುಖ ಧ್ಯೇಯ. ಪ್ರತಿಯೊಂದು ಮಗುವಿನ ಬಾಲ್ಯದ ಬೆಳವಣಿಗೆ ಕೇಂದ್ರೀಕರಿಸಿ ದೇಶದ ನಗರಗಳಲ್ಲಿ ಕಾಲಕ್ರಮೇಣ ಯೋಜನೆ ಹಾಗೂ ನಿರ್ವಹಣಾ ವ್ಯವಸ್ಥೆ ರೂಪಿಸುವುದಕ್ಕೆ ನಗರದ ಪ್ರಮುಖರು, ಆಡಳಿತಗಾರರು, ಸಿಬ್ಬಂದಿ, ಎಂಜಿನಿಯರ್‌ಗಳು, ನಗರ ಯೋಜಕರು ಹಾಗೂ ವಾಸ್ತುಶಿಲ್ಪಿಗಳು ಕೈಜೋಡಿಸಲಿದ್ದಾರೆ.

ಬೆಂಗಳೂರಿನ ಪ್ರಸ್ತಾವನೆಯಲ್ಲೇನಿದೆ?

ನಗರದಲ್ಲಿ ಮಕ್ಕಳ ವರ್ತನೆಯಲ್ಲಿ ಗಮನಾರ್ಹ ಬದಲಾವಣೆ ತರುವಂತಹ ಚಟುವಟಿಕೆ ಹಮ್ಮಿಕೊಳ್ಳುವುದು, ನಗರದ ಯೋಜನೆ ಮತ್ತು ಅಭಿವೃದ್ಧಿಯ ದೀರ್ಘಾವಧಿಯ ಕಾರ್ಯಕ್ರಮಗಳನ್ನು ಮತ್ತು ನೀತಿಗಳನ್ನು ರೂಪಿಸುವಾಗ ಅವುಗಳನ್ನು ಚಿಣ್ಣರ ಬಾಲ್ಯದ ದೃಷ್ಟಿಯಿಂದಲೂ ಪರಾಮರ್ಶಿಸುವ ಪ್ರಮುಖ ಅಂಶ ಬೆಂಗಳೂರು ಸ್ಮಾರ್ಟ್ ಸಿಟಿ ಸಂಸ್ಥೆಯ ಪ್ರಸ್ತಾವನೆಯಲ್ಲಿದೆ.

ಹೆಡ್ ಕಾನ್‌ಸ್ಟೆಬಲ್ ಹುದ್ದೆಗೆ ಪದೋನ್ನತಿ ಪಡೆದ ಮಂಜುಳಾ ಹುನಗುಂಡಿ ಅವರಿಗೆ ಕೆಎಸ್‌ಆರ್‌ಪಿ ಎಡಿಜಿಪಿ ಅಲೋಕ್‌ಕುಮಾರ್ ಅವರು ಬ್ಯಾಡ್ಜ್ ಹಾಕಿದರು

ಮೂರು ವರ್ಷಕ್ಕೆ ಪದೋನ್ನತಿ ಇತಿಹಾಸದಲ್ಲೇ ಮೊದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನ್‌ಸ್ಟೆಬಲ್ ಆಗಿ ಕೇವಲ ಮೂರು ವರ್ಷ ನಾಲ್ಕು ತಿಂಗಳು ಸೇವಾವಧಿ ಪೂರ್ಣಗೊಳಿಸಿದ ಮಂಜುಳಾ ಹುನಗುಂಡಿ ಸೇರಿದಂತೆ ರಾಜ್ಯ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) 72 ಮಹಿಳಾ ಕಾನ್‌ಸ್ಟೆಬಲ್‌ಗಳಿಗೆ, ಹೆಡ್ ಕಾನ್‌ಸ್ಟೆಬಲ್ ಆಗಿ ಪದೋನ್ನತಿ ನೀಡಲಾಗಿದೆ.

'ಮೂರು ವರ್ಷ ನಾಲ್ಕು ತಿಂಗಳಿಗೆ ಪದೋನ್ನತಿ ನೀಡಿರುವುದು ಪೊಲೀಸ್ ಇಲಾಖೆ ಇತಿಹಾಸದಲ್ಲೇ ಮೊದಲು' ಎಂದು ಕೆಎಸ್‌ಆರ್‌ಪಿ ಎಡಿಜಿಪಿ ಅಲೋಕ್‌ಕುಮಾರ್ ತಿಳಿಸಿದ್ದಾರೆ.

'ಕೆಎಸ್‌ಆರ್‌ಪಿ 4ನೇ ಬೆಟಾಲಿಯನ್ ಕಾನ್‌ಸ್ಟೆಬಲ್‌ಗಳಾದ ರಂಜಿತಾ ಹಾಗೂ ಎಚ್.ಆರ್. ಅನಿತಾ ಅವರಿಗೆ 24 ವರ್ಷ ಸೇವಾವಧಿ ನಂತರ ಪದೋನ್ನತಿ ನೀಡಲಾಗಿದೆ. ಇದರ ಜೊತೆಗೆ, ಮೂರು ವರ್ಷ ಆರು ತಿಂಗಳಿಗಿಂತ ಹೆಚ್ಚಿನ ಸೇವಾವಧಿಯುಳ್ಳ 11 ಹಾಗೂ ಐದು ವರ್ಷ ಸೇವಾವಧಿಯುಳ್ಳ 34 ಮಹಿಳಾ ಕಾನ್‌ಸ್ಟೆಬಲ್‌ಗಳಿಗೆ ಪದೋನ್ನತಿ ನೀಡಲಾಗಿದೆ' ಎಂದೂ ಹೇಳಿದ್ದಾರೆ.

ಉಪಾಧ್ಯಕ್ಷ ಸ್ಥಾನಕ್ಕೆ ಲಿಂಬಾವಳಿ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಅವರು ಭಾರತೀಯ ಜನತಾ ಪಕ್ಷದ ಕರ್ನಾಟಕ ರಾಜ್ಯ ಘಟಕದ ಉಪಾಧ್ಯಕ್ಷ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

'ನಾನು ಸಚಿವನಾಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಪಕ್ಷದಲ್ಲಿ 'ಒಬ್ಬ ವ್ಯಕ್ತಿ, ಒಂದು ಹುದ್ದೆ' ಎನ್ನುವ ಸಿದ್ಧಾಂತ ಪಾಲಿಸುತ್ತಿದ್ದೇವೆ. ಅದರ ಅನ್ವಯ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಹುದ್ದೆಗೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರಿಗೆ ಬರೆದಿರುವ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

ಕಳ್ಳಸಾಗಣೆ: ಏಳು ಮಕ್ಕಳ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇರೆ ರಾಜ್ಯಗಳಿಂದ ಕಳ್ಳಸಾಗಣೆಯಾಗಿದ್ದ 7 ಮಕ್ಕಳನ್ನು ಬೆಂಗಳೂರು ರೈಲ್ವೆ ವಿಭಾಗದ 'ನನ್ನೆ ಫರಿಸ್ತೇ' ತಂಡ ರಕ್ಷಣೆ ಮಾಡಿದೆ.

ರಾಜಸ್ಥಾನದ ಬಿಲ್ವಾರದಿಂದ ಅಪಹರಿಸಲ್ಪಟ್ಟಿದ್ದ 14 ವರ್ಷದ ಬಾಲಕಿಯನ್ನು ಯಲಹಂಕ ರೈಲ್ವೆ ನಿಲ್ದಾಣದಲ್ಲಿ ಫೆ.19ರಂದು ರಕ್ಷಿಸಲಾಗಿದೆ. ಅಪಹರಿಸಿದ ತಂಡವನ್ನು ಬಂಧಿಸಲಾಗಿದೆ. ಆರೋಪಿಗಳನ್ನು ವಶಕ್ಕೆ ಪಡೆಯಲು ರಾಜಸ್ಥಾನ ಪೊಲೀಸರಿಗೆ ತಿಳಿಸಲಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.

ಬಾಲಕಾರ್ಮಿಕ ಪದ್ಧತಿಗೆ ದೂಡಲ್ಪಟ್ಟಿದ್ದ ಬಿಹಾರದ ನಾಲ್ಕು ಮಕ್ಕಳು ಫೆ.19ರಂದು ತಪ್ಪಿಸಿಕೊಂಡು ಬಂದು ಕೆಎಸ್‌ಆರ್ ರೈಲು ನಿಲ್ದಾಣದಲ್ಲಿದ್ದರು. ಅವರ ಜೊತೆಗೆ ಕಳ್ಳಸಾಗಣೆ ಮಾಡಲು ಬಳಕೆಯಾಗಿದ್ದ ತ್ರಿಪುರದ ಮತ್ತೊಬ್ಬ ಬಾಲಕನನ್ನೂ ರಕ್ಷಿಸಲಾಗಿದೆ ಎಂದು ವಿವರಿಸಿದೆ.

ಮತ್ತೊಬ್ಬ ಬಾಲಕನನ್ನು ಮದ್ದೂರಿನಲ್ಲಿ ಮರದ ಉದ್ಯಮದಲ್ಲಿ ಕೆಲಸಕ್ಕೆ ದೂಡಲಾಗಿತ್ತು. ಆತ ಕೂಡ ಫೆ.22ರಂದು ತಪ್ಪಿಸಿಕೊಂಡು ಬಂದು ಕೆಎಸ್‌ಆರ್ ರೈಲು ನಿಲ್ದಾಣದಲ್ಲಿದ್ದಾಗ ವಶಕ್ಕೆ ಪಡೆಯಲಾಗಿದೆ. ಎಲ್ಲ ಏಳು ಮಕ್ಕಳನ್ನು ನಿಗದಿಪಡಿಸಿದ ಎನ್‌ಜಿಒಗೆ ಒಪ್ಪಿಸಲಾಗಿದೆ ಎಂದು ಹೇಳಿದೆ.

2017ರಿಂದ ಈವರೆಗೆ ಕಳ್ಳಸಾಗಣೆಯಾಗುತ್ತಿದ್ದ 2,927 ಮಕ್ಕಳನ್ನು ನೈರುತ್ಯ ರೈಲ್ವೆಯ ವಿವಿಧ ನಿಲ್ದಾಣಗಳಲ್ಲಿ ರಕ್ಷಿಸಲಾಗಿದೆ ಎಂದೂ ತಿಳಿಸಿದೆ.

ವಾಟ್ಸ್‌ಆ್ಯಪ್ ಸಂದೇಶ ನಂಬಿ ₹ 5 ಲಕ್ಷ ಕಳೆದುಕೊಂಡ

ಬೆಂಗಳೂರು: ಸ್ನೇಹಿತರೊಬ್ಬರ ಹೆಸರಿನಲ್ಲಿ ವಾಟ್ಸ್‌ಆ್ಯಪ್‌ಗೆ ಬಂದಿದ್ದ ಸಂದೇಶ ನಂಬಿ ನಗರದ ನಿವಾಸಿಯೊಬ್ಬರು ₹ 5 ಲಕ್ಷ ಕಳೆದುಕೊಂಡಿದ್ದು, ಈ ಸಂಬಂಧ ವೈಟ್‌ಫೀಲ್ಡ್ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ದೇವರಬಿಸನಹಳ್ಳಿಯ 47 ವರ್ಷದ ವ್ಯಕ್ತಿ ದೂರು ನೀಡಿದ್ದಾರೆ. ಇಬ್ಬರು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರಿಗೆ ಆಸ್ಟ್ರೇಲಿಯಾದಲ್ಲಿ ಸ್ನೇಹಿತ ಇದ್ದಾರೆ. ಅದೇ ಸ್ನೇಹಿತನ ಹೆಸರಿನಲ್ಲಿ ಫೆ. 14ರಂದು ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿದ್ದ ಆರೋಪಿಗಳು, 'ನಾನು ಅಪಾಯದಲ್ಲಿ ಸಿಲುಕಿದ್ದೇನೆ. ತುರ್ತಾಗಿ ಹಣ ಬೇಕಿದೆ' ಎಂದಿದ್ದರು. ಅದನ್ನು ಖಾತ್ರಿಪಡಿಸಿಕೊಳ್ಳಲು ದೂರುದಾರ, ಸ್ನೇಹಿತನಿಗೆ ಕರೆ ಮಾಡಿದಾಗ ಸಂಪರ್ಕಕ್ಕೆ ಸಿಕ್ಕಿರಲಿಲ್ಲ.'

'ಸಂದೇಶ ಬಂದಿದ್ದ ವಾಟ್ಸ್‌ಆ್ಯಪ್ ನಂಬರ್‌ಗೆ ಸ್ನೇಹಿತನ ಫೋಟೊ ಇತ್ತು. ಅದನ್ನು ನಂಬಿದ್ದ ದೂರುದಾರ, ಆರೋಪಿಗಳು ನೀಡಿದ್ದ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹ 5 ಲಕ್ಷ ಜಮೆ ಮಾಡಿದ್ದರು. ಕೆಲ ಹೊತ್ತು ಬಿಟ್ಟು ಸ್ನೇಹಿತ ಸಂಪರ್ಕಕ್ಕೆ ಸಿಕ್ಕಿದ್ದ. ತಾನು ಸಂದೇಶ ಕಳುಹಿಸಿಲ್ಲವೆಂದು ಆತ ಹೇಳಿದ್ದ. ಅವಾಗಲೇ ದೂರುದಾರರಿಗೆ ವಂಚನೆ ಬಗ್ಗೆ ಗೊತ್ತಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

'ಕೈಗಾರಿಕಾ ಟೌನ್‌ಶಿಪ್'ಗೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೀಣ್ಯ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಕೈಗಾರಿಕಾ ಟೌನ್‌ಶಿಪ್ ಸ್ಥಾಪಿಸಲು ಬಜೆಟ್‌ನಲ್ಲಿ ಅಗತ್ಯ ಅನುದಾನ ಪ್ರಕಟಿಸಬೇಕು' ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಸ್ಥೆಯ (ಕಾಸಿಯಾ) ಅಧ್ಯಕ್ಷ ಕೆ.ಬಿ. ಅರಸಪ್ಪ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಮನವಿ ಮಾಡಿದ್ದಾರೆ.

'ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ವಲಯವು (ಎಂಎಸ್‌ಎಂಇ) ದೇಶದ ಬೆನ್ನೆಲುಬು. ಇವುಗಳ ಪುನಶ್ಚೇತನದ ದೃಷ್ಟಿಯಿಂದ ಬಜೆಟ್‌ನಲ್ಲಿ ವಿಶೇಷ ಅನುದಾನ ಒದಗಿಸಬೇಕು. ಎಂಎಸ್‌ಎಂಇ ಉದ್ಯಮಿಗಳು ತಪಾಸಣಾಧಿಕಾರಿಗಳಿಂದ ಕಿರುಕುಳ ಅನುಭವಿಸುತ್ತಿದ್ದು, ಅವರ ಅಧಿಕಾರ ಮೊಟಕುಗೊಳಿಸಬೇಕು. ಗ್ರಾಮೀಣ ಯುವಕರಲ್ಲಿ ಉದ್ಯಮಶೀಲ ಸಾಮರ್ಥ್ಯ ಬೆಳೆಸಲು ಅಗತ್ಯ ಪ್ರೋತ್ಸಾಹ ಹಾಗೂ ಪರಿಹಾರ ಪ್ಯಾಕೇಜ್‌ಗಳನ್ನು ಘೋಷಿಸಬೇಕು' ಎಂದು ಪತ್ರದಲ್ಲಿ ಮನವಿ ಮಾಡಲಾಗಿದೆ.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಕೆ.ಬಿ. ಅರಸಪ್ಪ ಮನವಿ ಸಲ್ಲಿಸಿದರು

'ಗಲಭೆ ಪೂರ್ವನಿಯೋಜಿತ ಕೃತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಹಾಗೂ ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಗಲಭೆ ಪೂರ್ವನಿಯೋಜಿತ' ಎಂದು ನ್ಯಾಯಾಲಯಕ್ಕೆ ದೋಷರೋಪ ಪಟ್ಟಿ ಸಲ್ಲಿಸಿರುವ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, 'ತ್ರಿವಳಿ ತಲಾಖ್ ರದ್ದು, ರಾಮ ಜನ್ಮ ಭೂಮಿ ತೀರ್ಪು ಹಾಗೂ ಪೌರತ್ವ ಕಾಯ್ದೆಯಿಂದ ಆಕ್ರೋಶಗೊಂಡಿದ್ದ ಗುಂಪೊಂದು, ಗಲಭೆ ಸೃಷ್ಟಿಸಿತ್ತು' ಎಂದೂ ಹೇಳಿದ್ದಾರೆ.

'ದೇಶದಲ್ಲಿ ಅಶಾಂತಿ ಸೃಷ್ಟಿಸುವ ಉದ್ದೇಶವಿಟ್ಟುಕೊಂಡಿದ್ದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಹಾಗೂ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಕಾರ್ಯಕರ್ತರು, ಫೇಸ್‌ಬುಕ್ ಪೋಸ್ಟ್ ನೆಪ ಮಾಡಿಕೊಂಡು ಗಲಭೆ ಸೃಷ್ಟಿಸಿದ್ದರು' ಎಂದೂ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿರುವುದಾಗಿ ಗೊತ್ತಾಗಿದೆ.

'ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ತರುವ ವಿವಾದಾತ್ಮಕ ಪೋಸ್ಟ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲು ಆರೋಪಿಗಳು ಸಂಚು ರೂಪಿಸಿದ್ದರು. ಕಳೆದ ವರ್ಷದ ಕೃಷ್ಣ ಜನ್ಮಾಷ್ಟಮಿಯಂದು ಆರೋಪಿಗಳೇ ವಿಡಿಯೊವೊಂದನ್ನು ಹರಿಬಿಟ್ಟಿದ್ದರು. ಅದನ್ನು ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರ ಸಹೋದರ ಸಂಬಂಧಿ ನವೀನ್‌ಗೆ ಟ್ಯಾಗ್ ಮಾಡಿದ್ದರು. ವಿಡಿಯೊ ನೋಡಿದ್ದ ನವೀನ್, ಪ್ರಚೋದನೆಗೆ ಒಳಗಾಗಿ ಕಾಮೆಂಟ್ ಮಾಡಿದ್ದರು. ಅದನ್ನೇ ನೆಪ ಮಾಡಿಕೊಂಡು ಗಲಭೆ ಸೃಷ್ಟಿಸಲಾಯಿತು' ಎಂದೂ ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಡ್ರಗ್ಸ್; ನೈಜೀರಿಯಾ ಪ್ರಜೆಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆಗಳಿಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಚುಕು ಎಮೇಕಾ ಹಾಗೂ ಅಮ್ಸೆಲಮ್ ಚಿಗೋಜೆ ಬಂಧಿತರು. ಅವರಿಂದ 56 ಡ್ರಗ್ಸ್ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಹೊರ ರಾಜ್ಯಗಳ ಪೆಡ್ಲರ್ ಜೊತೆ ಸಂಪರ್ಕವಿಟ್ಟುಕೊಂಡಿದ್ದ ಆರೋಪಿಗಳು, ಅವರಿಂದ ಡ್ರಗ್ಸ್ ಖರೀದಿಸಿ ನಗರಕ್ಕೆ ತಂದು ಮಾರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಕೆಲ ಉದ್ಯಮಿಗಳಿಗೆ ಆರೋಪಿಗಳು ಡ್ರಗ್ಸ್ ಪೂರೈಕೆ ಮಾಡುತ್ತಿದ್ದ ಮಾಹಿತಿ ಇದೆ' ಎಂದೂ ಮೂಲಗಳು ಹೇಳಿವೆ.

'ಆರೋಪಿಗಳ ಜೊತೆ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಸಾಧ್ಯತೆ ಇದೆ. ಡ್ರಗ್ಸ್ ಖರೀದಿ ಮಾಡುತ್ತಿದ್ದವರ ಬಗ್ಗೆಯೂ ಮಾಹಿತಿ ಪಡೆಯಲಾಗುತ್ತಿದ್ದು, ಅಗತ್ಯವಿದ್ದರೆ ಅವರನ್ನು ವಿಚಾರಣೆ ನಡೆಸಲಾಗುವುದು' ಎಂದೂ ತಿಳಿಸಿವೆ.

ಜಪ್ತಿ ಮಾಡಲಾದ ಡ್ರಗ್ಸ್ ಮಾತ್ರೆಗಳು

'ಆನ್‌ಲೈನ್ ಗೇಮಿಂಗ್ ಕಾನೂನುಬದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಆನ್‌ಲೈನ್ ರಮ್ಮಿ ಉದ್ಯಮದ ಮೇಲೆ ಸ್ವಯಂ ನಿಯಂತ್ರಣ ಹೊಂದಿರುವ 'ದಿ ಆನ್‌ಲೈನ್ ರಮ್ಮಿ ಫೆಡರೇಷನ್ (ಟಾರ್ಫ್)' ಕಾನೂನು ಬದ್ಧ ಆನ್‌ಲೈನ್ ಆಟದ ಕುರಿತು ಆಟಗಾರರಲ್ಲಿ ಜಾಗೃತಿ ಮೂಡಿಸಲು ಮುಂದಾಗಿದ್ದು ಇದಕ್ಕಾಗಿ #ಟಾರ್ಫ್ ಹೈ ತೋ ಸೇಫರ್ ಹೈ ಎಂಬ ಅಭಿಯಾನ ಆರಂಭಿಸಿದೆ.

ಈ ಕುರಿತು ಮಾತನಾಡಿರುವ ಟಾರ್ಫ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸಮೀರ್ ಬರ್ದೆ 'ಆನ್‌ಲೈನ್ ರಮ್ಮಿ ಉದ್ಯಮವು ಭಾರತದಲ್ಲಿ ವೇಗವಾಗಿ ಬೆಳೆಯುತ್ತಿದೆ. ಇದು ಕಾನೂನು ಬದ್ಧವಾದ ಆಟ. ಇದರ ಬಗ್ಗೆ ಅನೇಕರಲ್ಲಿ ತಪ್ಪು ತಿಳಿವಳಿಕೆ ಇದೆ. ಈ ಕುರಿತು ಜನರಲ್ಲಿ ಅರಿವು ಮೂಡಿಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಹೊಸ ಅಭಿಯಾನ ಕೈಗೊಂಡಿದ್ದೇವೆ' ಎಂದರು.

'ರಮ್ಮಿ ಜೂಜಾಟವಲ್ಲ. ಇದು ಕೌಶಲ ಕೇಂದ್ರಿತ ಆಟ. ರಾಜ್ಯ ಸರ್ಕಾರಗಳು ಇದನ್ನು ನಿಷೇಧಿಸಲು ಮುಂದಾಗಿರುವುದು ಸರಿಯಲ್ಲ' ಎಂದರು.

ಮರಕ್ಕೆ ಬಸ್ ಡಿಕ್ಕಿ; ಪ್ರಯಾಣಿಕನಿಗೆ ಗಾಯ

ಬೆಂಗಳೂರು: ಮಾಗಡಿ ರಸ್ತೆಯಲ್ಲಿ ಮರವೊಂದಕ್ಕೆ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದಿದ್ದು, ಪ್ರಯಾಣಿಕರೊಬ್ಬರು ಗಾಯಗೊಂಡಿದ್ದಾರೆ. 'ಮಂಗಳವಾರ ಈ ಘಟನೆ ನಡೆದಿದೆ. ಜಾಲಹಳ್ಳಿ, ಸುಮನಹಳ್ಳಿ ಮಾರ್ಗವಾಗಿ ಮೆಜೆಸ್ಟಿಕ್‌ಗೆ ಹೊರಟಿದ್ದ ಬಸ್ಸಿನ ಬ್ರೇಕ್ ಫೇಲ್ ಆಗಿದ್ದೇ ಅವಘಡಕ್ಕೆ ಕಾರಣ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಬ್ರೇಕ್ ಫೇಲ್ ಆದ ಬಸ್ ರಸ್ತೆಯಲ್ಲೇ ಸಂಚರಿಸಿದ್ದರೆ ದೊಡ್ಡ ಅನಾಹುತ ಸಂಭವಿಸುವ ಸಾಧ್ಯತೆ ಇತ್ತು. ಬಸ್ ಅನ್ನು ಮರಕ್ಕೆ ಡಿಕ್ಕಿ ಹೊಡೆಸಿರುವ ಚಾಲಕ, ಅನಾಹುತ ತಪ್ಪಿಸಿದ್ದಾರೆ. ವಿಜಯನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ತಿಳಿಸಿವೆ.

ಸಾರ್ವಜನಿಕರ ಸಮ್ಮುಖದಲ್ಲೇ ಸಭೆ: ಕೆಎಸ್‌ಪಿಸಿಬಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ರಸ್ತೆಯಿಂದ ಹೊಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಪೆರಿಫೆರಲ್ ರಿಂಗ್ ರಸ್ತೆ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕ ಸಭೆಯನ್ನು ಜನರ ಸಮ್ಮುಖದಲ್ಲೇ ನಡೆಸುವುದಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ(ಕೆಎಸ್‌ಪಿಸಿಬಿ) ಹೈಕೋರ್ಟ್‌ಗೆ ತಿಳಿಸಿದೆ.

ಆನ್‌ಲೈನ್‌ನಲ್ಲಿ ಸಭೆ ನಡೆಸಲು ಕೆಎಸ್‌ಪಿಸಿಬಿ ತೀರ್ಮಾನಿಸಿದ್ದನ್ನು ಪ್ರಶ್ನಿಸಿ ಕಾನೂನು ವಿದ್ಯಾರ್ಥಿಗಳು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. 'ಆನ್‌ಲೈನ್‌ನಲ್ಲಿ ಸಭೆ ನಡೆಸುವುದು 2006ರ ಪರಿಸರ ಪರಿಣಾಮ ಮೌಲ್ಯಮಾಪನ(ಇಐಎ) ಅಧಿಸೂಚನೆಗೆ ವಿರುದ್ಧವಾಗಿದೆ' ಎಂದು ಆರೋಪಿಸಿದ್ದರು.

'ಕೋವಿಡ್ ಮಾರ್ಗಸೂಚಿಗಳ ಪ್ರಕಾರ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಸಾರ್ವಜನಿಕರ ಸಮ್ಮುಖದಲ್ಲೇ ಸಭೆ ನಡೆಸಲಾಗುವುದು' ಎಂದು ಕೆಎಸ್‌ಪಿಸಿಬಿ ಪರ ವಕೀಲರು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠಕ್ಕೆ ಭರವಸೆ ನೀಡಿದರು. ಬಳಿಕ ಪೀಠ ಅರ್ಜಿ ವಿಲೇವಾರಿ ಮಾಡಿತು.

'ಕನ್ನಡ ಕಂಕಣ' ಸ್ವಾಭಿಮಾನದ ಸಂಕೇತ: ನಾಗಾಭರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಕಂಕಣ'ವು ಕನ್ನಡಿಗರ ಸ್ವಾಭಿಮಾನದ ಸಂಕೇತವಾಗಲಿ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆಶಿಸಿದರು.

ಕನಕಪುರ ರಸ್ತೆ ಕನ್ನಡ ಬಳಗದ ವತಿಯಿಂದ 'ಕನಕಪುರ ರಸ್ತೆಯಲ್ಲಿ ಕನ್ನಡ ನಾದ' ಕಾರ್ಯಕ್ರಮದ ಅಂಗವಾಗಿ ನಡೆದ 'ಕನ್ನಡ ಕಂಕಣ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರಾಧಿಕಾರದ ವತಿಯಿಂದ ಆಚರಿಸುತ್ತಿರುವ ಕನ್ನಡ ಕಾಯಕ ವರ್ಷ ಕಾರ್ಯಕ್ರಮದ ಅಡಿಯಲ್ಲಿ ಹಲವಾರು ಕನ್ನಡ ಪರ ಯೋಜನೆಗಳು ಪ್ರಗತಿಯಲ್ಲಿದೆ. ಇದರ ಯಶಸ್ಸಿಗೆ ಕನ್ನಡಿಗರ ಸ್ಪಂದನ ಮತ್ತು ಬದ್ಧತೆ ಅಗತ್ಯ' ಎಂದರು.

ಹಿರಿಯ ಹೋರಾಟಗಾರ ರಾ.ನಂ.ಚಂದ್ರಶೇಖರ ಮಾತನಾಡಿ, 'ಕನ್ನಡ ಕಂಕಣ' ಮಾದರಿಯಲ್ಲಿ ಇಲ್ಲಿ ಹಲವಾರು ಕಾರ್ಯಕ್ರಮಗಳು ನಡೆದಿವೆ. 'ಉದ್ಯಾನದಲ್ಲಿ ಕನ್ನಡ' ಎಂಬ ಕಾರ್ಯಕ್ರಮವೂ ನಡೆದಿತ್ತು. ಇಂತಹ ಕಾರ್ಯಕ್ರಮಗಳು ಇನ್ನೂ ಹೆಚ್ಚಬೇಕು' ಎಂದು ಹೇಳಿದರು.

ಅಲೀಮ್, ಜ್ಞಾನ್ ಮಧು, ಲಲ್ಲೂ, ನಿಶಾ ಅವರಿಗೆ ಅಪ್ರತಿಮ ಕನ್ನಡಿಗ ಪ್ರಶಸ್ತಿ, ಅನುಪಮ, ಶ್ರೀನಾಥ್ ಅವರಿಗೆ ಉದಯೋನ್ಮುಖ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಲೇಖಕ ಜರಗನಹಳ್ಳಿ ಶಿವಶಂಕರ್ ಅಧ್ಯಕ್ಷತೆ ವಹಿಸಿದ್ದರು. ಬಳಗದ ಅಧ್ಯಕ್ಷೆ ಭಾರ್ಗವಿ ಹೇಮಂತ್, ಮಂಜುನಾಥ ಹಾಲುವಾಗಿಲು, ದಿಲೀಪ್ ಇದ್ದರು.

ಮಕ್ಕಳಿಗೆ ಟಿ.ಎಸ್ ನಾಗಾಭರಣ 'ಕನ್ನಡ ಕಂಕಣ' ತೊಡಿಸಿದರು. ಕಾರ್ಯಕ್ರಮ ಸಂಘಟಕಿ ಭಾರ್ಗವಿ ಹೇಮಂತ್ ಇದ್ದರು

ಜೆಸಿಬಿ ಯಂತ್ರಗಳೊಂದಿಗೆ ಪ್ರತಿಭಟನೆ ನಡೆಸಿದ ಪ್ರತಿಭಟನಕಾರರು.

ಬೆಲೆ ಏರಿಕೆ ವಿರೋಧಿಸಿ ಜೆಸಿಬಿಗಳೊಂದಿಗೆ ಪ್ರತಿಭಟನೆ

ಬೊಮ್ಮನಹಳ್ಳಿ: ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳ ಏರಿಕೆಯಿಂದಾಗಿ ಜೆಸಿಬಿ, ಟಿಪ್ಪರ್ ಯಂತ್ರಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ ಎಂದು ನಿತ್ಯವೂ ಏರುತ್ತಿರುವ ಇಂಧನ ಬೆಲೆಗಳನ್ನು ಇಳಿಸಬೇಕೆಂದು ಒತ್ತಾಯಿಸಿ ಜೆಸಿಬಿ, ಟಿಪ್ಪರ್ ಮಾಲೀಕರು ಹೊಸೂರು ರಸ್ತೆಯ ಸಿಂಗಸಂದ್ರದ ಬಳಿ ಪ್ರತಿಭಟನೆ ನಡೆಸಿದರು.

'ಹೊಸೂರು-ಸರ್ಜಾಪುರ ಜೆಸಿಬಿ ಹಾಗೂ ಟಿಪ್ಪರ್ ಮಾಲೀಕರ ಸಂಘ'ದ ನೇತೃತ್ವದಲ್ಲಿ ಇನ್ನೂರಕ್ಕೂ ಹೆಚ್ಚು ಜೆಸಿಬಿ ಯಂತ್ರಗಳೊಂದಿಗೆ ಸೇರಿದ್ದ ಮಾಲೀಕರು, ಇಂಧನ ಬೆಲೆ ಮಾತ್ರವಲ್ಲದೇ, ಬಿಡಿಭಾಗಗಳ ಬೆಲೆಯೂ ಏರಿಕೆ ಆಗಿದೆ. ಇದರಿಂದ ಯಂತ್ರಗಳನ್ನು ನಷ್ಟದಲ್ಲೇ ನಡೆಸುವಂತಾಗಿದೆ ಎಂದು ಕೇಂದ್ರ ಸರ್ಕಾರ ಬೆಲೆಏರಿಕೆ ನೀತಿಯನ್ನು ಕೈಬಿಡಬೇಕೆಂದು ಆಗ್ರಹಿಸಿದರು.

'ಪ್ರತಿ ಲೀಟರ್ ಡೀಸೆಲ್‌ಗೆ ₹50 ಇದ್ದಾಗ ಜೆಸಿಬಿ ಬಾಡಿಗೆ ಪ್ರತಿ ಗಂಟೆಗೆ ₹700 ಇತ್ತು. ಇದೀಗ ಡೀಸೆಲ್ ಬೆಲೆ ₹87 ಆಗಿದೆ. ಆದರೆ, ಬಾಡಿಗೆ ಹೆಚ್ಚಾಗಿಲ್ಲ, ಬಾಡಿಗೆ ದರ ಹೆಚ್ಚು ಮಾಡಿದ್ದಲ್ಲಿ ಗ್ರಾಹಕರಿಗೂ ಹೊರೆಯಾಗಲಿದ್ದು, ಕೇಂದ್ರ ಸರ್ಕಾರ ಡೀಸೆಲ್ ಮೇಲಿನ ತೆರಿಗೆಯನ್ನು ಇಳಿಕೆ ಮಾಡಬೇಕು' ಎಂದು ಸಂಘದ ಅಧ್ಯಕ್ಷ ಡಿ.ಕೆ.ಮಧು ಆಗ್ರಹಿಸಿದರು.

'ನವೀಕರಿಸಲಾದ ಎಂಜಿನ್‌ಗಳು 7 ರಿಂದ 9 ಲೀಟರ್ ಡೀಸೆಲ್ ಕುಡಿಯುತ್ತವೆ. ಹಳೆಯ ಎಂಜಿನ್‌ಗಳಿಗೆ 5 ಲೀಟರ್ ಮಾತ್ರವೇ ಸಾಕಿತ್ತು. ಮತ್ತೊಂದೆಡೆ ಎಂಜಿನ್ ಬಾಳಿಕೆ ಅವಧಿಯೂ ಕ್ಷೀಣಿಸುತ್ತಿದ್ದು, ಯಂತ್ರಗಳ ನಿರ್ವಹಣೆ ವೆಚ್ಚವೂ ದುಬಾರಿಯಾಗಿದೆ. ಲಾಕ್ ಡೌನ್ ತರುವಾಯ ಬೇಡಿಕೆಯೂ ತಗ್ಗಿದ್ದು, ಆದಾಯವಿಲ್ಲದೇ ಪರಿತಪಿಸುತ್ತಿದ್ದೇವೆ' ಎಂದು ಸಂಘದ ಉಪಾಧ್ಯಕ್ಷ ದೇವರಾಜ್ ತಮ್ಮ ಅಳಲು ತೋಡಿಕೊಂಡರು.

'ಕೊರೊನಾ ಕಾಲಿಟ್ಟ ದಿನದಿಂದ ಬಾಡಿಗೆ ಸಿಗುತ್ತಿಲ್ಲ, ಚಾಲಕರಿಗೆ ವೇತನ ನೀಡಲೂ ಸಾಧ್ಯವಾಗದೇ, ಅತ್ತ ಬ್ಯಾಂಕ್ ಸಾಲ ಮರುಪಾವತಿ ಮಾಡಲಾಗದೇ ಅತೀವ ಸಂಕಷ್ಟಕ್ಕೆ ಸಿಲುಕಿದ್ದೇವೆ. ಸರ್ಕಾರ ಬೆಲೆ ನಿಯಂತ್ರಿಸಲು ಕ್ರಮವಹಿಸಬೇಕು' ಎಂದು ಸಂಘದ ಮುಖ್ಯಸ್ಥ ಬಾಬುರೆಡ್ಡಿ ಹೇಳಿದರು.

'ಯುನಾನಿ ದಿನಾಚರಣೆ' ಕಾರ್ಯಕ್ರಮದಲ್ಲಿ ಕೋವಿಡ್ ಯೋಧರಿಗೆ ಗೌರವ

'ಆಯುಷ್ ವೈದ್ಯ ಪದ್ಧತಿ ಮಹತ್ವ ಸಾರಿದ ಕೋವಿಡ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಕಾಯಿಲೆ ಕಾಣಿಸಿಕೊಂಡ ಬಳಿಕ ಜನತೆ ರೋಗನಿರೋಧಕ ಶಕ್ತಿ ವೃದ್ಧಿಗೆ ಆಯುಷ್ ಉತ್ಪನ್ನಗಳ ಮೊರೆಹೋದರು. ಇದರಿಂದಾಗಿ ಆಯುಷ್ ವೈದ್ಯಕೀಯ ಪದ್ಧತಿಯು ಮುನ್ನೆಲೆಗೆ ಬಂದಿತು' ಎಂದು ಅರಣ್ಯ ನಿರ್ಮಾಣ ಪರಿಹಾರ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರದ (ಸಿಎಂಪಿಎ) ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ ತಿಳಿಸಿದರು.

ಆಯುಷ್ ಇಲಾಖೆ ನಗರದಲ್ಲಿ ಮಂಗಳವಾರ ಆಯೋಜಿಸಿದ 'ಯುನಾನಿ ದಿನಾಚರಣೆ' ಕಾರ್ಯಕ್ರಮದಲ್ಲಿ ಕೋವಿಡ್ ಯೋಧರನ್ನು ಗೌರವಿಸಿ, ಮಾತನಾಡಿದರು.

'ಕೋವಿಡ್ ಹಲವು ಪಾಠಗಳನ್ನು ಕಲಿಸಿದೆ. ಆಯುಷ್ ವೈದ್ಯ ಪದ್ಧತಿಯಡಿ ಕಾರ್ಯನಿರ್ವಹಿಸುತ್ತಿರುವವರು ಕೋವಿಡ್ ನಿಯಂತ್ರಣಕ್ಕೆ ತಮ್ಮದೆಯಾದ ಕೊಡುಗೆ ನೀಡಿದ್ದಾರೆ. ಕೆಲ ವೈದ್ಯರು ಒಂದು ದಿನವೂ ರಜೆ ಪಡೆಯದೆ ಸೇವೆ ಸಲ್ಲಿಸಿದ್ದಾರೆ. ಕಾಯಿಲೆ ಬಗ್ಗೆ ಭಯದ ಜತೆಗೆ ರೋಗನಿರೋಧಕ ಶಕ್ತಿಯ ಪ್ರಾಮುಖ್ಯತೆ ಬಗ್ಗೆ ಕೂಡ ಜನರಿಗೆ ಜಾಗೃತಿ ಮೂಡಿತು. ಇದರಿಂದಾಗಿ ಆಯುಷ್ ಉತ್ಪನ್ನಗಳಾದ ಕಷಾಯ, ಚೂರ್ಣಗಳನ್ನು ಸೇವಿಸಿ, ರೋಗನಿರೋಧಕ ಶಕ್ತಿಯನ್ನು ವೃದ್ಧಿಸಿಕೊಂಡರು. ಯುನಾನಿಯಂತಹ ಸಾಂಪ್ರದಾಯಿಕ ಚಿಕಿತ್ಸಾ ವಿಧಾನಗಳಲ್ಲಿ ಇನ್ನಷ್ಟು ವೈಜ್ಞಾನಿಕ ಸಂಶೋಧನೆ ನಡೆಸಿ, ಜನರಲ್ಲಿ ವಿಶ್ವಾಸ ಮೂಡಿಸುವ ಕೆಲಸವಾಗಬೇಕು' ಎಂದರು.

ಆಯುಷ್ ಇಲಾಖೆಯ ಆಯುಕ್ತ ರಾಮಚಂದ್ರ ಮಾತನಾಡಿ, 'ಸಾವಿರಾರು ವರ್ಷಗಳ ಇತಿಹಾಸ ಇರುವ ಯುನಾನಿ ಪದ್ಧತಿಯನ್ನು ಮುನ್ನೆಲೆಗೆ ತರಲು ಇಲಾಖೆಯಿಂದ ಅಗತ್ಯ ಪ್ರೋತ್ಸಾಹ ನೀಡಲಾಗುವುದು' ಎಂದರು.

ರಾಷ್ಟ್ರೀಯ ಯುನಾನಿ ಸಂಸ್ಥೆ ನಿರ್ದೇಶಕ ಪ್ರೊ. ಅಬ್ದುಲ್ ವದೂದ್, 'ಯುನಾನಿ ವೈದ್ಯ ಪದ್ಧತಿಗಳಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದ ಹಕೀಂ ಅಜ್ಮಲ್ ಖಾನ್ ಅವರು ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿಯನ್ನು ಪ್ರಚುರಪಡಿಸಲು ಶ್ರಮಿಸಿದ್ದರು. ಪರಿಣಾಮಕಾರಿಯಾದ ಈ ಔಷಧಿಗಳ ಬಗ್ಗೆ ಅಂತರರಾಷ್ಟ್ರೀಯಮಟ್ಟದಲ್ಲಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಬೇಕು' ಎಂದರು.

ಕೋವಿಡ್ ಚಿಕಿತ್ಸೆಯಲ್ಲಿ ತೊಡಗಿಸಿಕೊಂಡಿದ್ದ 250ಕ್ಕೂ ಅಧಿಕ ಆಯುಷ್ ವೈದ್ಯರು ಹಾಗೂ ಸಿಬ್ಬಂದಿಯನ್ನು ಗೌರವಿಸಲಾಯಿತು.

ಆಯುಷ್ ಇಲಾಖೆ ಆಯೋಜಿಸಿದ್ದ 'ಯುನಾನಿ ದಿನಾಚರಣೆ' ಕಾರ್ಯಕ್ರಮದಲ್ಲಿ ಕೋವಿಡ್ ಯೋಧರನ್ನು ಗೌರವಿಸಲಾಯಿತು. (ನಿಂತವರು ಎಡದಿಂದ) ಮೀನಾಕ್ಷಿ ನೇಗಿ, ಆಯುಷ್ ಇಲಾಖೆ ಆಯುಕ್ತ ರಾಮಚಂದ್ರ, ರಾಷ್ಟ್ರೀಯ ಯುನಾನಿ ಸಂಸ್ಥೆಯ ನಿರ್ದೇಶಕ ಅಬ್ದುಲ್ ವದೂದ್ ಮತ್ತು ಬೆಂಗಳೂರು ನಗರ ಜಿಲ್ಲಾ ಆಯುಷ್ ಅಧಿಕಾರಿ ಡಾ. ಮಹಮ್ಮದ್ ರಫೀ ಹಕೀಂ ಇದ್ದಾರೆ ಪ್ರಜಾವಾಣಿ ಚಿತ್ರ

ನೇಪಾಳ: ಜನಪ್ರತಿನಿಧಿ ಸಭೆ ಪುನರ್ ಸ್ಥಾಪನೆ

ಕಠ್ಮಂಡು (ಪಿಟಿಐ): ಅವಧಿಗೂ ಮುನ್ನವೇ ವಿಸರ್ಜಿಸಲಾಗಿದ್ದ ಜನಪ್ರತಿನಿಧಿ ಸಭೆಯನ್ನು ನೇಪಾಳ ಸುಪ್ರೀಂಕೋರ್ಟ್ ಪುನರ್ ಸ್ಥಾಪಿಸಿದೆ. ತುರ್ತಾಗಿ ಚುನಾವಣೆಗೆ ಹೋಗಲು ತುದಿಗಾಲಲ್ಲಿ ನಿಂತಿದ್ದ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಅವರಿಗೆ ಈ ಮೂಲಕ ತೀವ್ರ ಹಿನ್ನಡೆ ಆದಂತಾಗಿದೆ.

ಮುಖ್ಯ ನ್ಯಾಯಮೂರ್ತಿ ಕೋಲೆಂದ್ರ ಶುಮ್‌ಶರ್ ನೇತೃತ್ವದ ಐವರು ಸದಸ್ಯರ ಸಾಂವಿಧಾನಿಕ ಪೀಠ ಈ ತೀರ್ಪು ನೀಡಿದೆ. ಸಂಸತ್ತಿನ ಕೆಳಮನೆಯಾದ ಜನಪ್ರತಿನಿಧಿ ಸಭೆಯನ್ನು (275 ಸದಸ್ಯರ) ವಿಸರ್ಜಿಸುವ ಒಲಿ ಸರ್ಕಾರದ ನಿರ್ಧಾರವನ್ನು ರದ್ದುಗೊಳಿಸಿದ ಪೀಠವು, ಒಲಿ ಸರ್ಕಾರ ತೆಗೆದುಕೊಂಡಿದ್ದ ಕ್ರಮ 'ಅಸಾಂವಿಧಾನಿಕ' ಎಂದು ಹೇಳಿದೆ.

ಮುಂದಿನ 13 ದಿನಗಳಲ್ಲಿ ಸದನದ ಅಧಿವೇಶನ ಕರೆಯುವಂತೆಯೂ ನ್ಯಾಯಾಲಯ ಸರ್ಕಾರಕ್ಕೆ ಆದೇಶ ನೀಡಿದೆ.

ಪ್ರಧಾನಿ ಒಲಿ ಅವರ ಶಿಫಾರಸಿನ ಮೇರೆಗೆ ನೇಪಾಳ ಅಧ್ಯಕ್ಷೆ ವಿದ್ಯಾ ದೇವಿ ಭಂಡಾರಿ ಅವರು ಡಿಸೆಂಬರ್ 20ರಂದು ಸದನವನ್ನು ವಿಸರ್ಜಿಸಿ, ಏಪ್ರಿಲ್ 30 ಮತ್ತು ಮೇ 10ರಂದು ಚುನಾವಣೆ ಘೋಷಿಸಿದ್ದರು. ಇದರಿಂದ ನೇಪಾಳದಲ್ಲಿ ರಾಜಕೀಯ ಬಿಕ್ಕಟ್ಟು ಆವರಿಸಿತ್ತು.

ಈ ಕ್ರಮಕ್ಕೆ ನೇಪಾಳ ಕಮ್ಯುನಿಸ್ಟ್ ಪಕ್ಷದ (ಎಂಸಿ) ಮುಖಂಡ ಪುಷ್ಪ ಕಮಲ್ ದಹಾಲ್ 'ಪ್ರಚಂಡ' ಅವರು ವಿರೋಧ ವ್ಯಕ್ತಪಡಿಸಿದ್ದರು.

ಸಾರಿಗೆ ಸಂಸ್ಥೆ ಬಸ್ ವಾಪಸ್

ಒಂದನೇ ಪುಟದಿಂದ

ಮಹಾರಾಷ್ಟ್ರದ ಬಸ್‌ಗಳಿಗೆ ನಿರ್ಬಂಧ ವಿಧಿಸುವ ನಿರ್ಧಾರ ಕೈಗೊಂಡಿಲ್ಲ ಎಂದು ಜಿಲ್ಲಾಧಿಕಾರಿ ವಿ.ವಿ. ಜ್ಯೋತ್ಸ್ನಾ ಪ್ರತಿಕ್ರಿಯಿಸಿದರು.

'ಕೋವಿಡ್ ನೆಗೆಟಿವ್ ಪ್ರಮಾಣ ಪತ್ರ ಇದ್ದವರಿಗೆ ಮಾತ್ರ ಟಿಕೆಟ್ ಕೊಡುವಂತೆ ಮಹಾರಾಷ್ಟ್ರದ ರೈಲ್ವೆ ವಲಯದ ಅಧಿಕಾರಿಗಳಿಗೆ ಪತ್ರ ಬರೆಯುತ್ತಿದ್ದೇವೆ' ಎಂದು ಕಲಬುರ್ಗಿಯ ಹೆಚ್ಚುವರಿ ಜಿಲ್ಲಾಧಿಕಾರಿ ಶಂಕರ ವಣಿಕ್ಯಾಳ ಹೇಳಿದರು.

'ರೈಲಿನಲ್ಲಿ ಮಹಾರಾಷ್ಟ್ರದಿಂದ ಬರುವ ಪ್ರಯಾಣಿಕರ ತಪಾಸಣೆಗೆ ಬೀದರ್‌ನಲ್ಲಿ ಎರಡು ತಂಡಗಳನ್ನು ರಚಿಸಲಾಗಿದೆ. ಚೆಕ್‌ಪೋಸ್ಟ್‌ಗಳಲ್ಲಿ ಮುಂಬೈ, ಪುಣೆಯಿಂದ ಬರುತ್ತಿರುವವರ ಕಡ್ಡಾಯ ತಪಾಸಣೆ ನಡೆಸಲಾಗುತ್ತಿದೆ. ದಾಖಲೆಗಳು ಇಲ್ಲದಿದ್ದರೆ ಮರಳಿ ಕಳಿಸಲಾಗುತ್ತಿದೆ' ಎಂದು ಬೀದರ್ ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ವಿ.ಜಿ.ರೆಡ್ಡಿ ತಿಳಿಸಿದ್ದಾರೆ.

ಕೇರಳದಿಂದ ಬರುವವರಿಗೆ 3 ದಿನ ವಿನಾಯಿತಿ



ಮಂಗಳೂರು: ಕೇರಳದಿಂದ ಬರುವವರಿಗೆ ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಕಡ್ಡಾಯ ಮಾಡಿದ್ದ ದಕ್ಷಿಣ ಕನ್ನಡ ಜಿಲ್ಲಾಡಳಿತ, ಮೂರು ದಿನಗಳ ವಿನಾಯಿತಿ ನೀಡಿದೆ. ಇದರಿಂದಾಗಿ ತಲಪಾಡಿ ಗಡಿಯಲ್ಲಿ ಗಡಿನಾಡ ಕನ್ನಡಿಗರು ಪ್ರತಿಭಟನೆಯನ್ನು ಕೈ ಬಿಟ್ಟಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ದಕ್ಷಿಣ ಕನ್ನಡ ಜಿಲ್ಲಾ ಆರೋಗ್ಯಾಧಿಕಾರಿ ಡಾ.ರಾಮಚಂದ್ರ ಬಾಯರಿ, 'ವಿದ್ಯಾರ್ಥಿಗಳು, ಉದ್ಯೋಗಿಗಳಿಗೆ ತೊಂದರೆ ಆಗಬಾರದು. ಪ್ರತಿಭಟನಕಾರರಿಗೆ ಮನವರಿಕೆ ಮಾಡಿ ಮೂರು ದಿನ ವಿನಾಯಿತಿ ಕೊಟ್ಟಿದ್ದೇವೆ' ಎಂದು ತಿಳಿಸಿದರು.

'ಮೂರು ದಿನಗಳಲ್ಲಿ ನೆಗೆಟಿವ್ ವರದಿಯೊಂದಿಗೆ ಬನ್ನಿ. 3 ದಿನಗಳ ನಂತರ ವರದಿ ತರದೇ ಇದ್ದರೆ ಗಡಿಯಿಂದ ವಾಪಸ್ ಕಳುಹಿಸುತ್ತೇವೆ. ಎಲ್ಲಿಂದ ಬಂದಿದ್ದಾರೋ ಅಲ್ಲಿಗೆ ಹೋಗಿ ವರದಿ ತೆಗೆದುಕೊಂಡು ಬರಬೇಕು. ಗಂಟಲು ದ್ರವ ಪರೀಕ್ಷೆಗೆ ಕೊಟ್ಟವರು ವರದಿ ಬಾರದೇ ಇದ್ದರೂ, ಮೊಬೈಲ್‌ಗೆ ಬಂದ ಮೆಸೇಜ್ ತೋರಿಸಬೇಕು. ನಿತ್ಯದ ಪ್ರಯಾಣಿಕರು ಪ್ರತಿ 14 ದಿನಕ್ಕೊಮ್ಮೆ ವರದಿ ತರಬೇಕು' ಎಂದು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ENGLISH TEACHERS needed for Middle & High School for Chitrakoota CBSE School in Nagarbhavi, Kengeri Ring Road, with high salary. Immediately or for the next academic year. Call: 7829647333, 7829015333. chitrakootajobs@gmail.com Walk in Welcome.

CSI KARNATAKA CENTRAL DIOCESE
BISHOP COTTON WOMEN'S CHRISTIAN COLLEGE
PRINCIPAL REQUIRED

The Karnataka Central Diocese of Church of South India, is looking for a **LADY PRINCIPAL** with vision and integrity who can lead the college.

The role is open to applicants from the Church of South India / Church of North India/ Marthoma and Methodist Churches only. (Churches which are in communion with CSI)

Applicants should be qualified, experienced and accomplished persons around 50 years of age and should hold:

- A Doctorate (Ph.D) with a Post Graduate Degree (regular) in Science / Commerce or Humanities from a recognized University (India or Overseas)
- 15 years of teaching and administrative experience at degree level preferred. Candidates who applied earlier, can apply.

Please download the application format from our website specified below and send in your resume with self-attested copies of Certificates, Testimonials and references from two responsible persons of good standing, publications / published articles and a passport size photograph on or

before 5.00 p.m. 15th March, 2021 to :

The Convener, Selection Committee,
(Principal BCWCC) Karnataka Central Diocese,
20, 3rd Cross, CSI Compound,
Mission Road, Bangalore 560027
Website :
www.csikarnatakacentraldiocese.org

ROUNAQH

CSI KARNATAKA CENTRAL DIOCESE
GOODWILL CHRISTIAN COLLEGE FOR WOMEN
PRINCIPAL REQUIRED

The Karnataka Central Diocese of Church of South India, is looking for a **LADY PRINCIPAL** with vision and integrity who can lead the college.

The role is open to applicants from the Church of South India / Church of North India/ Marthoma and Methodist Churches only. (Churches which are in communion with CSI)

Applicants should be qualified, experienced and accomplished persons around 50 years of age and should hold:

- A Doctorate (Ph.D) with a Post Graduate Degree (regular) in Science / Commerce or Humanities from a recognized University (India or Overseas)
- 15 years of teaching and administrative experience at degree level preferred. Candidates who applied earlier, can apply.

Please download the application format from our website specified below and send in your resume with self-attested copies of Certificates, Testimonials and references from two responsible persons of good standing, publications / published articles and a passport size photograph on or

before 5.00 p.m. 15th March, 2021 to :

The Convener, Selection Committee,
(Principal GCCW) Karnataka Central Diocese,
20, 3rd Cross, CSI Compound,
Mission Road, Bangalore 560027
Website :
www.csikarnatakacentraldiocese.org

ROUNAQH

KARNATAKA REDDYJANA SANGHA®
REQUIRES

I. VEMANA INSTITUTE OF TECHNOLOGY
1) Professors / Associate Professors: As per AICTE norms.
2) Psychologist / Counsellor
3) Foreman - ECE; Programmer - CSE; Lab Instructors: CS/ EC/ Civil.
4) Helpers / Attenders

II. RJS - INSTITUTE OF MANAGEMENT STUDIES
1. Lecturers - Mathematics & Statistics - 1
2. Lecturers - English & Communication - 1
(SC / ST Preferred for both the above posts)

III. RJS SCHOOL, Rupenaagrahara
1) Pre-Primary School Teachers - 2
2) Teachers for High School
a) English - 1; b) Computer - 1

IV. DBM & RJS SCHOOL, Koramangala
1. Primary School Teachers:
a) Mathematics - 2; b) English - 1
2. High School Teachers:
c) Science - 1; d) Male Attender - 1.

V. KRJS HEAD OFFICE
a) Electrical Engineer - 1; b) Electrician - 1

For (I) Resumes may be sent to **info@vemanait.edu.in** and II), III), IV) & V) resumes may be sent to **krsjestablishment@gmail.com** within **10** days. For more details visit: **www.vemanait.edu.in** & **www.reddyjanasangha.org.** or Apply: No.1, Mahayogi Vemana Road, 3rd Block, Koramangala, Bangalore - 34. Ph: **080-25534194.** General Secretary, KRJS

SHANTHINIKETHAN A ENGLISH SCHOOL- Girinagar, Requires 1. FEMALE VICE PRINCIPAL/ INCHARGE: Young dynamic profile with minimum 4 years of leadership experience. 2. PRIMARY & HIGH SCHOOL FEMALE TEACHERS: For all subjects- Trained/ Freshers/ Experienced. 3. OTHERS: CREATIVE GRAPHIC DESIGNER, DIGITAL MARKETING MANAGER, ART & CRAFT, LIBRARIAN, MUSIC, P.E (FEMALE) & RECEPTIONIST: with pleasing personality Graduate/ Diploma with good communication & computer skills. ATTENDERS: (Male/ Female) Walk-in Interview on 27-02-2021 (10.00 am to 1.00 pm) Candidates should be between 20-40 age only. Salary is not a constraint for the deserving candidates. Submit resume with recent photograph. Shanthinikethana School, 1341/A, 8th Cross, 8th Main, Girinagar 2nd Phase, Bengaluru-85. Phone: 7760202693/ 080-26721334/ 26420794. E-mail: hrdsgps@gmail.com; www.shanthinikethana.in; Facebook.com/shanthinikethanaschool

Om Sai Ram
NEW BALDWIN
GROUP OF INTERNATIONAL SCHOOLS
*BANASWADI *MANDUR *T.C PALYA *ANEKAL *ANEKAL TOWN *CHANDAPUR
Requires for Mandur and Anekal
WARDENS/ DORM PARENTS
Candidates should be Graduate with relevant experience, having fluency in English is mandatory.
APPLY IMMEDIATELY
Contact: 9008683601/ 080-25559001/9145
hr.nbgi@gmail.com

A REPUTED company in Koramangala is looking for Marketing Executives - Female with good communication skills in English and local languages. Candidates with experience in marketing of industrial products will be preferred. Contact: 7022693340

Factory

AN ISO 9001-2015 Company Requires Works Manager Having 10 to 15 Years of Experience in machine shop, Quality In charge Having Knowledge of QMS, Graduate Engineers with 2 Years Experience in machine shop, Turning centre & Machining Centre operators, Please send your resume to resume@excelwirecut.com Contact: 9686198500/ 9686198499

RENTAL PROPERTIES

Accommodation Available

Commercial

SHOWROOM_&_OFFICE_SPACES FURNISHED & Unfurnished Available for Rent.T Dasarahalli, 8th Mile, Tumkur Road, Ph: 9391024959

ADMISSION CORNER

SRI REVANA SIDDESHWARA EDUCATION TRUST (R)
VIDYAVAHINI COLLEGE CAMPUS
Anandanagar, Bangalore-24.
B.Ed ADMISSIONS OPEN FOR 2020-21
Eligibility: Any Degree/ Post Graduation
SC/ST/Cat- I & PH: 45%
Others: 50%
Contact : Office:
Director: **9343865939/ 9972856004**

Nelamangala

CORNER EAST Facing plot 2190 sft (41'x51') in Harina's Euro Valley Layout. 35 cr. Call Mr Ganganna: 78293-93596. For photos, Google location whatsapp 98451-31527 (message only please). Brokers excuse.

Out-Station

47350 SFT Land with godowns at Andhral Road, Ballari for sale. Contact: 9880599044/ 9483592362/ 9739807029

CHANGE OF NAME

I, V. MADHU SHRI, D/o. Venkateshappa, aged about 22 years, R/at 23rd Ward, Near Milk Diary, Dandupalya, Hoskote Town, Hoskote-562114, Bangalore Rural, Karnataka, have changed my name to **HABEEBA KHANAM BARBHUIYA** vide affidavit dated 20-02-2021, sworn to before notary Mohammed Hussain. K, Bangalore.

I, DASAM Nageswara Rao S/o Dasam Bhagawan Rao residing at No. 17, 15th cross, J.P. park back gate, muthyala Nagar, Bangalore-560054 Have changed my name to Dasam Nageshwara Rao S/o Dasam Bhagavan Rao vide affidavit dated 23-02-2021 before Notary Chandrakala Bangalore.

I, SOPHIA CHRISTINA, R/at No.75/4, 14th A main, 14th Cross, J.C.Nagar, Kururbarahalli, Mahalakshmipuram, Bangalore- 560086 have changed my name to SOPHIA DAVID vide affidavit dated: 19/2/2021 Before Notary B.Prasanna Bangalore

I,VAISHNAVI S, D/o Sandeep N residing at No.002,Sharada Enclave,1st Cross,ISRO Layout,Near Canara Bank,J.P.Nagar, Bangalore-560078 have-changed my-name-to VAISHNAVI S NIDEMBOOR vide-affidavit dated.15-02-2021 sworn-before Notary A.C.Subbu Swamy,Bangalore.

Sri Vidya Mandir Education Society
English Medium School
WANTED
Trained Graduate / Post Graduate Teachers to teach

English and Social Science in **Lower Primary**

English, Mathematics, Science and Social Science in **Higher Primary**

English, Mathematics, Biology, Science, Social Science and Physical Education (Lady Teacher) in **High School**

Computer Science for **Standard V to X**

Handwritten Application along with the Bio data should reach the School office **on or before 01.03.2021**

Apply to the Hon. Secretary
Sri Vidya Mandir Education Society
West Park Road, 11th Cross,
Malleswaram, Bengaluru-560 003.

Swamy Vivekananda Rural Education Society® 1963
Chandapura, Anekal Taluk, Bangalore-560099
Phone:080-27832362 / 27832363 Mob: 9916683481
website address: www.svres.org Email : svres1963@gmail.com

WALK - IN INTERVIEW ON 28-02-2021 (SUNDAY) FROM 10:30 am to 1:30 pm

● SVR PRIMARY / HIGH SCHOOL / ICSE SCHOOL

- **PRINCIPAL:-** English Medium High School:- M.A / M.Sc, B.Ed, Atleast 5 years experience as Principal / HM
- **Teachers:-** Kannada / English / Hindi / Social Science:- B.A / M.A, B.Ed, Mathematics / Physics / Biology / Chemistry: B.Sc / M.Sc, B.Ed
  Computer Science: BCA / MCA / M.Sc / B.E in Computer Science
  Physical Education:- CPEd / BPEd / MPEd
  Yoga / Music:- Bachelor degree / Diploma / Certificate

● SVR PRE - UNIVERSITY COLLEGE

- **Lecturer :** Economics / Physics / Commerce:- M.A in Economics / M.Sc in Physics / M.Com
- **Clerks:** B.Com / M.Com with Kannada and English Typing, Tally and Office Correspondence, **Attenders:** SSLC/ PUC Pass / Fail (preferably Males)

Note: The Candidates must be in a position to teach subject in English only Interested candidates with relevant credentials and good communication skills and experience may attend Interview at the above address with detailed Resume, recent photo and copies of relevant documents

VOGUE INSTITUTE OF ART AND DESIGN
(Affiliated to Bangalore North University)
Plot # SW45-SW48, KIADB Apparel Park, Doddaballapur, Karnataka – 561205
APPOINTMENT
Institute is looking for qualified and Experienced Faculty and Staff members (As per UGC and Karnataka Govt. recruitment Policy) in the areas of Fashion Design, Interior Design and Animation and Multimedia. Interested candidates can send their resume along with the recent photo to
hr@vogueacademy.com | principal@vogueacademy.com
For details visit our website
www.voguefashioninstitute.com

WANTED
Qualified Fresher / Experience Teachers
PRIMARY / HIGH SCHOOL
English / Science / Maths / SS
Hindi / Kannada
Good Salary
WALK IN INTERVIEW
ALL WORKING DAYS
B/w 10.30 AM to 4.00 PM
MATHA'S INTERNATIONAL SCHOOL (ICSE)
MATHA'S ENGLISH HIGH SCHOOL ®
State Syllabus
55/2 B, 11th K.M. Hosur Main Road, Garuve Bhavi Palya Signal, Bommanahalli Post, Bangalore -560 068
(Google map location : Matha's School)
9606831599 / 9449814917
8971672116 / 8277257669
8277256859

REQUIRES LADY Teachers_for English-(M.A BEd),Chemistry and Biology-(BSc.BEd) Physics-(MSc,BEd), Chemistry (MSc,BEd), Art_and craft,,Social Studies (BA.BEd), Computer MCA/MSc Computers, Substitution Teacher BA/B.Com Graduates with_good English skills,Walk-in on 25-2-2021 and 26-2-2021 @10.AM Secretary, Srikrishna International School, ITI-Layout,BSK 3rd-Stage, Bangalore-85. Phone:65365824

PE TEACHERS needed for Chitrakoota CBSE School in Nagarbhavi, Kengeri Ring Road, with high Salary. Immediately or for the next academic year. Mobile: 7829647333 7829015333. email: chitrakootajobs@gmail.com Walk in Welcome.

Sir M. Visvesvaraya Institute of Technology,
a reputed Engineering College requires
Asst. Professors
in the Dept. of **Computer Science/ Information Science.**
Qualification: As per AICTE Norms
Eligible Candidates only need apply to:
The Secretary,
Sri Krishnadevaraya Educational Trust
No. 16, Ballari Road, Sadashivanagar, Bengaluru – 560080.
latest by **03.03.2021.**
Ph: **080- 23606999/ 23613443.**
E-mail: sriket@gmail.com

St. Mary's Public School
SINCE 1983 Inspiring Excellence.
(Affiliated to Council for the I.C.S.E, New Delhi)
VACANCIES FOR 2021-22
KINDERGARTEN TEACHERS
Degree with Montessori or Nursery Teachers Training with minimum 2 year's experience
MIDDLE SCHOOL TEACHERS
HINDI & COMPUTER SCIENCE
Post Graduate with B.Ed. and minimum 5 years' experience of teaching in an ICSE School.
HIGH SCHOOL TEACHERS
HISTORY & ECONOMICS
Post Graduate with B.Ed. and minimum 5 years' experience
Please send CV, Recent Passport size photo to
hr@stmaryspublicschool.co.in
www.stmaryspublicschool.co.in
#13, Queens Road, Bengaluru - 560052

TEACHER REQUIRED for Primary & High School Maths, Science & PT Quali: B.Sc, B.Sc B.Ed & Bp.Ed Exp/ Freshers. M.S.Convent R.T.Nagar, Sultanpalya, Call: 9844456549/ 23651001

SRI AHAM_AATHMA VIDYALAYA-[ICSE], Gruhalakshmi layout, Nelagadaranahalli, Near Nagasandra metro-station, Dasarahalli, Bangalore-73 Invites applications for the following posts with good English vocabulary for the academic year 2020-21 onwards (1).Computer science- BCA/MCA/ GEOGRAPHY (2).Teachers to teach all the subjects for Nursery/ Primary/ Middle/ High-school. (3).Office Staff/ Clerk (4).Lab-Assistant/ Librarian. Offers Attractive Salary. 'Transportation provided". Call: 9880200172, 9663778869 Email: sriaavapplic@gmail.com

WANTED PART-TIME TEACHERS for Charity Organisation, BSc. Graduates, Experienced, for SSLC Maths, Science Tuitions. 8105303232.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

General

WANTED: MOUNT Carmel College Of Nursing, Require TUTOR: For M.Sc/ B.Sc Nursing. HOSTEL WARDEN (FEMALE)- KITCHEN SUPERVISOR. Experienced/ Fresher's may apply to E-mail: mccn.admission2020@gmail.com; mountcarmelcollegeofnursing@gmail.com; Mobile: 9008542044/ 9008421044.

A FAST growing Derma division of a pharmaceutical Co requires experienced/ freshers, male and female candidates, for Bangalore, Mangalore, Hubli and Shimoga HQ Minimum qualification graduation. Send resume to www.amwillhealthcare.com/ jobs contact Mr Shine 9447677939/ 9387330229.

WANTED_SALES Executive Petroleum Products_Salary Rs_25000/-_on Target +_Excellent Monthly Incentive Call:6366028889 7338084555_Mail: glprojects7889@gmail.com

REQUIRED HR Admin, Manager, Accounts, BE, Diploma, B-Tech, M-Tech, MSc, Mechanical, Electrical, Computer Engineers: 7676760299

WANTED FOR Reputed Company, Graduates Age-30-70, Bangalore only, Earn: 30,000- 50,000. Contact: 9008305194/ 9880441530.

Hospital & Medical Jobs

HOSMAT HOSPITAL
is Recruiting the following Staff Male and Female at HOSMAT Second Unit at Ring Road, Hennur Junction, Third Unit of HOSMAT is opening shortly at Sadashivanagar, #18, Bellary Main Road.

1. Administrator/ VP/COO
2. Medical Director
3. Marketing Head with Hospital Experience only
4. Finance and Accounts Head CA/ICWA
5. Duty Doctors (ICU)
6. Casualty Medical Officer/ Emergency Medical Officer
7. Corporate Marketing Executives
8. Branding and Digital Marketing Executives
9. International Marketing Manager
10. Public Relations Officers
11. Accounts Executives
12. ICU Nurses
13. Bio Medical Engineers
14. Head Maintenance and Manager
15. Pharmacists
16. OT Scrub Nurses
17. Nurses for Wards and Home care
18. Front Office– Executives
19. OT Staffs & Assistants
20. Anaesthesia Technicians
21. Billing and collection Executives
22. Plaster Technicians
23. Echo Technicians
24. EEG Technicians
25. Dialysis Technicians
26. OT Technicians
27. CSSD Technicians
28. A/ c Technicians
29. Electricians
30. Plumbers
31. House Keeping

Call: 080 41139762, 9108450312
recruitment@hosmathospitals.com
coordinatorhosmat@gmail.com

Multiple Vacancy

RELATIONSHIP MANAGER, Agency Manager for POSP, Team Leaders & Tele callers for Life , Motor and health Insurance. Disha Capital: M G Road Bangalore: Email: Career@disha.co Mob: 8800414007

JOB OPPORTUNITIES

A leading Power Electronic manufacturing company engaged in Solar Invertors, UPS Systems and SCVS Isolation Transformers and EV Chargers looking for dynamic Sales personel willing to travel extensively across India for the following posts for their Bangalore and other metro Cities.

GENERAL MANAGERS MARKETING
With 8-10 years experience in UPS Industry

GENERAL MANAGERS MARKETING
With 8-10 years experience in Solar Industry.

REGIONAL MANAGERS MARKETING
With 6-8 years experience in UPS/ Solar Industry.

MARKETING MANAGERS
With 4-6 years experience with UPS/ Solar Industry.

SALES ENGINEERS
With 2-3 years experience in UPS/ Solar Industry.

SALES TRAINEES
Fresh Engineering / Science Graduates

Please send your Resume / CV to
blrsales123@gmail.com

WANTED MANAGER, Tele-caller Sales Executives, Supervisor, Receptionist. Rajarajeshwari Nagar. Share resume through what's Call: 9742353535 nkventures.in@gmail.com info@samskruthi.in

Hotel

ONE OF BANGALORE'S FINEST STANDALONE RESTAURANTS IS ON THE LOOKOUT FOR A SUITABLE CANDIDATE WHO WILL BE AN UNDERSTUDY TO THE GENERAL MANAGER

IDEALLY, HE / SHE SHOULD BE A MATURE BEING WITH ADEQUATE EXPERIENCE IN THE HOSPITALITY INDUSTRY VERSED, IN GENERAL ADMINISTRATION APART FROM HAVING A PLEASING PERSONALITY WITH GOOD PUBLIC RELATIONS AND COMMUNICATION SKILLS IN ENGLISH.

SALARY WILL BE COMMENSURATE WITH THE LEVEL OF EXCELLENCE THE POST DEMANDS.

SEND YOUR CURRICULUM VITAE BY WHATSAPP TO 9108803907 AND WE SHALL GET IN TOUCH.

Marketing & Sales

WANTED TEAM LEADERS and MARKETING-EXECUTIVES Male/Female for Fastest Growing-Company in Bangalore. Salary best in the industry. Contact: 9538855655, 8660610271

Flats

FOR RENT 2 BHK Flat, at Basavanagudi, Ground Floor, with all amenities,Vegetarians Only. Call: 9886019240, 080-26623994.

REAL ESTATE SELLING

Flat

Mathikere

URGENT SALE Furnished newly constructed 2 BHK with clear tittle at Muthyalanagar. Buyers Only, Contact 9686973320

Sites

Hosur Road

APPROX. ONE Acre Industrial Land for Sale. Power, Water available. Papers upto date. Ideal for Pharma as well. Brokers Excuse. Contact: 9620938350/ 9342825263.

Kumaraswamy Layout

BDA 30*40 Intermediate 2nd Stage, Near 15F/G Bus Stop, ISKCON South, Genuine Buyers Call 9972095359 Brokers Excuse

BUSINESS

Business to Business

Business

LOOKING FOR immediate finance from Private financiers Genuine financiers please call or WhatsApp 8884369438

GET 24% Annual ROI in Your Own Trading/ Demat Account. Capital Required Min 3Lakhs. Call: 7872221837

Finance

NRI'S INVESTMENT AND FINANCE AVAILABLE ON LOW INTEREST AGAINST PROPERTIES,LAND & BUILDINGS, SITES, FLATS ALSO COMPANIES, BUSINESSES CALL:7411265189

EDUCATIONAL

Admission

DIRECT FINAL Year: B.Ed/ LL.B/ B.Tech/M.Tech/ Diploma/MBA/BBA/BCA/ B.Com. Govt, UGC Recognised, Join immediately. Asha Institute: Bangalore. 9448460103/ 7093438248

PERSONAL

Change of Name

I, SHABEEN TAJ. G.A. W/o. Mohammed Safiulla R/a Ward #14, Royal Silk Factory, Nalabandavadi, Ramanagara Town- 562159 Declare That SHABEEN TAJ. G.A. and SHABEEN TAJ Both Names Are Belong To Me Only, Henceforth, Known as SHABEEN TAJ. G.A only, Vide Affidavit Dated: 23-02-2021 Before Notary B.M.Srivatsa, Ramanagara.

I, GOVARDANA TUMKUR NARASIMHAMURTHY have changed my name to GOVARDHAN TUMKUR NARASIMHAMURTHY vide affidavit dated: 23/2/2020 Before Notary C.Srinivas Bangalore

Lost

OUR LAND document nos: 183/1951, 839/1954, 233/1967 SRO Sowcarpet, Madras), missing since 17/02/2020. Finder may send to below address. CR Bhuvaneswari, w/o Jagadeesh, 697, 9th A main, Indiranagar, Blr- 560038.

IT IS notified that I have lost my CBSE class 10th Original Marksheet year 2012 Roll No. 4122690 Kushal G.U. S/o. Umesh G.S. Address: Doddaballapur Bangalore Rural. 9945467795

PUBLIC NOTICE

PUBLIC NOTICE

The Person Mentioned in the schedule, below having handed over their vechicles to Sundaram Motors Bangalore for repairs, the particulars of which are mentioned therein, have not taken deliveries in spite of registered notice (Acknowledgement due) to them. They have not paid the repair charges/garage rent. Sundaram Motors, No. 107 Kasturba Road, Bangalore 560001 is constrained to issue a public notice intimating that the vechicles will be disposed off by it, if no response is received within 7 days from today by respective parties.

Name with particulars of the vechicle:

1) Mr. Inayath Ali Khan, Car model: E270CDI Reg No KA03MG431

2)Mr. John Cherian, Car model: C200CDI, Reg No:KA14MA1989

3)Srinivas Sungandhdalay, Car model: E124 Reg no: KA03Z4

Contact Person M.S.Ravikumar, Sundaram Motors, 107, Kasturba Road, Bangalore 560 001.

PH: 98450 82248

Classifieds

Book Your Classifieds Ads
Online Log in to
dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ಮೇಯರ್–ಉಪ ಮೇಯರ್ ಚುನಾವಣೆ: ಬಿಜೆಪಿಯೊಂದಿಗೆ ಮೈತ್ರಿ ಸುಳಿವು ನೀಡಿದ ಎಚ್‌ಡಿಕೆ

ಚಾಮುಂಡೇಶ್ವರಿ ಸನ್ನಿಧಿಯಿಂದಲೇ ಸಂದೇಶ

ಪ್ರಜಾವಾಣಿ ವಾರ್ತೆ

ಮೈಸೂರು: 'ಕಾಂಗ್ರೆಸ್ ಮತ್ತು ಬಿಜೆಪಿ ನಮ್ಮನ್ನು ಹೀನಾಯವಾಗಿ ನಡೆಸಿಕೊಂಡಿದ್ದು, ಎರಡೂ ಪಕ್ಷಗಳ ಮೇಲೆ ನಮಗೆ ಒಲವಿಲ್ಲ' ಎಂದಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ದೇವೇಗೌಡರ ಜೊತೆ ಚರ್ಚಿಸಿ ಬುಧವಾರ ಬೆಳಿಗ್ಗೆ ಮೈತ್ರಿಯ ಅಂತಿಮ ನಿರ್ಧಾರ ಪ್ರಕಟಿಸುವುದಾಗಿ ಮಂಗಳವಾರ ಇಲ್ಲಿ ತಿಳಿಸಿದರು.

ಹಿಂದುತ್ವ, ಹಿಂದ, ಅಹಿಂದ ಎಲ್ಲವೂ ಡೊಂಬರಾಟ. ಇವೆಲ್ಲಾ ಅಧಿಕಾರ ಪಡೆಯಲಿಕ್ಕಷ್ಟೆ. ನಾವು ಇವೆಲ್ಲವನ್ನೂ ಬಿಟ್ಟು ನೆಲ-ಜಲ, ರೈತರ ಪರ ಹೋರಾಟ ಮಾಡ್ತೀವಿ
ಎಚ್.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಮೈಸೂರು ಮಹಾನಗರ ಪಾಲಿಕೆಯ ಮೇಯರ್– ಉಪ ಮೇಯರ್ ಚುನಾವಣೆಗೆ ಸಂಬಂಧಿಸಿ ಮೈತ್ರಿಯ ವಿಚಾರವಾಗಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಚಾಮುಂಡೇಶ್ವರಿ ಸನ್ನಿಧಿಯಿಂದಲೇ ಹೊಸ ಸಂದೇಶ ನೀಡುವುದಾಗಿ ಹೇಳಿದರು.



ಎಚ್‌.ಡಿ. ಕುಮಾರಸ್ವಾಮಿ

'ಈ ಹಿಂದೆ, ಮೈತ್ರಿಗಾಗಿ ರಾಜ್ಯ ಮಟ್ಟದ ನಾಯಕರು ಮಾತುಕತೆ ನಡೆಸಿದ್ದರು. ಈಗ ಸಹಕಾರ ಕೋರಿ ಮೇಲ್ಮಟ್ಟದ ಯಾವೊಬ್ಬ ಕಾಂಗ್ರೆಸ್ ನಾಯಕರೂ ಚರ್ಚಿಸಿಲ್ಲ. ಸಣ್ಣಪುಟ್ಟವರು ಮಾತನಾಡಿದರೆ ಪ್ರಯೋಜನವಾಗುವುದಿಲ್ಲ. ಈಗ, ಮೈತ್ರಿಗಾಗಿ ಖುದ್ದು ಮುಖ್ಯಮಂತ್ರಿ ಯಡಿಯೂರಪ್ಪ ಅವರೇ ಮೊಬೈಲ್ ಮೂಲಕ ಸಂಪರ್ಕಿಸಿದ್ದಾರೆ' ಎಂದರು.

ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ: 'ಜೆಡಿಎಸ್ ಒಂದು ಪಕ್ಷವೇ ಅಲ್ಲ ಅನ್ನೋರ ಜೊತೆ ಮೈತ್ರಿ ಯಾಕೆ?' ಎಂದು, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದ ಅವರು, 'ಈಗಾಗಲೇ ಮುಖ್ಯಮಂತ್ರಿಯಾಗಿದ್ದೀನಿ ಎಂಬ ಕನಸು ಕಾಣುತ್ತಿದ್ದಾರೆ. ಮುಂದಿನ ಮುಖ್ಯಮಂತ್ರಿ ಎಂದು ಸ್ವಯಂ ಘೋಷಿಸಿಕೊಂಡಿದ್ದಾರೆ. ಜೆಡಿಎಸ್ ಬಗ್ಗೆಯೇ ತುಚ್ಛವಾಗಿ ಮಾತನಾಡುತ್ತಾರೆ. ಕಾಂಗ್ರೆಸ್‌ನಲ್ಲಿ ಈ ಹಿಂದೆ ಇದ್ದ ಸಂಸ್ಕೃತಿಯೇ ಬೇರೆ; ಇವರು ಹೋದ ಮೇಲೆ ಇರುವ ಸಂಸ್ಕೃತಿಯೇ ಬೇರೆ. ಅವರ ನಡವಳಿಕೆ, ಅಗೌರವದ ಎಲ್ಲ ಮಾತು ಕೇಳಿದ್ದೇವೆ' ಎಂದು ಕಿಡಿಕಾರಿದರು.

ಕೇರಳದ ತಿರುವನಂತಪುರದಲ್ಲಿ ಮಂಗಳವಾರ ನಡೆದ ಎನ್‌ಡಿಎ ಪ್ರಮುಖರ ಸಭೆಯಲ್ಲಿ ಕೇರಳ ಬಿಜೆಪಿ ಉಸ್ತುವಾರಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಹ ಉಸ್ತುವಾರಿಯೂ ಆಗಿರುವ ಉಪಮುಖ್ಯಮಂತ್ರಿ ಡಾ.ಸಿ.ಎನ್‌.ಅಶ್ವತ್ಥ ನಾರಾಯಣ, ಚುನಾವಣಾ ಸಹ ಉಸ್ತುವಾರಿ ವಿ.ಸುನಿಲ್‌ಕುಮಾರ್ ಮತ್ತು ಕೇರಳ ಎನ್‌ಡಿಎ ಪ್ರಮುಖರು ಭಾಗವಹಿಸಿದ್ದರು.

ಉಮ್ಮತ್ತೂರು ಗುಡ್ಡಕ್ಕೆ ಬೆಂಕಿ; ಹತ್ತಾರು ಎಕರೆ ಕಾಡು ಭಸ್ಮ

ಚಾಮರಾಜನಗರ: ತಾಲ್ಲೂಕಿನ ಉಮ್ಮತ್ತೂರು ಗ್ರಾಮದ ಗುಡ್ಡಕ್ಕೆ ಮಂಗಳವಾರ ಬೆಂಕಿ ಬಿದ್ದಿದ್ದು, ಹತ್ತಾರು ಎಕರೆ ಕಾಡು ಭಸ್ಮವಾಗಿದೆ.

ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯ (ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಜೊತೆ ಸೇರಿ ಬೆಂಕಿ ನಂದಿಸಲು ಯತ್ನಿಸುತ್ತಿದ್ದಾರೆ. ಆದರೆ, ರಾತ್ರಿವರೆಗೂ ಬೆಂಕಿ ನಿಯಂತ್ರಣಕ್ಕೆ ಬಂದಿಲ್ಲ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಿ.ಸಂತೋಷ್ ಕುಮಾರ್, 'ಬೆಂಕಿ ಬಿದ್ದ ಮಾಹಿತಿ ಸಿಕ್ಕಿದ ತಕ್ಷಣ, ಸಿಬ್ಬಂದಿ ಸ್ಥಳಕ್ಕೆ ತೆರಳಿ ಕಾರ್ಯಾಚರಣೆ ಆರಂಭಿಸಿದ್ದಾರೆ. ಬೆಂಕಿ ನಂದಿಸುವ ಕಾರ್ಯ ಪ್ರಗತಿಯಲ್ಲಿದೆ' ಎಂದು ತಿಳಿಸಿದರು.

ರಾಜ್ಯ ಕೃಷಿ ಬೆಲೆ ಆಯೋಗದಿಂದ ಎರಡು ಪ್ರತ್ಯೇಕ ವರದಿ ಸಲ್ಲಿಕೆ

ಸಿರಿ ಧಾನ್ಯಗಳಿಗೂ ಬೆಂಬಲ ಬೆಲೆ: ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸಿರಿ ಧಾನ್ಯಗಳಿಗೂ ಬೆಂಬಲ ಬೆಲೆ ಘೋಷಿಸಬೇಕು. ಉತ್ಪಾದನಾ ವೆಚ್ಚದ ಆಧಾರದಲ್ಲಿ ಪ್ರತಿ ಕ್ವಿಂಟಲ್‌ಗೆ ₹ 4,500ದಿಂದ ₹ 5,000 ದರದಲ್ಲಿ ಸಿರಿ ಧಾನ್ಯಗಳನ್ನು ಸರ್ಕಾರ ಖರೀದಿ ಮಾಡಬೇಕು ಎಂದು ರಾಜ್ಯ ಕೃಷಿ ಬೆಲೆ ಆಯೋಗ ಶಿಫಾರಸು ಮಾಡಿದೆ.

ಬೆಂಬಲ ಬೆಲೆಯಲ್ಲಿ ಕೃಷಿ ಉತ್ಪನ್ನಗಳ ಖರೀದಿಗೆ ರಾಜ್ಯಕ್ಕೆ ಪ್ರತ್ಯೇಕವಾದ ಸಮಗ್ರ ಖರೀದಿ ನೀತಿ ರೂಪಿಸುವುದು ಮತ್ತು ಸಿರಿ ಧಾನ್ಯಗಳನ್ನು ಬೆಂಬಲ ಬೆಲೆಯಡಿ ಖರೀದಿಸುವ ಶಿಫಾರಸುಗಳುಳ್ಳ ಎರಡು ಪ್ರತ್ಯೇಕ ವರದಿಗಳನ್ನು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಹನುಮನಗೌಡ ಬೆಳಗುರ್ಕಿ ಅವರು ಮಂಗಳವಾರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸಲ್ಲಿಸಿದರು.

ರಾಜ್ಯದಲ್ಲಿ 61,000 ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 42,000 ಟನ್‌ನಷ್ಟು ನವಣೆ, ಸಾಮೆ, ಊದಲು, ಬರಗು, ಹಾರಕ, ಕೊರಲೆ ಮತ್ತಿತರ

ಸಿರಿಧಾನ್ಯಗಳು

ಸಿರಿ ಧಾನ್ಯಗಳನ್ನು ಬೆಳೆಯಲಾಗುತ್ತಿದೆ. ರಾಜ್ಯ ಸರ್ಕಾರ ಈ ಧಾನ್ಯಗಳನ್ನು ಬೆಂಬಲ ಬೆಲೆಯಡಿ ಖರೀದಿಸಿ ಶಾಲಾ ಮಕ್ಕಳ ಬಿಸಿಯೂಟ, ಗರ್ಭಿಣಿಯರು ಮತ್ತು ಬಾಣಂತಿಯರಿಗೆ ವಿತರಿಸಬೇಕು. ಆ ಮೂಲಕ ಸಿರಿ ಧಾನ್ಯ ಬೆಳೆಗಾರರಿಗೆ ಪ್ರೋತ್ಸಾಹ ನೀಡಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

ಖರೀದಿ ನೀತಿಗೆ ಶಿಫಾರಸು: ರಾಜ್ಯದ ಪಡಿತರ ಚೀಟಿದಾರರಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ವಿತರಿಸಲು ಅಗತ್ಯವಿರುವ ಆಹಾರ ಧಾನ್ಯಗಳನ್ನು ರಾಜ್ಯದ ರೈತರಿಂದಲೇ ಖರೀದಿಸಲು ಅವಕಾಶ ಕಲ್ಪಿಸುವ ಸಮಗ್ರ ಖರೀದಿ ನೀತಿ ರೂಪಿಸಬೇಕು ಎಂಬ ಶಿಫಾರಸನ್ನೂ ಆಯೋಗ ಮಾಡಿದೆ.

ಆಹಾರ ಭದ್ರತಾ ಕಾಯ್ದೆಯಡಿ ಆಹಾರ ಧಾನ್ಯ ಖರೀದಿಸಿ, ವಿತರಿಸಲು ಕೇಂದ್ರ ಸರ್ಕಾರ ವಾರ್ಷಿಕ ₹ 12,000 ಕೋಟಿ ಭರಿಸುತ್ತಿದೆ. ಈ ಉದ್ದೇಶಕ್ಕೆ ರಾಜ್ಯದಲ್ಲೇ ಆಹಾರ ಧಾನ್ಯ ಖರೀದಿಸುವುದರಿಂದ ರೈತರಿಗೆ ಬೆಲೆ ಖಾತರಿ ಮತ್ತು ಉತ್ತಮ ಆದಾಯ ದೊರಕುತ್ತದೆ. ಶ್ರಮಿಕರು, ಸಂಸ್ಕರಣೆ ಮಾಡುವವರು ಮತ್ತು ಸಾಗಾಣಿಕೆದಾರರಿಗೂ ಉದ್ಯೋಗಗಳು ದೊರಕುತ್ತವೆ ಎಂದು ಆಯೋಗ ವರದಿಯಲ್ಲಿ ಹೇಳಿದೆ.

ಕೊಯಿಲಿನ ಅವಧಿಯಲ್ಲಿ 5 ಕಿ.ಮೀ. ಅಂತರದಲ್ಲೇ ಬೆಂಬಲ ಬೆಲೆಯಡಿ ಖರೀದಿ ಕೇಂದ್ರಗಳನ್ನು ತೆರೆಯಬೇಕು. ಪ್ರಾಥಮಿಕ ಕೃಷಿ ಸಹಕಾರ ಸಂಘಗಳು, ಕೃಷಿ ಉತ್ಪನ್ನ ಮಾರುಕಟ್ಟೆಗಳು, ತಾಲ್ಲೂಕು ಸಹಕಾರ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು, ರೈತ ಉತ್ಪಾದಕರ ಸಂಸ್ಥೆಗಳು ಮತ್ತು ಸ್ವಸಹಾಯ ಗುಂಪುಗಳ ಮೂಲಕ ಖರೀದಿ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ರೈತರಿಂದ ಖರೀದಿಸುವ ಕೃಷಿ ಉತ್ಪನ್ನದ ಮಿತಿ ಸಡಿಲಿಸಬೇಕು ಮತ್ತು ಆವರ್ತ ನಿಧಿ ಮೊತ್ತವನ್ನೂ ಹೆಚ್ಚಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಹೇಳಿಕೆ

ಸುಲಲಿತ ವಹಿವಾಟಿನಲ್ಲಿ ರಾಜ್ಯ ಮುಂಚೂಣಿಯಲ್ಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಮಾಣಪತ್ರ ಆಧಾರಿತ ಪರವಾನಗಿ (ಎಬಿಸಿ) ಯೋಜನೆ ಅನುಷ್ಠಾನ, ಕೈಗಾರಿಕಾ ಸೌಲಭ್ಯ ಕಾಯ್ದೆ ತಿದ್ದುಪಡಿ ಮತ್ತು ಹೊಸ ಕೈಗಾರಿಕಾ ನೀತಿಯ ಘೋಷಣೆಯ ಪರಿಣಾಮವಾಗಿ ಸುಲಲಿತ ವಹಿವಾಟಿನಲ್ಲಿ ರಾಜ್ಯವು ದೇಶದಲ್ಲೇ ಮುಂಚೂಣಿಯಲ್ಲಿದೆ ಎಂದು ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಹೇಳಿದರು.

ಅಸೋಚಾಮ್ ಮಂಗಳವಾರ ಆಯೋಜಿಸಿದ್ದ 'ನವ ಕರ್ನಾಟಕದಲ್ಲಿ ಸುಲಲಿತ ವಹಿವಾಟು' ಕುರಿತ ವೆಬಿನಾರ್‌ನಲ್ಲಿ ಮಾತನಾಡಿದ ಅವರು, 'ಸುಲಲಿತ ವಹಿವಾಟಿನಲ್ಲಿ 2014ರಲ್ಲಿ 142ನೇ ಸ್ಥಾನದಲ್ಲಿದ್ದ ಭಾರತ ಈಗ 63ನೇ ಸ್ಥಾನಕ್ಕೆ ಏರಿದೆ. ಕೈಗಾರಿಕಾ ಸ್ನೇಹಿ ವಾತಾವರಣ, ನಿಯಮಗಳ ಸರಳೀಕರಣ ಮತ್ತು ಪಾರದರ್ಶಕ ಆಡಳಿತದಿಂದಾಗಿ ಕರ್ನಾಟಕ ದೇಶದಲ್ಲೇ ಅಗ್ರ ಸ್ಥಾನ ಪಡೆದಿದೆ' ಎಂದರು.

ಜಗದೀಶ ಶೆಟ್ಟರ್

ರಾಜ್ಯದಲ್ಲಿ ಉದ್ದಿಮೆಗಳ ಆರಂಭ ಮತ್ತು ವಹಿವಾಟು ನಡೆಸುವುದಕ್ಕೆ ಸಂಬಂಧಿಸಿದಂತೆ ಇದ್ದ ಜಟಿಲ ನಿಯಮಗಳನ್ನು ಸರಳೀಕರಣ ಮಾಡುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ. ಸುಲಲಿತ ವಹಿವಾಟಿಗೆ ಅವಕಾಶ ಕಲ್ಪಿಸಿದಲ್ಲಿ ರಾಜ್ಯವು ಕೈಗಾರಿಕಾ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸಬಹುದು. ಅದಕ್ಕೆ ಪೂರಕವಾದ ಕ್ರಮಗಳನ್ನು ಕೈಗೊಳ್ಳುವುದಕ್ಕೆ ರಾಜ್ಯ ಸರ್ಕಾರ ಆದ್ಯತೆ ನೀಡುತ್ತಿದೆ ಎಂದು ಶೆಟ್ಟರ್ ಹೇಳಿದರು.

ಪ್ರಮಾಣಪತ್ರ ಆಧಾರಿತ ಪರವಾನಗಿ ವ್ಯವಸ್ಥೆ, ಕೈಗಾರಿಕಾ ಸೌಲಭ್ಯ ತಿದ್ದುಪಡಿ ಕಾಯ್ದೆಯ ಜಾರಿ ಮತ್ತು ಹೊಸ ಕೈಗಾರಿಕಾ ನೀತಿಗಳು ಕೈಗಾರಿಕೆಗಳ ಸ್ಥಾಪನೆಗೆ ಇದ್ದ ಹಲವು ತೊಡಕುಗಳಿಗೆ ಪರಿಹಾರ ನೀಡಿವೆ. ಈ ಎಲ್ಲ ಕ್ರಮಗಳ ಪರಿಣಾಮವಾಗಿ ರಾಜ್ಯವು ಕೈಗಾರಿಕಾ ಕ್ಷೇತ್ರದಲ್ಲಿ ಮತ್ತಷ್ಟು ಮುನ್ನಡೆ ಸಾಧಿಸುವುದು ಖಚಿತ ಎಂದರು.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಡಿಪಿಐಟಿ ನಿರ್ದೇಶಕಿ ಕೈಗಾರಿಕೆ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಉತ್ತೇಜ ಇಲಾಖೆ ನಿರ್ದೇಶಕಿ ಸುಪ್ರಿಯಾ ಎಸ್. ದೇವಸ್ಥಲಿ, ರಾಜ್ಯದ ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಗುಂಜನ್ ಕೃಷ್ಣ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಡಾ.ಎನ್. ಶಿವಶಂಕರ್, ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ರೇವಣ್ಣ ಗೌಡ ಉಪಸ್ಥಿತರಿದ್ದರು.

'ಶಾಸಕರ ನಿಧಿಯಡಿ ನಡೆಯದ ಕಾಮಗಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ವಿವಿಧ ಕಾಮಗಾರಿಗಳಿಗೆ ಎರಡು ವರ್ಷಗಳಿಂದ ಬಿಡುಗಡೆ ಮಾಡಿರುವ ಸುಮಾರು ₹880 ಕೋಟಿ ಬಳಕೆ ಮಾಡದೇ ಉಳಿಸಿಕೊಂಡಿರುವ ಬಗ್ಗೆ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ನಾರಾಯಣಗೌಡ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ವಿಕಾಸಸೌಧದಲ್ಲಿ ಮಂಗಳವಾರ ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆ ವಿಡಿಯೊ ಸಂವಾದ ನಡೆಸಿ, ಜಿಲ್ಲಾಧಿಕಾರಿಗಳ ಪಿ.ಡಿ ಖಾತೆಯಲ್ಲಿ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಕೊಳೆಯುತ್ತಿದೆ. ಶೇ 25ರಷ್ಟು ಪ್ರಗತಿ ಆಗಿಲ್ಲ ಎಂದರು.

ಎರಡು ವರ್ಷಗಳಿಗೆ ಮೇಲ್ಪಟ್ಟ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ₹433 ಕೋಟಿ ಮತ್ತು ಈ ಸಾಲಿನಲ್ಲಿ ₹447 ಕೋಟಿ ಬಿಡುಗಡೆ ಮಾಡಲಾಗಿದೆ. ಅನುದಾನ ಇದ್ದರೂ ಕೆಲಸ ಆಗದೇ ಇರಲು ಅಧಿಕಾರಿಗಳೇ ಕಾರಣ. ವಿಶೇಷವಾಗಿ ಶಿಕ್ಷಣ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಲಾಗಿತ್ತು. ಕಾಮಗಾರಿಗಳು ನಡೆಯದೇ ಇರುವುದರಿಂದ ಜನಪ್ರತಿನಿಧಿಗಳು ತಲೆ ತಗ್ಗಿಸುವಂತಾಗಿದೆ. ಕಡಿಮೆ ಪ್ರಗತಿ ಸಾಧಿಸಿರುವ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯತ್ ಸಿಇಒಗಳಿಗೆ ನೋಟಿಸ್ ಜಾರಿ ಮಾಡಬೇಕು ಎಂದೂ ಸಚಿವರು ಸೂಚಿಸಿದರು.

ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇತರ ಅಧಿಕಾರಿಗಳು ಹಾಜರಿದ್ದರು.

ಕಿಕ್ಕಿರಿದ ಬಸ್‌ನಲ್ಲಿ ಉಸಿರುಗಟ್ಟಿ ವಿದ್ಯಾರ್ಥಿನಿಯರು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಖಾನಾಪುರ (ಬೆಳಗಾವಿ ಜಿಲ್ಲೆ): ಉತ್ತರ ಕನ್ನಡ ಜಿಲ್ಲೆಯ ರಾಮನಗರದಿಂದ ತಾಲ್ಲೂಕಿನ ಲೋಂಡಾ, ಗುಂಜಿ ಮಾರ್ಗವಾಗಿ ಮಂಗಳವಾರ ಬೆಳಿಗ್ಗೆ ಪಟ್ಟಣಕ್ಕೆ ಬರುತ್ತಿದ್ದ ರಾಮನಗರ-ಬೆಳಗಾವಿ ಬಸ್‌ನಲ್ಲಿ ಪ್ರಯಾಣಿಕರನ್ನು ಕಿಕ್ಕಿರಿದು ತುಂಬಿಸಿದ್ದರಿಂದ ಪ್ರಯಾಣಿಕರ ಮಧ್ಯೆ ಸಿಲುಕಿದ್ದ ಇಬ್ಬರು ವಿದ್ಯಾರ್ಥಿನಿಯರು ಉಸಿರುಗಟ್ಟಿ ಅಸ್ವಸ್ಥಗೊಂಡಿದ್ದಾರೆ.

ಬಸ್‌ನಲ್ಲಿ ಲೋಂಡಾದಿಂದ ಪಟ್ಟಣದ ಕಾಲೇಜಿಗೆ ಹೊರಟಿದ್ದ 60-70 ವಿದ್ಯಾರ್ಥಿಗಳು ಮತ್ತು ಪ್ರಯಾಣಿಕರು ಹತ್ತಿದ್ದಾರೆ. ರಾಮನಗರ-ಖಾನಾಪುರ ಮಾರ್ಗದ ರಸ್ತೆ ದುಃಸ್ಥಿತಿಯಲ್ಲಿರುವ ಕಾರಣ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಎಲ್ಲ ಪ್ರಯಾಣಿಕರು ಧೂಳಿನ ಭಯದಿಂದಾಗಿ ಬಸ್‌ನ ಎಲ್ಲ ಕಿಟಕಿ-ಬಾಗಿಲುಗಳನ್ನು ಮುಚ್ಚಿದ್ದರು. ಬಸ್ ಗುಂಜಿ ಗ್ರಾಮದ ಬಳಿ ಬರುತ್ತಲೇ ಇಬ್ಬರು ವಿದ್ಯಾರ್ಥಿನಿಯರು ತೀವ್ರವಾಗಿ ಅಸ್ವಸ್ಥಗೊಂಡಿದ್ದನ್ನು ಗಮನಿಸಿದ ಬಸ್ ನಿರ್ವಾಹಕ ಮತ್ತು ಚಾಲಕ ಬಸ್‌ಅನ್ನು ನೇರವಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ತಂದು ಅವರಿಗೆ ಚಿಕಿತ್ಸೆ ಕೊಡಿಸಿದ್ದಾರೆ.

ಸುದ್ದಿ ತಿಳಿದು ಆಸ್ಪತ್ರೆಯ ಮುಂದೆ ವಿದ್ಯಾರ್ಥಿಗಳು, ಪಾಲಕರು ಮತ್ತು ಸ್ಥಳೀಯರು ಸೇರಿದ್ದರು. ಸ್ಥಳಕ್ಕಾಗಮಿಸಿದ ವಾಯವ್ಯ ಸಂಸ್ಥೆಯ ಅಧಿಕಾರಿಗಳಿಗೆ ಹೆಚ್ಚಿನ ಬಸ್ ಬಿಡಲು ಆಗ್ರಹಿಸಿದರು. 'ಶಾಲಾ-ಕಾಲೇಜು ಅವಧಿಯಲ್ಲಿ ರಾಮನಗರದಿಂದ ಪಟ್ಟಣಕ್ಕೆ ಇದ್ದ ಒಂದೇ ಬಸ್ಸಿನಲ್ಲಿ ಪ್ರಯಾಣಿಸಬೇಕಾದ ಅನಿವಾರ್ಯ ಇದೆ. ತರಗತಿಗಳು ತಪ್ಪದಿರಲೆಂದು ಲೋಂಡಾ ಗ್ರಾಮದ ವಿದ್ಯಾರ್ಥಿನಿಯರು ತುಂಬಿ ತುಳುಕುತ್ತಿದ್ದ ಬಸ್ಸಿನಲ್ಲಿ ಹತ್ತಿದ್ದರು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೆಳಗ್ಗೆ 7 ಮತ್ತು 8 ಗಂಟೆಗೆ ರಾಮನಗರ-ಖಾನಾಪುರ ಮತ್ತು ಮಧ್ಯಾಹ್ನ 2 ಮತ್ತು 3 ಗಂಟೆಗೆ ಖಾನಾಪುರ-ರಾಮನಗರ ನಡುವೆ ಹೆಚ್ಚುವರಿ ಬಸ್ಸುಗಳನ್ನು ಓಡಿಸಬೇಕು' ಎಂದು ಆಗ್ರಹಿಸಿದರು.

ಘಟನೆ ಬಗ್ಗೆ ಮಾಹಿತಿ ಪಡೆದು ಆಸ್ಪತ್ರೆಗೆ ಬಂದ ತಹಶೀಲ್ದಾರ್ ರೇಷ್ಮಾ ತಾಳಿಕೋಟಿ ಮತ್ತು ಖಾನಾಪುರ ಠಾಣೆಯ ಪಿ.ಎಸ್.ಐ ಬಸಗೌಡ ಪಾಟೀಲ ಅವರಿಗೆ ಮನವಿ ಸಲ್ಲಿಸಿದ ವಿದ್ಯಾರ್ಥಿಗಳು, ಕೂಡಲೇ ರಾಮನಗರ-ಖಾನಾಪುರ ರಸ್ತೆ ದುರಸ್ತಿಗೆ ಮತ್ತು ಈ ಮಾರ್ಗದಲ್ಲಿ ನಿಯಮಿತ ಬಸ್ ಸೇವೆ ಒದಗಿಸುವಂತೆ ಮನವಿ ಮಾಡಿದರು.

ಅಂತರರಾಜ್ಯ ದರೋಡೆಕೋರರ ಬಂಧನ

₹ 90 ಲಕ್ಷ ಮೌಲ್ಯದ ಅಡಿಕೆ ವಶ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ತಾಲ್ಲೂಕಿನ ಭೀಮಸಮುದ್ರ ಗ್ರಾಮದಿಂದ ದೆಹಲಿಗೆ ತೆರಳುತ್ತಿದ್ದ ಅಡಿಕೆ ತುಂಬಿದ ಲಾರಿಯನ್ನು ಅಪಹರಿಸಿದ್ದ ಅಂತರರಾಜ್ಯ ದರೋಡೆಕೋರರನ್ನು ಬಂಧಿಸಿದ ಪೊಲೀಸರು, ₹ 90 ಲಕ್ಷ ಮೌಲ್ಯದ ಅಡಿಕೆಯನ್ನು ವಶಕ್ಕೆ ಪಡೆದಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಬಿಲ್ಲಹಳ್ಳಿಯ ರಿಜ್ವಾನ್, ಥಣಾಯಕಪುರ ಗ್ರಾಮದ ಲಿಂಗರಾಜು, ದಾವಣಗೆರೆ ಜಿಲ್ಲೆಯ ಕೆರೆಬಿಳಚಿ ಗ್ರಾಮದ ಸಲ್ಮಾನ್ ಬಂಧಿತರು. ಪ್ರಕರಣದ ಪ್ರಮುಖ ರೂವಾರಿ ಅಶ್ರಫ್ ಅಲಿ ಸೇರಿ ಇನ್ನೂ 9 ಆರೋಪಿಗಳ ಪತ್ತೆಗೆ ಪೊಲೀಸರು ಮುಂದಾಗಿದ್ದಾರೆ.

ಭೀಮಸಮುದ್ರದ ಶ್ರೀರಂಗನಾಥ ಟ್ರೇಡರ್ಸ್‌ಗೆ ಸೇರಿದ 340 ಅಡಿಕೆ ಚೀಲಗಳನ್ನು ತುಂಬಿದ ಲಾರಿ ಕಳೆದ ಜನವರಿ 5ರಂದು ದೆಹಲಿಯತ್ತ ಹೊರಟಿತ್ತು. ಲಾರಿಯನ್ನು ಹಿಂಬಾಲಿಸಿದ

ದರೋಡೆಕೋರರಿಂದ ವಶಕ್ಕೆ ಪಡೆದ ಅಡಿಕೆ

12 ಆರೋಪಿಗಳ ತಂಡ, ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಡ್ಡಗಟ್ಟಿತ್ತು. ಚಾಲಕ ಭೂಪ್‌ಸಿಂಗ್ ಯಾದವ್ ಕಣ್ಣಿಗೆ ಖಾರದಪುಡಿ ಎರಚಿ ಹಲ್ಲೆ ನಡೆಸಿ ಲಾರಿ ಸಹಿತ ಅಪಹರಿಸಿದ್ದರು.

ಲಾರಿ ಚಾಲಕನನ್ನು ಹುಬ್ಬಳ್ಳಿಯ ತಡಸ ತಿರುವು ಬಳಿ ಬಿಟ್ಟು ಪರಾರಿಯಾಗಿದ್ದರು.

ಟ್ರೇಡರ್ಸ್ ಮಾಲೀಕರು ನೀಡಿದ ದೂರಿನ ಆಧಾರದ ಮೇರೆಗೆ ತನಿಖೆ ಆರಂಭಿಸಿದ ಪೊಲೀಸರಿಗೆ ಮಂಡ್ಯ ಜಿಲ್ಲೆಯ ಬೆಳ್ಳೂರು ಕ್ರಾಸ್ ಬಳಿ ಲಾರಿ ಪತ್ತೆಯಾಗಿತ್ತು. ತಿಂಗಳ ಕಾಲ ಕಾರ್ಯಾಚರಣೆ ನಡೆಸಿದ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿ, ಕಳವಾಗಿದ್ದ ಅಡಿಕೆಯನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಗಣಿ ಅಕ್ರಮ: ಜನಾರ್ದನ ರೆಡ್ಡಿ ಪತ್ನಿ ಲಕ್ಷ್ಮಿಅರುಣಾ ನಿರಾಳ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಗಾಲಿ ಜನಾರ್ದನ ರೆಡ್ಡಿ ಪತ್ನಿ ಲಕ್ಷ್ಮಿ ಅರುಣಾ ಅವರನ್ನು ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಕೈಬಿಟ್ಟು ಸಿಬಿಐ ವಿಶೇಷ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಜನಾರ್ದನ ರೆಡ್ಡಿ ಮತ್ತು ಲಕ್ಷ್ಮಿ ಅರುಣಾ ಅವರು ಅಸೋಸಿಯೇಟೆಡ್ ಮೈನಿಂಗ್ ಕಂಪನಿಗೆ (ಎಎಂಸಿ) ಪಾಲುದಾರರಾಗಿದ್ದು, ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಇಬ್ಬರ ವಿರುದ್ಧ ಸಿಬಿಐ ಆರೋಪ ಪಟ್ಟಿ ಸಲ್ಲಿಸಿತ್ತು. ಆರೋಪಗಳಿಂದ ಬಿಡುಗಡೆ ಕೋರಿ ಲಕ್ಷ್ಮಿ ಅರುಣಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ತನಿಖಾಧಿಕಾರಿ ದಾಖಲಿಸಿದ್ದ ಸಾಕ್ಷ್ಯಗಳಲ್ಲಿ ಯಾರೊಬ್ಬರು ಲಕ್ಷ್ಮಿ ಅವರ ವಿರುದ್ಧ ಆರೋಪ ಹೊರಿಸದಿರುವುದನ್ನು ಗಮನಿಸಿದ ನ್ಯಾಯಾಲಯ, ಅವರನ್ನು ಆರೋಪದಿಂದ ಕೈಬಿಟ್ಟು 2015ರಲ್ಲಿ ಆದೇಶ ಹೊರಡಿಸಿತ್ತು.

ಇದನ್ನು ಪ್ರಶ್ನಿಸಿ ಸಮಾಜ ಪರಿವರ್ತನ ಸಮುದಾಯದ (ಎಸ್‌ಪಿಎಸ್) ಎಸ್.ಆರ್. ಹಿರೇಮಠ ಅವರು ಹೈಕೋರ್ಟ್‌ನಲ್ಲಿ ಕ್ರಿಮಿನಲ್ ಅರ್ಜಿ ದಾಖಲಿಸಿದ್ದರು. 'ಮುಖ್ಯ ಆರೋಪಿ ಜನಾರ್ದನ ರೆಡ್ಡಿ ಅವರಷ್ಟೇ ಜವಾಬ್ದಾರಿಯನ್ನು ಇತರ ಪಾಲುದಾರರು ಹೊಂದಿದ್ದಾರೆ. ಮೀಸಲು ಅರಣ್ಯದಿಂದ ಅಕ್ರಮವಾಗಿ ಅದಿರು ಸಾಗಿಸುವ ಕೃತ್ಯದಲ್ಲಿ ಲಕ್ಷ್ಮಿ ಅರುಣಾ ಅವರೂ ಭಾಗಿದಾರರು' ಎಂದು ಆರೋಪಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಸೋಮಶೇಖರ್ ಅವರು, 'ಅರುಣಾ ವಿರುದ್ಧ ನಿರ್ದಿಷ್ಟ ದಾಖಲೆ ಅಥವಾ ಸಾಕ್ಷ್ಯ ಇಲ್ಲ. ಪತಿ ಜನಾರ್ದನ ರೆಡ್ಡಿ ಸೂಚನೆ ಮೇರೆಗೆ ದಾಖಲೆಗಳಿಗೆ ಸಹಿ ಹಾಕುತ್ತಿದ್ದರು ಎಂಬುದು ತಿಳಿದ ಬಳಿಕ ನ್ಯಾಯಾಲಯ ಅವರನ್ನು ಆರೋಪದಿಂದ ಕೈಬಿಟ್ಟಿದೆ' ಎಂದು ಅಭಿಪ್ರಾಯಪಟ್ಟರು.

'ಪೊಗರು' ದೃಶ್ಯ ತೆಗೆಯಲು ಅರ್ಚಕರ ಸಂಘ ಆಗ್ರಹ

ಬೆಂಗಳೂರು: 'ಇತ್ತೀಚೆಗೆ ತೆರೆಕಂಡ ನಟ ಧ್ರುವ ಸರ್ಜಾ ಅಭಿನಯದ 'ಪೊಗರು' ಸಿನಿಮಾದಲ್ಲಿ ಅರ್ಚಕರು ಹಾಗೂ ಪುರೋಹಿತರನ್ನು ಅವಮಾನಿಸುವ ದೃಶ್ಯಗಳಿದ್ದು, ಅವುಗಳನ್ನು ಕೂಡಲೇ ಚಿತ್ರದಿಂದ ತೆಗೆಯಬೇಕು' ಎಂದು ರಾಜ್ಯ ಧಾರ್ಮಿಕ ದತ್ತಿ ದೇವಾಲಯಗಳ ಅರ್ಚಕರ ಹಾಗೂ ಆಗಮಿಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಜಾನಕಿರಾಮ್ ಆಗ್ರಹಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,'ಚಿತ್ರದಲ್ಲಿ ಹೋಮ ನಡೆಯುವ ಸಂದರ್ಭದಲ್ಲಿ ಬ್ರಾಹ್ಮಣರು, ಅರ್ಚಕರು ಹಾಗೂ ಪುರೋಹಿತರ ಬಗ್ಗೆ ಅವಹೇಳನ ಮಾಡುವಂತಹ ದೃಶ್ಯಗಳನ್ನು ತರಲಾಗಿದೆ. 'ಅರ್ಚನೆ, ಅಲಂಕಾರ, ಅಭಿಷೇಕ ಎಂದು ದುಡ್ಡು ಕೀಳ್ತೀರಾ..' ಎನ್ನುವ ಅವಮಾನಕಾರಿ ಸಂಭಾಷಣೆಗಳಿವೆ' ಎಂದು ಆರೋಪಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಡಿ.ಕೆ.ಶ್ರೀನಿವಾಸ ಮೂರ್ತಿ,'ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಯ ಟಿ.ನರಸೀಪುರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ 'ದೇವಸ್ಥಾನಗಳಲ್ಲಿ ಅರ್ಚಕರು ಪೂಜಾ ಸಮಯದಲ್ಲಿ ಮಂತ್ರ ಹೇಳುತ್ತಿರುತ್ತಾರೆ. ಜೊತೆಗೆ ಏನೇನೋ ಆಸೆ ಪಡುತ್ತಿರುತ್ತಾರೆ. ತಟ್ಟೆ ಕಾಸಿಗಾಗಿ ಕೆಲ ಪೂಜಾರಿಗಳು ಕಾದಿರುತ್ತಾರೆ' ಎಂದು ಹೇಳಿರುವುದು ಸರಿಯಲ್ಲ. ಅವರು ಕ್ಷಮೆಯಾಚಿಸಬೇಕು' ಎಂದು ಆಗ್ರಹಿಸಿದರು.

ಅಂಜನಾದ್ರಿ ಬೆಟ್ಟ ಅಭಿವೃದ್ಧಿಗೆ ಪ್ರಾಧಿಕಾರ: ಬಿಎಸ್‌ವೈಗೆ ಮನವಿ

ಬೆಂಗಳೂರು: ಹನುಮ ಜನ್ಮಭೂಮಿಯಾಗಿರುವ ಅಂಜನಾದ್ರಿ ಬೆಟ್ಟದ ಅಭಿವೃದ್ಧಿಗೆ ಅಂಜನಾದ್ರಿ ಅಕಾಡೆಮಿ ಅಥವಾ ಪ್ರಾಧಿಕಾರ ರಚನೆ ಮಾಡಬೇಕು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸತ್ಸಂಗ ಭಜನಾ ಮಂಡಳಿ ಮನವಿ ಮಾಡಿದೆ.

ಅಲ್ಲದೆ, ಹನುಮ ಜಯಂತಿಯನ್ನು ಭಜನಾ ದಿನವೆಂದು ಘೋಷಿಸುವಂತೆ ಮನವಿ ಮಾಡಿದ್ದು, ಈ ಸಂಬಂಧ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ, ಬೇಲಿಮಠದ ಚರಮೂರ್ತಿ ಶಿವರುದ್ರಸ್ವಾಮೀಜಿ, ಡಾ.ಬ್ರಹ್ಮತೇಜ ವೆಂಕಟರಾಮಯ್ಯ ಮುಂತಾದವರು ಕಾವೇರಿ ನಿವಾಸದಲ್ಲಿ ಯಡಿಯೂರಪ್ಪ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಅಂಜನಾದ್ರಿ ಬೆಟ್ಟದ ಸಮಗ್ರ ಅಭಿವೃದ್ಧಿಯ ಜತೆಗೆ ಬೆಟ್ಟದ ಮೇಲೆ ಎರಡೂ ಬದಿಯಲ್ಲಿ ಸಾಲು ದೀಪಗಳ ವ್ಯವಸ್ಥೆ, ಧ್ವನಿವರ್ಧಕದಲ್ಲಿ ನಿರಂತರ ಹನುಮಾನ್ ಚಾಲೀಸ ಪಠಣ, ಮೆಟ್ಟಿಲು ಹತ್ತುವಾಗ ಯಾತ್ರಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಯಾತ್ರಿಗಳು ವಿಶ್ರಮಿಸುವುದಕ್ಕೆ ಜಗುಲಿ ನಿರ್ಮಾಣ, ಬೆಟ್ಟದ ಕೆಳಗೆ ಸ್ನಾನ ಗೃಹ ಮತ್ತು ಶೌಚಾಲಯ ವ್ಯವಸ್ಥೆ, ಬೆಟ್ಟದಲ್ಲಿ ರಕ್ಷಣಾ ಬೇಲಿ ಹಾಕಿಸುವುದು ಮತ್ತು ನಾಮಫಲಕಗಳನ್ನು ಹಾಕುವುದು. ಭಜರಂಗಿಯ ಜನ್ಮಭೂಮಿಯ ಪರಿಚಯದ ಫಲಕಗಳನ್ನು ಹಾಕಬೇಕು ಎಂಬ ಬೇಡಿಕೆಗಳನ್ನೂ ಮಂಡಿಸಲಾಗಿದೆ.

ಆರೋಗ್ಯ ಸರಿ ಇಲ್ಲದವರು ಮತ್ತು ಹಿರಿಯ ನಾಗರಿಕರಿಗೆ ಅನುಕೂಲವಾಗುವಂತೆ ರೋಪ್‌ವೇ ವ್ಯವಸ್ಥೆ ಮತ್ತು ಯಾತ್ರಿಗಳಿಗೆ ತಂಗಲು ಛತ್ರದ ವ್ಯವಸ್ಥೆ ಮತ್ತು ಪ್ರಸಾದ ವಿತರಣೆಗೆ ಅಗತ್ಯ ಪಾಕಶಾಲೆಯನ್ನು ನಿರ್ಮಿಸಬೇಕು ಎಂದು ಸತ್ಸಂಗ ಭಜನಾ ಮಂಡಳಿ ಮನವಿ ಮಾಡಿದೆ.

ಯಲಹಂಕ–ಮಾಕಳಿದುರ್ಗ ರೈಲು ಸಂಚಾರಕ್ಕೆ ಹಸಿರು ನಿಶಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಮತ್ತು ಮಾಕಳಿದುರ್ಗ ನಡುವಿನ ವಿದ್ಯುದ್ದೀಕರಣ ಜೋಡಿ ಮಾರ್ಗದಲ್ಲಿ ರೈಲು ಸಂಚಾರಕ್ಕೆ ರೈಲ್ವೆ ಸುರಕ್ಷತಾ ಆಯುಕ್ತರಿಂದ (ಸಿಆರ್‌ಎಸ್) ಹಸಿರು ನಿಶಾನೆ ದೊರೆತಿದೆ.

35.97 ಕಿಲೋ ಮೀಟರ್ ಉದ್ದದ ಈ ಮಾರ್ಗವನ್ನು ಸಿಆರ್‌ಎಸ್ ತಂಡ ಇತ್ತೀಚೆಗೆ ಪರಿಶೀಲನೆ ನಡೆಸಿತ್ತು. ಈಗ ಅನುಮೋದನೆ ನೀಡಿದೆ.

'ಯಲಹಂಕದಿಂದ ವಡ್ಡರಹಳ್ಳಿ ತನಕ ಮೊದಲ ಒಂದು ವಾರ ಗಂಟೆಗೆ 90 ಕಿಲೋ ಮೀಟರ್ ವೇಗ ಮತ್ತು ವಡ್ಡರಹಳ್ಳಿಯಿಂದ ಮಾಕಳಿದುರ್ಗ ತನಕ ಗಂಟೆಗೆ 75 ಕಿ.ಮೀ ವೇಗದಲ್ಲಿ ಸಂಚರಿಸಬೇಕು. ಬಳಿಕ ಕ್ರಮವಾಗಿ 110 ಮತ್ತು 80 ಕಿ.ಮೀ ವೇಗದಲ್ಲಿ ಸಂಚರಿಸಬಹುದು' ಎಂದು ಸಿಆರ್‌ಎಸ್ ಸ್ಪಷ್ಟಪಡಿಸಿದೆ.

ಮಾಕಳಿದುರ್ಗದಿಂದ ದೇವರಪಲ್ಲಿ ತನಕ 36 ಕಿ.ಮೀ ಉದ್ದ ಜೋಡಿ ಮಾರ್ಗ 2019ರ ಏಪ್ರಿಲ್‌ನಲ್ಲಿ ಲೋಕಾರ್ಪಣೆಗೊಂಡಿತ್ತು. ಯಲಹಂಕ–ಗುಂದಕಲ್ ಮಾರ್ಗ ಎಂದರೆ ದೇಶದ ರಾಜಧಾನಿ ದೆಹಲಿ ಸೇರಿ ಉತ್ತರ ಭಾರತವನ್ನು ಸಂಪರ್ಕಿಸುವ ಪ್ರಮುಖ ರೈಲು ಮಾರ್ಗ. ಈ ವಿದ್ಯುದ್ದೀಕರಣಗೊಂಡ ಜೋಡಿ ಮಾರ್ಗದಿಂದ ಪ್ರಯಾಣಿಕರಿಗೆ ಸಾಕಷ್ಟು ಅನುಕೂಲ ಆಗಲಿದೆ.

ವಿದ್ಯುದ್ದೀಕರಣ ರೈಲು ಮಾರ್ಗ ಒಂದೇ ಇದ್ದ ಕಾರಣ ಅಲ್ಲಲ್ಲಿ ರೈಲುಗಳ ನಿಲುಗಡೆ ಅನಿವಾರ್ಯವಾಗಿತ್ತು. ಮುಂಬೈ, ಬೀದರ್, ಅಹಮದಾಬಾದ್, ದೆಹಲಿ, ನಾಗ್ಪುರ, ಜೈಪುರ ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ ರೈಲು ಸೇವೆ ಹೆಚ್ಚಿಸಲು ಈ ಮಾರ್ಗ ಅನುಕೂಲವಾಗಲಿದೆ.

ದೇವರಮನಿ ಶಿವಕುಮಾರ್ ಬಿಜೆಪಿಗೆ ಸೇರ್ಪಡೆ

ದಾವಣಗೆರೆ: ಮಹಾನಗರ ಪಾಲಿಕೆಯ ಮೇಯರ್ ಚುನಾವಣೆಗೆ ಸಂಬಂಧಿಸಿದಂತೆ ಮಂಗಳವಾರ ರಾತ್ರಿ ಅಚ್ಚರಿಯ ರಾಜಕೀಯ ಬೆಳವಣಿಗೆಗಳಾಗಿವೆ. ಕಾಂಗ್ರೆಸ್‌ನಿಂದ ಮೇಯರ್ ಸ್ಥಾನದ ಆಕಾಂಕ್ಷಿಯಾಗಿದ್ದ ದೇವರಮನಿ ಶಿವಕುಮಾರ್ ಪಾಲಿಕೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಬಿಜೆಪಿಗೆ ಸೇರಿದ್ದಾರೆ.

ಕಾಂಗ್ರೆಸ್‌ನಿಂದ ದೇವರಮನಿ ಶಿವಕುಮಾರ್ ಮತ್ತು ಜೆ.ಎನ್. ಶ್ರೀನಿವಾಸ್ ಮೇಯರ್ ಸ್ಥಾನದ ಪ್ರಮುಖ ಆಕಾಂಕ್ಷಿಗಳಾಗಿದ್ದರು. ಕಾಂಗ್ರೆಸ್ ವರಿಷ್ಠರು ಶ್ರೀನಿವಾಸ್ ಅವರ ಮನವೊಲಿಸಿ ಶಿವಕುಮಾರ್ ಅವರನ್ನೇ ಅಂತಿಮಗೊಳಿಸಿದ್ದರು.

ಆದರೆ ಗೆಲುವಿಗೆ ಬೇಕಾದ ಸ್ಥಾನಗಳನ್ನು ಹೊಂದಿಸುವ ವಿಚಾರದಲ್ಲಿ ಉಂಟಾದ ಭಿನ್ನಾಭಿಪ್ರಾಯದಿಂದ ನೊಂದು ಹೊರ ನಡೆದಿದ್ದರು.

ಜಿಎಂಐಟಿ ಅತಿಥಿ ಗೃಹಕ್ಕೆ ತೆರಳಿದ ಶಿವಕುಮಾರ್ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಗೊಳ್ಳುತ್ತಿರುವುದನ್ನು ಘೋಷಿಸಿದ್ದಾರೆ. ಪಾಲಿಕೆ ಸದಸ್ಯತ್ವ ಸ್ಥಾನಕ್ಕೆ ರಾಜೀನಾಮೆಯನ್ನು ಮೇಯರ್‌ಗೆ ಸಲ್ಲಿಸಿದ್ದಾರೆ.

ಕೋವಿಡ್ ನಿಯಂತ್ರಣ: ಸೋಂಕು ನಿವಾರಕ ಸಿಂಪಡಣೆ

ಗುತ್ತಿಗೆದಾರರಿಗೆ ಇನ್ನೂ ಬಿಡುಗಡೆಯಾಗಿಲ್ಲ ಹಣ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕು ದೃಢಪಟ್ಟವರ ಮನೆಯ ಪರಿಸರದಲ್ಲಿ ಹಾಗೂ ಕಂಟೈನ್‌ಮೆಂಟ್ ವಲಯಗಳಲ್ಲಿ ಸೋಂಕು ನಿವಾರಕ ಸಿಂಪಡಣೆ ಮಾಡಿದ ಬಿಲ್ ಇನ್ನೂ ಗುತ್ತಿಗೆದಾರರಿಗೆ ಪಾವತಿ ಆಗಿಲ್ಲ. ಇದರಿಂದ ನೊಂದ ಗುತ್ತಿಗೆದಾರರು, 'ನಮ್ಮ ಹಣ ನಮಗೆ ದೊರಕಿಸಿಕೊಡಿ' ಎಂದು ಒತ್ತಾಯಿಸಿದ್ದಾರೆ.

'ಸೋಂಕು ನಿವಾರಕ ಸಿಂಪಡಣೆ ಮಾಡಿದವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೇ ಹೆಚ್ಚು. ಅವರು ಜೀವದ ಹಂಗು ತೊರೆದು ಕೆಲಸ ಮಾಡಿದ್ದರು. ಅವರಿಗೆ ಸಮಸ್ಯೆ ಆಗಬಾರದು ಎಂಬ ಕಾರಣಕ್ಕೆ ಚಿನ್ನ ಅಡವಿಟ್ಟು ಹಣ ಪಾವತಿ ಮಾಡಿದ್ದೇವೆ. ಆದರೆ, ಸೋಂಕು ನಿವಾರಕ ಸಿಂಪಡಣೆಗಾಗಿ ಬಿಬಿಎಂಪಿಯಿಂದ ನಮಗೆ ಇನ್ನೂ ಹಣ ಬಿಡುಗಡೆಯಾಗಿಲ್ಲ. ನಾವು ಬೀದಿಗೆ ಬೀಳುವ ಪರಿಸ್ಥಿತಿ ತಲುಪಿದ್ದೇವೆ. ನಮ್ಮ ಹೆಂಡತಿ ಮಕ್ಕಳು ಕಷ್ಟಪಡುವ ಸ್ಥಿತಿ ಎದುರಾಗಿದೆ' ಎಂದು ಬಿಬಿಎಂಪಿ ಪಶ್ಚಿಮ ವಲಯದ ಗುತ್ತಿಗೆದಾರರು ಆರೋಪಿಸಿದ್ದಾರೆ.

ಗುತ್ತಿಗೆದಾರರು ಸಿದ್ದರಾಮಯ್ಯ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು. ಎಂ.ಶಿವರಾಜು ಇದ್ದಾರೆ

ಗುತ್ತಿಗೆದಾರರು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿಯಾಗಿ ತಮಗೆ ಬರಬೇಕಾದ ಹಣವನ್ನು ಕೊಡಿಸುವಂತೆ ಒತ್ತಾಯಿಸಿದರು. ಈ ಬಗ್ಗೆ ವಿಚಾರಿಸುವುದಾಗಿ ಸಿದ್ದರಾಮಯ್ಯ ಭರವಸೆ ನೀಡಿದರು.

'2020ರ ಮಾರ್ಚ್ ತಿಂಗಳಿನಿಂದಲೇ ನಾವು ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೇವೆ. ಸೋಂಕು ನಿವಾರಕ ದ್ರಾವಣ ಸಿಂಪಡಿಸಿದ ಹಣ ಕೇಳಿದರೆ ಅಧಿಕಾರಿಗಳು ದುಡ್ಡಿಲ್ಲ ಎನ್ನುತ್ತಿದ್ದಾರೆ. ಕೊರೊನಾ ನಿಯಂತ್ರಣಕ್ಕೆ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಏನಾಗಿದೆ' ಎಂದು ಗುತ್ತಿಗೆದಾರರು ಪ್ರಶ್ನಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ನಿಯಂತ್ರಣ ಕಾರ್ಯ ಮಾಡಿರುವ ವೆಚ್ಚಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಅನುದಾನವನ್ನು ಒದಗಿಸುವಂತೆ ಸರ್ಕಾರಕ್ಕೆ ಕೋರಿದ್ದೇವೆ
ಎನ್.ಮಂಜುನಾಥ ಪ್ರಸಾದ್
ಬಿಬಿಎಂಪಿ ಆಯುಕ್ತ

'ಲಾಕ್‌ಡೌನ್ ಜಾರಿಯಲ್ಲಿದ್ದ ಸಮಯದಲ್ಲಿ ಕೊರೊನಾ ಸೋಂಕಿಗೆ ಒಳಗಾಗಿದ್ದ ಪ್ರತಿಯೊಬ್ಬ ವ್ಯಕ್ತಿಯ ಮನೆಯನ್ನೂ ಬಿಡದೇ ನಮ್ಮ ಸಿಬ್ಬಂದಿ ಸೋಂಕು ನಿವಾರಕ ಸಿಂಪಡಣೆ ಮಾಡಿದ್ದಾರೆ. ಪಶ್ಚಿಮ ವಲಯದ 44 ವಾರ್ಡ್‌ಗಳಲ್ಲಿ ಕೆಲಸ ಮಾಡಿದ್ದಾರೆ. ಆಟೊ ಬಾಡಿಗೆಯನ್ನೂ ನಾವೇ ಭರಿಸಿದ್ದೇವೆ. ನಮಗೆ ನ್ಯಾಯಯುತವಾಗಿ ಸಲ್ಲಬೇಕಾದ ಹಣವನ್ನು ಪಡೆಯಲು ಬಿಬಿಎಂಪಿ ಕಚೇರಿಗಳಿಗೆ ಅಲೆದು ಸುಸ್ತಾಗಿದ್ದೇವೆ. ಇನ್ನು ಕಾಯಲು ಸಾಧ್ಯವಿಲ್ಲ' ಎಂದರು.

'ಕೊರೊನಾ ನಿಯಂತ್ರಣದಲ್ಲಿ ಸೋಂಕು ನಿವಾರಕ ಸಿಂಪಡಣೆ ಗುತ್ತಿಗೆದಾರರ ಪಾತ್ರವೂ ಪ್ರಮುಖವಾದುದು. ಈಗ ನಗರದಲ್ಲಿ ಕೋವಿಡ್ ಹರಡುವಿಕೆಯ ಎರಡನೇ ಅಲೆ ವ್ಯಾಪಿಸುವ ಆತಂಕ ಎದುರಾಗಿದೆ. ಇಂತಹ ಸಂದರ್ಭದಲ್ಲಿ ಬಿಬಿಎಂಪಿ ಗುತ್ತಿಗೆದಾರರ ಹಣ ಬಾಕಿ ಉಳಿಸಿಕೊಂಡರೆ ಸೋಂಕು ಹರಡುವಿಕೆ ನಿಯಂತ್ರಣ ಕಷ್ಟವಾಗಲಿದೆ. ಶೀಘ್ರವೇ ಅವರಿಗೆ ಸಲ್ಲಬೇಕಾದ ಹಣವನ್ನು ಬಿಬಿಎಂಪಿ ಬಿಡುಗಡೆ ಮಾಡಬೇಕು' ಎಂದು ಕಾಂಗ್ರೆಸ್ ಮುಖಂಡ ಎಂ.ಶಿವರಾಜು ಒತ್ತಾಯಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ, 'ಈ ಹಿಂದೆ ಕೋವಿಡ್ ನಿಯಂತ್ರಣ ಕಾರ್ಯಕ್ಕೆ ಆಯಾ ವಲಯದ ಉಪಾಯುಕ್ತರ ಹಂತದಲ್ಲೇ ಹಣ ಪಾವತಿಯಾಗುತ್ತಿತ್ತು. ಈಗ ಜಂಟಿ ಆಯುಕ್ತರ ಮೂಲಕ ಕೇಂದ್ರ ಕಚೇರಿಯ ಗಮನಕ್ಕೆ ತಂದು ನಂತರ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಜಾರಿಗೊಳಿಸಲಾಗುತ್ತಿದೆ. ಇದರಲ್ಲಿ ಸ್ವಲ್ಪ ತಾಂತ್ರಿಕ ಸಮಸ್ಯೆ ಇದೆ. ಅನುದಾನದ ಕೊರತೆಯೂ ಇದೆ. ಅನುದಾನ ಒದಗಿಸುವಂತೆ ಸರ್ಕಾರವನ್ನೂ ಕೋರಿದ್ದೇವೆ. ಅನುದಾನ ಬಿಡುಗಡೆಯಾದ ತಕ್ಷಣವೇ ಎಲ್ಲರ ಬಾಕಿ ಮೊತ್ತವನ್ನು ಬಿಡುಗಡೆ ಮಾಡುತ್ತೇವೆ' ಎಂದು ತಿಳಿಸಿದರು.

ದೇಹ ಅಷ್ಟೇ ಅಲ್ಲ; ಬದುಕೂ ಛಿದ್ರ...

• ದೀಪಕ್ ಗೌಡ

ಚಿಕ್ಕಬಳ್ಳಾಪುರ: ಮಧ್ಯರಾತ್ರಿ ಒಂದು ಗಂಟೆ ಸಮಯ. ಹಿರೇನಾಗವಲ್ಲಿ ಬಳಿ ನಿರ್ಜನವಾದ ಕ್ವಾರಿಯ ಕಚ್ಚಾ ರಸ್ತೆಯಲ್ಲಿ ಟಾಟಾ ಏಸ್ ಹೋಗುತ್ತಿತ್ತು. ವಾಹನ ಚಾಲನೆ ಮಾಡುತ್ತಿದ್ದ ಜಾರ್ಖಂಡ್‌ನ ರಿಯಾಜ್‌ಗೆ ತಾನು ಅಪಾಯಕಾರಿ ಸ್ಫೋಟಕವನ್ನು ಸಾಗಿಸುತ್ತಿದ್ದೇನೆ ಎನ್ನುವ ಮಾಹಿತಿಯೇ ಇರಲಿಲ್ಲ. ಅವನ ಹಿಂದೆ ವಾಹನದಲ್ಲಿ ನಾಲ್ವರು ಮಂದಿ ಕುಳಿತಿದ್ದರೆ, ಬೈಕ್‌ನಲ್ಲಿ ಇಬ್ಬರು ಹಿಂಬಾಲಿಸುತ್ತಿದ್ದರು.

ಇದ್ದಕ್ಕಿದ್ದಂತೆ ಭಯಂಕರ ಸದ್ದು. ವಾಹನ ಚಾಲನೆ ಮಾಡುತ್ತಿದ್ದ ರಿಯಾಜ್‌ಗೆ ಏನಾಗುತ್ತಿದೆ ಎಂಬುದೇ ತಿಳಿಯಲಿಲ್ಲ. ಹಾಗೆಯೇ ಚಾಲನೆ ಮಾಡಿಕೊಂಡು ಹಳ್ಳಿ ಕಡೆಗೆ ಹೋದಾಗ ಮೈಯೆಲ್ಲಾ ರಕ್ತ, ನಂತರ ಕಂಡ ದೃಶ್ಯ ಅತ್ಯಂತ ಭಯಾನಕ. ಈ ಮಾಹಿತಿಯನ್ನು ರಿಯಾಜ್ 108 ಸಿಬ್ಬಂದಿ ಶಿವಪ್ಪ ಅವರಿಗೆ ನೀಡಿದ್ದಾರೆ.

'ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂಬ ಮಾತು ಸತ್ಯವಾದರೂ, ನಾವಿಲ್ಲ ಅಪಾಯಕಾರಿ ಸ್ಥಳದಲ್ಲಿ ಸ್ವಲ್ಪವೇ ಹಣಕ್ಕೆ ಪ್ರಾಣವನ್ನು ಪಣಕ್ಕಿಟ್ಟು ದುಡಿಯುತ್ತಿದ್ದೇವೆ ಎಂದು ತಿಳಿಯದೆ, ಮುಗ್ಧತೆಯಲ್ಲಿ ಯಾರದ್ದೋ ದುರಾಸೆಗೆ ಪ್ರಾಣತೆರಬೇಕಾಯಿತೆ ಎಂದು ರಿಯಾಜ್ ನೊಂದುಕೊಂಡರು.

ಆಂಧ್ರ ಪ್ರದೇಶದಿಂದ ಕೆಲಸಕ್ಕೆಂದು ಬಂದಿದ್ದ ಮೂವರು, ನೇಪಾಳದಿಂದ ಬಂದಿದ್ದವರೊಬ್ಬ, ಚೇಳೂರಿನ ಅಭಿಲಾಷ್ ಮತ್ತು ಹಿರೇನಾಗವಲ್ಲಿ ರಾಮು ಇವರೆಲ್ಲರ ದೇಹಗಳು ಛಿದ್ರವಾಗಿ 30 ರಿಂದ 40 ಅಡಿ ದೂರದಲ್ಲಿ ಬಿದ್ದಿದ್ದವು. ಅವರ ದೇಹವಷ್ಟೇ ಛಿದ್ರವಾಗಿಲ್ಲ, ಅವರನ್ನೇ ನಂಬಿದ್ದ ಅವರ ಕುಟುಂಬದ ಪರಿಸ್ಥಿತಿಯೂ.

ಚೇಳೂರಿನ ಅಭಿಲಾಷ್, ತನ್ನ ಗರ್ಭಿಣಿ ಪತ್ನಿ ಹಾಗೂ ಕುಟುಂಬದವರಿಗೆ ಕೆಲಸಕ್ಕೆ ಹೋಗುವೆನೆಂದು ಹೇಳಿ ಬಂದಿದ್ದರು. ರಾತ್ರಿ ಹತ್ತಕ್ಕೆ ಚಿಕ್ಕಪ್ಪ ನರಸಿಂಹಪ್ಪ ಫೋನ್ ಮಾಡಿದಾಗ ಮಾತನಾಡಿದವರು ಮೂರು ಗಂಟೆ ಹೊತ್ತಿಗೆ ಮೃತಪಟ್ಟಿದ್ದರು. ಹಿರೇನಾಗವಲ್ಲಿ ರಾಮು ಇತ್ತೀಚೆಗಷ್ಟೆ ಮದುವೆಯಾಗಿದ್ದರು. ನೇಪಾಳದ ವ್ಯಕ್ತಿ ದೇಹವನ್ನು ಗುರುತಿಸುವುದೇ ಕಷ್ಟವಾಗಿದೆ.

ಮುಗಿಲು ಮುಟ್ಟಿದ ಕುಟುಂಬಸ್ಥರ ಆಕ್ರಂದನ

ಮಹೇಶ್

ಗಂಗಾಧರ್

ರಾಮು

ಮುರಳಿ

ಅಭಿಲಾಷ್

ಉಮಾಕಾಂತ್

ಚಿಕ್ಕಬಳ್ಳಾಪುರದ ಅವಘಡ ನೋವುಂಟು ಮಾಡಿದೆ. ಮೃತರ ಕುಟುಂಬದ ಸದಸ್ಯರಿಗೆ ಸಂತಾಪ ಸಲ್ಲಿಸುತ್ತೇನೆ. ಗಾಯಾಳುಗಳು ತ್ವರಿತವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ.
ನರೇಂದ್ರ ಮೋದಿ, ಪ್ರಧಾನಿ

ಮೂವರ ವಿರುದ್ಧ ಎಫ್‌ಐಆರ್

ಚಿಕ್ಕಬಳ್ಳಾಪುರ: ಹಿರೇನಾಗವಲ್ಲಿ ಜಿಲೆಟಿನ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮಂಗಳವಾರ ಮೂವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಭ್ರಮರವಾಸಿನಿ ಕ್ರಷರ್ ಮಾಲೀಕ ಜಿ.ಎಸ್.ನಾಗರಾಜ್ ರೆಡ್ಡಿ, ಶಿವಾರೆಡ್ಡಿ ಹಾಗೂ ಸ್ಫೋಟಕಗಳನ್ನು ಸರಬರಾಜು ಮಾಡುತ್ತಿದ್ದ ಆರೋಪದ ಮೇಲೆ ಗಂಗೋಜಿ ರಾವ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಎಸ್‌ಪಿ ಮಿಥುನ್ ಕುಮಾರ್ ಹೇಳಿದ್ದಾರೆ.

ಸರ್ಕಾರದ ವೈಫಲ್ಯ ಸಾಬೀತು: ಎಚ್‌ಡಿಕೆ

ಬೆಂಗಳೂರು: ಗುಡಿಬಂಡೆ ತಾಲ್ಲೂಕಿನ ಹಿರೇನಾಗವಲ್ಲಿಯಲ್ಲಿ ಸಂಭವಿಸಿದ ಸ್ಫೋಟವು ಅಕ್ರಮ ಗಣಿಗಾರಿಕೆ ನಿಯಂತ್ರಣದ ವಿಷಯದಲ್ಲಿ ರಾಜ್ಯ ಸರ್ಕಾರದ ವೈಫಲ್ಯವನ್ನು ಸಾಬೀತುಪಡಿಸಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ನಗರದಲ್ಲಿ ಮಂಗಳವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ಶಿವಮೊಗ್ಗ ಜಿಲ್ಲೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ ಕಾರ್ಮಿಕರು ಮೃತಪಟ್ಟಿದ್ದರು. ಈ ಸರ್ಕಾರದ ಅವಧಿಯ ಇಂತಹ ಘಟನೆಗಳು ನಡೆದಾಗ ಸ್ಥಳಕ್ಕೆ ಭೇಟಿ ನೀಡಿ ಹೇಳಿಕೆ ನೀಡಿ ಬರುವುದಕ್ಕೆ ಸೀಮಿತವಾಗಿದೆ' ಎಂದರು.

'ಕಾನೂನು ಪಾಲನೆ ಕಡತಕ್ಕೆ ಸೀಮಿತವಾಗಿದೆ. ಅಕ್ರಮವೋ, ಸಕ್ರಮವೋ ಪ್ರತಿ ತಿಂಗಳು ಚಂದಾ ವಸೂಲಿ ನಡೆಯುತ್ತಿದೆ. ಮಂತ್ರಿಗಳು, ಶಾಸಕರು ನೇರವಾಗಿ ಇಂತಹ ಗಣಿಗಾರಿಕೆಯಲ್ಲಿ ಭಾಗಿಯಾಗಿದ್ದಾರೆ. ನಿಜವಾಗಿ ಇಂತಹ ಘಟನೆಗಳು ನಡೆಯುತ್ತಿದ್ದರೆ ಹೇಗೆ' ಎಂದು ಪ್ರಶ್ನಿಸಿದರು.

ಹೋಟೆಲ್‌ಗೆ ಕರೆಸಿ ಬೇಡಿಕೆ: 'ಮಂಡ್ಯ ಸಂಸದರು ಅಲ್ಲಿ ಅಕ್ರಮ ಗಣಿಗಾರಿಕೆ ನಿಲ್ಲಿಸಲು ಭಾರಿ ಪ್ರಯತ್ನ ನಡೆಸುತ್ತಿದ್ದಾರೆ. ಅವರ ಬದ್ಧತೆಗೆ ನಾವು ತಲೆ ತಗ್ಗಿಸಬೇಕಾಗಿದೆ. ಗಣಿ ಸಚಿವರು ಸೋಮವಾರ ಮಂಡ್ಯಕ್ಕೆ ಹೋಗಿ ಸ್ಥಳ ಪರಿಶೀಲನೆ ಮಾಡಿ ಬಂದಿದ್ದಾರೆ. ಡಿವೈಎಸ್‌ಪಿಗಳು, ಅಧಿಕಾರಿಗಳು ಗಣಿ ಮಾಲೀಕರನ್ನು ಹೋಟೆಲ್‌ಗೆ ಕರೆದು ಚಂದಾ ಕೇಳಿರುವ ದಾಖಲೆಗಳು ನನ್ನ ಬಳಿ ಇವೆ' ಎಂದರು.

ಜನಪ್ರತಿನಿಧಿಗಳಿಂದಲೇ ಅಕ್ರಮ ಗಣಿಗಾರಿಕೆ: (ರಾಮನಗರ ವರದಿ) ರಾಜ್ಯದಲ್ಲಿ ಜನಪ್ರತಿನಿಧಿಗಳೇ ಅಕ್ರಮ ಗಣಿಗಾರಿಕೆಯಲ್ಲಿ ಪಾಲ್ಗೊಂಡಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ಮಂಗಳವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು 'ಚಿಕ್ಕಬಳ್ಳಾಪುರದ ಗಣಿಯಲ್ಲಿ ಜಿಲೆಟಿನ್ ಸ್ಫೋಟಕ್ಕೆ ಸರ್ಕಾರದ ಬೇಜವಾಬ್ದಾರಿತನ, ಅಧಿಕಾರಿಗಳ ಪ್ರೋತ್ಸಾಹವೇ ಕಾರಣ. ಸರ್ಕಾರದಲ್ಲಿ ಜನರ ಜೀವದ ಬಗ್ಗೆ ಕಮಿಟ್‌ಮೆಂಟ್ ಇಲ್ಲ, ಮಂತ್ರಿಗಳು ಪ್ರಕರಣ ನಡೆದಾಗ ಮಾತ್ರ ಮಾಧ್ಯಮಗಳ ಮುಂದೆ ಪ್ರತಿಕ್ರಿಯೆ ನೀಡುತ್ತಾರೆ' ಎಂದು ದೂರಿದರು.

'ಒಂದು ವಾರದ ಮುಂಚೆಯೇ ಪೊಲೀಸರು ಘಟನಾ ಸ್ಥಳಕ್ಕೆ ಹೋಗಿದ್ದಾರೆ. ಆದರೂ ಈ ಘಟನೆ ನಡೆದಿದ್ದು, ಅವರಿಗೆ ಮೊದಲೇ ಮಾಹಿತಿ ತತ್ತು ಎನಿಸುತ್ತದೆ. ಇದರಲ್ಲಿ ಹೆಚ್ಚು ಹಣ ಸಿಗುತ್ತದೆ ಎನ್ನುವ ಕಾರಣಕ್ಕೆ ಅಧಿಕಾರಿಗಳು ವ್ಯಾಮೋಹಕ್ಕೆ ಒಳಗಾಗಿದ್ದಾರೆ. ರಾಜಕಾರಣಿಗಳ ಒತ್ತಡದಲ್ಲಿಯೂ ಕೆಲಸ ಮಾಡುತ್ತಿದ್ದಾರೆ' ಎಂದರು.

ಇನ್ನೆಷ್ಟು ಜೀವಗಳು ಬಲಿಯಾಗಬೇಕು?: ಡಿ.ಕೆ.ಶಿ

ಶಿವಕುಮಾರ್

ಬೆಂಗಳೂರು: 'ಚಿಕ್ಕಬಳ್ಳಾಪುರದ ಅಕ್ರಮ ಕಲ್ಲು ಕ್ವಾರಿ ಬಳಿ ನಡೆದ ಸ್ಫೋಟದಿಂದ ಆರು ಜನ ಜೀವ ಕಳೆದುಕೊಂಡಿರುವುದಕ್ಕೆ ರಾಜ್ಯ ಸರ್ಕಾರದ ಬೇಜವಾಬ್ದಾರಿಯೇ ಕಾರಣ. ಸರ್ಕಾರದ ಅಸಡ್ಡೆಗೆ ಇನ್ನೆಷ್ಟು ಅಮಾಯಕ ಜೀವಗಳು ಬಲಿಯಾಗಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪದೇ ಪದೇ ಇಂಥ ಘಟನೆಗಳಿಗೆ ಯಾರು ಹೊಣೆ ಎಂದು ಕೇಳಿದ್ದಕ್ಕೆ ಮುಖ್ಯಮಂತ್ರಿ, 'ಯಾರೇನು ಮಾಡಲಿಕ್ಕಾಗುತ್ತದೆ' ಎಂದಿದ್ದಾರೆ. ನಿಮ್ಮ ಕೈಯಲ್ಲಿ ಏನೂ ಮಾಡಲು ಆಗದಿದ್ದರೆ, ದಯವಿಟ್ಟು ಅಧಿಕಾರ ತ್ಯಾಗ ಮಾಡಿ' ಎಂದೂ ಆಗ್ರಹಿಸಿದರು.

'ಶಿವಮೊಗ್ಗದಲ್ಲಿನ ಸ್ಫೋಟ ಸಮಯದಲ್ಲೇ, ಈ ಸ್ಫೋಟಕಗಳ ನಿರ್ವಹಣೆ, ಸಾಗಣೆಗೆ ಸುರಕ್ಷಿತ ವ್ಯವಸ್ಥೆ ನಿರ್ಮಿಸಬೇಕು, ನೀತಿ-ನಿಯಮಗಳ ಕಟ್ಟುನಿಟ್ಟು ಪಾಲಿಸಬೇಕೆಂದು ಸಲಹೆ ನೀಡಿದ್ದೆ. ಆದರೆ ತನ್ನ ಅಂತರಂಗ ಸಮಸ್ಯೆಗಳಲ್ಲೇ ಮುಳುಗಿರುವ ಸರ್ಕಾರಕ್ಕೆ ಇತ್ತ ಗಮನ ಹರಿಸಲು ಸಾಧ್ಯವಾಗಿಲ್ಲ. ಮಾಧ್ಯಮಗಳ ಮುಂದೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ್ದು ಬಿಟ್ಟರೆ, ಯಾವುದೇ ಕ್ರಮ ಕೈಗೊಂಡಿಲ್ಲ. ಕ್ರಮ ಕೈಗೊಂಡಿದ್ದರೆ ಇಂಥ ದುರಂತ ಮರುಕಳಿಸುತ್ತಿರಲಿಲ್ಲ' ಎಂದು ಶಿವಕುಮಾರ್ ಅಭಿಪ್ರಾಯಪಟ್ಟರು. 'ಚಿಕ್ಕಬಳ್ಳಾಪುರ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ನಮಗೆ ಬಂದಿರುವ ಮಾಹಿತಿ ಪ್ರಕಾರ, ಉಪ ಲೋಕಾಯುಕ್ತರು ಕಲ್ಲು ಗಣಿಗಾರಿಕೆ ಮಾಡದಂತೆ ನೋಟಿಸ್ ಕೊಟ್ಟಿದ್ದರು. ಆದರೂ ಗಣಿಗಾರಿಕೆ ಮುಂದುವರಿಸಲಾಗಿದೆ. ಈ ಬಗ್ಗೆ ವಿರೋಧ ಪಕ್ಷದ ನಾಯಕರ ಕಚೇರಿಯಿಂದ ಮಾಹಿತಿ ಪಡೆದುಕೊಳ್ಳಲಾಗುತ್ತಿದೆ' ಎಂದರು.

ಸುದ್ದಿ 2 ನಿಮಿಷ

ತನಿಖೆಗೆ ಸಮಿತಿ: ಸಂಸದ ಬಚ್ಚೇಗೌಡ ಆಗ್ರಹ

ಚಿಕ್ಕಬಳ್ಳಾಪುರ: ಜಿಲೆಟಿನ್ ಸ್ಫೋಟ ಪ್ರಕರಣ ಸಂಬಂಧ ಸೂಕ್ತ ತನಿಖೆ ನಡೆಸಲು ಸರ್ಕಾರ ಸಮಿತಿಯೊಂದನ್ನು ರಚಿಸಬೇಕು ಎಂದು ಚಿಕ್ಕಬಳ್ಳಾಪುರದ ಬಿಜೆಪಿ ಸಂಸದ ಬಿ.ಎನ್. ಬಚ್ಚೇಗೌಡ ಆಗ್ರಹಿಸಿದ್ದಾರೆ.

'ಜಿಲ್ಲೆಯಲ್ಲಿ 175 ಕ್ರಷರ್ ನಡೆಸಲು ಸರ್ಕಾರ ಅನುಮತಿ ನೀಡಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನ 55 ಕ್ರಷರ್ ಕೆಲಸ ಮಾಡುತ್ತಿವೆ. ಕ್ರಷರ್‌ಗಳನ್ನು ಲೀಜ್‌ಗೆ ಕೊಟ್ಟ ಮೇಲೆ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆ. ಹಾಗಾಗಿ ಅಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಅಗತ್ಯ ಸೌಲಭ್ಯ ಒದಗಿಸಲು ಸರ್ಕಾರ ಮುಂದಾಗಬೇಕು' ಎಂದು ಒತ್ತಾಯಿಸಿದರು.

ಮೃತರ ಕುಟುಂಬಸ್ಥರಿಗೆ ಈಗಾಗಲೇ ₹5 ಲಕ್ಷ ಪರಿಹಾರ ಘೋಷಣೆ ಮಾಡಲಾಗಿದೆ. ಆದರೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ವತಿಯಿಂದ ಹೆಚ್ಚುವರಿ ₹5 ಲಕ್ಷ ಪರಿಹಾರ ನೀಡುವಂತೆ ಸಚಿವ ಮುರುಗೇಶ್ ನಿರಾಣಿ ಅವರೊಂದಿಗೆ ಚರ್ಚಿಸುತ್ತೇನೆ ಎಂದು ಹೇಳಿದರು.

ನಿರ್ದಾಕ್ಷಿಣ್ಯ ಕ್ರಮ: 'ಜಿಲೆಟಿನ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಉಸ್ತುವಾರಿ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಸಚಿವ ಸುಧಾಕರ್ ವಿರುದ್ಧ ಆರೋಪ: ಮುಗಿಬಿದ್ದ ಬೆಂಬಲಿಗರು

ಚಿಕ್ಕಬಳ್ಳಾಪುರ: ಹಿರೇನಾಗವಲ್ಲಿಯಲ್ಲಿ ಸಂಭವಿಸಿದ ಜಿಲೆಟಿನ್ ಸ್ಫೋಟ ಸ್ಥಳಕ್ಕೆ ಬಂದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ.ಸುಧಾಕರ್ ವಿರುದ್ಧ ಗ್ರಾಮದ ಯುವಕ ಹರಿಹಾಯ್ದರು. ಇದರಿಂದ ಆ ಯುವಕನ ಮೇಲೆ ಸಚಿವರ ಬೆಂಬಲಿಗರು ಮುಗಿಬಿದ್ದರು.

'ನಿಮ್ಮ ಕುಮ್ಮಕ್ಕಿನಿಂದಲೇ ಕಲ್ಲು ಗಣಿಗಾರಿಕೆ, ಕ್ವಾರಿಗಳಲ್ಲಿ ಸ್ಫೋಟ ನಡೆಯುತ್ತಿದೆ' ಎಂದು ರಾಘವೇಂದ್ರ ಆರೋಪಿಸಿದರು. ಕೂಡಲೇ ಸಚಿವರ ಬೆಂಬಲಿಗರು ಆತನ ಮೇಲೆ ಹಲ್ಲೆ ಮಾಡಲು ಮುಂದಾದರು. 'ಸ್ಫೋಟದ ಸ್ಥಳದಿಂದ 30 ಎಕರೆ ಪ್ರದೇಶ ಸಚಿವರ ಬೆಂಬಲಿಗನಿಗೆ ಸೇರಿದ್ದು, ಎಲ್ಲ ಗೊತ್ತಿದ್ದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ರಾಘವೇಂದ್ರ ಕಿಡಿಕಾರಿದರು. ಇದೇ ಸಂದರ್ಭದಲ್ಲಿ ಸಚಿವರ ಬೆಂಬಲಿಗರು ರಾಘವೇಂದ್ರರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡಲು ಮುಂದಾದರು. ನಂತರ ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ನೀವು ಇದ್ದಿದ್ರೆ ಏನು ಮಾಡ್ತಿದ್ರಿ– ಬಿಎಸ್‌ವೈ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಜಾಗದಲ್ಲಿ ನೀವು ಇದ್ದಿದ್ರೆ ಏನ್ರಿ ಮಾಡ್ತಿದ್ರಿ? ಕೆಲಸಗಾರರು ನಮ್ಮನ್ನು ಹೇಳಿ – ಕೇಳಿ ಬೆಳಗಿನ ಜಾವ ಆ ಸ್ಥಳಕ್ಕೆ ಹೋಗಿದ್ದರಾ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪ್ರಶ್ನಿಸಿದರು.

ಹಿರೇನಾಗವಲ್ಲಿಯ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿದ ಅವರು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಆಗ, 'ಶಿವಮೊಗ್ಗದಲ್ಲಿ ಸ್ಫೋಟ ಸಂಭವಿಸಿದಾಗಲೂ ಇದೇ ರೀತಿ ಹೇಳಿದ್ದೀರಲ್ಲ' ಎಂದು ಸುದ್ದಿಗಾರರು ಮರು ಪ್ರಶ್ನೆ ಹಾಕಿದರು. ಆಗ ಸಿಟ್ಟಾದ ಯಡಿಯೂರಪ್ಪ, 'ನನ್ನ ಸ್ಥಾನದಲ್ಲಿ ನೀವು ಇದ್ದಿದ್ದರೆ ಏನು ಮಾಡ್ತಿದ್ರಿ' ಎಂದು ಏರು ಧ್ವನಿಯಲ್ಲೇ ಮಾಧ್ಯಮದವರನ್ನು ಕೇಳಿದರು.

'ಸ್ಫೋಟದಲ್ಲಿ ಮೃತಪಟ್ಟ ಕುಟುಂಬಗಳಿಗೆ ಸಾಂತ್ವನ ಹೇಳುವ ಸಂದರ್ಭವಿದು. ಪರಸ್ಪರ ದೋಷಾರೋಪ ಮಾಡಿಕೊಳ್ಳುವುದು ಸರಿಯಲ್ಲ. ಮುಂದೆ ಇಂತಹ ಘಟನೆ ಸಂಭವಿಸದಂತೆ ಕ್ರಮ ಕೈಗೊಳ್ಳಬೇಕಾಗಿದೆ' ಎಂದರು.

'ದುರ್ಘಟನೆಯಲ್ಲಿ ಸತ್ತಿರುವ ಕುಟುಂಬಗಳ ಬಗ್ಗೆ ಅನುಕಂಪ ಇರಬೇಕು. ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು. ವಿರೋಧ ಪಕ್ಷದಲ್ಲಿರುವ ಸಿದ್ದರಾಮಯ್ಯ ಅವರಿಗೆ ಟೀಕೆ ಮಾಡುವುದು ಬಿಟ್ಟು ಬೇರೆ ಏನು ಕೆಲಸ ಇದೆ ಹೇಳಿ' ಎಂದು ಅವರು ಪ್ರಶ್ನಿಸಿದರು.

ಮಾರ್ಚ್ 10ರೊಳಗೆ ಗಣಿಗಾರಿಕೆ ಸ್ಥಗಿತ

ಕೊಡಿಗೇನಹಳ್ಳಿ: ಕಾನೂನುಬಾಹಿರವಾಗಿ ಗಣಿಗಾರಿಕೆ ನಡೆಸುವವರ ವಿರುದ್ಧ ಮಾರ್ಚ್ 8ರಿಂದ 10ರೊಳಗೆ ಶಿಸ್ತುಕ್ರಮ ಜರುಗಿಸಿ, ಗಣಿಗಾರಿಕೆ ಸ್ಥಗಿತಗೊಳಿಸಲಾಗುವುದು ಎಂದು ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು. 'ಅಲ್ಲಿವರೆಗೆ ಕ್ರಮ ಏಕಿಲ್ಲವೆಂದರೆ ರಾಜ್ಯದಲ್ಲಿ ನಡೆಯುತ್ತಿರುವ ರಸ್ತೆಗಳ ಅಭಿವೃದ್ಧಿಗೆ ಜಲ್ಲಿ ಅವಶ್ಯಕತೆ ಇರುವುದರಿಂದ ಅಭಿವೃದ್ಧಿ ಕೆಲಸಕ್ಕೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ತಡವಾಗುತ್ತಿದೆ' ಎಂದರು.

6 ಜೀವ ಬಲಿ ಪಡೆದ ಜಿಲೆಟಿನ್ ಸ್ಫೋಟ

ಒಂದನೇ ಪುಟದಿಂದ

ಪೊಲೀಸರು ಮತ್ತು ವಿಧಿವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ತಜ್ಞರು ಚೀಲದಲ್ಲಿ ಮಾಂಸದ ಮುದ್ದೆಯಂತಿದ್ದ ಶವಗಳನ್ನು ಕೊಂಡೊಯ್ದರು. ವಿಕಾರವಾಗಿದ್ದ ಶವಗಳನ್ನು ಗುರುತಿಸುವುದೇ ಪೊಲೀಸರಿಗೆ ಸವಾಲಿನ ಕೆಲಸವಾಗಿತ್ತು.

ಕ್ರಷರ್ ವಿರುದ್ಧ ಪ್ರಕರಣ: ಅಕ್ರಮವಾಗಿ ಸ್ಫೋಟ ನಡೆಸುತ್ತಿರುವ ಆರೋಪದ ಮೇಲೆ ಫೆಬ್ರುವರಿ 7ರಂದು ಕ್ರಷರ್ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು ಎಂದು ಚಿಕ್ಕಬಳ್ಳಾಪುರದ ಎಸ್.ಪಿ ಮಿಥುನ್ ಕುಮಾರ್ ಜಿ.ಕೆ. ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಗಣಿಗಾರಿಕೆ ನಿಯಮಾವಳಿ ಪ್ರಕಾರ, ಗಣಿಗಳಲ್ಲಿ ಕಲ್ಲುಗಳನ್ನು ಸ್ಫೋಟಿಸಲು ಏಳು ಅಡಿ ರಂಧ್ರ ಕೊರೆಯಲು ಮಾತ್ರ ಅವಕಾಶವಿದೆ. ಆದರೆ, ಇಲ್ಲಿ 15 ಅಡಿವರೆಗೂ ರಂಧ್ರ ಕೊರೆಯಲಾಗಿದೆ' ಎಂದು ತಿಳಿಸಿದರು.

ಫೆಬ್ರುವರಿ 7ರಂದು ನಡೆದ ದಾಳಿಯ ವೇಳೆ ಈ ಕ್ರಷರ್‌ನಿಂದ 14 ಜಿಲೆಟಿನ್ ಜೆಲ್ ಟ್ಯೂಬ್, 17 ಎಲೆಕ್ಟ್ರಾನಿಕ್ ಡಿಟೋನೇಟರ್ ವೈರ್ ಮತ್ತು ವಾಹನ ವಶಪಡಿಸಿಕೊಳ್ಳಲಾಗಿತ್ತು. ಕ್ರಷರ್ ಬಂದ್ ಆಗಿದ್ದರೂ ಅಪಾರ ಪ್ರಮಾಣದ ಸ್ಫೋಟಕಗಳನ್ನು ಬಚ್ಚಿಟ್ಟಿರುವ ಶಂಕೆ ಅಧಿಕಾರಿಗಳಿಗಿತ್ತು. ಅದೇ ಗುಮಾನಿಯ ಮೇಲೆ ಸೋಮವಾರ ಎರಡನೇ ಬಾರಿ ದಾಳಿ ನಡೆಸಿದ್ದರು. ಆಗ ಕಲ್ಲಿನಲ್ಲಿ ರಂಧ್ರ ಕೊರೆಯಲು ಬಳಸುವ ಕಂಪ್ರೆಸರ್‌ಅನ್ನು ವಶಪಡಿಸಿಕೊಳ್ಳಲಾಗಿತ್ತು.

ಅಧಿಕಾರಿಗಳು ಎರಡನೇ ಬಾರಿ ದಾಳಿ ನಡೆಸಿದ ನಂತರ ಎಚ್ಚೆತ್ತುಕೊಂಡ ಮಾಲೀಕರು ಕ್ರಷರ್‌ನಲ್ಲಿ ಬಚ್ಚಿಡಲಾಗಿದ್ದ ಸ್ಫೋಟಕಗಳನ್ನು ಬೇರೆಡೆ ಸಾಗಿಸುವಂತೆ ಸಿಬ್ಬಂದಿಗೆ ಸೂಚಿಸಿರುವ ಸಾಧ್ಯತೆ ಇದೆ. ವಾಹನದಿಂದ ಸ್ಫೋಟಕಗಳನ್ನು ಇಳಿಸುವಾಗ ದುರಂತ ಸಂಭವಿಸಿರಬಹುದು ಎಂದು ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

ಕುಟುಂಬಸ್ಥರ ಆಕ್ರಂದನ

ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆಗೆ ಸಿದ್ದರಾಮಯ್ಯ ಒತ್ತಾಯ

ಹಿರೇನಾಗವಲ್ಲಿ ಜಿಲೆಟಿನ್ ಸ್ಫೋಟ ಪ್ರಕರಣಕ್ಕೆ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ, ಪೊಲೀಸರು, ಭೂವಿಜ್ಞಾನ ಇಲಾಖೆ ಅಧಿಕಾರಿಗಳೇ ನೇರ ಹೊಣೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

'ಕ್ರಷರ್, ಕಲ್ಲುಕ್ವಾರಿ ನಡೆಸುತ್ತಿರುವರ ಮೇಲೆ ಐಪಿಸಿ ಸೆಕ್ಷನ್ 302ರಂತೆ ಪ್ರಕರಣ ದಾಖಲಿಸಿ ಬಂಧಿಸಬೇಕು. ಸರ್ಕಾರ ಕೂಡಲೇ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿ ರಚಿಸಿ ತನಿಖೆ ಮಾಡಿಸಬೇಕು' ಎಂದು ಆಗ್ರಹಿಸಿದರು.

ಚಿಕ್ಕಬಳ್ಳಾಪುರ ಜಿಲ್ಲೆಯ ಹಿರೇನಾಗವಲ್ಲಿ ಗ್ರಾಮದ ಘಟನಾ ಸ್ಥಳಕ್ಕೆ ಮಂಗಳವಾರ ಸಂಜೆ ಬಂದ ಸಿದ್ದರಾಮಯ್ಯ, ಸ್ಫೋಟದ ಸ್ಥಳ ಪರಿಶೀಲನೆ ನಡೆಸಿದರು.

'ಅಂಜುವುದಿಲ್ಲ, ಪಲಾಯನ ಇಲ್ಲವೇ ಇಲ್ಲ'

ಅಪ್ಪ, ಮಗ ಅಪಪ್ರಚಾರ: ಯತ್ನಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೆಹಲಿಗೆ ತುರ್ತು ಕಾರ್ಯದ ನಿಮಿತ್ತ ಹೋಗಿದ್ದೇನೆಯೇ ಹೊರತು, ಪಕ್ಷದ ವರಿಷ್ಠರು ಬುಲಾವ್ ಮಾಡಿಲ್ಲ. ಭೇಟಿಗೆ ಸಮಯವನ್ನೂ ಪಡೆದಿಲ್ಲ' ಎಂದು ವಿಜಯಪುರ ಕ್ಷೇತ್ರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದ್ದಾರೆ.

ಪಕ್ಷದ ವರಿಷ್ಠರು ಕರೆಸಿ ಎಚ್ಚರಿಕೆ ನೀಡಿದ್ದಾರೆ ಎಂಬ ಸುದ್ದಿಗಳಿಗೆ ಸಂಬಂಧಿಸಿ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪ್ರತಿಕ್ರಿಯೆ ನೀಡಿರುವ ಅವರು, 'ವಿಜಯಪುರದ ಸಿದ್ಧೇಶ್ವರ ಸಂಸ್ಥೆ ನಿರ್ಮಿಸಿರುವ ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಶಿಶು ನಿಕೇತನ ಶಾಲೆಯ ಸಿಬಿಎಸ್‌ಇ ನೋಂದಣಿಯ ತುರ್ತು ಕೆಲಸ ಇದ್ದ ಕಾರಣ ಭಾನುವಾರ ದೆಹಲಿಗೆ ಬಂದಿದ್ದೆ' ಎಂದು ಹೇಳಿದ್ದಾರೆ.

ಯತ್ನಾಳ

'ನನಗೆ ಪಕ್ಷದ ಹೈಕಮಾಂಡ್ ಯಾವುದೇ ತುರ್ತು ಬುಲಾವ್ ಆಗಲಿ ಅಥವಾ ಸಮಯವನ್ನಾಗಲೀ ಕೊಟ್ಟು ವಿಚಾರಣೆಗೆ ಕರೆದಿಲ್ಲ. ನಾನು ಯಾವುದೇ ನಾಯಕರ ಭೇಟಿಗೂ ಸಮಯ ಕೇಳಿಲ್ಲ. ಆದರೆ ತಂದೆ ಮತ್ತು ಮಗ (ಯಡಿಯೂರಪ್ಪ, ವಿಜಯೇಂದ್ರ) ಮಾಧ್ಯಮಗಳಲ್ಲಿ ಸುಳ್ಳು ಸುದ್ದಿ ಮಾಡಿಸಿ ರಾಜ್ಯದ ಜನರಲ್ಲಿ, ಪಕ್ಷದ ಶಾಸಕರು ಮತ್ತು ಕಾರ್ಯಕರ್ತರಲ್ಲಿ ಗೊಂದಲ ಮೂಡಿಸಿದ್ದಾರೆ' ಎಂದು ಹರಿಹಾಯ್ದಿದ್ದಾರೆ.

'ನನ್ನ ಹೋರಾಟವು, ನನ್ನ ಆದರ್ಶ ಗುರು ಅಟಲ್ ಬಿಹಾರಿ ವಾಜಪೇಯಿ ಮತ್ತು ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರ ಸಂಕಲ್ಪವಾದ ಕುಟುಂಬ ರಾಜಕಾರಣ, ಭ್ರಷ್ಟ ಮುಕ್ತ ಭಾರತದ ಭಾಗವಾಗಿದೆಯೇ ಹೊರತು ವೈಯಕ್ತಿಕ ವ್ಯಕ್ತಿಗಳ ವಿರುದ್ಧ ಅಲ್ಲ ಹಾಗೂ ಪಕ್ಷದ ವಿರುದ್ಧವೂ ಅಲ್ಲ' ಎಂದು ಹೇಳಿದ್ದಾರೆ.

'ಇಬ್ಬರು ಸಚಿವರು ಪತ್ರಿಕಾಗೋಷ್ಠಿ ನಡೆಸಿ ನನ್ನ ಬಗ್ಗೆ ಮತ್ತು ಸ್ವಾಮೀಜಿಯವರ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ. ಅದಕ್ಕೆ ಸೂಕ್ತ ಉತ್ತರವನ್ನು ರಾಜ್ಯಕ್ಕೆ ಬಂದ ಮೇಲೆ ಕೊಡುತ್ತೇನೆ. ಹಿಂದೂ ಸಮಾಜದಲ್ಲಿನ ಸಾಮಾಜಿಕ ನ್ಯಾಯಕ್ಕಾಗಿ ನನ್ನ ಹೋರಾಟ ನಿಲ್ಲುವುದಿಲ್ಲ. ಅಂಜುವುದಿಲ್ಲ, ಬಗ್ಗುವುದೂ ಇಲ್ಲ ಮತ್ತು ಪಲಾಯನ ಇಲ್ಲವೇ ಇಲ್ಲ' ಎಂದು ಹೇಳಿದ್ದಾರೆ.

'ಪಂಚಮಸಾಲಿ ಹೋರಾಟದಲ್ಲಿ ಒಡಕಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹಾಗೂ ತಮ್ಮ ಉದ್ದೇಶ ಒಂದೇ ಆಗಿದೆ. ತಮ್ಮ ಮಧ್ಯೆ ಒಡಕಿನ ಪ್ರಶ್ನೆಯೇ ಇಲ್ಲ ಎಂದು ಹರಿಹರದ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹೇಳಿದ್ದಾರೆ.

ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಎರಡು ದಿನಗಳಿಂದ ನಡೆದ ಹಲವಾರು ಘಟನೆಗಳು, ಹೇಳಿಕೆಗಳು ಹಾಗೂ ಪ್ರತಿಕ್ರಿಯೆಗಳು ನಮ್ಮ ಭಕ್ತರ ಮಧ್ಯೆ ಹಲವಾರು ಗೊಂದಲಗಳನ್ನು ಹುಟ್ಟು ಹಾಕಿದಂತೆ ಕಾಣಿಸುತ್ತಿದೆ. ಅಲ್ಲದೆ, ಹಲವಾರು ಪ್ರಶ್ನೆಗಳು ಉದ್ಭವಿಸುವಂತೆ ಮಾಡಿವೆ. ಹೋರಾಟದ ಎಲ್ಲೋ ಬಿರುಕು ಗೊಂಡಿದೆಯಾ ಎನ್ನುವ ಮಾತುಗಳನ್ನು ತೇಲಿಬಿಡಲಾಗುತ್ತಿದೆ. ಯಾವಾಗ ರಾಜಕಾರಣ ಹೋರಾಟದಲ್ಲಿ ತನ್ನ ಹಸ್ತಕ್ಷೇಪ ಮಾಡುತ್ತದೋ, ಆಗ ಈ ರೀತಿಯ ಗೊಂದಲಗಳ ಸೃಷ್ಟಿ ಸಾಮಾನ್ಯ. ಏಕೆಂದರೆ, ಅವುಗಳ ಉದ್ದೇಶವೇ ಅದಾಗಿರುತ್ತದೆ' ಎಂದರು.

ವಚನಾನಂದ ಸ್ವಾಮೀಜಿ

'ಜಯಮೃತ್ಯುಂಜಯ ಸ್ವಾಮೀಜಿಗಳು ಏಕಾಂಗಿಯಾಗಿ ಪ್ರಾರಂಭಿಸಿದ ಹೋರಾಟ ಹಲವಾರು ದಿಕ್ಕುಗಳ ಮೂಲಕ ಹರಿದು ಬರುತ್ತಿತ್ತು. ಹರಪನಹಳ್ಳಿಯಲ್ಲಿ ನಾವು ಈ ಹೋರಾಟಕ್ಕೆ ಕೈಜೋಡಿಸಿದಾಗ, ಹೋರಾಟ ಬೃಹತ್ ಪ್ರಮಾಣದ ಶಕ್ತಿಯನ್ನು ಪಡೆದುಕೊಂಡಿತು. ನಂತರ ಇಬ್ಬರೂ ಜತೆಯಲ್ಲೇ ಹೆಜ್ಜೆ ಹಾಕಿದ್ದೇವೆ. ಬೆಂಗಳೂರಿನಲ್ಲಿ ಸಮಾವೇಶ ನಡೆಸಿದ ನಂತರ ಧರಣಿ ಸತ್ಯಾಗ್ರಹದಂತಹ ನಿರ್ಧಾರ ತಗೆದುಕೊಂಡಲ್ಲಿ ನಾವು ಅದರಲ್ಲಿ ಪಾಲ್ಗೊಳ್ಳುವುದಿಲ್ಲ ಎನ್ನುವುದನ್ನೂ ಮೊದಲೇ ತಿಳಿಸಿದ್ದು, ಅಂದ ಮಾತ್ರಕ್ಕೆ ಸಮಾಜಕ್ಕೆ ಮೀಸಲಾತಿ ಕೊಡಿಸುವ ಹೋರಾಟದಿಂದ ಹಿಂದೆ ಸರಿದಿಲ್ಲ' ಎಂದವರು ತಿಳಿಸಿದ್ದಾರೆ.

'ಜಯಮೃತ್ಯುಂಜಯ ಸ್ವಾಮೀಜಿಗಳ ಜತೆ ದೈಹಿಕವಾಗಿ ಪಕ್ಕದಲ್ಲಿ ಕುಳಿತಿಲ್ಲ. ಮಾನಸಿಕವಾಗಿ ಯಾವಾಗಲೂ ಅವರ ಜತೆಯಲ್ಲೇ ಇದ್ದೇವೆ' ಎಂದರು

ಪಂಚಮಸಾಲಿ ಹೋರಾಟ: ನಾಳೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಮಸಾಲಿ ಸಮುದಾಯಕ್ಕೆ ಹಿಂದುಳಿದ ವರ್ಗಗಳ ಪ್ರವರ್ಗ '2ಎ' ಅಡಿಯಲ್ಲಿ ಮೀಸಲಾತಿ ನೀಡುವಂತೆ ಆಗ್ರಹಿಸಿ ನಡೆಸುತ್ತಿರುವ ಹೋರಾಟದ ಮುಂದಿನ ನಡೆ ನಿರ್ಧರಿಸಲು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಮುದಾಯದ ಮುಖಂಡರ ದುಂಡು ಮೇಜಿನ ಸಭೆ ಗುರುವಾರ (ಫೆಬ್ರುವರಿ 25) ನಡೆಯಲಿದೆ.

ಹೋರಾಟದ ನೇತೃತ್ವ ವಹಿಸಿರುವ ಕೂಡಲ ಸಂಗಮ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಅಖಿಲ ಭಾರತ ಪಂಚಮಸಾಲಿ ಮಹಾಸಭಾ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದಲ್ಲಿ ಅಂದು ಸಂಜೆ 4 ಗಂಟೆಗೆ ಸಭೆ ನಿಗದಿಯಾಗಿದೆ.

ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ವಿಜಯಾನಂದ ಕಾಶಪ್ಪನವರ, 'ಹೋರಾಟದ ಮುಂದಿನ ಹೆಜ್ಜೆ ಕುರಿತು ದುಂಡು ಮೇಜಿನ ಸಭೆಯಲ್ಲಿ ತೀರ್ಮಾನಕ್ಕೆ ಬರಲಾಗುವುದು. ಸಮುದಾಯದ ಶಾಸಕರು, ಸಂಸದರು, ಕೂಡಲ ಸಂಗಮ ಪಂಚಮಸಾಲಿ ಪೀಠದ ಧರ್ಮದರ್ಶಿಗಳು, ಪಂಚಮಸಾಲಿ ಮಹಾಸಭಾ ಪದಾಧಿಕಾರಿಗಳು ಹಾಗೂ ವಿವಿಧ ಮುಂಚೂಣಿ ಸಂಘಟನೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ' ಎಂದರು.

ಎರಡನೇ ದಿನದ ಧರಣಿ ಅಂತ್ಯ: '2ಎ' ಮೀಸಲಾತಿಗೆ ಆಗ್ರಹಿಸಿ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಮಂಗಳವಾರವೂ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಯಿತು. ಬೆಳಿಗ್ಗೆ 9ರಿಂದ ಧರಣಿ ಸಂಜೆ 6ರವರೆಗೂ ನಡೆದ ಧರಣಿಯಲ್ಲಿ ವಿಜಯಪುರ ಜಿಲ್ಲೆಯ ಹೆಚ್ಚಿನ ಜನರು ಪಾಲ್ಗೊಂಡಿದ್ದರು.

ಬಿಜೆಪಿ ಶಾಸಕ ಸಿದ್ದು ಸವದಿ, ಜೆಡಿಯು ಮುಖಂಡ ಎಂ.ಪಿ. ನಾಡಗೌಡ, ವಿಜಯಾನಂದ ಕಾಶಪ್ಪನವರ ಸೇರಿದಂತೆ ಹಲವು ಪ್ರಮುಖರು ಧರಣಿಯಲ್ಲಿ ಭಾಗವಹಿಸಿದ್ದರು.

ಬುಧವಾರವೂ ಧರಣಿ ನಡೆಯಲಿದೆ. ಬಾಗಲಕೋಟೆ ಜಿಲ್ಲೆಯ ಪಂಚಮಸಾಲಿ ಸಮುದಾಯದ ಜನರು ಮೂರನೇ ದಿನದ ಧರಣಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

'ಮುಖ್ಯಮಂತ್ರಿ ಒತ್ತಡಕ್ಕೆ ಮಣಿದು ನಿರಾಣಿ ಹೇಳಿಕೆ'

ಬೆಳಗಾವಿ: 'ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಕಾಂಗ್ರೆಸಿನ ಬಿ ಟೀಂ' ಎಂಬ ಸಚಿವ ಮುರಗೇಶ ನಿರಾಣಿ ಹೇಳಿಕೆಗೆ ಅಸಮಾಧಾನ ವ್ಯಕ್ತಪಡಿಸಿದ ಕೆಪಿಸಿಸಿ ವಕ್ತಾರೆಯೂ ಆಗಿರುವ ಶಾಸಕಿ ಲಕ್ಷ್ಮಿ ಹೆಬ್ಬಾಳ್ಕರ, 'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಒತ್ತಡಕ್ಕೆ ಮಣಿದು ಆರೋಪಿಸಿದ್ದಾರೆ' ಎಂದು ಟೀಕಿಸಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗೆ 27 ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಬೆಂಗಳೂರಿನಲ್ಲಿ ಆಯೋಜಿಸಿದ್ದ ಸಮಾವೇಶ ಕಾಂಗ್ರೆಸ್ ಪ್ರಾಯೋಜಿತ ಎಂಬ ನಿರಾಣಿ ಹೇಳಿಕೆ ಸತ್ಯಕ್ಕೆ ದೂರವಾಗಿದೆ. ಇದು ಸಮಾಜದ ಸಮಾವೇಶ ಹಾಗೂ ಕೆಲಸವಾಗಿದೆ. ಯಾವುದೇ ಪಕ್ಷಕ್ಕೆ ಅನುಕೂಲ ಆಗಲೆಂದು ನಾವು ಹೋರಾಡುತ್ತಿಲ್ಲ' ಎಂದು ತಿಳಿಸಿದರು.

ಲಕ್ಷ್ಮಿ ಹೆಬ್ಬಾಳ್ಕರ

'ಧ್ವನಿ ಇದ್ದವರೂ ಮೀಸಲಾತಿ ಕೇಳುವುದು ಯಾಕೆ?'

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): 'ಸಮಾಜದಲ್ಲಿ ತುಳಿತಕ್ಕೆ ಒಳಗಾದವರು, ಅಶಕ್ತರು, ಅವಕಾಶ ವಂಚಿತರು ಹಾಗೂ ಧ್ವನಿ ಇಲ್ಲದ ಸಮುದಾಯಗಳಿಗೆ ಮೀಸಲಾತಿ ಸೌಲಭ್ಯ ಅಗತ್ಯ. ಆದರೀಗ ಧ್ವನಿ ಇದ್ದವರೂ ಸಹ ಮೀಸಲಾತಿಗಾಗಿ ಹೋರಾಟಕ್ಕೆ ಇಳಿದಿರುವುದು ವಿಪರ್ಯಾಸದ ಸಂಗತಿ' ಎಂದು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಆರ್.ರಘು ಕೌಟಿಲ್ಯ ಬೇಸರ ವ್ಯಕ್ತಪಡಿಸಿದರು.


ಆರ್.ರಘು ಕೌಟಿಲ್ಯ

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಎಲ್ಲ ಸಮುದಾಯಗಳಲ್ಲೂ ಬಡವರು ಇದ್ದಾರೆ. ಶೈಕ್ಷಣಿಕ, ಸಾಮಾಜಿಕ, ಆರ್ಥಿಕವಾಗಿ ತೀರಾ ಹಿಂದುಳಿದ ಸಮಾಜಗಳು ಸಾಕಷ್ಟಿವೆ. ಅವುಗಳ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಸ್ಥಾಪಿಸಬೇಕಾದ ಅಗತ್ಯವಿದೆ. ಈಗ ಅನೇಕ ಸಮುದಾಯಗಳು ಮೀಸಲಾತಿ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿವೆ. ಸಂವಿಧಾನದ ಚೌಕಟ್ಟಿನಲ್ಲಿ, ಅದರ ಆಶಯಕ್ಕೆ ಪೂರಕವಾಗಿಯೇ ಮೀಸಲಾತಿ ಸೌಲಭ್ಯ ಕಲ್ಪಿಸಬೇಕಾಗಿರುವುದರಿಂದ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಯಾವ ರೀತಿ ನಿರ್ಧಾರ ಕೈಗೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ' ಎಂದರು.

'ಶಕ್ತಿ ಪ್ರದರ್ಶನದಿಂದ ಮೀಸಲಾತಿ ಸಿಗದು'

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ (ಮೈಸೂರು): 'ಯಾವ ಜಾತಿಗೆ ಮೀಸಲಾತಿ ಕೊಡಬೇಕು ಎಂಬುದನ್ನು ನಿರ್ಧರಿಸುವುದು ಕೇಂದ್ರ ಸರ್ಕಾರದ ಪರಮಾಧಿಕಾರ. ಎಲ್ಲೋ ಕೂತು ಹೇಳಿಕೆ ಕೊಡುವುದು, ಶಕ್ತಿ ಪ್ರದರ್ಶನ ಮಾಡುವುದರಿಂದ ಮೀಸಲಾತಿ ಪಡೆಯಲು ಸಾಧ್ಯವಿಲ್ಲ' ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಮಂಗಳವಾರ ಇಲ್ಲಿ ಹೇಳಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಇಂದು ಮೀಸಲಾತಿ ಹೋರಾಟ ಭುಗಿಲೆದ್ದಿದ್ದು, ಹಾದಿಬೀದಿಯಲ್ಲಿ ಚರ್ಚೆ ಮಾಡುವ ವಿಷಯವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿ.ಶ್ರೀನಿವಾಸ ಪ್ರಸಾದ್

ಯಾವುದೇ ಸಮುದಾಯಕ್ಕೆ ಮೀಸಲಾತಿ ಕೊಡಬೇಕಾದರೆ ರಾಜ್ಯ ಸರ್ಕಾರ ಸಮಿತಿ ರಚಿಸಿ ಕೇಂದ್ರಕ್ಕೆ ವರದಿ ನೀಡಬೇಕು. ಕೇಂದ್ರ ಸರ್ಕಾರ ಅದನ್ನು ಅಧ್ಯಯನ ಮಾಡಿ ಅನುಮೋದನೆ ಕೊಡಬೇಕು. ಸಿಕ್ಕಸಿಕ್ಕವರೆಲ್ಲಾ ಮೀಸಲಾತಿ ಕೇಳಿದರೆ ಕೊಡಲು ಬರುವುದಿಲ್ಲ ಎಂದರು.

'ಸಂವಿಧಾನ ಓದಿ' ಪುಸ್ತಕ ವಿತರಣೆ: 'ಸಂವಿಧಾನ ಓದದ ಕಾರಣ ಈ ಎಲ್ಲಾ ವಿವಾದಗಳು ನಡೆಯುತ್ತಿದೆ. ಜನರಿಗೆ ಸಂವಿಧಾನದ ಬಗ್ಗೆ ತಿಳಿಸಲು 'ಸಂವಿಧಾನ ಓದಿ' ಎಂಬ ಪುಸ್ತಕ ವಿತರಿಸುವ ಯೋಜನೆ ಹಾಕಿಕೊಂಡಿದ್ದೇನೆ. 30 ಸಾವಿರ ಪ್ರತಿಗಳನ್ನು ಮುದ್ರಿಸಲಾಗಿದ್ದು, ಚಾಮರಾಜನಗರ ಲೋಕಸಭಾ ಕ್ಷೇತ್ರದ ಎಂಟೂ ವಿಧಾನಸಭಾ ಕ್ಷೇತ್ರಗಳ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತದೆ' ಎಂದರು.

'ಪ್ರವರ್ಗ 2ಎ' ಒಳಮೀಸಲಿಗೆ ನೇಕಾರರ ಆಗ್ರಹ

ಪ್ರಜಾವಾಣಿ ವಾರ್ತೆ

ಮೊಳಕಾಲ್ಮೂರು (ಚಿತ್ರದುರ್ಗ): 'ಪ್ರವರ್ಗ 2ಎ'ಗೆ ಹೊಸ ಜಾತಿಗಳನ್ನು ಸೇರ್ಪಡೆ ಮಾಡಿದರೆ ನೇಕಾರರಿಗೆ ಶೇ 6ರಷ್ಟು ಒಳಮೀಸಲಾತಿ ಕಲ್ಪಿಸಬೇಕು ಎಂದು ಮೂಲ ನೇಕಾರರು ಮೊಳಕಾಲ್ಮೂರು ಹಾಗೂ ಚಳ್ಳಕೆರೆಯಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

'ಪ್ರವರ್ಗ 2ಎ'ನಲ್ಲಿ ಶೇ 15ರಷ್ಟು ಮೀಸಲಾತಿ ಇದೆ. ಈ ಪಟ್ಟಿಗೆ ಸೇರಿಕೊಳ್ಳಲು ಕೆಲ ಸಮುದಾಯಗಳು ಹೋರಾಟದ ಮಾರ್ಗ ಅನುಸರಿಸುತ್ತಿವೆ. ಪ್ರಬಲ ಸಮುದಾಯಗಳು ಈ ಮೀಸಲಾತಿ ವ್ಯಾಪ್ತಿಗೆ ಬಂದರೆ ಮೂಲ ನೇಕಾರರು ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಇನ್ನಷ್ಟು ಅಧೋಗತಿಗೆ ಹೋಗುವ ಆತಂಕ ಎದುರಾಗಿದೆ. ಒಳಮೀಸಲಾತಿ ಕಲ್ಪಿಸಿದರೆ ಈ ಕಳವಳ ನಿವಾರಣೆಯಾಗಲಿದೆ ಎಂದು ಪ್ರತಿಭಟನಕಾರರು ಅಭಿಪ್ರಾಯಪಟ್ಟರು.

ನೇಕಾರ ಜನಾಂಗದಲ್ಲಿ 26 ಒಳ ಪಂಗಡಗಳಿವೆ. ಇವರೆಲ್ಲರನ್ನೂ ಮೂಲ ನೇಕಾರರು ಎಂದು ಗುರುತಿಸಲಾಗಿದೆ. ಕೈಮಗ್ಗ, ಜವಳಿ ಅಭಿವೃದ್ಧಿ ನಿಗಮಗಳ ಸೌಲಭ್ಯ ಬೇರೆ ಜಾತಿಗಳ ಪಾಲಾಗುತ್ತಿವೆ. ಮೂಲ ನೇಕಾರ ಸಮುದಾಯಗಳ ಅಭಿವೃದ್ಧಿ ನಿಗಮ ಸ್ಥಾಪಿಸಿದರೆ ಅನುಕೂಲವಾಗಲಿದೆ. ನೇಕಾರರ ಸಾಲಮನ್ನಾ ಯೋಜನೆ ನೈಜ ವ್ಯಕ್ತಿಗಳನ್ನು ತಲುಪಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಒಳಮೀಸಲಾತಿ ಹಾಗೂ ಮೂಲ ನೇಕಾರರ ಅಭಿವೃದ್ಧಿ ನಿಗಮ ಸ್ಥಾಪನೆಗೆ ಆಗ್ರಹಿಸಿ ಮೂಲ ನೇಕಾರರು ಮೊಳಕಾಲ್ಮೂರಿನಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಬ್ರಾಹ್ಮಣರ ಅಭಿವೃದ್ಧಿ ಮಂಡಳಿ ಒತ್ತಡಕ್ಕೆ ಮಣಿದ ಚಿತ್ರತಂಡ

‘ಪೊಗರು’ ವಿವಾದಾತ್ಮಕ ದೃಶ್ಯಗಳಿಗೆ ಕತ್ತರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಗರು’ ಚಿತ್ರದ ವಿವಾದಾತ್ಮಕ ದೃಶ್ಯಗಳಿಗೆ ಕತ್ತರಿ ಹಾಕಲು ನಿರ್ದೇಶಕ ನಂದಕಿಶೋರ್ ಒಪ್ಪಿದ್ದಾರೆ. ಬುಧವಾರದೊಳಗೆ ಈ ದೃಶ್ಯಗಳನ್ನು ತೆಗೆದುಹಾಕುವುದಾಗಿಯೂ ಅವರು ತಿಳಿಸಿದ್ದಾರೆ.

ಚಿತ್ರದಲ್ಲಿ ಬ್ರಾಹ್ಮಣರನ್ನು ಅವಹೇಳನ ಮಾಡುವ ಸುಮಾರು 14 ದೃಶ್ಯಗಳಿವೆ. ಅವುಗಳನ್ನು ತೆಗೆದು ಹಾಕಬೇಕು ಎಂದು ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಚ್.ಎಸ್. ಸಚ್ಚಿದಾನಂದ ಮೂರ್ತಿ ಅವರು ಆಗ್ರಹಿಸಿದ್ದರು. ಮೂರ್ತಿ ಅವರ ಜೊತೆಗೆ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಕಚೇರಿಯಲ್ಲಿ ಮಂಗಳವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಂದ ಕಿಶೋರ್ ಈ ನಿರ್ಧಾರ ಪ್ರಕಟಿಸಿದರು.

‘ಆ ದೃಶ್ಯಗಳ ಸಂಕಲನವನ್ನು ಶುರು ಮಾಡಿದ್ದೇವೆ. ಇದಕ್ಕೆ ಕನಿಷ್ಠ 48 ಗಂಟೆಗಳ ಸಮಯಾವಕಾಶ ಬೇಕು. ಈ ಪ್ರಕ್ರಿಯೆ ಮುಗಿದು ಸೆನ್ಸಾರ್ ಮಾಡಿ ಮತ್ತೆ ಅದನ್ನು ಪ್ರದರ್ಶನ ವೇದಿಕೆಗಳಿಗೆ (ಉಪಗ್ರಹ ಮೂಲಕ ಚಿತ್ರಮಂದಿರಗಳಿಗೆ ಪ್ರಸಾರವಾಗುವ ವ್ಯವಸ್ಥೆ)



ನಂದ ಕಿಶೋರ್

ಅಪ್‌ಲೋಡ್ ಮಾಡಬೇಕಾಗುತ್ತದೆ. ಸೆನ್ಸಾರ್ ಮಂಡಳಿ ಗೂ ಮರು ಸೆನ್ಸಾರ್ ಅನ್ನು ಕ್ಷಿಪ್ರವಾಗಿ ಮಾಡಿಕೊಡುವಂತೆ ಕೋರುತ್ತೇನೆ’ ಎಂದು ಹೇಳಿದರು.

ಮತ್ತೊಮ್ಮೆ ಬ್ರಾಹ್ಮಣ ಸಮುದಾಯದ ಕ್ಷಮೆಯಾಚಿಸಿದ ನಂದ ಕಿಶೋರ್, ‘ಯಾರನ್ನೂ ಅವಮಾನಿಸಿ ಅದರಿಂದ ಹಣಗಳಿಸುವ ಉದ್ದೇಶ ನಮ್ಮದಾಗಿರಲಿಲ್ಲ. ಆ ಕಥೆಯ ಪ್ರಕಾರ, ಪೂಜೆ, ಹೋಮ ಹವನ ನಡೆಸುವವರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂಬುದನ್ನೂ ಹೇಳಬೇಕಿತ್ತು. ಕಥೆಗೆ ಪೂರಕವಾದ ಅಂಶವಾಗಿತ್ತೇ ವಿನಾ ನೋಯಿಸುವ ಉದ್ದೇಶ ಇರಲಿಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

‘ನಾನು ಶಂಕರಾಚಾರ್ಯರನ್ನು ಅನುಸರಿಸುವವನು. ಹೊಸ ಚಿತ್ರ ಸೆಟ್ಟೇರಿದಾಗ ಕಾಲಡಿಗೆ (ಶಂಕರಾಚಾರ್ಯರ ಜನ್ಮಸ್ಥಳ) ಹೋಗಿ ಕಾಣಿಕೆ ಹಾಕಿ ಸಿನಿಮಾದ ಕೆಲಸ ಆರಂಭಿಸುವವನು. ಅಂಥವನು ಒಂದು ಸಮುದಾಯವನ್ನು ಅವಮಾನಿಸುವವನಲ್ಲ. ಈಗ ಸಮಸ್ಯೆ ಆಗಿದೆ. ತಪ್ಪಾಗಿದೆ ಎಂಬುದನ್ನು ಒಪ್ಪಿಕೊಂಡು ಕ್ಷಮೆ ಕೇಳುತ್ತಿದ್ದೇನೆ. ಇನ್ನೇನು ಮಾಡಲು ಸಾಧ್ಯ ಹೇಳಿ’ ಎಂದು ಪ್ರಶ್ನಿಸಿದರು.

ಪ್ರತಿಭಟನೆ: ಸುದ್ದಿಗೋಷ್ಠಿಗೂ ಮುನ್ನ ವಿವಿಧ ಬ್ರಾಹ್ಮಣ ಸಂಘಟನೆಗಳ ಮುಖಂಡರು ಚಲನಚಿತ್ರ ವಾಣಿಜ್ಯ ಮಂಡಳಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಚಿತ್ರದಲ್ಲೇನಿದೆ?: ಚಿತ್ರದ ಆರಂಭದಲ್ಲೇ ಯಜ್ಞ ಮಾಡುತ್ತಿದ್ದ ಪುರೋಹಿತರ ಮೇಲೆ ಖಳನಾಯಕನ ತಂಡದ ವ್ಯಕ್ತಿಯೊಬ್ಬ ಕಾಲಿಟ್ಟ ದೃಶ್ಯವಿದೆ. ನಾಯಕನೇ ಬ್ರಾಹ್ಮಣರನ್ನು ಅವಹೇಳನ ಮಾಡುವ ಪದಗಳನ್ನು ಬಳಸಿರುವ ಕುರಿತು ಆರೋಪಗಳು ಕೇಳಿ ಬಂದಿದ್ದು, ಸಾಮಾಜಿಕ ಜಾಲತಾಣದಲ್ಲಿ ಚರ್ಚೆಯಾಗಿತ್ತು.

ಶಾಂತಿ ಕದಡದಂತೆ ಮಂತ್ರಾಲಯ ಶ್ರೀ ಸಲಹೆ

ರಾಯಚೂರು: ‘ಪೊಗರು ಚಲನಚಿತ್ರದಲ್ಲಿ ಬ್ರಾಹ್ಮಣ ಸಮುದಾಯದ ಬಗ್ಗೆ ಅವಹೇಳನಕಾರಿ ದೃಶ್ಯ ಚಿತ್ರೀಕರಿಸಿದ್ದಕ್ಕೆ ಸಂಬಂಧಿಸಿದಂತೆ ಬ್ರಾಹ್ಮಣ ಸಮುದಾಯದವರು ಆವೇಶಕ್ಕೆ ಒಳಗಾಗಿ ಶಾಂತಿ ಕದಡುವ ಕಾರ್ಯದಲ್ಲಿ ತೊಡಗುವುದು ಬೇಡ’ ಎಂದು ಮಂತ್ರಾಲಯ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ಹೇಳಿದ್ದಾರೆ.

‘ಚಲನಚಿತ್ರ ವಾಣಿಜ್ಯ ಮಂಡಲಿಯ ಮುಖ್ಯಸ್ಥರನ್ನು ನಾವು ದೂರವಾಣಿ ಮೂಲಕ ಸಂಪರ್ಕಿಸಿದಾಗ ಅವರು ಕ್ಷಮೆ ಯಾಚಿಸಿದ್ದಾರೆ. ಆಕ್ಷೇಪಾರ್ಹ ಭಾಗವನ್ನು ತೆಗೆದುಹಾಕುವ ಭರವಸೆ ನೀಡಿದ್ದಾರೆ’ ಎಂದು ತಿಳಿಸಿದ್ದಾರೆ.

‘ಚಲನಚಿತ್ರದಲ್ಲಿ ಬ್ರಾಹ್ಮಣ ಸಮುದಾಯವನ್ನು ಅವಹೇಳನ ಮಾಡುವ ದೃಶ್ಯ ಚಿತ್ರೀಕರಿಸಿ ಬಿಡುಗಡೆಗೊಳಿಸಿದ್ದು ಖಂಡನೀಯ. ಚಲನಚಿತ್ರ ಮತ್ತು ಕಿರುತೆರೆಯ ಮೂಲಕ ಯಾವುದೇ ಒಂದು ಸಮುದಾಯದ ಅವಹೇಳನ, ನಿಂದನೆ ಮಾಡುವುದು ಸರಿಯಲ್ಲ. ಈ ತರಹದ ದೃಶ್ಯಾವಳಿಗಳು ಬರದಂತೆ ಎಚ್ಚರ ವಹಿಸುವಂತೆ ಸೆನ್ಸಾರ್ ಮಂಡಳಿಗೂ ತಿಳಿಸಿದ್ದೇವೆ’ ಎಂದು ತಿಳಿಸಿದ್ದಾರೆ.

ಪೇಜಾವರ ಸ್ವಾಮೀಜಿ ಖಂಡನೆ

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ಉಡುಪಿ: ‘ಪೊಗರು’ ಸಿನಿಮಾದಲ್ಲಿ ಬ್ರಾಹ್ಮಣರ ಅವಹೇಳನ ಖಂಡನೀಯ ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ತಿಳಿಸಿದ್ದಾರೆ.

‘ಸಮಾಜದಲ್ಲಿ ಎಲ್ಲರೂ ನೆಮ್ಮದಿಯಿಂದ ಬದುಕಬೇಕಾದರೆ ಸಮಾಜವನ್ನು ನಿಂದಿಸುವ ಕೃತ್ಯಗಳಿಗೆ ಕೈಹಾಕಬಾರದು. ಒಂದು ಸಮಾಜವನ್ನು ಕೆಣಕಿ, ನಿಂದಿಸಿ ಮತ್ತೊಂದು ಸಮಾಜ ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲ’ ಎಂದಿದ್ದಾರೆ.

‘ಸ್ಟಾರ್ ವಾರ್’ ಟ್ವಿಟರ್‌ನಲ್ಲಿ ನಟ ಜಗ್ಗೇಶ್ ಕಿಡಿ ನುಡಿ

ನಾನು ಅಪ್ಪನಿಗೆ ಹುಟ್ಟಿದ ಮಗ ರೌಡಿಸಂ ಮಾಡಲು ಬರಬೇಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪ್ಪನಿಗೆ ಹುಟ್ಟಿದ ಮಗ ನಾನು. ನನಗೆ ಅವಮಾನ ಮಾಡಲು ಬರಬೇಡಿ. ಇದು ರೌಡಿಸಂ ವೇದಿಕೆ ಅಲ್ಲ...’

ಇದು ನಟ ಜಗ್ಗೇಶ್ ಅವರ ಟ್ವಿಟರ್‌ನಲ್ಲಿ ಹೊರಹಾಕಿದ ಆಕ್ರೋಶದ ಮಾತು.

ಮೈಸೂರು ಜಿಲ್ಲೆ ತಿ. ನರಸೀಪುರ ಸಮೀಪ ಅತ್ತಳ್ಳಿಯಲ್ಲಿ ದರ್ಶನ್ ಅಭಿಮಾನಿಗಳ ಆಕ್ರೋಶ ಎದುರಿಸಿದ್ದ ಜಗ್ಗೇಶ್ ಅವರು ಘಟನೆಯ ಸಂದರ್ಭ ಇದ್ದ ಯುವಕರಿಗೆ ಹಾಗೂ ಚಿತ್ರರಂಗದ ಪ್ರಮುಖರಿಗೆ ಕಟು ಮಾತುಗಳಲ್ಲಿ ಎಚ್ಚರಿಕೆಯನ್ನೂ ನೀಡಿದ್ದಾರೆ.

‘ನನಗೆ ಬುದ್ಧಿ ಹೇಳಬೇಕಾದವರು ಕನ್ನಡದ ಜನ. ನನ್ನನ್ನು ಹೆತ್ತ ಜನ. ಯಾರೋ ಒಬ್ಬ ನಟ, ಅವನ ಅಭಿಮಾನಿಗಳು ನನ್ನ ಬಳಿ ಬರಲು ಆಗುವುದಿಲ್ಲ. ನನ್ನನ್ನು ಅವಮಾನ ಮಾಡಲು ಬರಬೇಡಿ. ಇಂಥ ಸ್ಥಿತಿಗತಿಗಳನ್ನು ಶುರು ಮಾಡಿದರೆ ಕನ್ನಡ ಚಿತ್ರರಂಗದಲ್ಲಿ ರೌಡಿಸಂ ಶುರುವಾಗುತ್ತದೆ’ ಎಂದು ಆಕ್ರೋಶ ಹೊರಹಾಕಿದ್ದಾರೆ.

ಸ್ಟಾರ್–ವಾರ್‌ಗೆ ಬೇಸರ: ‘ಇವತ್ತು ಒಬ್ಬ ನಟನ ಚಿತ್ರ ಹಿಟ್ ಆಯಿತು ಅಂದರೆ, ಇನ್ನೊಬ್ಬ ನಟ ಇನ್ನೊಂದು ಹುನ್ನಾರ ಮಾಡುತ್ತಾನೆ. ನಾನೊಬ್ಬನೇ ಉಳಿಯಬೇಕು ಅನ್ನುವುದು ಇದೆ. ಈ ತರಹ ಫೇರಾವ್ ಮಾಡೋದು, ತುಳಿಯುವುದು ದರಿದ್ರ ರಾಜಕಾರಣದಲ್ಲಿ ಇದೆ. ಯಾವುದೋ ಒಂದು ಸಣ್ಣ ವಿಷಯವನ್ನು ಇಟ್ಟುಕೊಂಡು ಜಗ್ಗೇಶ್‌ಗೆ ಅವಮಾನ ಮಾಡುತ್ತೀದ್ದೇವೆ ಅಂತ ನೀವು ಭಾವಿಸಿದ್ದರೆ, ನನಗೆ ಯಾವ ನೋವೂ’ ಇಲ್ಲ ಎಂದು ಹೇಳಿದ್ದಾರೆ.

ಜಗ್ಗೇಶ್

ನಾನು 80ರ ದಶಕದಲ್ಲಿ ಸಿನಿಮಾರಂಗಕ್ಕೆ ಬಂದವನು. ಇವತ್ತಿಗೂ ನಾನು ಬೇರೆ ಭಾಷೆಯತ್ತ ಎಡಗಾಲನ್ನೂ ಇಟ್ಟಿಲ್ಲ. ಬೇರೆ ಭಾಷೆಯವರಿಗೆ ಜಾಲರಿ ಹಿಡಿದಿಲ್ಲ. ಕನ್ನಡ ಕನ್ನಡ ಎಂದು ಸತ್ತಿದ್ದೇನೆ. ಮುಂದೆ ಕೂಡಾ ಸಾಯುತ್ತೇನೆ’ ಎಂದು ಭಾವುಕರಾಗಿ ನುಡಿದಿದ್ದಾರೆ.

‘ಅನ್ಯ ಭಾಷಿಗರೆಲ್ಲಾ ಬಂದು ಕರ್ನಾಟಕವನ್ನು ದಬ್ಬಾಳಿಕೆ ಮಾಡುತ್ತಿದ್ದಾರೆ. ಕನ್ನಡದ ಮಕ್ಕಳನ್ನು ಬೆಳೆಯದಂತೆ ತುಳಿಯುತ್ತಿದ್ದಾರೆ. ನಮ್ಮವರಿಗೆಲ್ಲಾ ಪರಭಾಷೆಯಲ್ಲಿ ಮಾತನಾಡುವಂತೆ ಪ್ರಚೋದನೆ ಕೊಡುತ್ತಿದ್ದಾರೆ. ಅಲ್ಲಿಗೆ ಕನ್ನಡ ಚಿತ್ರರಂಗ ಹಾಳಾಗಿ ಹೋಗಿದೆ. ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಷ್ ಸತ್ತ ಮಾರನೇ ದಿನವೇ ಕನ್ನಡದ ಸ್ವಾಭಿಮಾನವೂ ಸಾಯುತ್ತಿದೆ. ನೆನಪಿಟ್ಟುಕೊಳ್ಳಿ, ಉಳಿದವರು ನಾವೇ ಮೂರು ನಾಲ್ಕು ಜನ. ನಾನು, ಶಿವರಾಜ್‌ಕುಮಾರ್, ರವಿಚಂದ್ರನ್, ರಮೇಶ್. ನಾವೆಲ್ಲಾ ಸತ್ತ ಮೇಲೆ ನಮ್ಮ ತಿಥಿ ಮಾಡಿ. ಆನಂದಪಡಿ’ ಎಂದು ಹೇಳಿದ್ದಾರೆ.

‘ಮೂರುದಿನ ಜನ ಥಿಯೇಟರ್ ಮುಂದೆ ಬರುತ್ತಿದ್ದಾರಲ್ಲಾ, ಅದಲ್ಲ ಜೀವನ. ಒಬ್ಬೊಬ್ಬ ನಿರ್ಮಾಪಕರು ಬೀದಿಗೆ ಬರುತ್ತಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದು ಇಂದಿನ ಸ್ಥಿತಿ’ ಎಂದಿದ್ದಾರೆ.

‘ನನಗೂ ಅಭಿಮಾನಿಗಳ ಸಂಘ ಇದೆ. 162 ಸಂಘಗಳಿವೆ. ಅವರು ಯಾರಿಗೂ ಪ್ರತಿಕ್ರಿಯಿಸದಂತೆ ಹೇಳಿದ್ದೇನೆ. ತಿನ್ನಲು ಅನ್ನವಿಲ್ಲದೆ, ಗೋಣಿ ಚೀಲ ಹಾಸಿಕೊಂಡು ಮಲಗಿ ಕಷ್ಟಪಟ್ಟು ಬೆಳೆದವನು ನಾನು. 40 ವರ್ಷಗಳಲ್ಲಿ 150 ಸಿನಿಮಾ ಮಾಡಿದ್ದೇನೆ. 29 ಚಿತ್ರಗಳನ್ನು ನಿರ್ಮಿಸಿದ್ದೇನೆ. ಎರಡು ಬಾರಿ ಶಾಸಕ ಆಗಿದ್ದೇನೆ. ಎಲ್ಲೂ ಹಲ್ಕಟ್ ಕೆಲಸ ಮಾಡಿಲ್ಲ. ತಲೆ ಹಿಡಿದಿಲ್ಲ. ಕಳ್ಳತನ ಮಾಡಿಲ್ಲ. ಲಂಚ ತಗೊಂಡಿಲ್ಲ. ಪ್ರಾಮಾಣಿಕವಾಗಿ ಬದುಕಿದ್ದೇನೆ. ಅದು ಮಂತ್ರಾಲಯದ ರಾಯರಿಗೆ ಗೊತ್ತು’ ಎಂದು ಹೇಳಿದ್ದಾರೆ.

ಪ್ರತಿಭಟನೆ: ಜಗ್ಗೇಶ್‌ಗೆ ಮುತ್ತಿಗೆ ಹಾಕಿದ ಘಟನೆ ಖಂಡಿಸಿ ಅವರ ಅಭಿಮಾನಿಗಳು ಬೆಂಗಳೂರಿನಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಘಟನೆಯಲ್ಲಿ ಭಾಗಿಯಾದವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

2016, 2019ರಲ್ಲಿ ನಡೆದಿದ್ದ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ

ಆರೋಪಿಗೆ ಜಾಮೀನು: ‘ಸುಪ್ರೀಂ’ ಅಸಮಾಧಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ದ್ವಿತೀಯ ಪಿಯುಸಿ ಹಾಗೂ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಆರೋಪಿಗೆ ರಾಜ್ಯ ಹೈಕೋರ್ಟ್ ಜಾಮೀನು ನೀಡಿದ್ದರ ಬಗ್ಗೆ ಸುಪ್ರೀಂ ಕೋರ್ಟ್ ಮಂಗಳವಾರ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

2016 ಹಾಗೂ 2019ರಲ್ಲಿ ನಡೆದಿದ್ದ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ಆರೋಪಿ ಶಿವಕುಮಾರಯ್ಯ ಅಲಿಯಾಸ್ ಗುರೂಜಿಗೆ 2020ರ ಫೆಬ್ರವರಿ 28ರಂದು ರಾಜ್ಯ ಹೈಕೋರ್ಟ್ ಜಾಮೀನು ನೀಡಿತ್ತು. ಈ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠ ಹೈಕೋರ್ಟ್ ಆದೇಶಕ್ಕೆ ಸಂಬಂಧಿಸಿದಂತೆ ಖಾರವಾಗಿ ಪ್ರತಿಕ್ರಿಯಿಸಿದೆ.

‘ಮಧ್ಯಪ್ರದೇಶದಲ್ಲಿ ನಡೆದ ವ್ಯಾಪಂ ಹಗರಣದಲ್ಲಿ ಏನಾಯಿತು ಎಂಬುದು ನಮಗೆ ಗೊತ್ತು. ಬಿಹಾರದಲ್ಲಿ ಏನಾಯಿತು ಎಂಬುದೂ ಗೊತ್ತು. ದೇಶದಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನು ವಿರೂಪಗೊಳಿಸಿರುವ ಅನೇಕ ಪ್ರಕರಣಗಳ ವಿಚಾರಣೆ ನಡೆಯುತ್ತಿದೆ. ಈ ಕುರಿತು ನಾವು ಸ್ಪಷ್ಟ ಸಂದೇಶ ರವಾನಿಸುತ್ತಿದ್ದೇವೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಆರೋಪಿಗೆ ನೋಟಿಸ್ ಜಾರಿ ಮಾಡಿರುವ ಪೀಠ, ಜಾಮೀನು ಷರತ್ತು ಉಲ್ಲಂಘಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ. ಆರೋಪಿ ಶಿವಕುಮಾರಯ್ಯ ಪದೇಪದೇ ಅಕ್ರಮದಲ್ಲಿ ಭಾಗಿಯಾಗುತ್ತ ಜಾಮೀನಿನ ಷರತ್ತನ್ನು ಉಲ್ಲಂಘಿಸಿದ್ದು, ಅವರಿಗೆ ನೀಡಲಾದ ಜಾಮೀನು ರದ್ದುಪಡಿಸಬೇಕು ಎಂದು ಕೋರಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ತಳ್ಳಿ ಹಾಕಿತ್ತು.

ದ್ವಿತೀಯ ಪಿಯುಸಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಸಹ ಆರೋಪಿ ಓಬಳರಾಜು ವಿರುದ್ಧ ವಿಚಾರಣಾಧೀನ ನ್ಯಾಯಾಲಯ ಹೊರಡಿಸಿದ್ದ ಅಪರಾಧ ಸಂಚಿನ ಆದೇಶವನ್ನು ರದ್ದುಪಡಿಸಿ 2019ರ ಸೆಪ್ಟೆಂಬರ್ 13ರಂದು ಹೈಕೋರ್ಟ್ ನೀಡಿದ್ದ ಆದೇಶಕ್ಕೂ ಇದೇ ವೇಳೆ ನ್ಯಾಯಪೀಠ ತಡೆ ನೀಡಿದೆ.

ದ್ವಿತೀಯ ಪಿಯುಸಿ ರಸಾಯನ ವಿಜ್ಞಾನ ವಿಷಯದ ಪ್ರಶ್ನೆಪತ್ರಿಕೆ ಸೋರಿಕೆ ಆಗಿದ್ದರ ಕುರಿತು ಬೆಂಗಳೂರಿನ ಮಲ್ಲೇಶ್ವರಂ ಪೊಲೀಸ್ ಠಾಣೆಯಲ್ಲಿ 2016ರ ಮಾರ್ಚ್ 22ರಂದು ಪ್ರಕರಣ ದಾಖಲಾಗಿತ್ತು. ಪರೀಕ್ಷೆಯನ್ನು ಮುಂದೂಡಿದ್ದರೂ ಮತ್ತೆ ಪ್ರಶ್ನೆ ಪತ್ರಿಕೆ ಬಹಿರಂಗಗೊಂಡಿದ್ದರಿಂದ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು. ತನಿಖೆ ನಡೆಸಿದ್ದ ಸಿಐಡಿ 18 ಜನರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಬೆಮ್ಮನೆಯ ವ್ಯಕ್ತಿಗೆ ಕೆಎಫ್‌ಡಿ ದೃಢ

ಪ್ರಜಾವಾಣಿ ವಾರ್ತೆ

ನರಸಿಂಹರಾಜಪುರ: ತಾಲ್ಲೂಕಿನ ಸೀತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಮ್ಮನೆ ಗ್ರಾಮದ 64 ವರ್ಷದ ವ್ಯಕ್ತಿಯಲ್ಲಿ ಮಂಗನ ಕಾಯಿಲೆ (ಕೆಎಫ್‌ಡಿ) ದೃಢಪಟ್ಟಿದೆ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ವೀರಪ್ರಸಾದ್ ತಿಳಿಸಿದರು.

ಸೋಂಕಿತ ವ್ಯಕ್ತಿಯು ಜ.20ರಂದು ತೀರ್ಥಹಳ್ಳಿಯ ಅರಗ ಸಮೀಪದ ತೋಟದಲ್ಲಿ ನಡೆದ ಅಡಿಕೆ ಯಂತ್ರೋಪಕರಣ ಕ್ಷೇತ್ರೋತ್ಸವಕ್ಕೆ ಹೋಗಿ ಬಂದಿದ್ದರು. ಜ.26ರಂದು ಜ್ವರ, ಶೀತ ಹಾಗೂ ವಾಂತಿ ಉಲ್ಬಣಿಸಿದ್ದು, ಕೊಪ್ಪ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಜ್ವರ ಕಡಿಮೆಯಾಗದ ಕಾರಣ ತೀರ್ಥಹಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ಸದ್ಯ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ರಘುನಾಥ್, ಈರಪ್ಪಗೆ ವೀಚಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ತುಮಕೂರು: 2020ನೇ ಸಾಲಿನ ವೀಚಿ ಸಾಹಿತ್ಯ ಪ್ರಶಸ್ತಿಗೆ ಲೇಖಕ ಹಾಗೂ ‘ಸುಧಾ’ ಸಂಪಾದಕರಾದ ಚ.ಹ.ರಘುನಾಥ್ ಅವರ ‘ಬೆಳ್ಳಿತೊರೆ (ಸಿನಿಮಾ ಪ್ರಬಂಧಗಳು) ಹಾಗೂ ಲೇಖಕ ಈರಪ್ಪ ಎಂ.ಕಂಬಳಿ ಅವರ ‘ಶೌಚಾಲಯ ತಪಸ್ವಿ ಮತ್ತು ಇತರ ಪ್ರಬಂಧಗಳು’ ಕೃತಿಗಳು ಆಯ್ಕೆ ಆಗಿವೆ.

ಪ್ರಶಸ್ತಿಯು ₹25 ಸಾವಿರ ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ. ಪ್ರಶಸ್ತಿ ಮೊತ್ತವನ್ನು ಇಬ್ಬರೂ ಲೇಖಕರಿಗೆ ಸಮಾನವಾಗಿ ಹಂಚಿಕೆ ಮಾಡಲಾಗುತ್ತದೆ ಎಂದು ವೀಚಿ ಸಾಹಿತ್ಯ ಪ್ರತಿಷ್ಠಾನದ ಕಾರ್ಯದರ್ಶಿ ಎಂ.ಎಚ್. ನಾಗರಾಜು ತಿಳಿಸಿದ್ದಾರೆ.

ಕವಿ ವಿ.ಎ.ಲಕ್ಷ್ಮಣ್ ಅವರ ‘ಅಪ್ಪನ ಅಂಗಿ’ ಕವನ ಸಂಕಲನ ಉದಯೋನ್ಮುಖ ವೀಚಿ ಸಾಹಿತ್ಯ ಪ್ರಶಸ್ತಿಗೆ ಆಯ್ಕೆಯಾಗಿದೆ. ಪ್ರಶಸ್ತಿಯು ₹5 ಸಾವಿರ ನಗದು, ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

'ಯಶೋಗಾಥೆ' ಸಂಚಿಕೆಯನ್ನು ಸಚಿವ ಸುರೇಶ್ ಕುಮಾರ್ ಬಿಡುಗಡೆ ಮಾಡಿದರು. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಿರ್ದೇಶಕಿ ವಿ. ಸುಮಂಗಲ ಮತ್ತು ಕಾರ್ಯದರ್ಶಿ ಕೆಂಪರಾಜು ಇದ್ದರು –ಪ್ರಜಾವಾಣಿ ಚಿತ್ರ

ಕೋವಿಡ್: 7.24 ಲಕ್ಷ ಮಂದಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 27,260 ಮಂದಿ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ. ಇದರಿಂದಾಗಿ ಈವರೆಗೆ ಲಸಿಕೆ ಪಡೆದವರ ಸಂಖ್ಯೆ 7 ಲಕ್ಷದ ಗಡಿ (7.24 ಲಕ್ಷ) ದಾಟಿದೆ.

ಮೊದಲ ಹಾಗೂ ಎರಡನೇ ಡೋಸ್ ಲಸಿಕೆ ಪಡೆಯಲು 58,741 ಮಂದಿಯನ್ನು ಗುರುತಿಸಲಾಗಿತ್ತು. ಅವರಲ್ಲಿ ಶೇ 46ರಷ್ಟು ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ. ಲಸಿಕೆ ಪಡೆದವರಲ್ಲಿ ಯಾರಲ್ಲಿಯೂ ತೀವ್ರ ಮತ್ತು ಗಂಭೀರ ಸ್ವರೂಪದ ಅಡ್ಡ ಪರಿಣಾಮಗಳು ಕಾಣಿಸಿಕೊಂಡಿಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಲಸಿಕೆ ವಿತರಣೆ ಪ್ರಾರಂಭವಾದಾಗಿನಿಂದ ಈವರೆಗೆ ನಿಗದಿಪಡಿಸಲಾಗಿದ್ದ 7,28,349 ಆರೋಗ್ಯ ಕಾರ್ಯಕರ್ತರಲ್ಲಿ 4,33,496 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಇದರಿಂದ ಶೇ 60 ರಷ್ಟು ಗುರಿ ಸಾಧ್ಯವಾಗಿದೆ. ಇವರಲ್ಲಿ 1.54 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ. 2,91,037 ಮುಂಚೂಣಿ ಯೋಧರನ್ನು ಈವರೆಗೆ ಲಸಿಕೆ ಪಡೆಯಲು ಗುರುತಿಸಲಾಗಿತ್ತು. ಅವರಲ್ಲಿ 1,36,188 ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ. ಇದರಿಂದ ಶೇ 47ರಷ್ಟು ಗುರಿ ಸಾಧ್ಯವಾಗಿದೆ.

383 ಮಂದಿಗೆ ಸೋಂಕು: ರಾಜ್ಯದಲ್ಲಿ ಹೊಸದಾಗಿ 383 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟುಸಂಖ್ಯೆ 9.48 ಲಕ್ಷ ದಾಟಿದೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಬೆಂಗಳೂರಿನಲ್ಲಿ 240 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.04 ಲಕ್ಷ ದಾಟಿದೆ.

‘ಅಂತರರಾಜ್ಯ ಪ್ರಯಾಣ ನಿಷೇಧಿಸಿಲ್ಲ’

ಬೆಂಗಳೂರು: ‘ಕರ್ನಾಟಕ ಮತ್ತು ಕೇರಳ ನಡುವಿನ ಅಂತರರಾಜ್ಯ ಪ್ರಯಾಣವನ್ನು ನಿಷೇಧಿಸಿಲ್ಲ. ಆದರೆ, ಮುಂಜಾಗ್ರತಾ ಕ್ರಮವಾಗಿ ಅಲ್ಲಿಂದ ಇಲ್ಲಿಗೆ ಬರುವವರು ಕಡ್ಡಾಯವಾಗಿ 72 ಗಂಟೆಗೂ ಹಳೆಯದಲ್ಲದ ಕೋವಿಡ್ ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿಯನ್ನು ಹೊಂದಿರಬೇಕು’ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಸ್ಪಷ್ಟಪಡಿಸಿದ್ದಾರೆ.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು, ‘ಕರ್ನಾಟಕ ಸರ್ಕಾರವು ಕಠಿಣವಾದ ನಿರ್ಬಂಧವನ್ನು ವಿಧಿಸಿದ ಪರಿಣಾಮ ಇಲ್ಲಿಂದ ಅಲ್ಲಿಗೆ ತೆರಳುವ ವಿದ್ಯಾರ್ಥಿಗಳು, ರೋಗಿಗಳು ಹಾಗೂ ಅಗತ್ಯ ಸರಕುಗಳನ್ನು ಸಾಗಿಸುವ ವಾಹನಗಳು ಗಡಿಯಲ್ಲಿ ಸಮಸ್ಯೆ ಎದುರಿಸುತ್ತಿವೆ. ಅಂತರರಾಜ್ಯ ಪ್ರಯಾಣಕ್ಕೆ ನಿರ್ಬಂಧ ಹೇರಿರುವುದು ಕೇಂದ್ರ ಸರ್ಕಾರದ ಸೂಚನೆಗೆ ವಿರುದ್ಧವಾಗಿದೆ. ಈ ಸಂಬಂಧ ತಾವು ಮಧ್ಯಪ್ರವೇಶಿಸಿ, ಸಮಸ್ಯೆ ಬಗೆಹರಿಸಬೇಕು’ ಎಂದು ಮನವಿ ಮಾಡಿಕೊಂಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಸುಧಾಕರ್, ಹೋಟೆಲ್, ರೆಸಾರ್ಟ್, ಹಾಸ್ಟೆಲ್, ಹೋಂ ಸ್ಟೇಗಳು ಸೇರಿದಂತೆ ವಿವಿಧೆಡೆ ಕೇರಳದಿಂದ ಹಿಂದಿರುಗುವವರಿಗೆ ಪ್ರವೇಶ ನೀಡುವ ಮುನ್ನ ಕೋವಿಡ್ ನೆಗೆಟಿವ್ ವರದಿಯನ್ನು ಖಾತರಿಪಡಿಸಿಕೊಳ್ಳುವುದು ಕಡ್ಡಾಯ ಎಂದು ಸೂಚಿಸಲಾಗಿದೆ. ಪ್ರಯಾಣಕ್ಕೂ ಮೊದಲಿನ 72 ಗಂಟೆಗಳ ಅವಧಿಯಲ್ಲಿ ನಡೆಸಲಾದ ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ಹೊಂದಿದ್ದಲ್ಲಿ ಸಮಸ್ಯೆಯಾಗದು ಎಂದು ಆರೋಗ್ಯ ಇಲಾಖೆ ಹೊರಡಿಸಿದ ಮಾರ್ಗಸೂಚಿ ಸಹಿತ ಟ್ವೀಟ್ ಮಾಡಿದ್ದಾರೆ.



ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹೇಳಿಕೆ

₹51.49 ಕೋಟಿ ಎಂಡಿಎ, ಪ್ರೋತ್ಸಾಹ ಮಜೂರಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ಸರ್ಕಾರದಿಂದ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ (ಎಂಡಿಎ) ಮತ್ತು ಪ್ರೋತ್ಸಾಹ ಮಜೂರಿ ಬಾಕಿ ₹105 ಕೋಟಿ ಬರಬೇಕಿದೆ. ಈ ಪೈಕಿ, ₹51.49 ಕೋಟಿ ಬಿಡುಗಡೆಗೆ ಹಣಕಾಸು ಇಲಾಖೆ ಅನುಮೋದನೆ ನೀಡಿದ್ದು, ಈ ತಿಂಗಳಾಂತ್ಯದಲ್ಲಿ ಬಿಡುಗಡೆಯಾಗಲಿದೆ’ ಎಂದು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಯವಿಭವ ಸ್ವಾಮಿ ಹೇಳಿದರು.

‘ಕೊರೊನಾದಿಂದಾಗಿ ಅಂದಾಜು ₹280 ಕೋಟಿ ಮೊತ್ತದ ಖಾದಿ ಉತ್ಪನ್ನಗಳು ಮಾರಾಟವಾಗಿಲ್ಲ. ಈ ವರ್ಷ ರಾಜ್ಯದ 15 ನಗರಗಳಲ್ಲಿ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಿ, ಉತ್ಪನ್ನಗಳ ಮಾರಾಟ ಚುರುಕುಗೊಳಿಸಲು ಯೋಜನೆ ರೂಪಿಸಲಾಗಿದೆ. ಕೋವಿಡ್–19 ಮಾರ್ಗಸೂಚಿಗಳನ್ನು ನೋಡಿಕೊಂಡು ಬೆಂಗಳೂರಿನಲ್ಲಿ ಮಾರ್ಚ್ ಅಂತ್ಯಕ್ಕೆ 30 ದಿನಗಳ ರಾಷ್ಟ್ರೀಯ ಖಾದಿ ಮೇಳ ಹಮ್ಮಿಕೊಳ್ಳಲಾಗುವುದು’ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಯವಿಭವ ಸ್ವಾಮಿ ಮಾತನಾಡಿದರು. ಕೃಷ್ಣಪ್ಪಗೌಡ ಎನ್. ಆರ್. ಇದ್ದಾರೆ

ಇ– ಮಾರುಕಟ್ಟೆ: ‘ಇ-ಮಾರುಕಟ್ಟೆಯಲ್ಲಿ ಖಾದಿ ಉತ್ಪನ್ನಗಳನ್ನು ಮಾರಾಟ ಮಾಡಲು ನಿರ್ಧರಿಸಲಾಗಿದೆ. ಅಮೆಜಾನ್, ಫ್ಲಿಪ್‌ಕಾರ್ಟ್ ಸೇರಿದಂತೆ ಆನ್‌ಲೈನ್ ವಹಿವಾಟು ನಡೆಸುವ ಕಂಪನಿಗಳ ಜತೆ ಮಾತುಕತೆ ನಡೆಸಲಾಗಿದೆ. ಆನ್‌ಲೈನ್ ವೇದಿಕೆಯನ್ನೂ ಖಾದಿ ಉತ್ಪನ್ನಗಳು ಪ್ರವೇಶಿಸಲಿವೆ’ ಎಂದರು.

‘ಮಂಡಳಿಯಲ್ಲಿ ನೋಂದಣಿಯಾಗಿರುವ 207 ಖಾದಿ ಉತ್ಪನ್ನ ಸಂಸ್ಥೆಗಳಿದ್ದು, ಸುಮಾರು 10 ಸಾವಿರ ಮಂದಿ ಉತ್ಪಾದನೆಯಲ್ಲಿ ತೊಡಗಿಕೊಂಡಿದ್ದಾರೆ. ಈ ಪೈಕಿ ಶೇ 85ರಷ್ಟು ಮಹಿಳೆಯರಿದ್ದು, ಬಹುತೇಕರು ಐವತ್ತು ವರ್ಷ ಮೀರಿದವರಾಗಿದ್ದಾರೆ. ಯುವಜನರನ್ನು ಈ ಕೆಲಸದತ್ತ ಸೆಳೆಯಲು ತರಬೇತಿ ಯೋಜನೆ ರೂಪಿಸಲಾಗಿದೆ’ ಎಂದು ಹೇಳಿದರು.

‘ಸಂಘಗಳ ಆಸ್ತಿ ರಕ್ಷಣೆ ಒತ್ತು’

ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷ ಕೃಷ್ಣಪ್ಪ ಗೌಡ ಎನ್. ಆರ್. ಮಾತನಾಡಿ, ‘ರಾಜ್ಯದಾದ್ಯಂತ ಇರುವ ಖಾದಿ ಸಂಘಗಳ ಆಸ್ತಿ ರಕ್ಷಣೆ ಒತ್ತು ನೀಡಲಾಗುವುದು. ಜಿಲ್ಲಾ ಮಟ್ಟದಲ್ಲಿ ಸ್ವಂತ ಕಚೇರಿ ಸ್ಥಾಪಿಸಲಾಗುವುದು. ಬೆಂಗಳೂರು, ಮೈಸೂರು ಹಾಗೂ ಬಳ್ಳಾರಿ ನಗರಗಳಲ್ಲಿ ಖಾದಿ ಅರ್ಬನ್ ಪ್ಲಾಜಾ ಸ್ಥಾಪಿಸಲು ಚಿಂತನೆ ನಡೆಸಲಾಗುತ್ತಿದೆ’ ಎಂದರು.

‘ಮಂಡಳಿಗೆ ಬರಬೇಕಾದ ಬಾಕಿ ಹಣವನ್ನು ಈ ಸಲದ ಬಜೆಟ್‌ನಲ್ಲಿ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಕೋರಲಾಗುವುದು. ಸದ್ಯ ಖಾದಿ ನೂಲುವವರಿಗೆ ಪ್ರತಿ ಮೀಟರ್ ನೀಡುತ್ತಿರುವ ಪ್ರೋತ್ಸಾಹ ಮಂಜೂರಿಯನ್ನು ದ್ವಿಗುಣಗೊಳಿಸಲು ಸರ್ಕಾರಕ್ಕೆ ಮನವಿ ಮಾಡಲಾಗುವುದು’ ಎಂದು ಹೇಳಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯ ‘ಯಶೋಗಾಥೆ’ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಬಿಕ್ಕಟ್ಟಿನ ನಡುವೆಯೇ ನಡೆದ 2019–20ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಯಶಸ್ಸಿಗೆ ಸಂಬಂಧಿಸಿದಂತೆ ಹೊರತಂದ ‘ಯಶೋಗಾಥೆ’ ಸಂಚಿಕೆಯನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಬಿಡುಗಡೆ ಮಾಡಿದರು.

ಸಮಗ್ರ ಶಿಕ್ಷಣ ಇಲಾಖೆಯ ಸಭಾಂಗಣದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ‘ಕೊರೊನಾದಂಥ ವಿಷಮ ಕಾಲಘಟ್ಟ ಎದುರಾದರೆ ಹೇಗೆ ಪರೀಕ್ಷೆ ನಡೆಸಬಹುದೆಂಬುದಕ್ಕೆ ಇದು ಮಾರ್ಗದರ್ಶಿ’ ಎಂದರು.

ಇದೇ ಸಂದರ್ಭದಲ್ಲಿ ಅವರು, ಕೋವಿಡ್ ಕಾರಣದಿಂದ ಮಕ್ಕಳ ಸುರಕ್ಷತೆ ಮತ್ತು ಪರೀಕ್ಷಾ ಪಾರದರ್ಶಕತೆ ಕಾಪಾಡಿಕೊಂಡು ನಡೆಸಿದ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಸಾಕ್ಷ್ಯಚಿತ್ರ ‘ವಿದ್ಯಾ ಸಂಜೀವಿನಿ’ ಬಿಡುಗಡೆ ಮಾಡಿದರು. ಅಲ್ಲದೆ, ಮೂರು ವರ್ಷಗಳಲ್ಲಿ ಕರ್ನಾಟಕ ಪರೀಕ್ಷಾ ಮಂಡಳಿ ಡಿಜಿಟಲ್ ಪ್ರಕ್ರಿಯೆಗೆ ತೆರೆದುಕೊಂಡಿರುವುದನ್ನು ಅನಾವರಣಗೊಳಿಸುವ ‘ಡಿಜಿಟಲ್ ಕ್ರಾಂತಿಕಿರಣ’ ಸಾಕ್ಷ್ಯಚಿತ್ರ ಮತ್ತು 2020ರ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶದ ವಿಶ್ಲೇಷಣೆಯ ವಿವರಗಳನ್ನು ಒಳಗೊಂಡ ಫಲಿತಾಂಶ ವಿಶ್ಲೇಷಣೆ ಮತ್ತು ಮುಂದಿನ ವರ್ಷದ ಕ್ರಿಯಾ ಯೋಜನೆ ವಿವರಗಳ ‘ಅನಾವರಣ’ ಸಂಚಿಕೆಯನ್ನೂ ಬಿಡುಗಡೆ ಮಾಡಿದರು.

ಕಡತ ವಿಲೇವಾರಿ: ‘ಬಿಇಒ ಮತ್ತು ಡಿಡಿಪಿಐ ಕಚೇರಿಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಕಡತಗಳು ದೂಳು ತಿನ್ನುತ್ತಿವೆ’ ಎಂಬ ಶಾಲಾ ಆಡಳಿತ ಮಂಡಳಿಗಳು ಆರೋಪಿಸುತ್ತಿವೆ. ಅದನ್ನು ತಡೆಯಲು ಮಾರ್ಚ್ ಒಂದರಿಂದ ವಿಭಾಗ ಮಟ್ಟ ಮತ್ತು ನಂತರ ಜಿಲ್ಲಾ ಮಟ್ಟದಲ್ಲಿ ಕಡತ ವಿಲೇವಾರಿ ಆಂದೋಲನ ನಡೆಸಲಾಗುವುದು’ ಎಂದು ಸಚಿವರು ಹೇಳಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ: 8.51 ಲಕ್ಷ ವಿದ್ಯಾರ್ಥಿಗಳಿಂದ ನೋಂದಣಿ

‘ಪ್ರಸಕ್ತ ವರ್ಷ 8.51 ಲಕ್ಷ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಸುಮಾರು 3 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆ ಬರೆಯಲಿದ್ದಾರೆ’ ಎಂದು ಸುರೇಶ್ ಕುಮಾರ್ ಹೇಳಿದರು. ‘ಕಳೆದ ವರ್ಷ ಕೋವಿಡ್ ನಡುವೆಯೇ ದೇಶಕ್ಕೆ ಮಾದರಿಯಾಗುವಂತೆ ಪರೀಕ್ಷೆ ನಡೆಸಿದ್ದೇವೆ. ಈ ವರ್ಷದ ಪರೀಕ್ಷೆ ಇನ್ನು ಉತ್ತಮ ರೀತಿಯಲ್ಲಿ ನಡೆಸುವ ಸವಾಲು ನಮ್ಮ ಮುಂದಿದೆ. ಈಗಾಗಲೇ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿ ಪ್ರಕಟಿಸಿದ್ದು, ಇದೇ 25ರ ಬಳಿಕ ಅಂತಿಮ ವೇಳಾಪಟ್ಟಿ ಬಿಡುಗಡೆ ಮಾಡಲಾಗುವುದು’ ಎಂದರು.

ಮತ್ತೆ ಸಭೆ: ‘ಶಾಲೆಗಳಲ್ಲಿ 1ರಿಂದ 5ನೇ ತರಗತಿ ಆರಂಭ ಸಂಬಂಧ ಈ ವಾರದಲ್ಲಿ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸಲಹೆ ಪಡೆದು ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದರು.

ಮಾಧ್ಯಮಗಳಿಗೆ ನಿಷೇಧ ಇಲ್ಲ: ವಿವೇಚನೆ ಬಳಸಲು ಸಲಹೆ

ಮೇಲ್ಮನೆಯಲ್ಲಿ ಮೊಬೈಲ್ ನಿಷೇಧ: ಹೊರಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ತಿನ ಒಳಗೆ ಮೊಬೈಲ್ ಫೋನ್‌ಗಳನ್ನು ತರುವುದಕ್ಕೆ ನಿಷೇಧ ವಿಧಿಸುವುದೂ ಸೇರಿ ಕೆಲವು ಕಟ್ಟುನಿಟ್ಟಿನ ನಿಯಮಾವಳಿಗಳನ್ನು ಜಾರಿಗೆ ತರಲಾಗುವುದು ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

‘ಸುದ್ದಿವಾಹಿನಿಗಳ ಕ್ಯಾಮೆರಾಗಳ ಪ್ರವೇಶಕ್ಕೆ ನಿರ್ಬಂಧ ಇರುವುದಿಲ್ಲ. ಆದರೆ, ಅವರು ವಿವೇಕ ಮತ್ತು ವಿವೇಚನೆಯಿಂದ ಕಾರ್ಯನಿರ್ವಹಿಸಬೇಕು’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು.

‘ಕೆಲವು ಸಣ್ಣ ಪುಟ್ಟ ಘಟನೆಗಳನ್ನೇ ದೊಡ್ಡದಾಗಿ ಇಡೀ ದಿನ ಟಿ.ವಿಗಳಲ್ಲಿ ತೋರಿಸಲಾಗುತ್ತದೆ. ಸದನದಲ್ಲಿ ಸಾಕಷ್ಟು ಜ್ವಲಂತ ಸಮಸ್ಯೆಗಳ ಬಗ್ಗೆ ಗಂಭೀರ ಚರ್ಚೆ ನಡೆಸಿದರೂ ಅದರ ಬಗ್ಗೆ ಯಾವುದೇ ಮಾಹಿತಿ ನೀಡುವುದಿಲ್ಲ. ಸಣ್ಣ ಪುಟ್ಟ ತಪ್ಪುಗಳು ಆಗುತ್ತವೆ. ಆ ಬಗ್ಗೆ ಎಚ್ಚರಿಕೆ ನೀಡುವುದು ಮಾಧ್ಯಮಗಳ ಕರ್ತವ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಇಡೀ ಸದನವೇ ಸರಿಯಾಗಿ ನಡೆಯುತ್ತಿಲ್ಲ ಎಂಬಂತೆ ಬಿಂಬಿಸುವುದು ಸರಿಯಲ್ಲ’ ಎಂದು ಹೊರಟ್ಟಿ ಹೇಳಿದರು.



ಹೀಗೆಂದ ಮಾತ್ರಕ್ಕೆ ಮಾಧ್ಯಮವನ್ನು ದೂರ ಇಡುವುದೂ ಇಲ್ಲ, ನಿಷೇಧ ವಿಧಿಸುವುದಿಲ್ಲ. ಹೆಚ್ಚು ಸ್ವಯಂ ನಿಯಂತ್ರಣ ಮತ್ತು ವಿವೇಕದಿಂದ ಕಾರ್ಯ ನಿರ್ವಹಿಸಬೇಕು ಎಂಬುದಷ್ಟೇ ನಮ್ಮ ಕಾಳಜಿ. ಕೆಲವು ಸದಸ್ಯರಿಗೆ ಮಧ್ಯಾಹ್ನ ಊಟ ಮಾಡಿ ಬಂದ ನಂತರ ವಯೋ ಸಹಜವಾಗಿ, ನಿದ್ದೆ ಅಥವಾ ತೂಕಡಿಕೆ ಬರುತ್ತದೆ. ಅದನ್ನು ಲಘುವಾಗಿ ತೋರಿಸಲಾಗುತ್ತದೆ ಎಂದು ಬೇಸರಿಸಿದರು.

ವಿಧಾನಪರಿಷತ್ ಅಧಿವೇಶನವೂ ಮಾ.4 ರಿಂದಲೇ ನಡೆಯುತ್ತದೆ. ಆದರೆ ‘ಒಂದು ದೇಶ ಮತ್ತು ಒಂದು ಚುನಾವಣೆ’ ವಿಚಾರವಾಗಿ ಚರ್ಚೆ ನಡೆಸುವ ಸಂಬಂಧ ಸರ್ಕಾರದಿಂದ ಯಾವುದೇ ಮಾಹಿತಿ ಬಂದಿಲ್ಲ. ನಾವು ಪ್ರಶ್ನೋತ್ತರ ಮತ್ತು ಇತರ ಕಲಾಪಗಳನ್ನು ನಡೆಸಲು ತೀರ್ಮಾನಿಸಿದ್ದೇವೆ ಎಂದು ಹೊರಟ್ಟಿ ಹೇಳಿದರು.

‘ಮೀಸಲಾತಿಗೆ ಬಡತನವೇ ಮಾನದಂಡವಾಗಲಿ’

ಇಂದಿನ ದಿನಗಳಲ್ಲಿ ಕುಟುಂಬಗಳ ಆರ್ಥಿಕ ವ್ಯವಸ್ಥೆಯನ್ನು ನೋಡಿ ಮೀಸಲಾತಿ ನಿಗದಿ ಮಾಡಬೇಕು. ಆಗ ಎಲ್ಲ ಸಮುದಾಯಗಳ ಬಡವರಿಗೂ ನ್ಯಾಯ ಸಿಗುತ್ತದೆ ಎಂದು ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಸ್ವಾಮೀಜಿಗಳು ಬೀದಿಗಿಳಿದು ಹೋರಾಟ ಮಾಡುತ್ತಿರುವ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸುವುದಿಲ್ಲ. ಅವರು (ಮಠಾಧೀಶರು) ದೊಡ್ಡವರು, ಅವರ ಬಗ್ಗೆ ಮಾತನಾಡದೇ ಇರುವುದೇ ಒಳ್ಳೆಯದು ಎಂದರು.

ರಾಜ್ಯದಲ್ಲಿ 1.38 ಕೋಟಿ ಬಿಪಿಎಲ್ ಕಾರ್ಡ್‌ದಾರರು ಇದ್ದಾರೆ. ಆದರೆ ಅಷ್ಟೂ ಜನ ಕಡುಬಡವರು ಎಂದು ಹೇಳಲು ಆಗಲ್ಲ. 50 ಲಕ್ಷ ಜನ ಕಡುಬಡವರು ಇರಬಹುದು. ಅವರಿಗೆ ನ್ಯಾಯ ಸಿಗಬೇಕು. ಮೀಸಲಾತಿಗೆ ಬಡತನವೇ ಅಳತೆಗೋಲಾಗಬೇಕು ಎಂದು ಅವರು ಪ್ರತಿಪಾದಿಸಿದರು.

ಸರ್ಕಾರದ ವಿರುದ್ಧ ಹೋರಾಟ ‘ಕೈ’ ನಾಯಕರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವೈಫಲ್ಯಗಳನ್ನು ಎತ್ತಿ ತೋರಿಸಿ ಮುಂದಿನ ದಿನಗಳಲ್ಲಿ ನಿರಂತರ ಹೋರಾಟಗಳನ್ನು ಹಮ್ಮಿಕೊಳ್ಳಲು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ನಿವಾಸದಲ್ಲಿ ಮಂಗಳವಾರ ನಡೆದ ಪಕ್ಷದ ಪ್ರಮುಖರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಶಾಸಕರಾದ ಕೆ.ಆರ್. ರಮೇಶ್ ಕುಮಾರ್, ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್, ವಿಧಾನಪರಿಷತ್ ಸದಸ್ಯ ನಸೀರ್ ಅಹಮದ್ ಮತ್ತಿತರ ನಾಯಕರು ಸಭೆಯಲ್ಲಿದ್ದರು.

‘ಮುಂದಿನ ದಿನಗಳಲ್ಲಿ ಹೋರಾಟದಲ್ಲಿ ಯಾವ ವಿಚಾರಗಳನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ರಮೇಶ್ ಕುಮಾರ್, ದಿನೇಶ್ ಗುಂಡೂರಾವ್ ಮತ್ತು ಇತರ ನಾಯಕರ ಜತೆ ಚರ್ಚೆ ನಡೆಸಿದ್ದೇವೆ. ನಾನೂ ರಾಜ್ಯದಾದ್ಯಂತ ಪ್ರವಾಸ ಮಾಡುತ್ತೇನೆ. ವಿಧಾನಮಂಡಲ ಅಧಿವೇಶನದ ದಿನಗಳಿಗೆ ಅಡ್ಡಿಯಾಗದಂತೆ ಪ್ರವಾಸ ಸ್ವರೂಪದ ಬಗ್ಗೆ ಚರ್ಚೆ ಮಾಡಿದ್ದೇವೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಮೈಸೂರು ಮೇಯರ್ ಸ್ಥಾನದ ವಿಷಯದಲ್ಲಿ ಪ್ರತಿಕ್ರಿಯಿಸಿದ ಅವರು, ‘ಈ ಹಿಂದೆ ನಾವು ಜೆಡಿಎಸ್ ಜತೆ ಒಪ್ಪಂದ ಮಾಡಿಕೊಂಡಿದ್ದೆವು. ಕಾಂಗ್ರೆಸ್‌ಗೆ ಎರಡು ವರ್ಷ, ಜೆಡಿಎಸ್‌ಗೆ ಮೂರು ವರ್ಷ ಎನ್ನುವ ರೀತಿ ಮೈತ್ರಿ ಮಾಡಿಕೊಳ್ಳಲಾಗಿತ್ತು. ಆದರೆ, ಈಗ ಸ್ಥಳೀಯ ನಾಯಕರಿಗೆ ಈ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳುವ ಸ್ವಾತಂತ್ರ್ಯ ನೀಡಿದ್ದೇವೆ. ಅವರು ಯಾವ ನಿರ್ಧಾರಕ್ಕೆ ಬರುತ್ತಾರೊ ಅದಕ್ಕೆ ನಾವು ಬೆಂಬಲ ನೀಡುತ್ತೇವೆ. ಜಾತ್ಯತೀತ ಪಕ್ಷ ನಮ್ಮ ಜತೆ ಇರಬೇಕು ಎಂದು ಬಯಸುತ್ತೇವೆ’ ಎಂದರು.

‘ಬಡವರಿಗೆ ಪೆಟ್ ಸ್ಕ್ಯಾನ್ ಉಚಿತ’

ಒಂದನೇ ಪುಟದಿಂದ

‘ಕ್ಯಾನ್ಸರ್, ಹೃದಯ ಹಾಗೂ ಮಿದುಳು ಸಂಬಂಧಿ ಕಾಯಿಲೆಗಳನ್ನು ಪತ್ತೆಹಚ್ಚಲು ಪೆಟ್ ಸ್ಕ್ಯಾನ್ ಸಹಕಾರಿ. ಇದಕ್ಕಾಗಿ ವಿಶ್ವದ ವಿವಿಧೆಡೆ ಸುಮಾರು ₹30 ಸಾವಿರ ಶುಲ್ಕ ಪಡೆಯಲಾಗುತ್ತಿದೆ. ನಮ್ಮಲ್ಲಿ ಕೇವಲ ₹8 ಸಾವಿರ ಪಾವತಿಸಿ ಈ ಪರೀಕ್ಷೆ ಮಾಡಿಸಿಕೊಳ್ಳಬಹುದು. ಬಡ ವರ್ಗದವರಿಗೆ ಇದು ಉಚಿತ’ ಎಂದರು.

‘ಕಿದ್ವಾಯಿ ಆಸ್ಪತ್ರೆಯನ್ನು ದೇಶದಲ್ಲೇ ಮಾದರಿಯನ್ನಾಗಿ ರೂಪಿಸುವುದು ನಮ್ಮ ಗುರಿ. ಹೀಗಾಗಿ ಕಾರ್ಪೊರೇಟ್ ಕಂಪನಿಗಳ ಸಹಯೋಗದಲ್ಲಿ ಕಟ್ಟಡ ನವೀಕರಣ ಮಾಡಲಾಗುತ್ತಿದೆ. ಹಾಸಿಗೆ ಸಾಮರ್ಥ್ಯವನ್ನು ಈಗಿನ 650 ರಿಂದ 1,000ಕ್ಕೆ ಹೆಚ್ಚಿಸುತ್ತಿದ್ದೇವೆ. ಜೂನ್ ವೇಳೆಗೆ ಈ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆ ಇದೆ’ ಎಂದೂ ಹೇಳಿದರು.

ಅಂತರ ಕಾಯ್ದುಕೊಳ್ಳಲು ಹಿಂದೇಟು; ಲೋಕಲ್ ಸರ್ಕಲ್ ಸಮೀಕ್ಷೆಯಲ್ಲಿ ಉಲ್ಲೇಖ

ಮಾಸ್ಕ್ ಧರಿಸಲು ಜನರ ಅಸಡ್ಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ನಿಯಮಾವಳಿಗಳನ್ನು ಅನುಸರಿಸುವಲ್ಲಿ ದೇಶದ ಜನರು ಉದಾಸೀನತೆ ತೋರುತ್ತಿದ್ದಾರೆ. ಮಾಸ್ಕ್ ಧರಿಸುವುದು ಮತ್ತು ಅಂತರವನ್ನು ಕಾಪಾಡಿಕೊಳ್ಳುವ ಸೂಚನೆಗಳನ್ನು ಪಾಲಿಸುವವರ ಪ್ರಮಾಣ ಕಡಿಮೆ ಎಂಬ ಅಂಶಗಳು 'ಲೋಕಲ್ ಸರ್ಕಲ್' ನಡೆಸಿದ ಸಮೀಕ್ಷೆಯಲ್ಲಿ ಕಂಡುಬಂದಿವೆ.

ಸಮೀಕ್ಷೆಯಲ್ಲಿ ಭಾಗವಹಿಸಿದವರ ಪೈಕಿ ಮಾಸ್ಕ್ ಧರಿಸುವಿಕೆ ಪರಿಣಾಮಕಾರಿಯಾಗಿ ನಡೆಯುತ್ತಿದೆ ಎಂದು ಹೇಳಿದವರ ಪ್ರಮಾಣ ಶೇ 30 ಮಾತ್ರ. ಕಳೆದ ಸೆಪ್ಟೆಂಬರ್‌ನಲ್ಲಿ ಹೀಗೆಂದವರ ಪ್ರಮಾಣ ಶೇ 67 ಇತ್ತು. ವ್ಯಕ್ತಿಗತ ಅಂತರವನ್ನು ಪರಿಣಾಮಕಾರಿಯಾಗಿ ಪಾಲಿಸಲಾಗುತ್ತಿದೆ ಎಂದವರ ಪ್ರಮಾಣ 12% ಮಾತ್ರ.

ಸ್ಥಳದ ಆಧಾರದ ಮೇಲೆ ದತ್ತಾಂಶವನ್ನು ವಿಶ್ಲೇಷಿಸಿದಾಗ, ಮೊದಲ ಹಂತದ ನಗರಗಳಲ್ಲಿ ಮಾಸ್ಕ್ ನಿಯಮ ಪಾಲನೆ ಪರಿಣಾಮಕಾರಿಯಾಗಿ ಆಗುತ್ತಿದೆ ಎಂದು ಹೇಳಿದ ನಾಗರಿಕರು ಶೇ 35ರಷ್ಟು ಇದ್ದಾರೆ. ಎರಡನೇ ಶ್ರೇಣಿಯ ನಗರಗಳಲ್ಲಿ ಪರಿಣಾಮಕಾರಿ ಎಂದು ಹೇಳಿದವರು ಶೇ 29%. ಮೂರನೇ ಹಾಗೂ ನಾಲ್ಕನೇ ಹಂತದ ನಗರಗಳು ಮತ್ತು ಗ್ರಾಮೀಣ ಭಾಗದಲ್ಲಿ ಹೀಗೆ ಹೇಳಿದವರ ಪ್ರಮಾಣ ಶೇ 19ರಷ್ಟು.

ಮಹಾನಗರಗಳಿಗೆ ಹೋಲಿಸಿದರೆ ನಗರ ಮತ್ತು ಗ್ರಾಮೀಣ ಭಾರತದಲ್ಲಿ ಮಾಸ್ಕ್ ಧರಿಸುವಿಕೆಯು ಕಡಿಮೆಯಾಗುತ್ತಿದೆ ಎಂದು ಈ ದತ್ತಾಂಶಗಳು ಸೂಚಿಸುತ್ತವೆ ಎಂದು ಸಮೀಕ್ಷೆ ತಿಳಿಸಿದೆ.

ಮಾರ್ಗಸೂಚಿ ಅನುಸರಣೆಯಲ್ಲಿನ ಕುಸಿತವು ಪ್ರಭಂದ ಅನೇಕ ರಾಜ್ಯಗಳಲ್ಲಿ ಕಂಡುಬಂದಿದೆ. ಆದರೆ ಮಾಸ್ಕ್‌ಗಳ ಗುಣಮಟ್ಟವನ್ನು ಕೆಎನ್–95 ಅಥವಾ ಎನ್–95ಗೆ ಹೆಚ್ಚಿಸಿಕೊಂಡಿದ್ದಾರೆ. ಕೆಲವರು ರಕ್ಷಣೆಗಾಗಿ ದ್ವಿಪದರದ ಮುಖಗವಸುಗಳನ್ನು ಧರಿಸುತ್ತಿದ್ದಾರೆ ಎಂದು ವರದಿ ಹೇಳಿದೆ.

ಮಾಸ್ಕ್ ಧರಿಸದೆ ಇರುವುದಕ್ಕೆ ನಾಗರಿಕರು ಹಲವು ಕಾರಣಗಳನ್ನು ಮುಂದಿಟ್ಟಿದ್ದಾರೆ. ಮಾಸ್ಕ್ ಧರಿಸದೆ ಆರಾಮದಾಯಕ ಎನಿಸುವುದು, ಸ್ಥಳೀಯ ಅಧಿಕಾರಿಗಳು ಮಾಸ್ಕ್ ಧರಿಸುವಿಕೆ ಮೇಲೆ ನಿಗಾ ಇರಿಸಿಲ್ಲ ಮತ್ತು ತಮ್ಮ ಪ್ರದೇಶದಲ್ಲಿ ಕೋವಿಡ್ ಪ್ರಕರಣಗಳು ಕಡಿಮೆಯಾಗುತ್ತಿರುವುದರಿಂದ ಮಾಸ್ಕ್ ಧರಿಸಿಲ್ಲ ಎಂಬ ಕಾರಣ ನೀಡಿದ್ದಾರೆ.

ಅಂತರ ಕಾಯ್ದುಕೊಳ್ಳುವಿಕೆ: ಮೊದಲ ಶ್ರೇಣಿ ನಗರಗಳಲ್ಲಿ ಅಂತರ ಕಾಯ್ದುಕೊಳ್ಳುವಿಕೆ ಪಾಲನೆ ಶೇ 15ರಷ್ಟಿದೆ. ಎರಡನೇ ಹಂತದ ನಗರಗಳಲ್ಲಿ ಶೇ 10, ಮೂರನೇ, ನಾಲ್ಕನೇ ಹಾಗೂ ಗ್ರಾಮೀಣ ಭಾಗದಲ್ಲಿ ಶೇ 7.5ರಷ್ಟಿದೆ ಎಂದು ಸಮೀಕ್ಷೆ ಹೇಳಿದೆ.

ಸರ್ಕಾರವು ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಗೊಳಿಸಿದ್ದರಿಂದ ಸಾಂಕ್ರಾಮಿಕ ರೋಗವು ಹತೋಟಿಯಲ್ಲಿದೆ ಎಂಬ ಭಾವವು ಜನರಲ್ಲಿ ಮೂಡಿದೆ ಎಂದು ವರದಿ ಹೇಳಿದೆ.

ಮಾಸ್ಕ್ ಧರಿಸುವಿಕೆ ನಿಯಮ ಪಾಲನೆ



ಭೌತಿಕ ಅಂತರ ಪಾಲನೆ



21 ರಾಜ್ಯಗಳಲ್ಲಿ ಸಾವು ಇಲ್ಲ

ದೇಶದಲ್ಲಿ ಸಕ್ರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 1.5 ಲಕ್ಷಕ್ಕಿಂತ ಕಡಿಮೆಯಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ. 24 ಗಂಟೆಗಳಲ್ಲಿ 21 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೋವಿಡ್‌ನಿಂದ ಯಾರೂ ಮೃತಪಟ್ಟಿಲ್ಲ ಎಂದು ಹೇಳಿದೆ.

ಪಂಜಾಬ್: ಹೆಚ್ಚು ಜನ ಸೇರುವಂತಿಲ್ಲ

ಸಮಾರಂಭಗಳಲ್ಲಿ ಜನರು ಸೇರುವುದರ ಮೇಲೆ ಮಾರ್ಚ್ 1ರಿಂದ ನಿರ್ಬಂಧ ವಿಧಿಸಲು ಪಂಜಾಬ್ ಸರ್ಕಾರ ಮಂಗಳವಾರ ಆದೇಶಿಸಿದೆ. ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡಿದೆ.

ಒಳಾಂಗಣದಲ್ಲಿ ಗರಿಷ್ಠ 100 ಹಾಗೂ ಹೊರಾಂಗಣದಲ್ಲಿ ನಡೆಯುವ ಸಮಾರಂಭಗಳಲ್ಲಿ ಗರಿಷ್ಠ 200 ಜನರು ಮಾತ್ರ ಸೇರಲು ಅವಕಾಶವಿದೆ. ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅಗತ್ಯವಿದ್ದಲ್ಲಿ ತಮ್ಮ ಜಿಲ್ಲೆಗಳ ಕೋವಿಡ್ ಹಾಟ್‌ಸ್ಪಾಟ್‌ಗಳಲ್ಲಿ ರಾತ್ರಿ ಕರ್ಫ್ಯೂ ವಿಧಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಔರಂಗಾಬಾದ್‌ನಲ್ಲಿ ರಾತ್ರಿ ಕರ್ಫ್ಯೂ

ಕಳೆದ ಕೆಲವು ದಿನಗಳಿಂದ ಕೋವಿಡ್ 19 ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಮಹಾರಾಷ್ಟ್ರದ ಔರಂಗಾಬಾದ್ ನಗರದಲ್ಲಿ ರಾತ್ರಿ 11 ರಿಂದ ಬೆಳಿಗ್ಗೆ 6ರವರೆಗೆ ರಾತ್ರಿ ಕರ್ಫ್ಯೂ ವಿಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಹೇಳಿದ್ದಾರೆ. ಮಾರ್ಚ್ 8 ರವರೆಗೆ ಈ ಆದೇಶ ಜಾರಿಯಲ್ಲಿರಲಿದೆ.

ಹೊಸ ತಳಿ ಕಾರಣವಲ್ಲ: ಕೇರಳ, ಮಹಾರಾಷ್ಟ್ರದಲ್ಲಿ ದಿಢೀರನೆ ಪ್ರಕರಣಗಳು ಏರಿಕೆಯಾಗಲು ರೂಪಾಂತರಗೊಂಡ ಕೊರೊನಾ ವೈರಾಣು ಕಾರಣವಲ್ಲ ಎಂದು ಕೇಂದ್ರ ಸರ್ಕಾರ ಮಂಗಳವಾರ ಸ್ಪಷ್ಟಪಡಿಸಿದೆ.

ದೇಶದಲ್ಲಿ ಬ್ರಿಟನ್ ರೂಪಾಂತರ ವೈರಾಣು 187 ಜನರಲ್ಲಿ ಕಂಡುಬಂದಿದೆ. ದಕ್ಷಿಣ ಆಫ್ರಿಕಾದ ರೂಪಾಂತರ ವೈರಾಣು 6 ಜನರಿಗೆ, ಒಬ್ಬ ವ್ಯಕ್ತಿಯಲ್ಲಿ ಬ್ರೆಜಿಲ್ ರೂಪಾಂತರ ವೈರಸ್ ದೃಢಪಟ್ಟಿದೆ ಎಂದು ನೀತಿ ಆಯೋಗದ ಸದಸ್ಯ ವಿ.ಕೆ. ಪಾಲ್ ತಿಳಿಸಿದ್ದಾರೆ. ಮಹಾರಾಷ್ಟ್ರ, ತೆಲಂಗಾಣ ಹಾಗೂ ಕೇರಳದಲ್ಲಿ ರೂಪಾಂತರ ವೈರಾಣು ಪತ್ತೆಯಾಗಿವೆ.

ಗುಜರಾತ್‌ನ ಸೂರತ್ ನಗರಪಾಲಿಕೆಗೆ ನಡೆದ ಚುನಾವಣೆಯಲ್ಲಿ ಗೆದ್ದ ಬಿಜೆಪಿ ಅಭ್ಯರ್ಥಿಗಳು ವಿಜಯೋತ್ಸವ ಆಚರಿಸಿದರು

ಗುಜರಾತ್ ಸ್ಥಳೀಯ ಸಂಸ್ಥೆ ಚುನಾವಣೆ

ಬಿಜೆಪಿ ಜಯಭೇರಿ, ಖಾತೆ ತೆರೆದ ಎಎಪಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್‌ನ ಆರು ನಗರಗಳ ಸ್ಥಳೀಯ ಸಂಸ್ಥೆಗಳಿಗೆ ನಡೆದಿದ್ದ ಚುನಾವಣೆಯಲ್ಲಿ ನಿರೀಕ್ಷೆಯಂತೆಯೇ ಬಿಜೆಪಿ ಜಯಭೇರಿ ಬಾರಿಸಿದ್ದು, ಅಧಿಕಾರ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ರಾತ್ರಿಯವರೆಗೆ ಫಲಿತಾಂಶ ಘೋಷಣೆಯಾಗಿದ್ದ 474 ಸ್ಥಾನಗಳಲ್ಲಿ ಬಿಜೆಪಿ ಒಟ್ಟು 409 ಸ್ಥಾನ ಗೆದ್ದುಕೊಂಡಿತ್ತು. ಕಾಂಗ್ರೆಸ್ ಸಾಧನೆ ನೀರಸವಾಗಿದ್ದು, 43 ಸ್ಥಾನವಷ್ಟೇ ಗೆದ್ದುಕೊಂಡಿತ್ತು. ಎಐಎಂಐಎಂ ಮತ್ತು ಎಎಪಿ ಪಕ್ಷ ಖಾತೆ ತೆರೆದಿವೆ.

ಫೆಬ್ರುವರಿ 21ರಂದು ಆರು ಸ್ಥಳೀಯ ಸಂಸ್ಥೆಗಳ 575 ಸ್ಥಾನಗಳು ಅಂದರೆ ಅಹಮದಾಬಾದ್‌ನ 192, ರಾಜಕೋಟ್ 72, ಜಾಮ್‌ನಗರ 64, ಭಾವನಗರ 76, ವಡೋದರಾ 76, ಸೂರತ್ ನಗರಪಾಲಿಕೆಯ 120 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. ಮತ ಎಣಿಕೆ ಮಂಗಳವಾರ ಬೆಳಿಗ್ಗೆ ಆರಂಭವಾಗಿದ್ದು, ರಾತ್ರಿಯವರೆಗೂ ಮುಂದುವರಿದಿತ್ತು. ಆಮ್ ಆದ್ಮಿ ಪಕ್ಷ (ಎಎಪಿ) ಒಟ್ಟಾರೆ 470 ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಸೂರತ್ ನಗರಪಾಲಿಕೆಯಲ್ಲಿ ಎಎಪಿ ಉತ್ತಮ ಸಾಧನೆ ಮಾಡಿದ್ದು, ವಿರೋಧಪಕ್ಷವಾಗಿ ಕಾರ್ಯನಿರ್ವಹಿಸಲಿದೆ. ಕಾಂಗ್ರೆಸ್ ಇಲ್ಲಿ ಖಾತೆ ತೆರೆಯಲೂ ವಿಫಲವಾಗಿದೆ.

ಸೂರತ್‌ನಲ್ಲಿ 2015ರ ಚುನಾವಣೆಯಲ್ಲಿ ಕಾಂಗ್ರೆಸ್ 36 ಸ್ಥಾನ ಗೆದ್ದುಕೊಂಡಿತ್ತು. ಇಲ್ಲಿ ಒಟ್ಟು ಸದಸ್ಯ ಬಲ 120 ಆಗಿದ್ದು, ಬಿಜೆಪಿ 93, ಎಎಪಿ 27 ಸ್ಥಾನಗಳನ್ನು ಗೆದ್ದುಕೊಂಡಿವೆ.

ಅಸಾದುದ್ದೀನ್ ಒವೈಸಿ ಅವರ ಎಐಎಂಐಎಂ ಪಕ್ಷವು ಅಹಮದಾಬಾದ್‌ನ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ 8 ಸ್ಥಾನಗಳನ್ನು ಗೆದ್ದುಕೊಂಡಿದ್ದು, ಖಾತೆ ತೆರೆದಿದೆ. ಇಲ್ಲಿ ಮೊದಲು ಕಾಂಗ್ರೆಸ್ ಪ್ರಾಬಲ್ಯವನ್ನು ಹೊಂದಿತ್ತು.

ಮುಖ್ಯಮಂತ್ರಿ ವಿಜಯ್ ರೂಪಾಣಿ ಮತ್ತು ಉಪ ಮುಖ್ಯಮಂತ್ರಿ ನಿತಿನ್ ಪಟೇಲ್ ಅವರು ಫಲಿತಾಂಶ ಕುರಿತು ಸಂತಸ ವ್ಯಕ್ತಪಡಿಸಿದ್ದಾರೆ. 'ಇದು, ಪ್ರಧಾನಿಯವರ ಅಭಿವೃದ್ಧಿ ರಾಜಕಾರಣಕ್ಕೆ ಸಂದ ಗೆಲುವಾಗಿದೆ' ಎಂದು ಹೇಳಿದ್ದಾರೆ.

ಪ್ರಾಕೃತಿಕ ವಿಕೋಪಗಳ ನಿರ್ವಹಣೆ: ತಂತ್ರಜ್ಞಾನ ಅಭಿವೃದ್ಧಿಗೆ ಪ್ರಧಾನಿ ಸಲಹೆ

ಖರಗಪುರ, ಪಶ್ಚಿಮ ಬಂಗಾಳ (ಪಿಟಿಐ): ಉತ್ತರಾಖಂಡದಲ್ಲಿ ಈಚೆಗೆ ನಡೆದ ಪ್ರಾಕೃತಿಕ ವಿಕೋಪ ಮತ್ತು ತಾಪಮಾನ ಬದಲಾವಣೆಯ ಅಪಾಯಗಳ ಕುರಿತು ಎಚ್ಚರಿಸಿರುವ ಪ್ರಧಾನಿ ನರೇಂದ್ರ ಮೋದಿ, 'ಇಂಥ ವಿಕೋಪಗಳ ಪರಿಣಾಮಕಾರಿ ನಿರ್ವಹಣೆಯ ತಂತ್ರಜ್ಞಾನವನ್ನು ಐಐಟಿಗಳು ಅಭಿವೃದ್ಧಿಪಡಿಸಬೇಕು' ಎಂದು ಸಲಹೆ ಮಾಡಿದರು.

ಐಐಟಿ–ಖರಗಪುರದ 66ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, 'ವಿದ್ಯಾರ್ಥಿಗಳಿಗೆ 'ಸೆಲ್ಫ್–3' ಮಂತ್ರವನ್ನು ಪಾಲಿಸಬೇಕು. ಅವುಗಳೆಂದರೆ, ಸ್ವಯಂ ಜಾಗೃತಿ, ಆತ್ಮವಿಶ್ವಾಸ ಮತ್ತು ನಿಸ್ವಾರ್ಥತೆ ಎಂದು ಹೇಳಿದರು. ಇವುಗಳ ಜೊತೆಗೆ ಜನರಲ್ಲಿ ಸಾಮಾಜಿಕ ಬದಲಾವಣೆ ತರಲು ಸ್ಟಾರ್ಟ್‌ಅಪ್‌ಗಳ ಸ್ಥಾಪನೆಗೆ ಆದ್ಯತೆ ನೀಡಬೇಕು ಎಂದು ಕಿವಿಮಾತು ಹೇಳಿದರು.

ಸೋಲಾರ್ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಸಹಯೋಗದಲ್ಲಿ ಸುರಕ್ಷಿತವಾದ, ಕೈಗೆಟಕುವ ದರದ ಮತ್ತು ಪರಿಸರಸ್ನೇಹಿಯಾದ ಇಂಧನ ಮೂಲವನ್ನು ಜನರಿಗೆ ಒದಗಿಸಬೇಕಾದ ಅಗತ್ಯವನ್ನು ಅವರು ಪ್ರತಿಪಾದಿಸಿದರು.

ರವಿ ಪೂಜಾರಿ ಮುಂಬೈ ಪೊಲೀಸರ ವಶಕ್ಕೆ

ಮುಂಬೈ (ಪಿಟಿಐ): ಮುಂಬೈನಲ್ಲಿ 2016ರಲ್ಲಿ ನಡೆದ ಗುಂಡಿನ ದಾಳಿ ಪ್ರಕರಣದ ಆರೋಪಿ ಭೂಗತ ಪಾತಕಿ ರವಿ ಪೂಜಾರಿಯನ್ನು ಬೆಂಗಳೂರಿನಿಂದ ಕರೆತಂದ ಮುಂಬೈ ಪೊಲೀಸರು, ಇಲ್ಲಿನ ವಿಶೇಷ ನ್ಯಾಯಾಲಯದ ಎದುರು ಮಂಗಳವಾರ ಹಾಜರು ಪಡಿಸಿದರು.

ವಿಚಾರಣೆ ನಡೆಸಿದ ನ್ಯಾಯಾಲಯ, ರವಿ ಪೂಜಾರಿಯನ್ನು ಮಾ.9ರವರೆಗೆ ವಿಚಾರಣೆಗಾಗಿ ಪೊಲೀಸರ ವಶಕ್ಕೆ ನೀಡಿದೆ. ಹಲವು ವರ್ಷಗಳ ಕಾಲ ವಿದೇಶದಲ್ಲಿ ಅಡಗಿಕೊಂಡಿದ್ದ ರವಿ ಪೂಜಾರಿಯನ್ನು ಕಳೆದ ವರ್ಷ ಫೆಬ್ರವರಿ ತಿಂಗಳಿನಲ್ಲಿ ಕರ್ನಾಟಕ ನ್ಯಾಯಾಲಯದ ಅನುಮತಿ ಮೇರೆಗೆ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಕರೆ ತಂದು, ಬೆಂಗಳೂರಿನ ಜೈಲಿನಲ್ಲಿ ಇರಿಸಲಾಗಿತ್ತು.

ಶನಿವಾರ ಬೆಂಗಳೂರಿಗೆ ಬಂದ ಮುಂಬೈ ಪೊಲೀಸರ ತಂಡ, 2016ರ ಅ.21ರಂದು ವಿಲೆ ಪಾರ್ಲೆಯಲ್ಲಿ ನಡೆದಿದ್ದ ಗುಂಡಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿ ಪೂಜಾರಿಯನ್ನು ತಮ್ಮ ವಶ ನೀಡಬೇಕೆಂದು ಕರ್ನಾಟಕದನ್ಯಾಯಾಲಯದಲ್ಲಿಮನವಿ ಮಾಡಿದ್ದರು. ಕರ್ನಾಟಕದ ನ್ಯಾಯಾಲಯ ಪೂಜಾರಿಯನ್ನು ಮುಂಬೈ ಪೊಲೀಸರಿಗೆ ಹಸ್ತಾಂತರಿಸಲು ಅನುಮತಿ ನೀಡಿತ್ತು.

ಆಸಿಯಾ ಅಂದ್ರಾಬಿ ವಿರುದ್ಧ ಭಯೋತ್ಪಾದನೆ ಆರೋಪ

ನವದೆಹಲಿ (ಪಿಟಿಐ): ಕಾಶ್ಮೀರದ ಪ್ರತ್ಯೇಕತಾವಾದಿ ನಾಯಕಿ ಆಸಿಯಾ ಅಂದ್ರಾಬಿ ಹಾಗೂ ಆಕೆಯ ಇಬ್ಬರು ಸಹಚರರ ವಿರುದ್ಧ ದೆಹಲಿ ಕೋರ್ಟ್ ಭಯೋತ್ಪಾದನೆ, ದೇಶದ್ರೋಹ ಹಾಗೂ ಇತರ ಆರೋಪಗಳನ್ನು ಹೊರಿಸಿದೆ.

ಅಂದ್ರಾಬಿ ಹಾಗೂ ಸಹಚರರಾದ ಸೋಫಿ ಫೆಹಮಿದಾ, ನಹಿದಾ ನಸ್ರೀನ್ ಅವರ ವಿರುದ್ಧ ಐಪಿಸಿ ಹಾಗೂ ಯುಎಪಿಎ ಅಡಿ ಆರೋಪ ಹೊರಿಸಲಾಗಿದೆ. ಪಾಕಿಸ್ತಾನದ ನೆರವಿನೊಂದಿಗೆ ದೇಶದ ವಿರುದ್ಧ ಯುದ್ಧ ಹೂಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ. ಈ ಮೂವರನ್ನು 2018ರ ಏಪ್ರಿಲ್‌ನಲ್ಲಿ ಬಂಧಿಸಲಾಗಿದೆ.

ವಿಶೇಷ ನ್ಯಾಯಾಧೀಶರಾದ ಪರ್ವೀನ್ ಸಿಂಗ್ ಅವರು ವಿಚಾರಣೆ ಆರಂಭಿಸಿದ್ದಾರೆ.

ದುಖ್ತರನ್–ಎ–ಮಿಲ್ಲತ್ (ರಾಷ್ಟ್ರದ ಪುತ್ರಿಯರು) ಎಂಬ ಸಂಘಟನೆಯ ಮುಖ್ಯಸ್ಥೆಯಾಗಿರುವ ಅಂದ್ರಾಬಿ, ಆಕೆಯ ಸಹಚರರು ದೇಶವನ್ನು ಅಸ್ಥಿರಗೊಳಿಸಿ, ಭಾರತದ ಸಾರ್ವಭೌಮತೆಗೆ ಧಕ್ಕೆ ತರಲು ಪಿತೂರಿ ನಡೆಸಿದ್ದರು ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ ಆರೋಪಿಸಿದೆ.

'ದಿಶಾಗೆ ಖಾಲಿಸ್ತಾನಿ ನಂಟು: ಪುರಾವೆಯೇ ಇಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಟೂಲ್‌ಕಿಟ್ ಪ್ರಕರಣದಲ್ಲಿ ಬಂಧಿತರಾಗಿದ್ದ ಬೆಂಗಳೂರಿನ ಪರಿಸರ ಕಾರ್ಯಕರ್ತೆ ದಿಶಾ ರವಿ ಅವರಿಗೆ ಖಾಲಿಸ್ತಾನಿ ಪ್ರತ್ಯೇಕತಾವಾದಿ ಸಂಘಟನೆಗಳ ಜತೆಗೆ ನಂಟು ಇದೆ ಎಂಬುದನ್ನು ತೋರಿಸುವ ಯಾವ ಸಾಕ್ಷ್ಯವೂ ಇಲ್ಲ ಎಂದು ದೆಹಲಿಯ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಹೇಳಿದೆ. ಭಾರತದೊಂದಿಗೆ ಶತ್ರುತ್ವ ಸಾಧಿಸಲು ಪ್ರಯತ್ನಿಸುವ ಗುಂಪುಗಳ ಜತೆಗೆ ದಿಶಾ ಸಂಪರ್ಕದಲ್ಲಿದ್ದರು. ದೇಶದಲ್ಲಿ ಹಿಂಸಾಚಾರ ನಡೆಸುವ ಭಾರಿ ಪಿತೂರಿ ಟೂಲ್‌ಕಿಟ್‌ನ ಹಿಂದೆ ಇದೆ ಎಂದು ಪೊಲೀಸರು ಆರೋಪಿಸಿದ್ದರು.

'ಆರೋಪಿಯು ಪ್ರತ್ಯೇಕತಾವಾದಿಗಳು ಅಥವಾ ಹಿಂಸಾಚಾರಕ್ಕೆ ಯತ್ನಿಸುವವರಿಗೆ ಬೆಂಬಲ ನೀಡಿದ್ದಾರೆ ಎಂದು ಯಾವುದೇ ಸಾಕ್ಷ್ಯ ಇಲ್ಲದೇ ಹೇಳುವುದು ಊಹೆ ಮತ್ತು ಕಲ್ಪನೆ ಮಾತ್ರವಾಗುತ್ತದೆ. ಕೃಷಿ ಕಾಯ್ದೆಯನ್ನು ವಿರೋಧಿಸುವವರ ಜತೆಗೆ ಒಂದೇ ವೇದಿಕೆಯಲ್ಲಿ ಭಾಗಿಯಾಗಿದ್ದರು ಎಂಬ ಒಂದೇ ಕಾರಣದಿಂದ ಆರೋಪಿಯ ಮೇಲೆ ದೇಶದ್ರೋಹದ ಆರೋಪ ಹೊರಿಸಲಾಗದು' ಎಂದು ನ್ಯಾಯಾಲಯವು ಹೇಳಿದೆ.

ದಿಶಾ ಮತ್ತು ಗಣರಾಜ್ಯೋತ್ಸವ ದಿನ ದೆಹಲಿಯಲ್ಲಿ ನಡೆದ ಹಿಂಸಾಚಾರದ ನಡುವೆ ಸಂಬಂಧ ಕಲ್ಪಿಸುವ ನೇರ ಸಾಕ್ಷ್ಯ ಇಲ್ಲ ಎಂಬುದನ್ನು ದೆಹಲಿ ಪೊಲೀಸರ ಪರವಾಗಿ ವಾದಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರೇ ಒಪ್ಪಿಕೊಂಡಿದ್ದಾರೆ ಎಂದು ನ್ಯಾಯಾಲಯವು ಹೇಳಿದೆ.

ಪೋಯೆಟಿಕ್ ಜಸ್ಟಿಸ್ ಫೌಂಡೇಶನ್ ಮತ್ತು ಅದರ ಸ್ಥಾಪಕರಾದ ಮೊ ಧಾಲಿವಾಲ್ ಮತ್ತು ಅಂಕಿತಾ ಲಾಲ್ ಅವರ ವಿರುದ್ಧ ಯಾವುದೇ ಪ್ರಕರಣ ವಿಚಾರಣೆಗೆ ಬಾಕಿ ಇಲ್ಲ ಎಂಬುದನ್ನು ದೆಹಲಿ ಪೊಲೀಸರು ಒಪ್ಪಿಕೊಂಡಿದ್ದಾರೆ. ಟೂಲ್‌ಕಿಟ್ ರಚನೆ ಹಿಂದೆ ಈ ಇಬ್ಬರು ಇದ್ದಾರೆ ಎಂದು ಪೊಲೀಸರು ಆರೋಪಿಸಿದ್ದಾರೆ.

ದಿಶಾ ಮತ್ತು ಈ ಇಬ್ಬರ ನಡುವೆ ನಂಟು ಇದೆ ಎಂಬುದನ್ನು ತೋರಿಸುವ ಪುರಾವೆಯೂ ಪೊಲೀಸರ ಬಳಿ ಇಲ್ಲ. ಜನವರಿ 26ರಂದು ನಡೆದ ಹಿಂಸಾಚಾರಕ್ಕೆ ದಿಶಾ ಅವರು ಕರೆ, ಕುಮ್ಮಕ್ಕು, ಒತ್ತಾಸೆ ನೀಡಿದ್ದಾರೆ ಎಂಬುದಕ್ಕೂ ಯಾವುದೇ ಆಧಾರ ಇಲ್ಲ. ವಾಟ್ಸ್‌ಆ್ಯಪ್ ಗುಂಪು ರಚಿಸಿಕೊಳ್ಳುವುದು, ನಿರುಪದ್ರವಿ ಟೂಲ್‌ಕಿಟ್ ಅನ್ನು ತಿದ್ದಿ ಕೊಡುವುದು ಅಪರಾಧ ಅಲ್ಲ ಎಂದು ನ್ಯಾಯಾಲಯ ಹೇಳಿದೆ.

ಪೋಯೆಟಿಕ್ ಜಸ್ಟಿಸ್ ಫೌಂಡೇಶನ್ ಮತ್ತು ಟೂಲ್‌ಕಿಟ್ ಜತೆಗೆ ನಂಟು ಇದೆ ಎಂಬುದೇ ಆಕ್ಷೇಪಾರ್ಹ ಅಲ್ಲ. ಹಾಗಿರುವಾಗ, ಸಾಕ್ಷ್ಯನಾಶಕ್ಕಾಗಿ ವಾಟ್ಸ್‌ಆ್ಯಪ್ ಗುಂಪನ್ನು ಅಳಿಸಿ ಹಾಕಿದ್ದಾರೆ ಎಂಬುದು ಅರ್ಥಹೀನ. ಪ್ರಶ್ನಾಹ ಹಿನ್ನೆಲೆಯ ವ್ಯಕ್ತಿಗಳ ಜತೆಗೆ ಸಂಬಂಧ ಹೊಂದಿದ್ದಾರೆ ಎಂಬುದು ಶಿಕ್ಷಾರ್ಹ ಅಪರಾಧ ಅಲ್ಲ. ಅಪರಾಧ ಎಸಗಿದ್ದಾರೆಯೇ ಎಂಬುದನ್ನು ನಂಟಿನ ಉದ್ದೇಶದ ಆಧಾರದಲ್ಲಿ ನಿರ್ಧರಿಸಲಾಗುತ್ತದೆ ಎಂದು ರಾಣಾ ಅವರು ವಿವರಿಸಿದ್ದಾರೆ.

ಪ್ರಶ್ನಾರ್ಹ ಹಿನ್ನೆಲೆಯ ವ್ಯಕ್ತಿಗಳು ಹಲವಾರು ಜನರ ಜತೆಗೆ ಸಂಪರ್ಕದಲ್ಲಿರುತ್ತಾರೆ. ಈ ಸಂಪರ್ಕವು ಕಾನೂನಿನ ವ್ಯಾಪ್ತಿಯೊಳಗೇ ಇದ್ದರೆ ಅದನ್ನು ಅಪರಾಧ ಎಂದು ಪರಿಗಣಿಸಲಾಗದು ಎಂದಿದ್ದಾರೆ.

ನಿಷೇಧಿತ ಸಂಘಟನೆಯಾದ 'ಸಿಖ್ಸ್ ಫಾರ್ ಜಸ್ಟಿಸ್', ಜನವರಿ 26ರ ಹಿಂಸಾಚಾರ ಮತ್ತು ಪೋಯೆಟಿಕ್ ಜಸ್ಟಿಸ್ ಫೌಂಡೇಶನ್ ಜತೆಗೆ ದಿಶಾ ನಂಟು ಹೊಂದಿದ್ದಾರೆ ಎಂಬುದನ್ನು ಹೇಳುವುದಕ್ಕೆ ಅಣುವಿನಷ್ಟೂ ಪುರಾವೆ ಇಲ್ಲ ಎಂದು ಆದೇಶದಲ್ಲಿ ಹೇಳಲಾಗಿದೆ.

ಬಿಡುಗಡೆಗೆ ಸ್ವಾಗತ

ಬೆಂಗಳೂರು: 'ಇದೊಂದು ಚಾರಿತ್ರಿಕ ಮತ್ತು ಸಾಂವಿಧಾನಿಕ ಕ್ಷಣ. ಹೆಚ್ಚುವರಿ ಸೆಶನ್ಸ್ ನ್ಯಾಯಾಲಯವು ಬಳಸಿದ ಭಾಷೆಯು ಇದಕ್ಕೆ ಕಾರಣ. ಉನ್ನತ ನ್ಯಾಯಾಲಯಗಳಿಂದ ನಿರೀಕ್ಷಿಸಲಾಗುವ ರೀತಿಯ ಆದೇಶವನ್ನು ನೀಡಲಾಗಿದೆ. ನ್ಯಾಯಾಲಯದ ಪಾತ್ರ ಏನು ಎಂಬುದನ್ನು ಈ ಆದೇಶವು ನಮಗೆ ನೆನಪಿಸಿದೆ' ಎಂದು ಬೆಂಗಳೂರಿನ ಪರಿಸರ ಕಾರ್ಯಕರ್ತ ಲಿಯೊ ಸಾಲ್ದಾನಾ ಅವರು ಹೇಳಿದ್ದಾರೆ.

ಟೂಲ್‌ಕಿಟ್ ಪ್ರಕರಣದಲ್ಲಿ ದಿಶಾ ಅವರಿಗೆ ಜಾಮೀನು ನೀಡಿರುವುದಕ್ಕೆ ಬೆಂಗಳೂರಿನ ಪರಿಸರ ಕಾರ್ಯಕರ್ತರು ಹರ್ಷ ವ್ಯಕ್ತಪಡಿಸಿದ್ದಾರೆ.

'ನ್ಯಾಯಾಂಗವು ಹೀಗೆ ಕೆಲಸ ಮಾಡಬೇಕು' ಎಂದು ಸಾಲ್ದಾನಾ ಅವರು ಹೇಳಿದ್ದಾರೆ.

'ಇಡೀ ಟೂಲ್‌ಕಿಟ್ ಪ್ರಕರಣವು ದ್ವೇಷ ಸಾಧನೆಯ ಅಸ್ತ್ರವಾಗಿ ಹೇಗೆ ಬಳಕೆಯಾಗಿದೆ ಎಂಬುದನ್ನು ನ್ಯಾಯಾಧೀಶರು ವಿವರಿಸಿದ್ದಾರೆ' ಎಂದು ವಕೀಲ ಕ್ಲಿಫ್ಟನ್ ರೊಜಾರಿಯೊ ಹೇಳಿದ್ದಾರೆ.

'ಪಿಎಫ್‌ಐ ಕಾಂಗ್ರೆಸ್ ಅಂಗ ಸಂಸ್ಥೆ'

ಬೆಂಗಳೂರು: 'ಕಾಂಗ್ರೆಸ್‌ನ ಅಂಗ ಸಂಸ್ಥೆಗಳೇ ಆಗಿರುವ ಪಿಎಫ್‌ಐ ಮತ್ತು ಎಸ್‌ಡಿಪಿಐಗಳಿಗೆ ಮುಕ್ತಿ ಹಾಡುವ ಕಾಲ ಶೀಘ್ರದಲ್ಲೇ ಬರಲಿದೆ' ಎಂದು ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

'ಪಿಎಫ್‌ಐ ಮತ್ತು ಎಸ್‌ಡಿಪಿಐ ಬಿಜೆಪಿಯ ಬಿ ಟೀಮ್' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದನ್ನು ಉಲ್ಲೇಖಿಸಿ, ವಿಜಯೇಂದ್ರ ಸರಣಿ ಟ್ವೀಟ್ ಮಾಡಿದ್ದಾರೆ. 'ಈ ಎರಡೂ ಸಂಘಟನೆಗಳ ಪೋಷಣೆ ಕಾಂಗ್ರೆಸ್‌ನ ಹೊಣೆ ಎಂಬಂತೆ ಅವುಗಳ ಮೇಲಿದ್ದ ಕ್ರಿಮಿನಲ್ ಕೇಸ್‌ಗಳನ್ನು ನಿಮ್ಮ ಅಧಿಕಾರದ ಅವಧಿಯಲ್ಲಿ ವಾಪಸ್ ಪಡೆದುಕೊಂಡಿರಿ' ಎಂದು ಹೇಳಿದ್ದಾರೆ.

ಹೈಕೋರ್ಟ್ ಕಾಯಂ ನ್ಯಾಯಮೂರ್ತಿಗಳಾಗಿ ನಾಲ್ವರ ನೇಮಕ

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ನಾಲ್ವರು ಹೆಚ್ಚುವರಿ ನ್ಯಾಯಮೂರ್ತಿಗಳನ್ನು ಸೋಮವಾರ ಕಾಯಂ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲಾಗಿದೆ. ಕಾನೂನು ಸಚಿವಾಲಯ ಈ ಕುರಿತು ಅಧಿಸೂಚನೆ ಹೊರಡಿಸಿದೆ.

ನ್ಯಾಯಮೂರ್ತಿಗಳಾದ ಸಿಂಗಪುರಂ ರಾಘವಾಚಾರ್ ಕೃಷ್ಣಕುಮಾರ್, ಅಶೋಕ್ ಸುಭಾಷ್ ಚಂದ್ರ ಕಿಣಗಿ, ಸೂರಜ್ ಗೋವಿಂದರಾಜ್ ಮತ್ತು ಸಚಿನ್ ಶಂಕರ್ ಮಗದುಂ ಅವರನ್ನು ಕಾಯಂ ನ್ಯಾಯಮೂರ್ತಿಗಳಾಗಿ, ರಾಷ್ಟ್ರಪತಿಯವರು ನೇಮಕ ಮಾಡಿದ್ದಾರೆ. ಅಧಿಕಾರ ವಹಿಸಿಕೊಂಡ ದಿನದಿಂದ ನೇಮಕ ಜಾರಿಗೆ ಬರಲಿದೆ ಎಂದು ಅಧಿಸೂಚನೆ ತಿಳಿಸಿದೆ. 2 ವರ್ಷಗಳ ಅವಧಿಗೆ ಈ ನಾಲ್ವರನ್ನು ಸೆ.23, 2019ರಂದು ಹೈಕೋರ್ಟ್‌ಗೆ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲಾಗಿತ್ತು.

ಅಲ್ಲದೆ, ವಕೀಲರಾದ ಜಸ್‌ಮೀತ್ ಸಿಂಗ್ ಮತ್ತು ಅಮಿತ್ ಬನ್ಸಲ್ ಅವರನ್ನು ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿಗಳಾಗಿ ಕೇಂದ್ರ ಸರ್ಕಾರ ನೇಮಿಸಿ, ಇವರ ಹೆಸರನ್ನು ಕೊಲಿಜಿಯಂ ಕಳೆದ ಆಗಸ್ಟ್‌ನಲ್ಲಿ ಶಿಫಾರಸು ಮಾಡಿತ್ತು. ಮುರಳಿ ಪುರುಷೋತ್ತಮನ್, ಜಿಯಾದ್ ರೆಹಮಾನ್ ಅಲೆವಕ್ಕತ್ ಅಬ್ದುಲ್ ರಹಿಮಾನ್, ಕರುಣಾಕರನ್ ಬಾಬು ಮತ್ತು ಡಾ.ಕೌಸರ್ ಎಡಪ್ಪಗತ್ ಅವರನ್ನು ಕೇರಳ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ಸರ್ಕಾರ ನೇಮಕ ಮಾಡಿದೆ.

MYSURU CITY CORPORATION
Office of The Executive Engineer,
Vanivilas Water Works, Yadavagiri, Mysuru-570020

ADDENDUM Notification-21
(Through GoK e-procurement Portal Only)

The Executive Engineer, Vanivilas water works, Mysuru City Corporation, Mysuru had invited tenders for providing drinking water through water tankers from Vani Vilasa Water Supply premises, Kuvempunagar water tank, Vijayanagar water tank and Devanooru water tank to various parts of the Mysuru City from eligible bidders through e-procurement.

Certain clauses of the tender document uploaded in e-procurement portal, in Chapter-III: Instruction to bidders, clause 1.3 general is omitted due to redundancy and typographical error. Hence interested bidders are requested to note the changes by logging in to e-procurement portal. Further details / clarification can be obtained from the above office.

Further details may be obtained from the above office.

Sd/- Executive Engineer, Vanivilas water works
Mysuru City Corporation, Mysuru

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ
ನೋಂದಣಿ ಸಂಖ್ಯೆ: KOL-S243-2012-13 ದಿನಾಂಕ: 15–03–2013
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ).
Ph:08539225522. www.kimskoppal.com e-mail: directorkimskoppal@gmail.com
ಸಂ.ಕಿಮ್ಸ್/ಕೊಪ್ಪಳ/ಸರಬರಾಜು/20/2020–21 ದಿನಾಂಕ: 19.02.2021

ಮರು ಟೆಂಡರ್ ಅಧಿಸೂಚನೆ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆರ್ಥೋಪೆಡಿಕ್ ವಿಭಾಗಕ್ಕೆ ಅವಶ್ಯವಿರುವ, ಉಪಕರಣಗಳನ್ನು ಖರೀದಿಸಲು ಕೆಟಿಟಿಪಿ ಕಾಯ್ದೆ 1999–2000ರ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಮರು–ಟೆಂಡರ್ ಆಹ್ವಾನಿಸಲಾಗಿದೆ.
1. ಟೆಂಡರ್‌ಗಳನ್ನು ದಿನಾಂಕ: **23/02/2021 ಬೆಳಿಗ್ಗೆ 11.00** ಗಂಟೆಯಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **10/03/2021 ಸಾಯಂಕಾಲ 05.00 ಗಂಟೆವರೆಗೆ.** 3. ತಾಂತ್ರಿಕ ಲಕೋಟೆ (ಮೊದಲನೆಯ ಕವರ್) ತೆರೆಯುವ ದಿನಾಂಕ: **12/03/2021 ಬೆಳಿಗ್ಗೆ 11.30 ಗಂಟೆಗೆ.** 4. ಅಂದಾಜು ಟೆಂಡರ್ ಮೊತ್ತ **ರೂ. 46.00 ಲಕ್ಷಗಳು.** 5. ಇ.ಎಂ.ಡಿ.: **ಟೆಂಡರ್ ದಾಖಲೆ ಅನ್ವಯ.**
ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್: http://eproc.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ http://www.kimskoppal.kar.nic.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ನಿರ್ದೇಶಕರು, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ
ವಾಸಾಸಂಇ/ಕೊಪ್ಪಳ/408/ ಅಲಕ್‌ನಂದ/2020–21

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕನೀನಿನಿ ಘಟಪ್ರಭಾ ವಿಭಾಗ ನಂ. 2,
ಹಿಡಕಲ್ ಡ್ಯಾಂ, ಕಚೇರಿ ದೂರವಾಣಿ ಸಂ: 08333–263242
ಫ್ಯಾಕ್ಸ್ ಸಂ: 08333–263405 / ಇ–ಮೇಲ್: eegrbc2@gmail.com
ಸಂ.: ಕನೀನಿನಿ/ಜಿಆರ್‌ಬಿಸಿಸಿ–2/ಡಿಬಿ/ಟೆಂಡರ್/2020–21/3587 ದಿನಾಂಕ: 22–02–2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರರು, ಕನೀನಿನಿ, ಜಿಆರ್‌ಬಿಸಿ ವಿಭಾಗ ನಂ 2 ಹಿಡಕಲ್ ಡ್ಯಾಂ [illegible] ಕೆಟಿಪಿಪಿ ಕಾಯ್ದೆ ರೂಲ್ 28ರನ್ವಯ Two Cover System (ದ್ವಿ–ಲಕೋಟೆ) [illegible] (www.eproc.karnataka.gov.in) [illegible]
ಕಾಮಗಾರಿಗಳ ಸಂಖ್ಯೆ: 4, ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ಸಂಖ್ಯೆ: [illegible] 30985, 30986, 30987, 30988 [illegible] ರೂ. 217.00 ರಿಂದ 329.91 ಲಕ್ಷಗಳು [illegible] 24–02–2021ರ 17:00 [illegible] 25–02–2021, 11.30 [illegible] 02–03–2021 ರ 17.30 [illegible] 04–03–2021ರ 11.30 [illegible] http://www.eproc.karnataka.gov.in [illegible]
ಸಹಿ/– (ಆರ್.ಪಿ. ಚಿತ್ರಗಾರ)
ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ, ಜಿಆರ್‌ಬಿಸಿ ವಿಭಾಗ ನಂ. 2, ಹಿಡಕಲ್ ಡ್ಯಾಂ

ಜಿಲ್ಲಾ ಪಂಚಾಯತ್, ತುಮಕೂರು
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಜಿಲ್ಲಾಧಿಕಾರಿ ಕಛೇರಿ ಹಿಂಭಾಗ, ತುಮಕೂರು–572101
E-mail- dobcmtumkur@gmail.com Tel/Fax:0816-2278014
ಸಂಖ್ಯೆ:/ಬಿಸಿಡಬ್ಲ್ಯೂ–4/ಟೆಂಡರ್/ಸಿಆರ್–21/2020–21 ದಿನಾಂಕ:20.02.2021

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ತುಮಕೂರು ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಜಿಲ್ಲಾ ವಲಯ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್–ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ವಾಟರ್ ಪ್ಯೂರಿಫೈಯರ್ (ಆರ್.ಓ)ಗಳನ್ನು ಸರಬರಾಜು ಮಾಡುವ ಬಗ್ಗೆ.
(ದ್ವಿ ಲಕೋಟೆ ಪದ್ಧತಿ) Calendar of Events

1	ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ	ಸಂಖ್ಯೆ:/ಬಿಸಿಡಬ್ಲ್ಯೂ–4/ಟೆಂಡರ್/ಸಿಆರ್–21/2020–21 ದಿನಾಂಕ:20.02.2021
2	ಟೆಂಡರ್‌ಗಿಟ್ಟ ಮೊತ್ತ	ಅಂದಾಜು ರೂ.60.00ಲಕ್ಷಗಳು
3	e-portal ನಲ್ಲಿ ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಬಹುದಾದ ದಿನಾಂಕ & ಸಮಯ	ದಿನಾಂಕ:**20.2.2021** ರಿಂದ **01.03.2021**ರ ಬೆಳಿಗ್ಗೆ 12.00 ಗಂಟೆಯೊಳಗೆ
4	e-portal ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ	ದಿನಾಂಕ:**01.03.2021**ರಂದು ಬೆಳಿಗ್ಗೆ 12.00 ಗಂಟೆಯೊಳಗೆ
5	e-portal ನ ಟೆಂಡರ್ ದಾಖಲಾತಿಗಳನ್ನು & ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ ಮತ್ತು ವೇಳೆ ಆರ್ಥಿಕ ಬಿಡ್ ತೆರೆಯುವ ದಿನಾಂಕ	ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ತುಮಕೂರು ಜಿಲ್ಲೆ, ತುಮಕೂರು. ದಿ:**02.03.2021** ಬೆಳಿಗ್ಗೆ 12.00ಗಂಟೆ ದಿ:**03.03.2021** (ಬದಲಾವಣೆಗೆ ಒಳಪಟ್ಟಿರುತ್ತದೆ.)
6	ಹೆಚ್ಚಿನ ಮಾಹಿತಿ ಹಾಗೂ ನಿಗದಿತ ಅರ್ಜಿ ನಮೂನೆಗಳಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ:	website:http://eproc.karnataka.gov.in ಅಥವಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾಧಿಕಾರಿಗಳ ಕಛೇರಿ ಹಿಂಭಾಗ, ತುಮಕೂರು ಜಿಲ್ಲೆ, ತುಮಕೂರು. E-mail-dobcmtumkur@gmail.com ph:0816-2278014

ಸಹಿ/– ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ತುಮಕೂರು
DIPR/TUM/446/MCA/2020-21
ಕೋವಿಡ್-19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

sidbi
ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ
ಹೈದರಾಬಾದ್ ಪ್ರಾದೇಶಿಕ ಕಚೇರಿ: ಜಿ–1, ಅಕಿರ ಶಿಖರ ಪ್ಲಾಜಾ, 5–8–196 ರಿಂದ 207, ಜಸ್‌ಬಾಗ್, ನಾಮಪಲ್ಲಿ, ಹೈದರಾಬಾದ್–500 001, ತೆಲಂಗಾಣ.

ಎಸ್‌ಐಡಿಬಿಐ ಹೆಸರು ಬಳಸಿಕೊಂಡು ಅಪರಾಧ ವಂಚನೆಗಳು

ಸಾಮಾನ್ಯ ಸಾರ್ವಜನಿಕರಿಗಾಗಿ ಈ ಪ್ರಕಟಣೆ ಮೂಲಕ ನೀಡುವ ಮಾಹಿತಿ ಏನೆಂದರೆ, ಕೆಲವು ವಂಚಕ ವ್ಯಕ್ತಿಗಳು/ಸಂಸ್ಥೆಗಳು ಜನತೆಯನ್ನು ಸಂಪರ್ಕಿಸಿ ಎಸ್‌ಐಡಿಬಿಐ ಇವರಿಂದ ಸಾಲ ಸೌಲಭ್ಯಗಳನ್ನು ವ್ಯವಸ್ಥೆ ಮಾಡಿ ಕೊಡುವುದಾಗಿ ಮತ್ತು ಎಸ್‌ಐಡಿಬಿಐ ಸಂಸ್ಥೆಯ ನಕಲಿ ಪತ್ರಗಳ ಮೇಲೆ ಮೋಸದ ಲೋನ್ ಸ್ಯಾಂಕ್ಷನ್ ಲೆಟರ್‌ಗಳನ್ನು ನೀಡುತ್ತಲಿದ್ದಾರೆ.
ಮುಂದುವರಿದಂತೆ ಎಸ್‌ಐಡಿಬಿಐ ಸ್ಪಷ್ಟಪಡಿಸುವುದು ಏನೆಂದರೆ, ಸಂಸ್ಥೆಯು ಯಾವುದೇ ರೀತಿಯ ಸಾಲ ಸೌಲಭ್ಯಗಳನ್ನು ಒದಗಿಸಲು ಯಾವುದೇ ಏಜೆಂಟ್/ಏಜೆನ್ಸಿಗಳನ್ನು ನೇಮಿಸಲಾಗಿರುವುದಿಲ್ಲ. ಆದ್ದರಿಂದ, ಸಾರ್ವಜನಿಕರು ಇಂತಹ ವಂಚಕರಿಂದ ಜಾಗ್ರತೆಯಿಂದ ಇರಬೇಕೆಂದು ಎಚ್ಚರಿಕೆ ಸೂಚಿಸಲಾಗಿದೆ. ಯಾರಾದರೂ ಇಂತಹ ವಂಚಕ ವ್ಯಕ್ತಿ/ಏಜೆನ್ಸಿಗಳೊಂದಿಗೆ ವ್ಯವಹರಿಸುತ್ತಿದ್ದಲ್ಲಿ, ಅಂತಹ ವ್ಯವಹಾರ ಅವರದೇ ಜವಾಬ್ದಾರಿ ಆಗಿರುತ್ತದೆ ಮತ್ತು ಅದರಿಂದಾಗಿ ಉಂಟಾಗಬಹುದಾದ ಯಾವುದೇ ನಷ್ಟ ಅಥವಾ ಹಾನಿಗಳಿಗೆ ಎಸ್‌ಐಡಿಬಿಐ ಸಂಸ್ಥೆಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹೊಣೆಯಾಗುವುದಿಲ್ಲ.
ಫೆಬ್ರವರಿ 24, 2021 ಪ್ರಾದೇಶಿಕ ಪ್ರಭಾರಿ, ಎಸ್‌ಐಡಿಬಿಐ, ಹೈದರಾಬಾದ್

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಾಮಗಾರಿ ವಿಭಾಗ ಕಲಬುರಗಿ
ಎಮ್.ಎಸ್.ಕೆ ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ
ಸಂಖ್ಯೆ: ಈಕರಸಾ/ಕಾನಿಅ/ಡಿಬಿ/ಟೆ/911/2020–21 ದಿನಾಂಕ: 23/02/2021

ಟೆಂಡರ್ ನೋಟಿಫಿಕೇಶನ್ ಪ್ರಕಟಣೆ ಸಂಖ್ಯೆ: 02/2020–21

Through GOK e-procurement platform WWW.eproc.karnataka.gov.in

1) ಕಾಮಗಾರಿ ವಿವರ : ವಿಜಯಪುರ ಜಿಲ್ಲೆಯ ನಾಗಠಾಣದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸುವುದು, 2) ಲೆಕ್ಕ ಶೀರ್ಷಿಕೆ : 2021–22 ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ, 3) ಟೆಂಡರಿಗಿಟ್ಟ ಮೊತ್ತ: ಕನಿಷ್ಠ ರೂ. 150.00 ಲಕ್ಷ, ಗರಿಷ್ಠ ರೂ. 150.00 ಲಕ್ಷ, 4) ಗುತ್ತಿಗೆದಾರರ ಅರ್ಹತೆ: ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ, 5) ಟೆಂಡರ್‌ನ ಸ್ಪಷ್ಟೀಕರಣದ ಅಂತಿಮ ದಿನಾಂಕ : 03–03–2021 ಸಾಯಂಕಾಲ 5:00 ಗಂಟೆಯವರೆಗೆ, 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ, 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 15–03–2021 ಸಾಯಂಕಾಲ 5:00 ಗಂಟೆಯವರೆಗೆ, 8) ಟೆಂಡರ್ ಬಿಡ್ ತೆರೆಯುವ ದಿನಾಂಕ : 17–03–2021 ಮುಂಜಾನೆ 11:00 ಗಂಟೆಯವರೆಗೆ, 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಾಮಗಾರಿ ವಿಭಾಗ ಕಲಬುರಗಿ, ಎಮ್.ಎಸ್.ಕೆ ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ. ಮೋ. ನಂ 7760992033 / 08472–220663, 10) ಅಂತರಜಾಲ ತಾಣದ ವಿಳಾಸ : ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ ದಿನಾಂಕ 01–03–2021 ರ ನಂತರ ಈ ಕೆಳಗಿನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ನೋಡಬಹುದಾಗಿದೆ www.eproc.karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಈ.ಕ.ರ.ಸಾ.ಸಂಸ್ಥೆ, ಕಾಮಗಾರಿ ವಿಭಾಗ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/970/ಎಂ.ಸಿ&ಎ/2020–21

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ ಇವರ ಕಛೇರಿ.
ಸಂಖ್ಯೆ.ಲೋಇಃಬಾವಿಃ/ಪಿಬಿ/ಕೆಡಬ್ಲು/2020–21/04623 ದಿನಾಂಕ: 22–02–2021

ಟೆಂಡರ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲೂ–1,4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಗಳ ಟೆಂಡರ ಅಹ್ವಾನಿಸಲಾಗಿದೆ.
ವರ್ಕ ಇಂಡೆಂಟ್ ನಂ: ಸಾಮಾನ್ಯ: **134086–ಕಾಲ್–2, 133797 ಕಾಲ್–2, 135649, 130507, 135133**
ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ 160.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ 10.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಟೆಂಡರ ಅಹ್ವಾನಿಸಲಾಗಿದೆ.

ಬ)	ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ: 02–03–2021 ರಂದು ಮಧ್ಯಾಹ್ನ 5–30 ಘಂಟೆಯವರೆಗೆ
ಕ)	ಟೆಂಡರ ಸ್ವೀಕರಿಸುವ ದಿನಾಂಕ : 03–03–2021 ರಂದು ಮಧ್ಯಾಹ್ನ 4–00 ಘಂಟೆಯವರೆಗೆ
ಡ)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 04–03–2021 ರಂದು ಮಧ್ಯಾಹ್ನ 4.30 ಘಂಟೆಯವರೆಗೆ
ಬ)	ಆರ್ಥಿಕ ಬಿಡ್ ತೆರೆಯುವ ದಿನಾಂಕ : 05–03–2021 ರಂದು ಮಧ್ಯಾಹ್ನ 4.30 ಘಂಟೆಯವರೆಗೆ

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ http://eproc.karnataka.gov.in ರಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ.
ವಾ.ಸಾ.ಇ/ಬಾಗಲಕೋಟ/534/2020–21/ದೇಶಪಾಂಡೆಪಬ್ಲಿಸಿಟಿ
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತಂತ್ರಜ್ಞಾನ



ಗೂಗಲ್ ಪ್ಲೇ ಮ್ಯೂಸಿಕ್ ವರ್ಗಾವಣೆ

ಇಂದೇ 'ಯೂಟ್ಯೂಬ್ ಮ್ಯೂಸಿಕ್'ಗೆ

ಅವಿನಾಶ್ ಬಿ.

ಹೆಚ್ಚಿನ ಆಂಡ್ರಾಯ್ಡ್ ಫೋನ್ ಬಳಕೆದಾರರಿಗೆ ಗೂಗಲ್‌ನಿಂದ ಇತ್ತೀಚೆಗೊಂದು ಇಮೇಲ್ ಬಂದಿರಬಹುದು. ನಿಮ್ಮ 'ಗೂಗಲ್ ಪ್ಲೇ ಮ್ಯೂಸಿಕ್' ಆ್ಯಪ್‌ನಲ್ಲಿರುವ ಹಾಡುಗಳ ಎಲ್ಲ ಫೈಲ್‌ಗಳನ್ನು ತಕ್ಷಣವೇ ವರ್ಗಾಯಿಸಿಕೊಳ್ಳಿ, ಏಕೆಂದರೆ ಇಂದೇ ಕೊನೆಯ ದಿನ.

ಇದು ಸಾಮಾನ್ಯವಾಗಿ ಬೆದರಿಸುವ ಇಮೇಲ್ ಅಂತ ನಿರ್ಲಕ್ಷಿಸಬೇಡಿ. ನೀವು ಸಂಗೀತಪ್ರಿಯರಾಗಿದ್ದರೆ, ಗೂಗಲ್ ಪ್ಲೇ ಮ್ಯೂಸಿಕ್ ಆ್ಯಪ್ ಮೂಲಕವಾಗಿ ಸಾಕಷ್ಟು ಹಾಡುಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದರೆ ಅಥವಾ ಅಲ್ಲಿಂದಲೇ ಖರೀದಿಸಿ ನಿಮ್ಮ ಮೊಬೈಲ್ ಫೋನ್‌ನಲ್ಲಿ ಇರಿಸಿಕೊಂಡಿದ್ದರೆ ತಕ್ಷಣವೇ ಕಾರ್ಯಪ್ರವೃತ್ತರಾಗಿ.

ನೀವು ಸಂಗ್ರಹಿಸಿಟ್ಟಿರುವ ಅಮೂಲ್ಯವಾದ ಹಾಡುಗಳು ಕಳೆದುಹೋಗದಂತೆ, ಮತ್ತು ಹೋದಲ್ಲೆಲ್ಲಾ ದೊರೆಯುವಂತೆ ಮಾಡಬೇಕಿದ್ದರೆ ನೀವು ಅದನ್ನು ಗೂಗಲ್‌ನದೇ ಮತ್ತೊಂದು ಉತ್ಪನ್ನ (ಆ್ಯಪ್) 'ಯೂಟ್ಯೂಬ್ ಮ್ಯೂಸಿಕ್'ಗೆ ವರ್ಗಾಯಿಸಿಕೊಳ್ಳಬೇಕಾಗುತ್ತದೆ.

'ಗೂಗಲ್ ಪ್ಲೇ ಮ್ಯೂಸಿಕ್' ಆ್ಯಪ್, ಬಹುತೇಕ ಆಂಡ್ರಾಯ್ಡ್ ಫೋನ್‌ಗಳಲ್ಲಿ ಮೊದಲೇ ಅಳವಡಿಕೆಯಾಗಿ ಬರುತ್ತದೆ. ಹಾಡು ಕೇಳುವುದಕ್ಕೆ, ಅಪರೂಪದ ಹಾಡುಗಳನ್ನೆಲ್ಲ ಸಂಗ್ರಹಿಸಿಡುವುದಕ್ಕೆ ಈ ಆ್ಯಪ್ ಬಳಸಲಾಗುತ್ತದೆ. ಇದನ್ನು ನಮ್ಮ ಖಾತೆಗೆ ಸಂಯೋಜಿಸಿದರೆ (ಅಂದರೆ ಲಾಗಿನ್ ಆಗಿ ಜೋಡಿಸಿದರೆ) ಎಲ್ಲ ಹಾಡುಗಳೂ ಕ್ಲೌಡ್‌ನಲ್ಲಿ (ಅಂತರಜಾಲ ಸರ್ವರ್‌ನಲ್ಲಿ) ಸೇವ್ ಆಗಿರುತ್ತವೆ ಮತ್ತು ಯಾವಾಗ ಬೇಕಿದ್ದರೂ, ಯಾವುದೇ ಸಾಧನಗಳಲ್ಲಿ ಲಾಗಿನ್ ಆಗಿಯೂ ನಾವು ಈ ಹಾಡುಗಳನ್ನು ಕೇಳಬಹುದು.

ಫೋನ್ ಬದಲಾಯಿಸಿದಾಗ ಇಂಥ ವ್ಯವಸ್ಥೆ ಉಪಯೋಗಕ್ಕೆ ಬರುತ್ತದೆ. 'ಪ್ಲೇ ಮ್ಯೂಸಿಕ್' ಅನ್ನು ಗೂಗಲ್ ಈಗಾಗಲೇ ನಿಲ್ಲಿಸಿದ್ದರೂ, ಸಂಗೀತ ಆಲಿಸುವುದಕ್ಕೇನೂ ಅಡ್ಡಿಯಿರಲಿಲ್ಲ. ಆದರೆ, ಈಗ ಫೆ.24ರೊಳಗೆ ನಮಗೆ ಬೇಕಾದ ಹಾಡುಗಳನ್ನು ಸೇವ್ ಮಾಡಿಟ್ಟುಕೊಳ್ಳಬೇಕು ಅಂತ ಗಡುವು ವಿಧಿಸಲಾಗಿದೆ. ಇಲ್ಲವೆಂದಾದರೆ ಅವೆಲ್ಲವನ್ನೂ ಅಳಿಸಿಹಾಕಲಾಗುತ್ತದೆ ಅಂತ ಗೂಗಲ್ ಹೇಳಿದೆ. ಪರ್ಯಾಯವಾಗಿ 'ಯೂಟ್ಯೂಬ್ ಮ್ಯೂಸಿಕ್'ಗೆ ಹಾಡುಗಳನ್ನು ವರ್ಗಾಯಿಸುವ ವ್ಯವಸ್ಥೆಯನ್ನೂ ಗೂಗಲ್ ಸುಲಭ ಮಾಡಿಕೊಟ್ಟಿದೆ.

ನೀವು ಪ್ಲೇ ಮ್ಯೂಸಿಕ್ ತೆರೆದಾಕ್ಷಣವೇ ಸಂದೇಶವೊಂದು ಕಾಣಿಸುತ್ತದೆ ಮತ್ತು ಹಾಡುಗಳನ್ನೆಲ್ಲ ಯೂಟ್ಯೂಬ್ ಮ್ಯೂಸಿಕ್‌ಗೆ ವರ್ಗಾಯಿಸಲು 'Transfer to Youtube Music' ಎಂಬ ಲಿಂಕ್ ತೋರಿಸುತ್ತದೆ. ಕೆಲವೇ ಕ್ಷಣದ ಕೆಲಸವಷ್ಟೇ ಇದು.

ಕಂಪ್ಯೂಟರಿನಿಂದ ಮಾಡುವುದಿದ್ದರೆ, music.google.com ತಾಣಕ್ಕೆ ಹೋಗಿ, ನಿಮ್ಮ ಖಾತೆಯ ಮೂಲಕ ಲಾಗಿನ್ ಆಗಿಯೂ ಅದರಲ್ಲಿರುವ ಹಾಡುಗಳನ್ನು ಕಂಪ್ಯೂಟರಿಗೆ ವರ್ಗಾಯಿಸಿಕೊಳ್ಳಬಹುದು ಅಥವಾ ನೇರವಾಗಿ 'ಯೂಟ್ಯೂಬ್ ಮ್ಯೂಸಿಕ್'ಗೆ ವರ್ಗಾಯಿಸಬಹುದು.

ನೀವು ರಚಿಸಿರುವ ಪ್ಲೇ-ಲಿಸ್ಟ್‌ಗಳು, ಹಾಡುಗಳು, ಆಲ್ಬಂಗಳು, ಲೈಕ್‌ಗಳು, ಬಿಲ್ಲಿಂಗ್ ಮಾಹಿತಿ ಎಲ್ಲವೂ ಕೂಡ ಗೂಗಲ್‌ನದೇ ಉತ್ಪನ್ನವಾಗಿರುವ ಹೊಸ ತಾಣಕ್ಕೆ ವರ್ಗಾವಣೆಯಾಗುತ್ತದೆ.

ಅಲ್ಲದೆ, 'Manage Your Music' ಎಂಬುದನ್ನು ಆಯ್ಕೆ ಮಾಡಿದರೆ, ಹಾಡುಗಳ ಲೈಬ್ರರಿಯಲ್ಲಿರುವ ಎಲ್ಲ ಹಾಡುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಎಲ್ಲ ಡೇಟಾ ಅಳಿಸುವ ಆಯ್ಕೆಯೂ ಅಲ್ಲಿ ಕಾಣಿಸುತ್ತದೆ.

ಹಾಗೆಂದು, ನಿಮ್ಮದೇ ಸಾಧನದಲ್ಲಿ ಸಂಗ್ರಹವಾಗಿರುವ ಹಾಡುಗಳೇನೂ ಅಳಿಸಿಹೋಗುವುದಿಲ್ಲ ಎಂಬುದನ್ನೂ ಗಮನಿಸಿ. ಕೇವಲ ಹಾಡುಗಳ ಪ್ಲೇಯರ್ ಆಗಿ ಈ ಆ್ಯಪ್ ಬಳಸುತ್ತಿರುವವರ ಮೊಬೈಲ್‌ನಲ್ಲಿರುವ ಡೇಟಾ ಡಿಲೀಟ್ ಆಗುವುದಿಲ್ಲ. ಈ ಎಚ್ಚರಿಕೆಯು ಮುಖ್ಯವಾಗಿ, ಹಾಡುಗಳನ್ನು 'ಗೂಗಲ್ ಪ್ಲೇ ಮ್ಯೂಸಿಕ್' ಮೂಲಕ ತಮಗಿಷ್ಟದ ಹಾಡುಗಳನ್ನು ಖರೀದಿಸಿದವರಿಗಾಗಿ ಮತ್ತು ಆನ್‌ಲೈನ್‌ನಲ್ಲೇ ಸಂಗ್ರಹಿಸಿಟ್ಟುಕೊಂಡವರಿಗಾಗಿ. ನಿಮಗಿಷ್ಟವಾದ ಹಾಡುಗಳೇ ಬೇಕೆಂದಾದರೆ 'ಯೂಟ್ಯೂಬ್ ಮ್ಯೂಸಿಕ್'ಗೆ ಹಣ ಪಾವತಿಸಿ ಪ್ರೀಮಿಯಂ ಸದಸ್ಯತ್ವ ಪಡೆಯಬಹುದು.

ಹಾಡು ಕೇಳುಗರ ಸಂಖ್ಯೆ ಹೆಚ್ಚಾಗಿದ್ದು, ವಿಡಿಯೊ ತಾಣವಾಗಿರುವ ಯೂಟ್ಯೂಬ್ ಅನ್ನು ಹಾಡುಗಳ ತಾಣದೊಂದಿಗೆ ಬೆಸೆಯುವುದಕ್ಕೆ ಪೂರಕವಾಗಿ ಈ ಹೊಸ ಆ್ಯಪ್ ಬಂದಿದೆ. ಇದರಲ್ಲಿ ನಾವು ಯೂಟ್ಯೂಬ್‌ನಲ್ಲಿ ಮಾಡಿಕೊಂಡಿರುವ ಪ್ಲೇ-ಲಿಸ್ಟ್‌ಗಳೂ ಕಾಣಿಸುತ್ತವೆ.

> 'ಪ್ಲೇ ಮ್ಯೂಸಿಕ್' ಅನ್ನು ಗೂಗಲ್ ಈಗಾಗಲೇ ನಿಲ್ಲಿಸಿದ್ದರೂ, ಸಂಗೀತ ಆಲಿಸುವುದಕ್ಕೇನೂ ಅಡ್ಡಿಯಿರಲಿಲ್ಲ. ಆದರೆ, ಈಗ ಫೆ.24ರೊಳಗೆ ನಮಗೆ ಬೇಕಾದ ಹಾಡುಗಳನ್ನು ಸೇವ್ ಮಾಡಿಟ್ಟುಕೊಳ್ಳಬೇಕು ಅಂತ ಗಡುವು ವಿಧಿಸಲಾಗಿದೆ. ಇಲ್ಲವೆಂದಾದರೆ ಅವೆಲ್ಲವನ್ನೂ ಅಳಿಸಿಹಾಕಲಾಗುತ್ತದೆ ಅಂತ ಗೂಗಲ್ ಹೇಳಿದೆ. ಪರ್ಯಾಯವಾಗಿ 'ಯೂಟ್ಯೂಬ್ ಮ್ಯೂಸಿಕ್'ಗೆ ಹಾಡುಗಳನ್ನು ವರ್ಗಾಯಿಸುವ ವ್ಯವಸ್ಥೆಯನ್ನೂ ಗೂಗಲ್ ಸುಲಭ ಮಾಡಿಕೊಟ್ಟಿದೆ.

ನೂತನ್ ಲ್ಯಾಬ್ಸ್ ರೂಪಿಸಿದ ಗಾಳಿ ಶುದ್ಧೀಕರಣ ಯಂತ್ರ

ವಾಯುಶುದ್ಧೀಕರಣಕ್ಕೆ 'ನೂತನ' ನ್ಯಾನೋ ತಂತ್ರ

ಶರತ್ ಹೆಗ್ಡೆ

ವಾಯು ಶುದ್ಧೀಕರಿಸುವ ಯಂತ್ರಗಳು ಸಾಕಷ್ಟು ಮಾರುಕಟ್ಟೆಯಲ್ಲಿವೆ. ಇತ್ತೀಚೆಗಂತೂ ಕೆಲವು ವಾಯು ಶುದ್ಧೀಕರಣ ಯಂತ್ರಗಳು ಕೊರೊನಾ ವೈರಸ್‌ನ್ನು ಕೊಲ್ಲುತ್ತವೆ ಎಂದೂ ಹೇಳಿಕೊಂಡು ಮಾರುಕಟ್ಟೆಗೆ ಲಗ್ಗೆ ಇಡಲು ಪ್ರಯತ್ನಿಸಿದವು.

ಆದರೆ ಈ ನಡುವೆ ಸದ್ದಿಲ್ಲದೇ ಒಂದು ಪ್ರಯತ್ನ ಸಾಗಿತ್ತು. ಕರ್ನಾಟಕದ ಸ್ಟಾರ್ಟ್‌ಅಪ್ 'ನೂತನ್ ಲ್ಯಾಬ್ಸ್' ಕಂಪನಿ ಭಾರತೀಯ ವಿಜ್ಞಾನ ಸಂಸ್ಥೆಯ ಜೊತೆ ಸೇರಿಕೊಂಡು ಸ್ಮಾಗ್ ಪ್ಯೂರಿಫೈಯರ್‌ನ್ನು ರೂಪಿಸಿದೆ. ಹೊಂಜು (ಹೊಗೆ ಮತ್ತು ಮಂಜು) ಸೋಸಿ ಶುದ್ಧ ಗಾಳಿಯನ್ನು ವಾತಾವರಣಕ್ಕೆ ಬಿಡುವ ವ್ಯವಸ್ಥೆ ಈ ಯಂತ್ರದಲ್ಲಿದೆ. ಬಯಲು ಪ್ರದೇಶ, ಸಾರ್ವಜನಿಕರ ಓಡಾಟದ ಸ್ಥಳದಲ್ಲಿ ಸ್ಥಾಪಿಸಿದರೆ ಸಾಕು. ಈ ಯಂತ್ರ ಪ್ರತಿ ನಿಮಿಷಕ್ಕೆ 15 ಸಾವಿರ ಘನ ಅಡಿ ಪ್ರದೇಶದ ಗಾಳಿಯನ್ನು ಶುದ್ಧೀಕರಿಸಿಬಿಡುತ್ತದೆ.

ಇದು ಕೆಲಸ ಮಾಡುವುದು ನ್ಯಾನೋ ತಂತ್ರಜ್ಞಾನದ ಮೂಲಕ. ವಾತಾವರಣದಲ್ಲಿರುವ ಕಲುಷಿತ ಗಾಳಿಯನ್ನು ಹೀರಿಕೊಂಡು ನ್ಯಾನೋಕಣಗಳ ಮೂಲಕ ಹಾಯಿಸುತ್ತದೆ. ಇಂಗಾಲದ ಡೈ ಆಕ್ಸೈಡ್ ಮತ್ತು ಇತರ ಅಪಾಯಕಾರಿ ಅಂಶಗಳನ್ನು ಹೀರಿಕೊಳ್ಳುತ್ತದೆ. ಆ ಕಣಗಳಲ್ಲಿರುವ ಅಪಾಯಕಾರಿ ಅಂಶಗಳನ್ನು ನಿಷ್ಕ್ರಿಯಗೊಳಿಸುತ್ತದೆ.

ಕಂಪನಿ ಹೇಳುವ ಪ್ರಕಾರ, 'ಈ ಯಂತ್ರದಲ್ಲಿ ವಾಯು ಶುದ್ಧೀಕರಣವು 11 ಅತ್ಯಾಧುನಿಕ ತಾಂತ್ರಿಕ ವ್ಯವಸ್ಥೆಯ ಮೂಲಕ ನಡೆಯುತ್ತದೆ. 1ರಿಂದ 5ನೇ ಹಂತದವರೆಗೆ ನಡೆಯುವ ಪ್ರಕ್ರಿಯೆಯಲ್ಲಿ ಗಾಳಿಯು ಲೋಹದ ಸೋಸು ವ್ಯವಸ್ಥೆ ಮೂಲಕ (ಮೆಟಲ್ ಮೆಷ್) ಹಾಯುತ್ತದೆ. ಈ ಹಂತದಲ್ಲೇ ದಟ್ಟ ದೂಳಿನ ಕಣಗಳು, ಅಪಾಯಕಾರಿ ಅಂಶಗಳು ಸೋಸಲ್ಪಡುತ್ತದೆ. ಉಸಿರಾಟಕ್ಕೆ ಯೋಗ್ಯವಾದ ಗಾಳಿಯನ್ನು ಹೊರಬಿಡುತ್ತದೆ'.

6ನೇ ಹಂತದಲ್ಲಿ ನ್ಯಾನೋ ಕ್ಲಸ್ಟರ್ ವೇಗವರ್ಧಕಗಳು ಗಾಳಿಯಲ್ಲಿರುವ ವಿಷಕಾರಿ ಅನಿಲಗಳು, ರೋಗಕಾರಕಗಳನ್ನು ನಿಷ್ಕ್ರಿಯಗೊಳಿಸುತ್ತವೆ.

7ರಿಂದ 10ನೇ ಹಂತದಲ್ಲಿ ನ್ಯಾನೋಕಣಗಳನ್ನು ಒಳಗೊಂಡ ತೆಳ್ಳನೆಯ ಪದರಗಳು ಗಾಳಿಯಲ್ಲಿನ ಬೆನ್ಝೀನ್ ಸಹಿತ ಇತರ ಕಣಗಳನ್ನು ಪರಿವರ್ತಿಸುತ್ತವೆ.

11ನೇ ಹಂತದಲ್ಲಿ ಗಾಳಿಯಲ್ಲಿರುವ ದುರ್ವಾಸನೆ ಮತ್ತೂ ಉಳಿದ ಹಾನಿಕಾರಕ ಅಂಶಗಳನ್ನು ಹೊರಹಾಕುತ್ತದೆ.

6 ಅಡಿ ಸುತ್ತಳತೆಯ 15 ಅಡಿ ಎತ್ತರದ ಈ ಯಂತ್ರ ಕಾರ್ಯಾಚರಿಸಲು 11 ಕಿಲೋವಾಟ್ ವಿದ್ಯುತ್ ಬೇಕು.

ಎಲ್ಲೆಲ್ಲಾ ಸೂಕ್ತ?

ದಟ್ಟ ಟ್ರಾಫಿಕ್ ಪ್ರದೇಶ, ಕಾರ್ಖಾನೆಗಳು, ಶಾಪಿಂಗ್ ಮಾಲ್, ಶಾಲೆ, ಕಾಲೇಜು, ಆಸ್ಪತ್ರೆ, ರಾಸಾಯನಿಕ ಘಟಕಗಳಿರುವ ಪ್ರದೇಶ ಇತ್ಯಾದಿ.

ಭಾರತೀಯ ವಿಜ್ಞಾನ ಸಂಸ್ಥೆಯ ನಿಗಾದ ಅಡಿಯಲ್ಲಿ ಅದರ ಮಾನದಂಡಗಳ ಪ್ರಕಾರವೇ ನಿರ್ಮಾಣಗೊಂಡ ಏಕೈಕ ವಾಯು ಶುದ್ಧೀಕರಣ ಯಂತ್ರ ಇದು ಎನ್ನುತ್ತಾರೆ, ನೂತನ್ ಲ್ಯಾಬ್ಸ್‌ನ ಮುಖ್ಯಸ್ಥ ಎಚ್.ಎಸ್. ನೂತನ್.

ಮಾಹಿತಿಗೆ ಮೊ. 9071149995.

ಬ್ರಷ್ ಕಟರ್‌ಗೊಂದು 'ಟ್ರಾಲಿ'

ಆತ್ರೇಯ

ಹೊಲ, ಗದ್ದೆ, ತೋಟಗಳಲ್ಲಿ ಬೆಳೆದ ಕಳೆ ತೆಗೆಯುವುದಕ್ಕಾಗಿ ಕೆಲವು ಕಂಪನಿಗಳು ಮೋಟಾರ್ ಚಾಲಿತ ಕಳೆ ಕೊಚ್ಚುವ ಯಂತ್ರಗಳನ್ನು (ಬ್ರಷ್ ಕಟರ್) ಪರಿಚಯಿಸಿವೆ. ಆದರೆ, ಕಳೆ ತೆಗೆಯುವುದು ಯಂತ್ರವಾದರೂ, ಅದನ್ನು ನಿರ್ವಹಿಸುವುದು ತುಸು ಶ್ರಮದಾಯಕ.

ಈ ಶ್ರಮವನ್ನು ಕಡಿಮೆಗೊಳಿಸಲು ನೆರವಾಗುವ ಟ್ರಾಲಿಯೊಂದನ್ನು ಚಿಕ್ಕಮಗಳೂರು ಜಿಲ್ಲೆ ಕೊಪ್ಪದ ಗೌರಿ ಭಾರ್ಗವ ಕಂಪನಿ ಅಭಿವೃದ್ಧಿಪಡಿಸಿದೆ.

ಈ ಟ್ರಾಲಿಯಲ್ಲಿ ಸೈಕಲ್‌ನಲ್ಲಿದ್ದಂತೆ ಎರಡು ಹ್ಯಾಂಡಲ್‌ಗಳಿವೆ. ಎರಡು ಚಕ್ರಗಳನ್ನು ಒಂದು ಆ್ಯಕ್ಸೆಲ್‌ಗೆ ಜೋಡಿಸಿದ್ದಾರೆ. ಚಕ್ರಗಳ ನಡುವೆ ಕಳೆ ತೆಗೆಯುವ ಯಂತ್ರ (ಸೈಡ್ ಪ್ಯಾಕ್ ಮಾದರಿಯದ್ದು) ಕೂಡಿಸಲು ಜಾಗವಿದೆ. ಕಳೆ ಚೂರು ಕಣ್ಣಿಗೆ ಹಾರದಂತೆ ತಡೆಯಲು ಹ್ಯಾಂಡಲ್‌ಗಳ ನಡುವೆ ಪ್ಲಾಸ್ಟಿಕ್ ಶೀಲ್ಡ್ ಇದೆ. ಯಂತ್ರ ಚಾಲನೆ ಮಾಡಿ, ಹ್ಯಾಂಡಲ್ ಹಿಡಿದು ಜಮೀನಿನಲ್ಲಿ ತಳ್ಳುಗಾಡಿಯಂತೆ ತೆಗೆದುಕೊಂಡು ಹೋದರೆ ಆಯಿತು. ಮುಂಭಾಗದ ಕತ್ತರಿ ಕಳೆ ತೆಗೆಯುತ್ತಿರುತ್ತದೆ.

ಹೆಗಲಿಗೆ ಯಂತ್ರ ತೂಗು ಹಾಕಿಕೊಂಡು ಕಳೆ ಕತ್ತರಿಸುವಾಗ ಬೆನ್ನು ನೋಯಿಸುತ್ತದೆ. ಫೇಸ್‌ಶೀಲ್ಡ್/ಕನ್ನಡಕ ಧರಿಸಿ ಕಳೆ ತೆಗೆಯುವಾಗ ಉಸಿರಿನ ಹಬೆ ಗಾಜಿನ ಮೇಲೆ ಹರಡಿಕೊಂಡು, ಮುಂದಿನ ದಾರಿ ಕಾಣದಂತಾಗುವುದುಂಟು. ಆದರೆ ಈ ಸಾಧನದಲ್ಲಿ ಆ ತಾಪತ್ರಯವಿಲ್ಲ.

ಅರವಿಂದ ಮತ್ತು ಗೌರವ್ ಭಾರ್ಗವ ಸೇರಿ ಈ ಸಾಧನ ತಯಾರಿಸಿದ್ದಾರೆ. 'ಬ್ರಷ್ ಕಟರ್ ಯಂತ್ರ ಇದ್ದರೆ, ಅದಕ್ಕೆ ತಕ್ಕಂತೆ ಈ ಸಾಧನವನ್ನು ರೂಪಿಸಿಕೊಡುತ್ತೇವೆ' ಎನ್ನುತ್ತಾರೆ ಅರವಿಂದ್.

ಈ ಉಪಕರಣ (ಟ್ರಾಲಿ)ದ ಬೆಲೆ ₹3,500. ಸಾಗಾಟ ವೆಚ್ಚ ಪ್ರತ್ಯೇಕ. ಹೆಚ್ಚಿನ ಮಾಹಿತಿಗೆ: https://bit.ly/3skhkS2 ಅಥವಾ 8277009667ಗೆ ಸಂಪರ್ಕಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿದ್ಯುತ್ ಮೋಟಾರ್

ಎಸ್ಸೆಸ್ಸೆಲ್ಸಿ

ಭೌತಶಾಸ್ತ್ರ

ಇದು ವಿದ್ಯುತ್ ಶಕ್ತಿಯನ್ನು ಯಾಂತ್ರಿಕ ಶಕ್ತಿಯನ್ನಾಗಿ ಪರಿವರ್ತಿಸುವ ಒಂದು ಸಾಧನವಾಗಿದೆ. ಇದನ್ನು ನಾವು ದಿನನಿತ್ಯ ಬಳಸುವ ವಿದ್ಯುತ್ ಫ್ಯಾನ್, ಫ್ರಿಜ್, ಮಿಕ್ಸರ್‌ಗಳು, ಬಟ್ಟೆ ತೊಳೆಯುವ ಯಂತ್ರಗಳಲ್ಲಿ ಕಾಣುತ್ತೇವೆ.

ವಿದ್ಯುತ್ ಮೋಟಾರ್‌ನ ಸಂಕ್ಷಿಪ್ತ ವಿವರಣೆ



ವಿದ್ಯುತ್ ಮೋಟಾರ್‌ನಲ್ಲಿ ಒಂದು ಅವಾಹಕ ಲೇಪನವಿರುವ ತಾಮ್ರದ ತಂತಿಯನ್ನೊಳಗೊಂಡ ಆಯತಾಕಾರದ ಸುರುಳಿ ABCD ಯನ್ನು ಅಯಸ್ಕಾಂತದ ಎರಡು ಧ್ರುವ (N ಮತ್ತು S)ಗಳ ನಡುವೆ ಇರಿಸಲಾಗುತ್ತದೆ. ಸುರುಳಿಯ AB ಮತ್ತು CD ಬದಿಗಳು ಕಾಂತಕ್ಷೇತ್ರದ ದಿಕ್ಕಿಗೆ ಲಂಬವಾಗಿದ್ದು, ಸುರುಳಿಯ ತುದಿಗಳನ್ನು ಎರಡು ಒಡಕು ಉಂಗುರುಗಳಾದ P ಮತ್ತು Q ಗಳಿಗೆ ಜೋಡಿಸಲಾಗಿರುತ್ತದೆ. ಈ ಒಡಕು ಉಂಗುರಗಳನ್ನು ಕ್ರಮವಾಗಿ ಸ್ಥಿರವಾಹಕ ಕುಂಚ X ಮತ್ತು Y ಗಳನ್ನು ಸ್ಪರ್ಶಿಸುವಂತೆ ಜೋಡಿಸಲಾಗಿರುತ್ತದೆ. ವಾಹಕ ಕುಂಚ X ಮತ್ತು Y ಗಳನ್ನು ವಿದ್ಯುತ್ ಕೋಶಕ್ಕೆ ಸಂಪರ್ಕಿಸಲಾಗುತ್ತದೆ.

ಮೋಟಾರ್‌ನ ಕಾರ್ಯ

ಚಿತ್ರದಲ್ಲಿ ತೋರಿಸಿರುವಂತೆ ವಿದ್ಯುತ್ ಪ್ರವಾಹವು ವಾಹಕ ಕುಂಚ X ನ ಮೂಲಕ ಪ್ರವೇಶಿಸಿ ವಾಹಕ ಕುಂಚ Y ನ ಮೂಲಕ ವಾಪಸ್ಸಾಗುತ್ತದೆ.

ಈ ಸಂದರ್ಭದಲ್ಲಿ ವಿದ್ಯುತ್ A ಯಿಂದ Bಗೆ ಹರಿಯುವಾಗ ಸುರುಳಿಯ AB ಬಾಹುವಿನ ಮೇಲೆ ಹರಿಯುವಾಗ ಸುರುಳಿಯ ಬಾಹುವಿನ ಮೇಲೆ ಕಾರ್ಯನಿರ್ವಹಿಸುವ ಬಲವು ಅದನ್ನು ಕೆಳಗೆ ತಳ್ಳುತ್ತದೆ. ಅದೇ ರೀತಿ ವಿದ್ಯುತ್ C ಯಿಂದ D ಗೆ ಹರಿಯುವಾಗ ಸುರುಳಿಯ CD ಬಾಹುವಿನ ಮೇಲೆ ಕಾರ್ಯನಿರ್ವಹಿಸುವ ಅದನ್ನು ಮೇಲಕ್ಕೆ ತಳ್ಳುತ್ತದೆ. ಆದ್ದರಿಂದ ಸುರುಳಿ ಮತ್ತು ದಂಡ 0 ಗಳು ಅಕ್ಷದ ಮೇಲೆ ಅಪ್ರದಕ್ಷಿಣವಾಗಿ ಸುತ್ತುತ್ತವೆ.

ಈ ಸಮಯದಲ್ಲಿ Q ನ ಕುಂಚ X ನೊಂದಿಗೆ ಮತ್ತು P ಯ ಕುಂಚ Y ನೊಂದಿಗೆ ಸಂಪರ್ಕ ಹೊಂದುತ್ತದೆ ಮತ್ತು ಸುರುಳಿಯಲ್ಲಿನ ವಿದ್ಯುತ್ ಪ್ರವಾಹ ಹಿಮ್ಮುಖಗೊಂಡು DCBA ಮಾರ್ಗದಲ್ಲಿ ಪ್ರವಹಿಸುತ್ತದೆ.

ಹಿಮ್ಮುಖವಾದ ವಿದ್ಯುತ್ ಪ್ರವಾಹವು AB ಮತ್ತು CD ಮೇಲೆ ವರ್ತಿಸುವ ಬಲದ ದಿಕ್ಕನ್ನೂ ಕೂಡ ಹಿಮ್ಮುಖಗೊಳಿಸಿ ಮೊದಲು ಕೆಳಗೆ ತಳ್ಳಲ್ಪಟ್ಟ ಸುರುಳಿಯ AB ಬದಿಯ ಮೇಲಕ್ಕೂ ಮೊದಲು ಕೆಳಗೆ ತಳ್ಳಲ್ಪಟ್ಟ CD ಬದಿಯ ಕೆಳಕ್ಕೆ ತಳ್ಳಲ್ಪಟ್ಟು ಮತ್ತರ್ಧ ಸುತ್ತನ್ನು ಸುತ್ತುತ್ತದೆ. ಹೀಗೆ ವಿದ್ಯುತ್ ಪ್ರವಾಹದ ದಿಕ್ಕು ಹಿಮ್ಮುಖವಾಗುವುದಕ್ಕೆ ಸುರುಳಿ ಮತ್ತು ದಂಡದ ನಿರಂತರ ಸುತ್ತುವಿಕೆ ಕಾರಣವಾಗಿದೆ.

ಒಂದು ವಿದ್ಯುನ್ಮಂಡಲದಲ್ಲಿ ವಿದ್ಯುತ್ ಪ್ರವಾಹದ ದಿಕ್ಕನ್ನು ಹಿಮ್ಮುಖಗೊಳಿಸುವ ಸಾಧನವನ್ನು ದಿಕ್ಪರಿವರ್ತನ ಎಂದು ಕರೆಯುತ್ತಾರೆ. ವಿದ್ಯುತ ಮೋಟಾರ್‌ಗಳಲ್ಲಿ ಒಡಕು ಉಂಗುರಗಳು ದಿಕ್ಪರಿವರ್ತಕಗಳಾಗಿ ವರ್ತಿಸುತ್ತವೆ.

ಮೋಟಾರ್‌ನ ಶಕ್ತಿಯನ್ನು ಹೆಚ್ಚಿಸುವ ಅಂಶಗಳು

- ಸ್ಥಿರವಾದ ಕಾಂತದ ಬದಲು ವಿದ್ಯುತ್ಕಾಂತವನ್ನು ಬಳಸುವುದು
- ಸುರುಳಿಯಲ್ಲಿ ಹೆಚ್ಚಿನ ಸುತ್ತುಗಳನ್ನು ಬಳಸುವುದು.
- ಸುರುಳಿಯಿಂದ ಸುತ್ತಲ್ಪಟ್ಟ ಮೃದು ಕಬ್ಬಿಣ (ಇದನ್ನು ಆರ್ಮೇಚರ್ ಎನ್ನುತ್ತಾರೆ) ವನ್ನು ಬಳಸುವುದು.

ವಿದ್ಯುತ್ ಕಾಂತೀಯ ಪ್ರೇರಣೆ

ಒಂದು ವಾಹಕದಲ್ಲಿ ಬದಲಾಗುತ್ತಿರುವ ಕಾಂತ ಕ್ಷೇತ್ರವು ಇನ್ನೊಂದು ವಾಹಕದಲ್ಲಿ ವಿದ್ಯುತ್ ಪ್ರವಾಹವನ್ನು ಪ್ರೇರೇಪಿಸುತ್ತದೆ. ಈ ಶಕ್ತಿಯನ್ನು ವಿದ್ಯುತ್ಕಾಂತೀಯ ಪ್ರೇರಣೆ ಎನ್ನುವರು.

ಫ್ಲೆಮಿಂಗ್‌ನ ಬಲಗೈ ನಿಯಮ

ಸುರುಳಿಯ ಚಲನೆಯ ದಿಕ್ಕು ಕಾಂತಕ್ಷೇತ್ರದ ದಿಕ್ಕು ಮತ್ತು ವಿದ್ಯುತ್ ಪ್ರವಾಹದ ದಿಕ್ಕನ್ನು ಈ ನಿಯಮದ ಮೂಲಕ ವಿವರಿಸಬಹುದಾಗಿದ್ದು, ಚಿತ್ರದಲ್ಲಿ ತೋರಿಸಿದಂತೆ ಬಲಗೈನ ಹೆಬ್ಬೆರಳು, ತೋರುಬೆರಳುಗಳು ಮತ್ತು ಮಧ್ಯದ ಬೆರಳುಗಳನ್ನು ಪರಸ್ಪರ ಲಂಬವಾಗಿ ಇರಿಸಿದಾಗ ತೋರು ಬೆರಳು ಕಾಂತಕ್ಷೇತ್ರದ ದಿಕ್ಕನ್ನು ಹೆಬ್ಬೆರಳು ವಾಹಕದ ಚಲನೆಯ ದಿಕ್ಕನ್ನು ಮತ್ತು ಮಧ್ಯದ ಬೆರಳು ವಿದ್ಯುತ್ ಪ್ರವಾಹದ ದಿಕ್ಕನ್ನು ಸೂಚಿಸುತ್ತವೆ.



ಪ್ರಜಾವಾಣಿ ನೋಡಿಯೊ — ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ರಸಾಯನ ಶಾಸ್ತ್ರ ವಿಭಾಗದ 'ಕಾರ್ಬನ್ ಅಂಡ್ ಇಟ್ಸ್ ಕಂಪೌಂಡ್ಸ್– ವರ್ಸ್‌ಟೈಲ್ ನೇಚರ್ ಆಫ್ ಕಾರ್ಬನ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಪ್ರತಿಲೋಮ ತ್ರಿಕೋಣಮಿತಿಯ ಉತ್ಪನ್ನಗಳು

(ಮುಂದುವರಿದ ಭಾಗ)

ಗಣಿತ

ದ್ವಿತೀಯ ಪಿಯುಸಿ



$y = \text{cosec}^{-1}x$

ಅಂತಿಮವಾಗಿ ನಾವು $\tan^{-1}$ ಮತ್ತು $\cot^{-1}$ ಬಗ್ಗೆ ತಿಳಿಯೋಣ.

tan ಉತ್ಪನ್ನವನ್ನು $\left[\frac{-\pi}{2}, \frac{\pi}{2}\right]$ ನಾವು ನಿರ್ಬಂಧಿಸಿದರೆ ಮತ್ತು R ವ್ಯಾಪ್ತಿಯಲ್ಲಿ ಅದು ಉಭಯಕ್ಷೇಪನ ಉತ್ಪನ್ನವಾಗುತ್ತದೆ. ಅದಲ್ಲದೆ tan ಉತ್ಪನ್ನವು $\left[\frac{-3\pi}{2}, \frac{-\pi}{2}\right]$, $\left[\frac{-\pi}{2}, \frac{\pi}{2}\right], \left[\frac{\pi}{2}, \frac{\pi}{2}\right]$

ಇತ್ಯಾದಿ ಅಂತರಾಳಗಳ ಕ್ಷೇತ್ರದಲ್ಲಿ ಮತ್ತು R ವ್ಯಾಪ್ತಿಯಲ್ಲಿ ಉಭಯಕ್ಷೇಮ ಉತ್ಪನ್ನವಾಗುತ್ತದೆ. ಆದ್ದರಿಂದ $tn^{-1}: R \rightarrow \left[\frac{-\pi}{2}, \frac{\pi}{2}\right]$ ಎಂದು ವ್ಯಾಖ್ಯಾನಿಸಲಾಗುತ್ತದೆ. ಇಲ್ಲಿ $\left[\frac{-\pi}{2}, \frac{\pi}{2}\right]$ ಪ್ರಧಾನ ವಿಭಾಗವಾಗುತ್ತದೆ. ಇದೇ ರೀತಿಯಲ್ಲಿ $cot^{-1}: R \rightarrow (0, \pi)$ ವ್ಯಾಪ್ತಿಯಲ್ಲಿ ಬರುತ್ತದೆ. ಇಲ್ಲಿ $(0, \pi)$ ಪ್ರಧಾನ ವಿಭಾಗವಾಗುತ್ತದೆ.

ಅದೇ ರೀತಿಯಲ್ಲಿ secon t ಉತ್ಪನ್ನದ $[0, \pi] - (\frac{\pi}{2})$ ಗ ಕ್ಷೇತ್ರವನ್ನು ನಿರ್ಬಂಧಿಸಿದರೆ $R - [-1, 1]$ ಮತ್ತು ವ್ಯಾಪ್ತಿಯಲ್ಲಿ sec ಉತ್ಪನ್ನವು ಉಭಯಕ್ಷೇಪನ ಉತ್ಪನ್ನವಾಗುತ್ತದೆ. ಅದಲ್ಲದೆ secon t ಉತ್ಪನ್ನವು $[-\pi, 0] - \left[\frac{-\pi}{2}\right], [0, \pi] - \left[\frac{\pi}{2}\right]$,

ಇತ್ಯಾದಿ ಅಂತರಾಳಗಳ ಯಾವುದಾದರೊಂದು ಅಂತರಾಳವನ್ನು ಕ್ಷೇತ್ರವನ್ನಾಗಿ ಹೊಂದಿ $R - [-1, 1]$ ವ್ಯಾಪ್ತಿಯಾಗಿ ಉಭಯಕ್ಷೇಪ ಉತ್ಪನ್ನವಾಗುತ್ತದೆ. $\sec^{-1}$ ಉತ್ಪನ್ನದಲ್ಲಿ $[0, \pi] - \left[\frac{\pi}{2}\right]$ ಅಂತರಾಳದ ವ್ಯಾಪ್ತಿಯನ್ನು ತೆಗೆದುಕೊಂಡಾಗ ಆ ವ್ಯಾಪ್ತಿಯನ್ನು $\sec^{-1}$ ಉತ್ಪನ್ನದ ಪ್ರಧಾನ ಬೆಲೆಯ ವಿಭಾಗ ಎಂದು ಕರೆಯುತ್ತೇವೆ. ಆದ್ದರಿಂದ ಉತ್ಪನ್ನವನ್ನು $sec^{-1}: R - [-1, 1] - [0, \pi] - \left[\frac{\pi}{2}\right]$ ಎಂದು ವ್ಯಾಖ್ಯಾನಿಸುತ್ತೇವೆ.



$y = \tan^{-1}x$



$y = \sec^{-1}x$



$y = \cot^{-1}x$

$Sin^{-1}: (-1, 1) \rightarrow \left[\frac{-\pi}{2}, \frac{\pi}{2}\right]$
$\cos^{-1}: (-1, 1) \rightarrow [0, \pi]$
$cosec^{-1}: R - (-1,1) \rightarrow \left[\frac{-\pi}{2}, \frac{\pi}{2}\right] - (0)$
$sec^{-1}: R - (-1,1) \rightarrow [0, \pi] - \left[\frac{\pi}{2}\right]$
$\tan^{-1}: R \rightarrow \left[\frac{-\pi}{2}, \frac{\pi}{2}\right]$
$cot^{-1}: R \rightarrow [0, \pi]$

ಈ ಕೋಷ್ಟಕವು ಪ್ರತಿಲೋಮ ತ್ರಿಕೋಣ ಮಿತಿಯ ಉತ್ಪನ್ನಗಳ ಕ್ಷೇತ್ರ ಮತ್ತು ವ್ಯಾಪ್ತಿಯನ್ನು ಕೊಡುತ್ತದೆ.

ಉದಾಹರಣೆ: $\sin^{-1}\left(\frac{1}{\sqrt{2}}\right)$ ನ ಪ್ರಧಾನ ಬೆಲೆಯನ್ನು ಕಂಡುಹಿಡಿಯಿರಿ.

ಪರಿಹಾರ: ಈಗ $\sin^{-1}\left(\frac{1}{\sqrt{2}}\right) = y$ ಎಂದಿರಲಿ

ಆಗ $\sin y = \frac{1}{\sqrt{2}}$

$\sin^{-1}$ ನ ಪ್ರಧಾನ ವ್ಯಾಪ್ತಿ $\left[\frac{-\pi}{2}, \frac{\pi}{2}\right]$ ಮತ್ತು $\sin\left[\frac{\pi}{4}\right] = \frac{1}{\sqrt{2}}$ ಆಗಿರುವುದರಿಂದ ಪ್ರಧಾನ ಬೆಲೆ ಆಗುವುದು.

ಉದಾಹರಣೆ:- $cot^{-1}\left(\frac{-1}{\sqrt{3}}\right) = y$ ಎಂದಿರಲಿ

ಆಗ $cot y = \frac{-1}{\sqrt{3}}$

$cot\, \pi\, ^{\pi}/_{3} = cot\left(\frac{2\pi}{3}\right)$

$\cos^{-1}$ ಪ್ರಧಾನ ಬೆಲೆಯ ವ್ಯಾಪ್ತಿ $(0, \pi)$ ಮತ್ತು $cot^{-1}\left(\frac{2\pi}{3}\right) = \frac{1}{\sqrt{3}}$ ಆಗಿರುವುದರಿಂದ $cot^{-1}\left(\frac{1}{\sqrt{3}}\right)$ ಪ್ರಧಾನ ಬೆಲೆ $\frac{2\pi}{3}$ ಆಗುವುದು.

ಪ್ರಜಾವಾಣಿ ನೋಡಿಯೊ — ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಎಲೆಕ್ಟ್ರೊಸ್ಟಾಟಿಕ್ ಪೊಟೆನ್ಷಿಯಲ್ ಅಂಡ್ ಕೆಪಾಸಿಟೆನ್ಸ್– ಎಲೆಕ್ಟ್ರೊಸ್ಟಾಟಿಕ್ ಆಫ್ ಕಂಡಕ್ಟರ್ಸ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಪರಾನುಕರಣೆಯ ಪರಮಾನ್ನಕ್ಕಿಂತ ಸ್ವಸಾಧನೆಯ ಸಾರನ್ನ ಸ್ವಾದಿಷ್ಟ.

-ಕೆ.ಎಸ್.ನಿಸಾರ್ ಅಹಮದ್

ಕಲ್ಲುಗಣಿ ದುರಂತ: ಸ್ಫೋಟಕ ನಿಯಂತ್ರಣ ವ್ಯವಸ್ಥೆಯ ವೈಫಲ್ಯ

ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಹಿರೇನಾಗವಲ್ಲಿ ಬಳಿಯ ಕಲ್ಲು ಕ್ವಾರಿಯೊಂದರಲ್ಲಿ ಜಿಲೆಟಿನ್ ಸ್ಫೋಟಗೊಂಡು ಆರು ಕಾರ್ಮಿಕರು ದುರ್ಮರಣಕ್ಕೀಡಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯ ಹುಣಸೋಡು ಬಳಿ ಜನವರಿಯಲ್ಲಿ ಅಪಾರ ಪ್ರಮಾಣದ ಸ್ಫೋಟಕವಿದ್ದ ಲಾರಿಯೊಂದು ಸ್ಫೋಟಗೊಂಡು ಆರು ಮಂದಿ ಸಾವಿಗೀಡಾಗಿದ್ದರು. ಅದಾದ ಒಂದು ತಿಂಗಳಲ್ಲೇ ಮತ್ತೊಂದು ದುರಂತ ಸಂಭವಿಸಿದೆ. ಕಲ್ಲು ಗಣಿಗಾರಿಕೆ ಮತ್ತು ಸ್ಫೋಟಕಗಳ ಬಳಕೆ ಮೇಲೆ ನಿಯಂತ್ರಣ ಸಾಧಿಸಲು ಆಡಳಿತ ವ್ಯವಸ್ಥೆಗೆ ಇನ್ನೂ ಸಾಧ್ಯವಾಗಿಲ್ಲ ಎಂಬುದನ್ನು ಈ ಪ್ರಕರಣ ಸ್ಪಷ್ಟವಾಗಿ ತೆರೆದಿಟ್ಟಿದೆ. ಕಲ್ಲು ಗಣಿ ಗುತ್ತಿಗೆಗಳ ಮಂಜೂರಾತಿಯಲ್ಲಿನ ಅಕ್ರಮ, ಸುರಕ್ಷತಾ ವ್ಯವಸ್ಥೆ ಮತ್ತು ಸ್ಫೋಟಕಗಳ ಬಳಕೆ ಮೇಲೆ ನಿಗಾ ಇಡುವ ಪರಿಣಾಮಕಾರಿ ವ್ಯವಸ್ಥೆಯೂ ಇಲ್ಲ ಎಂಬುದನ್ನೂ ಇದು ತೋರಿಸಿಕೊಟ್ಟಿದೆ. ರಸ್ತೆ, ಸೇತುವೆ, ಕಟ್ಟಡ ಮತ್ತಿತರ ಕಾಮಗಾರಿಗಳಿಗೆ ಕಲ್ಲಿನ ಬಳಕೆ ಅನಿವಾರ್ಯ. ಆದರೆ, ಕಲ್ಲು ಗಣಿಗಳಲ್ಲಿ ದುರಂತ ಸಂಭವಿಸಿ ಪ್ರಾಣ ಹಾನಿಯಾಗುವುದು ಮತ್ತು ಆಸ್ತಿಗಳಿಗೆ ಹಾನಿಯಾಗುವುದನ್ನು ತಪ್ಪಿಸಬಲ್ಲ ಬಿಗಿಯಾದ ಕ್ರಮಗಳನ್ನು ಜಾರಿಗೆ ತರಲು ಇನ್ನೂ ಸಾಧ್ಯವಾಗಿಲ್ಲ ಎಂಬುದಕ್ಕೆ ಹುಣಸೋಡು ಹಾಗೂ ಹಿರೇನಾಗವಲ್ಲಿ ದುರ್ಘಟನೆಗಳು ಸಾಕ್ಷ್ಯ ಒದಗಿಸಿವೆ. ಕಲ್ಲು ಗಣಿಗಳ ನಿಯಂತ್ರಣ ಮತ್ತು ಅಲ್ಲಿನ ಚಟುವಟಿಕೆಗಳ ಮೇಲೆ ನಿಗಾ ಇಡುವ ಅಧಿಕಾರ ಹಲವು ಇಲಾಖೆಗಳ ನಡುವೆ ಹರಿದು ಹಂಚಿಹೋಗಿದೆ. ಗಣಿ ಗುತ್ತಿಗೆಗಳ ಮಂಜೂರಾತಿ ಮತ್ತು ನವೀಕರಣಕ್ಕೆ ಇರುವ ಆಸಕ್ತಿಯು ನಿಯಂತ್ರಣ ಹಾಗೂ ನಿಗಾಕ್ಕೆ ಇಲ್ಲದಿರುವುದು ಪದೇ ಪದೇ ದುರಂತಗಳು ಸಂಭವಿಸುವುದಕ್ಕೆ ಎಡೆಮಾಡುತ್ತಿದೆ. ಕ್ರಷರ್‌ಗಳ ಸಂಖ್ಯೆ ಮತ್ತು ಅಧಿಕೃತ ಕಲ್ಲು ಗಣಿಗಳ ಸಂಖ್ಯೆಯ ನಡುವಿನ ಭಾರಿ ಅಂತರವು ಕಲ್ಲು ಗಣಿಗಾರಿಕೆಯ ಅಕ್ರಮಗಳಿಗೆ, ಸಾವು- ನೋವುಗಳಿಗೆ ಮೂಲ ಕಾರಣ ಎಂಬ ಅಭಿಪ್ರಾಯಕ್ಕೆ ಹಿರೇನಾಗವಲ್ಲಿ ದುರಂತ ಮತ್ತೊಮ್ಮೆ ಬಲವಾದ ಪುರಾವೆ ಒದಗಿಸಿದೆ.

ಕಲ್ಲು ಗಣಿಗಳಲ್ಲಿ ಸಾವು ನೋವು ತಡೆಗೆ ಸುರಕ್ಷತಾ ನಿಯಮಗಳ ಪಾಲನೆಯನ್ನು ಕಡ್ಡಾಯಗೊಳಿಸಲು ಅಗತ್ಯವಾದ ಎಲ್ಲ ಬಿಗಿ ಕ್ರಮಗಳನ್ನೂ ಕೈಗೊಳ್ಳಬೇಕು

ಕಲ್ಲು ಗಣಿಗಾರಿಕೆ ನಡೆಸುತ್ತಿರುವವರಿಗೆ ಹೊರ ರಾಜ್ಯಗಳಿಂದ ದೊಡ್ಡ ಪ್ರಮಾಣದಲ್ಲಿ ಜಿಲೆಟಿನ್, ಜೆಲ್ ಟ್ಯೂಬ್, ಎಲೆಕ್ಟ್ರಿಕ್ ಡಿಟೋನೇಟರ್‌ಗಳಂತಹ ಸ್ಫೋಟಕಗಳು ಪೂರೈಕೆಯಾಗುತ್ತಿವೆ. ಈ ಸ್ಫೋಟಕಗಳ ಸಾಗಣೆ, ದಾಸ್ತಾನು ಮತ್ತು ಬಳಕೆಯ ಮೇಲೆ ನಿಗಾ ಇಡುವುದಕ್ಕೆ ಸರಿಯಾದ ವ್ಯವಸ್ಥೆಯೇ ಇಲ್ಲ. ಕಲ್ಲು ಗಣಿಗಳಲ್ಲಿ ದುರಂತ ಸಂಭವಿಸಿದ ಬಳಿಕವಷ್ಟೇ ಪೊಲೀಸ್, ಕಂದಾಯ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಈ ಕುರಿತು ಪರಿಶೀಲನೆ ನಡೆಸುತ್ತಿದ್ದಾರೆ. ಪೊಲೀಸರ ದಾಳಿಯ ವೇಳೆ ಬಚ್ಚಿಟ್ಟಿದ್ದ ಸ್ಫೋಟಕಗಳನ್ನು ಹೊರಕ್ಕೆ ಸಾಗಿಸಲು ಯತ್ನಿಸಿದಾಗ ಹಿರೇನಾಗವಲ್ಲಿಯಲ್ಲಿ ಸ್ಫೋಟ ಸಂಭವಿಸಿದೆ ಎಂಬ ಮಾಹಿತಿ ಹೊರಬಿದ್ದಿದೆ. ಜಿಲ್ಲಾಧಿಕಾರಿಗಳು ನೀಡುವ ನಿರಾಕ್ಷೇಪಣಾ ಪತ್ರವನ್ನು ಆಧರಿಸಿ, ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆಯು (ಪಿಇಎಸ್‌ಒ) ಕಲ್ಲು ಗಣಿಗಳಲ್ಲಿ ಸ್ಫೋಟಕ್ಕೆ ಅನುಮತಿ ನೀಡುವ ವ್ಯವಸ್ಥೆ ಇದೆ. ಆದರೆ, ಸ್ಫೋಟಕ ಬಳಕೆಗೆ ಸಂಬಂಧಿಸಿದಂತೆ ನಿಯಂತ್ರಣ ಮತ್ತು ತಪಾಸಣೆಯು ಕಡತಗಳಿಗೆ ಸೀಮಿತವಾಗಿದೆ. ಸ್ಫೋಟಕ ಕಾಯ್ದೆ- 1884 ಹಾಗೂ ಸ್ಫೋಟಕ ನಿಯಮ-2008ರಲ್ಲಿ ತಪಾಸಣೆಯ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಮತ್ತು ಹೆಚ್ಚುವರಿ ಜಿಲ್ಲಾಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದೆ. ಆದರೆ, ಕಲ್ಲು ಗಣಿಗಳ ವಿಚಾರದಲ್ಲಿ ರಾಜಕೀಯ ಒತ್ತಡ, ಪ್ರಭಾವಗಳು ಕೆಲಸ ಮಾಡುವುದೇ ಹೆಚ್ಚು. ಗುತ್ತಿಗೆ ನೀಡುವಾಗ ಸ್ಥಳೀಯ ಒತ್ತಡಗಳಿಗೆ ಮಣಿಯುವ ಜಿಲ್ಲಾಡಳಿತದ ಅಧಿಕಾರಿಗಳು, ನಿಯಂತ್ರಣ ಕ್ರಮಗಳತ್ತ ಮೌನ ವಹಿಸುವುದು ಸರ್ವೇಸಾಮಾನ್ಯ ಸಂಗತಿಯಂತಾಗಿದೆ. ಗಣಿ ಪ್ರದೇಶದಲ್ಲಿ ಸುರಕ್ಷತಾ ವ್ಯವಸ್ಥೆಗಳ ಮೇಲೆ ನಿಗಾ ಇರಿಸುವ ಹೊಣೆಗಾರಿಕೆ ಹೊಂದಿರುವ ಗಣಿ ಸುರಕ್ಷತಾ ಮಹಾ ನಿರ್ದೇಶನಾಲಯದಲ್ಲಿ (ಡಿಜಿಎಂಎಸ್) ಕಲ್ಲು ಗಣಿಗಳನ್ನು ನೋಂದಣಿ ಮಾಡಿಸಿ, ಅನುಮತಿ ಪಡೆಯುತ್ತಿಲ್ಲ ಎಂಬ ಸಂಗತಿಯೂ ಹುಣಸೋಡು ಸ್ಫೋಟದ ನಂತರ ನಡೆಯುತ್ತಿರುವ ತನಿಖೆಯಲ್ಲಿ ಬಯಲಾಗಿದೆ. ಕಲ್ಲು ಗಣಿಗಳಲ್ಲಿ ಸಾವು ನೋವು ತಡೆಯಲು ಸುರಕ್ಷತಾ ಕ್ರಮಗಳ ಪಾಲನೆಯನ್ನು ಕಡ್ಡಾಯಗೊಳಿಸಲು ಅವುಗಳನ್ನು ನೇರವಾಗಿ ಡಿಜಿಎಂಎಸ್ ಅಡಿಯಲ್ಲಿ ತರುವುದು, ಗುತ್ತಿಗೆ ಮಂಜೂರಾತಿ ಮತ್ತು ನವೀಕರಣದಲ್ಲಿ ಬಿಗಿಯಾದ ವ್ಯವಸ್ಥೆ ರೂಪಿಸುವುದು ಅಗತ್ಯವಿದೆ. ಸ್ಫೋಟಕಗಳ ದಾಸ್ತಾನು, ಬಳಕೆಯ ಮೇಲೆ ನಿಗಾ ಇರಿಸುವುದಕ್ಕೆ ವಿಶೇಷ ವ್ಯವಸ್ಥೆಯ ಅಗತ್ಯವಿದೆ. ಸ್ಫೋಟಕಗಳ ನಿರ್ವಹಣೆಯ ಜ್ಞಾನ ಮತ್ತು ತರಬೇತಿ ಇಲ್ಲದ ಸ್ಥಳೀಯ ಪೊಲೀಸರನ್ನು ಇಂತಹ ಕೆಲಸಗಳಿಗೆ ನಿಯೋಜಿಸುವುದು ಮತ್ತಷ್ಟು ದುರಂತಗಳಿಗೆ ಕಾರಣವಾಗುವ ಅಪಾಯವೂ ಇದೆ. ಕಲ್ಲು ಕ್ವಾರಿಗಳಲ್ಲಿನ ಚಟುವಟಿಕೆಗಳನ್ನು ರಾಜಕೀಯ ಹಸ್ತಕ್ಷೇಪದಿಂದ ಮುಕ್ತಗೊಳಿಸಿ, ಸಂಪೂರ್ಣವಾಗಿ ಪಾರದರ್ಶಕಗೊಳಿಸಬೇಕಿದೆ. ನಿಯಮ ಪಾಲನೆ, ಸ್ಫೋಟಕಗಳ ಬಳಕೆ ಮತ್ತು ಕಾರ್ಮಿಕರ ಜೀವ ರಕ್ಷಣೆ ಕುರಿತು ಕಲ್ಲು ಗಣಿಗಳ ಮಾಲೀಕರಲ್ಲಿ ಜಾಗೃತಿ ಮೂಡಿಸಬೇಕಾದ ಜರೂರು ಕೂಡ ಇದೆ.

ದಿನದ ಟ್ವೀಟ್

ಸಾಧ್ಯವಾಗದ ಸಹಭಾಗಿತ್ವ

21ನೇ ಶತಮಾನವನ್ನು ಗಮನದಲ್ಲಿ ಇರಿಸಿಕೊಂಡು ರಷ್ಯಾ ಮತ್ತು ಚೀನಾ ಸಮಾನತೆ ಹಾಗೂ ವಿಶ್ವಾಸಾರ್ಹತೆಯ ವ್ಯೂಹಾತ್ಮಕ ಸಹಭಾಗಿತ್ವವನ್ನು ರೂಪಿಸಿಕೊಂಡವು. ಆದರೆ, ಭಾರತ ಮತ್ತು ಚೀನಾ ಹೀಗೆ ಮಾಡಲಿಲ್ಲ. ಇದರ ಹಿಂದೆ ಒಂದು ದೊಡ್ಡ ಕತೆಯೇ ಇದೆ.

ನಿರುಪಮಾ ಮೆನನ್ ರಾವ್, ನಿವೃತ್ತ ರಾಜತಾಂತ್ರಿಕ ಅಧಿಕಾರಿ

25 ವರ್ಷಗಳ ಹಿಂದೆ

ಶನಿವಾರ, 24-2-1996

• **ತನಿಖೆ ಮುಚ್ಚಿಹಾಕಲು ಯತ್ನ ಆರೋಪ: ಸಿಬಿಐಗೆ ನೋಟಿಸ್**

ನವದೆಹಲಿ, ಫೆ. 23 (ಯುಎನ್‌ಐ)- 1993ರಲ್ಲಿ ಕೇಂದ್ರದಲ್ಲಿ ಅಲ್ಪಮತದೊಡನೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರವು ಲೋಕಸಭೆಯಲ್ಲಿ ವಿಶ್ವಾಸಮತ ಗಳಿಸಲು ಕೆಲ ಎಂ.ಪಿಗಳಿಗೆ ಹಣ ನೀಡಿತ್ತು ಮತ್ತು ಈ ಭ್ರಷ್ಟಾಚಾರದ ಬಗ್ಗೆ ಸಿಬಿಐ ತನಿಖೆ ನಡೆಸದೇ ಮುಚ್ಚಿಹಾಕಲು ಯತ್ನಿಸಿತು ಎಂದು ಆರೋಪಿಸಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿಯ ದೂರಿನ ಸಂಬಂಧದಲ್ಲಿ ದೆಹಲಿ ಹೈಕೋರ್ಟ್ ಇಂದು ಸಿಬಿಐ ಮತ್ತು ಕೇಂದ್ರ ಗೃಹ ಖಾತೆಗೆ ನೋಟಿಸ್ ಜಾರಿ ಮಾಡಿದೆ.

1993ರಲ್ಲಿ ಪ್ರತಿಪಕ್ಷಗಳ 40 ಎಂ.ಪಿಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯದ ವಿರುದ್ಧ ಮತ ಚಲಾಯಿಸಿದ ಜೆಎಂಎಂ ಲೋಕಸಭಾ ಸದಸ್ಯ ಸೂರಜ್ ಮಂಡಲ್ ಅವರ ಬ್ಯಾಂಕ್ ಉಳಿತಾಯ ಖಾತೆಯಲ್ಲಿ 'ಹಠಾತ್ತನೇ ಅಪಾರ ನಗದು' ಸೇರಿದ ಕುರಿತು ಏಕೆ ತನಿಖೆ ನಡೆಸಲಿಲ್ಲ ಎಂಬ ಬಗ್ಗೆ ಉತ್ತರಿಸುವಂತೆ ನ್ಯಾಯಮೂರ್ತಿಗಳಾದ ವೈ.ಕೆ.ಸಬರ್‌ವಾಲ ಮತ್ತು ಡಿ.ಕೆ.ಜೈನ್ ಅವರಿದ್ದ ವಿಭಾಗೀಯ ಪೀಠ ಸಿಬಿಐ ಮತ್ತು ಗೃಹ ಖಾತೆಗೆ ಆದೇಶಿಸಿದೆ.

• **ಕೆಇಬಿ ಖಾಸಗೀಕರಣ ಇಲ್ಲ- ಪಟೇಲ್**

ಬೆಂಗಳೂರು, ಫೆ. 23- ಕರ್ನಾಟಕ ವಿದ್ಯುತ್ ಮಂಡಳಿ ಖಾಸಗೀಕರಣ ಇಲ್ಲ ಹಾಗೂ ಕದ್ರಾ, ಕೊಡಸಳ್ಳಿ, ಗೇರುಸೊಪ್ಪೆ ಸೇರಿದಂತೆ ರಾಜ್ಯದ ಯಾವುದೇ ಜಲವಿದ್ಯುತ್ ಯೋಜನೆಯನ್ನು ಖಾಸಗಿ ಉದ್ಯಮಿಗಳಿಗೆ ವಹಿಸಿಲ್ಲ ಎಂದು ಉಪಮುಖ್ಯಮಂತ್ರಿ ಜೆ.ಎಚ್. ಪಟೇಲ್ ವಿಧಾನಪರಿಷತ್‌ನಲ್ಲಿ ಸ್ಪಷ್ಟಪಡಿಸಿದರು.

ಮರಿಲಿಂಗೇಗೌಡರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಹಿಂದಿನ ಸರ್ಕಾರ ಈ ಯೋಜನೆಗಳನ್ನು ಖಾಸಗಿ ಉದ್ಯಮಿಗಳಿಗೆ ಒಪ್ಪಿಸಲು ಟೆಂಡರ್ ಕರೆದಿತ್ತು. ಆದರೆ, ನಮ್ಮ ಸರ್ಕಾರ ಅದನ್ನು ರದ್ದುಪಡಿಸಿದೆ' ಎಂದು ತಿಳಿಸಿದರು.

• **ಕಬ್ಬು: ಸರ್ಕಾರದ ವೈಫಲ್ಯ ಪ್ರತಿಭಟಿಸಿ ಸಭಾತ್ಯಾಗ**

ಬೆಂಗಳೂರು, ಫೆ. 23- ರಾಜ್ಯದಲ್ಲಿ ಬೆಳೆದುನಿಂತು ನಾಶವಾಗುತ್ತಿರುವ ಲಕ್ಷಾಂತರ ಟನ್ ಕಬ್ಬನ್ನು ಅರೆಯುವ ಸೌಲಭ್ಯ ಸೃಷ್ಟಿಸುವಲ್ಲಿ ಮತ್ತು ಆತಂಕದ ಮಡುವಿಗೆ ಬಿದ್ದಿರುವ ಬೆಳೆಗಾರರಿಗೆ ಪರಿಹಾರ ನೀಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ವಿಧಾನ ಮಂಡಲದ ಉಭಯ ಸದನಗಳಲ್ಲಿ ಬಿಜೆಪಿ ಶಾಸಕರು ಮತ್ತು ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಸದಸ್ಯರು ಇಂದು ಇಲ್ಲಿ ಸಭಾತ್ಯಾಗ ಮಾಡಿದರು.

ಮೂರು ತಾಸು ಕಾಲ ನಡೆದ ಚರ್ಚೆಗೆ ಮುಖ್ಯಮಂತ್ರಿ ಎಚ್.ಡಿ. ದೇವೇಗೌಡರು ಉತ್ತರಿಸುವ ಹಂತದಲ್ಲಿ ವ್ಯಕ್ತವಾದ ಸರ್ಕಾರದ ಅಸಹಾಯಕ ನಿಲುವನ್ನು ಪ್ರತಿಭಟಿಸಿ ವಿಧಾನಸಭೆಯಲ್ಲಿ ಶಾಸಕರಾದ ವಾಟಾಳ್ ನಾಗರಾಜ್ (ವಾಟಾಳ್ ಪಕ್ಷ) ಮತ್ತು ಕೆ.ಎಸ್.ಪುಟ್ಟಣ್ಣಯ್ಯ (ರೈತ ಸಂಘ) ದಿನದ ಕಲಾಪ ಮುಕ್ತಾಯಗೊಳ್ಳುವವರೆಗೂ ಧರಣಿಯನ್ನು ನಡೆಸಿದರು.

50 ವರ್ಷಗಳ ಹಿಂದೆ

ಬುಧವಾರ, 24-2-1971

ಮಹಾಶಿವರಾತ್ರಿ ಪ್ರಯುಕ್ತ 23.2.1971ರ ಮಂಗಳವಾರ 'ಪ್ರಜಾವಾಣಿ' ಕಾರ್ಯಾಲಯಕ್ಕೆ ಬಿಡುವು ಇದ್ದುದರಿಂದ 24.2.1971ರ ಬುಧವಾರದ ಸಂಚಿಕೆ ಪ್ರಕಟವಾಗಿರಲಿಲ್ಲ.

-ಸಂಪಾದಕ

ಭಾರತ ಕ್ರಿಕೆಟ್ ತಂಡದ ಆಯ್ಕೆಗೆ ಐಪಿಎಲ್ ಸಾಧನೆ ಮಾನದಂಡವಾಗುವುದು ದೇಶಿ ಕ್ರಿಕೆಟ್‌ಗೆ ಮಾರಕ

ಐಪಿಎಲ್: ಪ್ರತಿಭೆಯೋ? ಪ್ರಭಾವವೋ?

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಸಚಿನ್ ತೆಂಡೂಲ್ಕರ್ ಅವರು ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್ ಮಾದರಿಯಲ್ಲಿ ಗಳಿಸಿದ್ದ ದ್ವಿಶತಕದ ವಿಶ್ವದಾಖಲೆಗೆ ಈಗ ಹನ್ನೊಂದು ವರ್ಷ ತುಂಬಿದೆ. ಅಂದು ಅಸಂಖ್ಯಾತ ಅಭಿಮಾನಿಗಳು ಅವರ ಕಟೌಟ್‌ಗಳಿಗೆ ಹೂಹಾರ ಹಾಕಿ ಕುಣಿದಾಡಿದ್ದರು. ಅದೇ ಸಚಿನ್ ಇವತ್ತು ದೇಶದ ಹಲವರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಅದಕ್ಕೆ ಕಾರಣ ಈಚೆಗೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಆಟಗಾರರ ಹರಾಜು ಪ್ರಕ್ರಿಯೆಯಲ್ಲಿ ಸಚಿನ್ ಮಗ ಅರ್ಜುನ್ ತೆಂಡೂಲ್ಕರ್ ಅವರನ್ನು ಮುಂಬೈ ಇಂಡಿಯನ್ಸ್ ತಂಡವು ಮೂಲಬೆಲೆಗೆ (₹ 20 ಲಕ್ಷ) ಖರೀದಿಸಿದ್ದು. ಸಚಿನ್ ಪ್ರಭಾವದಿಂದಾಗಿಯೇ ಅರ್ಜುನ್‌ಗೆ ಐಪಿಎಲ್‌ನಲ್ಲಿ ಸ್ಥಾನ ಸಿಕ್ಕಿದೆ. ಪ್ರತಿಭೆ ಇಲ್ಲದಿದ್ದರೂ ಮನ್ನಣೆ ಸಿಕ್ಕಿದೆ. ಇಲ್ಲಿಂದ ಮುಂದೆ ಅರ್ಜುನ್‌ಗೆ ಭಾರತ ತಂಡದ ಹಾದಿ ಸುಗಮವಾಗಲಿದೆ. ಕೋಟ್ಯಂತರ ಅಭಿಮಾನಿಗಳ ನೆಚ್ಚಿನ ಆಟಗಾರ ಸಚಿನ್ ತಮ್ಮ ಮಗನಿಗಾಗಿ ಲಾಬಿ ಮಾಡಿದ್ದಾರೆ. ಇದು ಸ್ವಜನಪಕ್ಷಪಾತ (ನೆಪೊಟಿಸಂ) ಎಂದು ಟ್ರೋಲ್ ಮಾಡುತ್ತಿದ್ದಾರೆ.

ಭಾರತದ ಕ್ರಿಕೆಟ್‌ನಲ್ಲಿ ಈ ರೀತಿ ಪ್ರಮುಖ ತಂಡವೊಂದಕ್ಕೆ ಆಯ್ಕೆಯಾದ ತಾರಾಪುತ್ರರಲ್ಲಿ ಅರ್ಜುನ್ ಮೊದಲಿಗರೇನಲ್ಲ. ಆದರೂ ಈ ಮಟ್ಟದ ಚರ್ಚೆ ನಡೆಯಲು ಕಾರಣವೇನು?

ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ರೈತರ ಹೋರಾಟಕ್ಕೆ ಸಂಬಂಧಿಸಿದಂತೆ ಸಚಿನ್ ಕೆಲ ದಿನಗಳ ಹಿಂದೆ ಮಾಡಿದ್ದ ಟ್ವೀಟ್‌ಗೆ ಒಂದು ವರ್ಗದಿಂದ ಬಹಳಷ್ಟು ಅಸಮಾಧಾನ ವ್ಯಕ್ತವಾಗಿತ್ತು. ಆ ಬಿಸಿಯೂ ಅರ್ಜುನ್ ಆಯ್ಕೆಯ ಕುರಿತ ಟೀಕೆಗಳಲ್ಲಿ ಸೇರಿರುವುದು ಸುಳ್ಳಲ್ಲ. ಅಲ್ಲದೆ ಈಚೆಗೆ ನಡೆದಿದ್ದ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿಯಲ್ಲಿ ಅರ್ಜುನ್ ಮುಂಬೈ ತಂಡದಲ್ಲಿದ್ದರು. ಅಲ್ಲಿ ಆಡಿದ ಎರಡು ಪಂದ್ಯಗಳಲ್ಲಿ ಎಡಗೈ ಮಧ್ಯಮವೇಗಿ ಅರ್ಜುನ್ ಗಳಿಸಿದ್ದು ಮೂರು ವಿಕೆಟ್ ಮಾತ್ರ. ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಅರ್ಜುನ್ ಸೇರ್ಪಡೆಗೆ ಯಾವುದೇ ಫ್ರ್ಯಾಂಚೈಸಿಗಳೂ ಆಸಕ್ತಿ ತೋರಲಿಲ್ಲ. ಆದರೆ, ಪ್ರಭಾವಿ ಉದ್ಯಮಿಯ ಒಡೆತನದ ಮುಂಬೈ ಇಂಡಿಯನ್ಸ್ ಮಾತ್ರ ಆಸಕ್ತಿ ತೋರಿತು ಎಂಬುದೂ ಕಾರಣವಾಗಿರಬಹುದು.

ಆದರೆ ಅರ್ಜುನ್ ಪರ ಬ್ಯಾಟಿಂಗ್ ಮಾಡಿರುವ ಬಾಲಿವುಡ್ ನಟ ಫರ್ಹಾನ್ ಅಖ್ತರ್, ಆತನಲ್ಲಿ ಪ್ರತಿಭೆ ಮತ್ತು ಉತ್ಸಾಹ ಇದೆ, ಸಾಬೀತು ಮಾಡಲು ಅವಕಾಶ ಸಿಗಬೇಕು ಎಂದು ಪ್ರತಿಪಾದಿಸಿದ್ದಾರೆ.

'ಸಚಿನ್ ಪುತ್ರ ಎಂಬ ಹಣೆಪಟ್ಟಿಯು ಅರ್ಜುನ್ ಪಾಲಿಗೆ ಕಠಿಣ ಸವಾಲಾಗಿದೆ. ಆದರೆ ಅದೃಷ್ಟವಶಾತ್ ಅರ್ಜುನ್ ಬೌಲರ್ ಆಗಿದ್ದಾರೆ. ಬ್ಯಾಟ್ಸ್‌ಮನ್ ಅಲ್ಲ. ಇದರಿಂದಾಗಿ ಮುಂದೊಂದು ದಿನ ಅರ್ಜುನ್ ತರಹ ತಾವು ಉತ್ತಮ ಬೌಲರ್ ಆಗಲಿಲ್ಲವೆಂಬ ಕೊರಗು ಸಚಿನ್ ಅವರನ್ನು ಕಾಡುವ ಮಟ್ಟಕ್ಕೆ ಬೆಳೆಯುವ ಪ್ರತಿಭೆ ಈ ಹುಡುಗನಿಗೆ ಇದೆ. ಇದು ಅವರಿಗೆ ಕಲಿಕೆಗೆ ಲಭಿಸಿರುವ ಅವಕಾಶ' ಎಂದು ಮುಂಬೈ ಇಂಡಿಯನ್ಸ್ ಮುಖ್ಯ ಕೋಚ್ ಮಹೇಲಾ ಜಯವರ್ಧನೆ ಹೇಳುತ್ತಾರೆ.

ತಾರಾಕ್ರಿಕೆಟಿಗನ ಪುತ್ರನಾದ ಮಾತ್ರಕ್ಕೆ ಆತನಲ್ಲಿ ಪ್ರತಿಭೆಯಿಲ್ಲದೇ ಅವಕಾಶ ಪಡೆದಿದ್ದಾನೆಂದು ಅರ್ಥವಲ್ಲ. ಖ್ಯಾತನಾಮರ ಪುತ್ರರೆಲ್ಲರೂ ಯಶಸ್ವಿಯಾಗುತ್ತಾರೆ ಅಥವಾ ವಿಫಲರಾಗುತ್ತಾರೆಂದೂ ಹೇಳಲಾಗುವುದಿಲ್ಲ. ಅವರು ತಮಗೆ ಸಿಕ್ಕ ಅವಕಾಶದಲ್ಲಿ ಯಾವ ರೀತಿಯ ಸಾಮರ್ಥ್ಯ ಮೆರೆದರು ಎಂಬುದು ಮುಖ್ಯವಾಗುತ್ತದೆ. ಲಾಲಾ ಅಮರನಾಥ್ ಪುತ್ರರಾದ ಮೊಹಿಂದರ್ ಅಮರನಾಥ್, ಸುರಿಂದರ್ ಅಮರನಾಥ್; ವಿಜಯ್ ಮಾಂಜ್ರೇಕರ್ ಪುತ್ರ ಸಂಜಯ್ ಮಾಂಜ್ರೇಕರ್; ಯೋಗರಾಜ್ ಸಿಂಗ್ ಮಗ ಯುವರಾಜ್ ಸಿಂಗ್ ಅವರಂತೆ ಎಲ್ಲರೂ ಯಶಸ್ವಿಯಾಗುವುದಿಲ್ಲ. ಕೆಲವು ವರ್ಷಗಳ ಹಿಂದೆ ಸುನಿಲ್ ಗಾವಸ್ಕರ್ ಪುತ್ರ ರೋಹನ್ ಗಾವಸ್ಕರ್ ಭಾರತ ಏಕದಿನ ತಂಡಕ್ಕೆ ಆಯ್ಕೆಯಾದಾಗಲೂ ಟೀಕೆಗಳು ಕೇಳಿಬಂದಿದ್ದವು. ಆದರೆ ರೋಹನ್ ಆಡಿದ 11 ಏಕದಿನ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ತೋರಿದ ಸಾಧನೆ ವಿಶೇಷವಾಗಿರಲಿಲ್ಲ. ಕೆಲವು ವರ್ಷಗಳ ಹಿಂದೆ ಕರ್ನಾಟಕದ ಸ್ಟುವರ್ಟ್ ಬಿನ್ನಿ ಭಾರತ ತಂಡಕ್ಕೆ ಆಯ್ಕೆಯಾಗಿದ್ದರು. ಅದೇ ಸಂದರ್ಭದಲ್ಲಿ ಅವರ ತಂದೆ ರೋಜರ್ ಬಿನ್ನಿ ಬಿಸಿಸಿಐ ಆಯ್ಕೆ ಸಮಿತಿಯಲ್ಲಿದ್ದರು. ಅದರಿಂದಾಗಿ ಹಿತಾಸಕ್ತಿ ಸಂಘರ್ಷದ ಕುರಿತು ದೊಡ್ಡ ಚರ್ಚೆಯೇ ನಡೆದಿತ್ತು. ಆಯ್ಕೆ ಸಭೆಯಲ್ಲಿ ಸ್ಟುವರ್ಟ್ ಹೆಸರು ಚರ್ಚೆಗೆ ಬಂದ ಸಂದರ್ಭದಲ್ಲಿ ತಾವು ಎದ್ದು ಹೊರಹೋಗಿದ್ದಾಗಿ ರೋಜರ್ ಆಗಲೇ ಹೇಳಿದ್ದರು.

'ಭಾರತ ತಂಡದ ಮಟ್ಟದಲ್ಲಿ ಸ್ವಜನಪಕ್ಷಪಾತ ನಡೆಯುತ್ತಿದೆ ಎಂಬುದನ್ನು ಒಪ್ಪಲಾಗದು. ಏಕೆಂದರೆ ಸುನಿಲ್ ಗಾವಸ್ಕರ್ ಪುತ್ರನಾಗಿದ್ದರೂ ರೋಹನ್‌ಗೆ ತಮ್ಮ ತವರು ಮುಂಬೈ ತಂಡದಲ್ಲಿ ರಣಜಿ ಪಂದ್ಯ ಆಡುವ ಅವಕಾಶ ಸಿಗಲೇ ಇಲ್ಲ. ಬಂಗಾಳ ತಂಡದಲ್ಲಿ ಅವರು ಮಾಡಿದ್ದ ಸಾಧನೆಯಿಂದಾಗಿ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದರು. ಸ್ಥಳೀಯ ಕ್ರಿಕೆಟ್‌ನಲ್ಲಿ ಆಯ್ಕೆ ಮಟ್ಟದಲ್ಲಿ ಸ್ವಜನಪಕ್ಷಪಾತ ಇರಬಹುದು. ಆದರೆ, ಅಲ್ಲಿಯೂ ಆಟಗಾರರು ತಂಡದಲ್ಲಿ ಮುಂದುವರಿಯಬೇಕಾದರೆ ಸಾಮರ್ಥ್ಯ ಸಾಬೀತು ಮಾಡಲೇಬೇಕು. ಏಕೆಂದರೆ, ಎದುರಾಳಿ ಬೌಲರ್‌ಗಳ ಪಾಲಿಗೆ ಎಲ್ಲ ಬ್ಯಾಟ್ಸ್‌ಮನ್‌ಗಳೂ ಒಂದೇ. ಅವರು ಯಾರ ಮಗ ಎಂಬುದು ನಗಣ್ಯ. ವಿಕೆಟ್ ಪಡೆಯುವುದೊಂದೇ ಗುರಿ' ಎಂದು ಮಾಜಿ ಕ್ರಿಕೆಟಿಗ ಆಕಾಶ್ ಚೋಪ್ರಾ ಹೇಳುವ ಮಾತೂ ಚಿಂತನಾರ್ಹ.

ಯಶಸ್ವಿ ಅಪ್ಪನ ನೆರಳಲ್ಲಿ ವಿಶೇಷ ತರಬೇತಿ ಪಡೆಯುವ ಅವಕಾಶ ಸಿಗುವುದು ಆ ಮಕ್ಕಳ ಅದೃಷ್ಟ. ಆದರೆ ಅದೇ ಕಾರಣಕ್ಕೆ ತಂಡದಲ್ಲಿ ಅವಕಾಶ ನೀಡಲು ಬೇರೆ ಅರ್ಹರನ್ನು ಕಡೆಗಣಿಸಿದರೆ ಅದು ಅಪರಾಧ ಮತ್ತು ಹಿತಾಸಕ್ತಿ ಸಂಘರ್ಷ ನಿಯಮದ ಉಲ್ಲಂಘನೆಯಾಗುತ್ತದೆ. ಆದರೆ, ಅರ್ಜುನ್ ವಿಷಯದಲ್ಲಿ ಆ ರೀತಿಯಾಗಿಲ್ಲವೆನ್ನುವುದು ಸಚಿನ್ ಅಭಿಮಾನಿಗಳ ವಾದ. ಮುಂಬೈ ಇಂಡಿಯನ್ಸ್‌ನಲ್ಲಿ ಕಳೆದೆರಡು ವರ್ಷಗಳಿಂದ ಅರ್ಜುನ್ ನೆಟ್ ಬೌಲರ್ ಆಗಿದ್ದರು. ಈ ವರ್ಷ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಆಡುವ ಮುಂಬೈನ ಸಂಭವನೀಯರ ತಂಡದಲ್ಲಿದ್ದ ಅವರು ಅಂತಿಮ ಪಟ್ಟಿಯಲ್ಲಿ ಸ್ಥಾನ ಪಡೆಯಲಿಲ್ಲ. ಹಾಗಿದ್ದ ಮೇಲೆ ಸಚಿನ್ ಲಾಬಿ ಮಾಡಿಲ್ಲವೆಂದೇ ಅರ್ಥವಲ್ಲವೇ ಎಂದೂ ಕೆಲವರು ಪ್ರಶ್ನಿಸುತ್ತಾರೆ. ಖ್ಯಾತನಾಮ ಕ್ರಿಕೆಟಿಗರ ಮಕ್ಕಳು ತಮ್ಮ ತಂದೆ-ತಾಯಿಯ ವೃತ್ತಿಯನ್ನೇ ಆಯ್ಕೆ ಮಾಡಿಕೊಂಡಾಗ ಇಂತಹ ಸವಾಲುಗಳನ್ನು ಎದುರಿಸಲೇಬೇಕಾಗುತ್ತದೆ. ಹಿಂದೆಯೂ ಈ ಸ್ಥಿತಿ ಇತ್ತು. ಈಗಲೂ ಇದೆ. ಸಿಕ್ಕ ಅವಕಾಶದಲ್ಲಿ ತಾವು ತಂದೆಗೆ ತಕ್ಕ ಮಗ ಎಂದು ಸಾಬೀತುಪಡಿಸುವ ಸವಾಲು ಅರ್ಜುನ್ ಮುಂದೆ ಈಗ ಇದೆ.

ಅದಿರಲಿ; ಅರ್ಜುನ್ ಆಯ್ಕೆ ಕುರಿತ ಟ್ರೋಲ್‌ಗಳ ಗೌಜಿಯಲ್ಲಿ ಚರ್ಚೆಯಾಗಬೇಕಿದ್ದ ಕೆಲವು ವಿಷಯಗಳು ನೇಪಥ್ಯಕ್ಕೆ ಸರಿದವು. ಪ್ರಮುಖವಾಗಿ ಭಾರತ ತಂಡದ ಆಯ್ಕೆಗೆ ಐಪಿಎಲ್ ಸಾಧನೆಯನ್ನು ಪರಿಗಣಿಸಲು ಆರಂಭಿಸಿರುವುದು. ಭಾರತ ಟೆಸ್ಟ್ ಮತ್ತು ಏಕದಿನ ತಂಡಗಳಿಗೆ ಆಯ್ಕೆಯಾಗಲು ಐಪಿಎಲ್ ರಹದಾರಿಯಾದರೆ ನ್ಯಾಯಸಮ್ಮತವಲ್ಲ. ದೇಶಿ ಟೂರ್ನಿಗಳಲ್ಲಿ ಬೆವರು ಹರಿಸಿದ ಪ್ರತಿಭೆಗಳಿಗೆ (ಐಪಿಎಲ್‌ನಲ್ಲಿ ಆಡದವರು) ಇದರಿಂದ ಅನ್ಯಾಯವಾಗುವುದರಲ್ಲಿ ಸಂದೇಹವೇ ಇಲ್ಲ. ದೀರ್ಘ ಮಾದರಿಯ ಕ್ರಿಕೆಟ್ ಉಳಿಸುವ ಪ್ರಯತ್ನಕ್ಕೂ ಹಿನ್ನಡೆಯಾಗಬಹುದು. ಈ ಹರಾಜಿನಲ್ಲಿ ರಾಯಲ್ ಚಾಲೆಂಜರ್ಸ್ ತಂಡವು ಐವರು ಯುವಆಟಗಾರರನ್ನು ತೆಗೆದುಕೊಂಡಿತು. ಆದರೆ ಅದರಲ್ಲಿ ಕರ್ನಾಟಕದವರಿಲ್ಲ. ಆರ್‌ಸಿಬಿ ಸೇರಿದಂತೆ ಎಲ್ಲ ಫ್ರ್ಯಾಂಚೈಸಿಗಳೂ ವಿದೇಶಿ ಆಟಗಾರರ ಮೇಲೆ ಹೆಚ್ಚು ಹಣ ಹೂಡಿವೆ. ಭಾರತದ ಆಟಗಾರರಿಗೆ ನೀಡಿದ ಹಣ ಕಡಿಮೆಯೆನ್ನುವ ಸಂಗತಿ ಸಾಮಾಜಿಕ ತಾಣಗಳಲ್ಲಿ ಮಹತ್ವ ಪಡೆದಿರುವುದು ಸೋಜಿಗ.

ಚುರುಮುರಿ

ಬಲ ನೀಡು ಭಗವಂತ

• ಮಣ್ಣೆರಾಜು

ಸ್ವಾಮೀಜಿ ಘೋರ ತಪಸ್ಸು ಮಾಡಿದರು. ತಪಸ್ಸಿಗೆ ಒಲಿದು ಭಗವಂತ ಪ್ರತ್ಯಕ್ಷನಾಗಿ, 'ನಿಮಗೆ ಏನು ಬೇಕು?' ಎಂದು ಕೇಳಿದ.

'ಬಲ ನೀಡು ಭಗವಂತ' ಸ್ವಾಮೀಜಿ ಕೋರಿದರು.

'ಬಲ...?! ಯಾಕೆ?'

'ಉಳ್ಳವರು ಹೋರಾಟ ಮಾಡುವರು, ನಾನೇನು ಮಾಡಲಿ ಬಲಹೀನನಯ್ಯ...' ಎಂದರು ಸ್ವಾಮೀಜಿ.

'ಒಂದು ಸಮುದಾಯದ ಸ್ವಾಮೀಜಿಯಾದ ನೀವು ಬಲಹೀನರೇ?' ಭಗವಂತನಿಗೆ ಅಚ್ಚರಿ.

'ಹೌದು ಭಗವಂತ, ನಮ್ಮದು ಬಡ ಸಮುದಾಯ, ನಮ್ಮಲ್ಲಿ ಎಮ್ಮೆಲ್ಲೆ, ಮಂತ್ರಿಗಳಿಲ್ಲ, ಉನ್ನತ ಅಧಿಕಾರಿಗಳಿಲ್ಲ, ಉದ್ಯಮಿಗಳಿಲ್ಲ, ಬಲಾಢ್ಯ ಭಕ್ತರಿಲ್ಲ, ಶಿಕ್ಷಣ ಸಂಸ್ಥೆಗಳಿಲ್ಲ, ಮುರುಕಲು ಮಠ, ಹರಕಲು ಪೀಠ. ಹೀಗಿರುವಾಗ ಬಲ ಹೇಗೆ ಬಂದೀತು...?'

'ನೀವು ಯಾರ ಮೇಲೆ ಬಲ ಪ್ರಯೋಗ ಮಾಡಬೇಕು?'

'ಸರ್ಕಾರದ ಮೇಲೆ ಒತ್ತಡ ಹಾಕಲು ಬಲ ಬೇಕು. ನಮ್ಮ ಸಮುದಾಯಕ್ಕೆ ಮೀಸಲಾತಿ ಸೌಲಭ್ಯ ಹೆಚ್ಚಿಸಲು, ಅಭಿವೃದ್ಧಿ ನಿಗಮ ಸ್ಥಾಪಿಸಲು, ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಸಮುದಾಯವನ್ನು ಮೇಲೆ ತರಲು ಸರ್ಕಾರವನ್ನು ಒತ್ತಾಯ ಮಾಡಬೇಕು'.

'ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿ ನಿಮ್ಮ ಸಮುದಾಯದ ಸಂಕಷ್ಟವನ್ನು ಮನವರಿಕೆ ಮಾಡಿಕೊಡಿ'.

'ಅದು ಸುಲಭವಲ್ಲ ಭಗವಂತ, ಪ್ರಭಾವಿ ಸಮುದಾಯದವರು ಹೋರಾಟದ ಮುಂಚೂಣಿಯಲ್ಲಿದ್ದಾರೆ. ಅವರ ಗಲಾಟೆಯಲ್ಲಿ ನಮ್ಮ ಕೀರಲು ಧ್ವನಿ ಸರ್ಕಾರಕ್ಕೆ ಹೇಗೆ ಕೇಳಿಸುತ್ತೆ...?'

'ನಿಮಗೆ ಧ್ವನಿವರ್ಧಕದ ಅಗತ್ಯವಿದೆ'.

'ಹೌದು, ನಮ್ಮ ಸಮುದಾಯದಲ್ಲಿ ಸಂಘಟನೆ, ಪ್ರತಿಭಟನೆ, ಧ್ವನಿವರ್ಧನೆ ಇಲ್ಲ. ನಮ್ಮಂಥವರಿಗೆ ದೇವರೇ ದಿಕ್ಕು. ನೀನಾದರೂ ನಮ್ಮ ಸಮುದಾಯಕ್ಕೆ ಮೀಸಲಾತಿ ಸೌಕರ್ಯ ಹೆಚ್ಚು ಮಾಡಿ ಸಮುದಾಯವನ್ನು ಉದ್ಧಾರ ಮಾಡು ಭಗವಂತಾ...'

'ಅಯ್ಯೋ...! ಬೇಕಾದ್ರೆ ಆಯುಷ್ಯ, ಆರೋಗ್ಯ ಕರುಣಿಸುತ್ತೇನೆ, ಮೀಸಲಾತಿ ಮಾತ್ರ ಕೇಳಬೇಡಿ. ನಿಮಗೆ ಕೊಟ್ಟರೆ ಉಳಿದವರು ಬೆನ್ನಿಗೆ ಬಿದ್ದು ನನ್ನ ನೆಮ್ಮದಿ ಹಾಳುಮಾಡುತ್ತಾರೆ...' ಎನ್ನುತ್ತಾ ಭಗವಂತ ಮಾಯವಾದ.

ಸಂಗತ

ಮಠಗಳ ಪೋಷಣೆ ಮತ್ತು ಭಕ್ತರು

ಸರ್ಕಾರದಿಂದ ಧನಸಹಾಯ ಪಡೆದರೆ ಭಕ್ತರಿಗೆ ಮುಜುಗರವಾಗುತ್ತದೆ ಎಂದು ಭಾವಿಸಿದ ಅಪರೂಪದ ಪ್ರಸಂಗ...

• ಮಲ್ಲಿಕಾರ್ಜುನ ಹೆಗ್ಗಳಗಿ

ಮುಜರಾಯಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಅವರು ಈಚೆಗೆ ವಿಜಯಪುರಕ್ಕೆ ಭೇಟಿ ನೀಡಿದಾಗ, ಒಂದು ಅಪರೂಪದ ಸಂಗತಿಯನ್ನು ಬಹಿರಂಗಪಡಿಸಿದರು. ಸಚಿವರು ಹೇಳಿದ ವಿವರ ಇಷ್ಟು: 'ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು 2019- 20ರ ಬಜೆಟ್‌ನಲ್ಲಿ ಘೋಷಿಸಿದ ಪ್ರಕಾರ, ಮಠ, ಮಂದಿರ, ಆಶ್ರಮಗಳಿಗೆ ಒಟ್ಟು ₹ 45.75 ಕೋಟಿ ಅನುದಾನ ನೀಡಿದ್ದಾರೆ. ವಿಜಯಪುರದ ಸಿದ್ಧೇಶ್ವರ ಸ್ವಾಮೀಜಿ ಅವರ ಜ್ಞಾನಯೋಗಾಶ್ರಮಕ್ಕೂ ₹ 50 ಲಕ್ಷ ಪಾವತಿ ಮಾಡಲಾಗಿತ್ತು. ಆದರೆ ಶ್ರೀಗಳು ಈ ಹಣವನ್ನು ಸರ್ಕಾರಕ್ಕೆ ವಾಪಸ್ ಮಾಡಿದ್ದಾರೆ'.

'ಸಿದ್ಧೇಶ್ವರ ಶ್ರೀಗಳ ಪರವಾಗಿ ಆಶ್ರಮದ ಬಸವಲಿಂಗ ಸ್ವಾಮಿಗಳು ಸರ್ಕಾರಕ್ಕೆ ಪತ್ರ ಬರೆದು, ಜನರಿಗೆ ಸಾಮಾಜಿಕ, ನೈತಿಕ ಮೌಲ್ಯದ ಶಿಕ್ಷಣ ನೀಡಲು ಹಾಗೂ ಯೋಗ ತರಬೇತಿ ನೀಡುವ ಉದ್ದೇಶದಿಂದ ಜ್ಞಾನಯೋಗಾಶ್ರಮವನ್ನು ಆರಂಭಿಸಲಾಗಿದೆ. ಆಶ್ರಮದ ಭಕ್ತರಿಂದ ಅವಶ್ಯವಿದ್ದಾಗ ಸಹಾಯ ಪಡೆಯುತ್ತೇವೆ. ಭಕ್ತರು ಆಶ್ರಮಕ್ಕೆ ಉದಾರವಾಗಿ ಎಲ್ಲ ರೀತಿಯ ನೆರವು ನೀಡುತ್ತಿದ್ದಾರೆ. ಸರ್ಕಾರದ ಸಹಾಯಧನದ ಅವಶ್ಯಕತೆ ಇಲ್ಲ. ಆದಕಾರಣ, ಸರ್ಕಾರ ನೀಡಿದ ಅನುದಾನವನ್ನು ಗೌರವಪೂರ್ವಕವಾಗಿ ವಾಪಸ್ ಮಾಡಿದ್ದೇವೆ' ಎಂದು ತಿಳಿಸಿದ್ದಾರೆ.

'ಈ ಹಿಂದೆ ಜ್ಞಾನಯೋಗಾಶ್ರಮದ ಒಂದು ಶಾಖಾ ಮಠಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು 5 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದರು. ಆಗಲೂ ಶ್ರೀಗಳು ನಮ್ರತೆಯಿಂದ ಹಣವನ್ನು ಸರ್ಕಾರಕ್ಕೆ ವಾಪಸ್ ಮಾಡಿದ್ದರು. ನಿಜಕ್ಕೂ ಇದೊಂದು ಮಾದರಿ ಸಂದೇಶ' ಎಂದು ಸಚಿವರು ಹೇಳಿದ್ದಾರೆ.

ಸಿದ್ಧೇಶ್ವರ ಶ್ರೀಗಳು ತಮ್ಮ ಆತ್ಮಸಾಕ್ಷಿಗೆ ಬದ್ಧರಾಗಿರುವ ಸರಳ ಸಂತರು. ಮೂರು ವರ್ಷಗಳ ಹಿಂದೆ ಕೇಂದ್ರ ಸರ್ಕಾರ ಅವರಿಗೆ 'ಪದ್ಮಶ್ರೀ' ಪ್ರಶಸ್ತಿ ಪ್ರಕಟಿಸಿದಾಗ, 'ನಾವು ಸನ್ಯಾಸಿಗಳು. ನಮಗೆ ಬಿರುದು, ಪದವಿಗಳು ಬೇಡ' ಎಂದು ನಿರಾಕರಿಸಿದ್ದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಕೊಡಲು ಬಂದಾಗಲೂ ಅವರು ಇದೇ ಮಾತು ಹೇಳಿದ್ದರು.

ಈ ಸಂದರ್ಭದಲ್ಲಿ ಧಾರವಾಡ ಮುರುಘಾಮಠದ ಸಂಸ್ಥಾಪಕ ಗುರುಗಳಾದ ಮೃತ್ಯುಂಜಯ ಸ್ವಾಮಿಗಳ ಸಂಗತಿ ನೆನಪಿಗೆ ಬರುತ್ತದೆ. ಮೃತ್ಯುಂಜಯ ಸ್ವಾಮಿಗಳು ತಮ್ಮ ಮಠದಲ್ಲಿ ವಿದ್ಯಾರ್ಥಿಗಳಿಗಾಗಿ ಉಚಿತ ಪ್ರಸಾದ ನಿಲಯ ನಡೆಸುತ್ತಿದ್ದರು. ರಾಜ್ಯ ಸರ್ಕಾರ ಅವರಿಗೆ ಸಹಾಯಧನ ನೀಡಲು ಮುಂದಾಯಿತು. ಇದು ಗೊತ್ತಾಗುತ್ತಲೇ ಸ್ವಾಮೀಜಿ ಹೀಗೆ ಹೇಳಿದ್ದರು: 'ಧಾರವಾಡ ಸುತ್ತಮುತ್ತಲಿನ ಹಳ್ಳಿಗಳಲ್ಲಿರುವ ಮಠದ ಭಕ್ತರು ಪ್ರತಿವರ್ಷ ಸಾಕಷ್ಟು ದವಸ ಧಾನ್ಯ ಪೂರೈಸುತ್ತಾರೆ. ಹಾಲು, ಮೊಸರು, ಬೆಣ್ಣೆ, ಬೆಲ್ಲ ತಂದುಕೊಡುತ್ತಾರೆ. ಹೀಗಿರುವಾಗ, ಸರ್ಕಾರದ ಸಹಾಯ ಪಡೆದರೆ ಮಠದ ಭಕ್ತರಿಗೆ ಅಪಮಾನ ಮಾಡಿದಂತಾಗುತ್ತದೆ. ಆದ್ದರಿಂದ ಸರ್ಕಾರದ ಸಹಾಯ ಬೇಡ'.

ರಾಷ್ಟ್ರಪತಿಯಾಗಿದ್ದ ಬಾಬು ರಾಜೇಂದ್ರ ಪ್ರಸಾದ್ 1960ರಲ್ಲಿ ಈ ಮಠಕ್ಕೆ ಭೇಟಿ ನೀಡಿದ್ದರು. ಆ ದಿನ ಮೃತ್ಯುಂಜಯ ಸ್ವಾಮೀಜಿ ಸಮೀಪದ ಹಳ್ಳಿಗೆ ಧಾನ್ಯ ತರಲು ಚಕ್ಕಡಿ ತೆಗೆದುಕೊಂಡು ಹೋಗಿದ್ದರು. 'ರಾಷ್ಟ್ರಪತಿಗಳು ಮಠ ನೋಡಿಕೊಂಡು ಹೋಗಲಿ. ನನಗೆ ಬರುವುದಕ್ಕೆ ಆಗುವುದಿಲ್ಲ. ವಿದ್ಯಾರ್ಥಿಗಳ ಊಟಕ್ಕೆ ಧಾನ್ಯ ಸಂಗ್ರಹಿಸುವುದು ನನಗೆ ಬಹಳ ಮುಖ್ಯವಾದ ಕೆಲಸ' ಎಂದು ಸಹಾಯಕರ ಮೂಲಕ ಸಂದೇಶ ಕಳುಹಿಸಿದ್ದರು. ರಾಷ್ಟ್ರಪತಿ ಬಂದಿದ್ದಾರೆ ಎಂದು ಅವರು ಓಡಿ ಬರಲಿಲ್ಲ. ಗಣ್ಯರು, ರಾಜಕಾರಣಿಗಳಿಂದ ಅವರು ಸದಾ ದೂರ ಇರುತ್ತಿದ್ದರು. ಬಡ ಮಕ್ಕಳಿಗೆ ಒಳ್ಳೆಯ ಊಟ ಮತ್ತು ವಸತಿ ಒದಗಿಸುವುದನ್ನೇ ಒಂದು ತಪಸ್ಸು ಎಂದು ಅವರು ಭಾವಿಸಿದ್ದರು.

ನಾಲ್ಕನೆಯ ತರಗತಿವರೆಗೆ ಮಾತ್ರ ಓದಿದ್ದ ಮೃತ್ಯುಂಜಯ ಶ್ರೀಗಳು, 1918ರಿಂದ 1964ರವರೆಗಿನ ಅವಧಿಯಲ್ಲಿ ಲಕ್ಷಾಂತರ ಬಡ ಮಕ್ಕಳ ಓದಿಗೆ ನೆರವಾದದ್ದು ಒಂದು ಸ್ಮರಣೀಯ ಸಂಗತಿ.

2008- 10ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ಮಠ-ಮಂದಿರಗಳಿಗೆ ಧಾರಾಳವಾಗಿ ಅನುದಾನ ನೀಡುವ ಸಂಪ್ರದಾಯ ಆರಂಭಿಸಿದರು. ಮಠಗಳನ್ನು ಸಬಲಗೊಳಿಸುವುದು ಅವರ ಉದ್ದೇಶವಾಗಿರಬಹುದು. ಆದರೆ ಅವರ ಉದ್ದೇಶ ಈಡೇರಿದಂತಿಲ್ಲ. ಈಗ ಅನೇಕ ಮಠಾಧಿಪತಿಗಳು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಹಣಸಹಾಯ ಪಡೆಯಲು ಪೈಪೋಟಿ ನಡೆಸಿದ್ದಾರೆ. ಈ ಎಲ್ಲರ ನಡುವೆ ಸಿದ್ಧೇಶ್ವರ ಶ್ರೀಗಳು ಒಂದು ಬೆಳಕಿನ ರೇಖೆಯಂತೆ ಕಾಣಿಸುತ್ತಾರೆ.

ಮಠ-ಮಂದಿರಗಳು ಭಕ್ತರಿಂದ ಪೋಷಣೆಗೊಳ್ಳಬೇಕು. ಜನ ತಮ್ಮ ದುಡಿಮೆಯಿಂದ ಕೊಟ್ಟ ಹಣಕ್ಕೆ ವಿಶೇಷ ಮಹತ್ವವಿದೆ. ಇದರಿಂದ, ತಾವು ಕಟ್ಟಿದ ಸಂಸ್ಥೆ ಎಂಬ ಅಭಿಮಾನ ಮೂಡುತ್ತದೆ. ಸ್ವಾತಂತ್ರ್ಯ ಚಳವಳಿಯಲ್ಲಿ ಗಾಂಧೀಜಿ 'ಪೈಸಾ ಫಂಡ್' ಆರಂಭಿಸಿದ್ದರು. ಅದರ ಲೆಕ್ಕಪತ್ರವನ್ನು ಪ್ರತಿದಿನ ಬಹಿರಂಗಪಡಿಸುತ್ತಿದ್ದರು.

ಸಾರ್ವಜನಿಕ ಕೆಲಸಗಳಲ್ಲಿ ಜನರ ಸಹಭಾಗಿತ್ವ ಬಹಳ ಮುಖ್ಯವಾದದ್ದು. ಸರ್ಕಾರದಿಂದ ಹಾಗೂ ಕೆಲವೇ ಶ್ರೀಮಂತರಿಂದ ಹಣ ತಂದು ಕಟ್ಟುವ ಮಠ-ಮಂದಿರಗಳು ಸಮಷ್ಟಿ ಭಾವನೆಯಿಂದ ವಂಚಿತವಾಗುತ್ತವೆ. ಈ ಸರಳ ಸತ್ಯವನ್ನು ಮಠಾಧಿಪತಿಗಳು, ಧಾರ್ಮಿಕ ಮುಖಂಡರು ಅರಿತುಕೊಳ್ಳಬೇಕು.

ವಾಚಕರ ವಾಣಿ

ಎಲ್ಲ ಭಾರತೀಯ ಭಾಷೆಗಳ ಸಮಸ್ಯೆ

ಇದೇ 21ರಂದು ವಿಶ್ವ ತಾಯ್ನುಡಿ ದಿನ ಆಚರಿಸಿದ್ದೇವೆ. ತಾಯ್ನುಡಿ ಬಗೆಗಿನ ಪ್ರೇಮ ಎಲ್ಲೆಡೆ ಉಕ್ಕಿ ಹರಿಯಿತು! ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ತೊಂಬತ್ತರ ದಶಕದವರೆಗೂ ಬಹುತೇಕರ ಶಿಕ್ಷಣವು ಕನ್ನಡ ಮಾಧ್ಯಮದಲ್ಲಿಯೇ ನಡೆಯಿತು. ಹೀಗಾಗಿ ಅವರು ಒಂದಷ್ಟು ಸೌಲಭ್ಯಗಳಿಂದ ವಂಚಿತರೂ ಆಗಿದ್ದಾರೆ. ಇದು ಅವರ ಮುಂದಿನ ಪೀಳಿಗೆಯನ್ನು ಇಂಗ್ಲಿಷ್ ಮಾಧ್ಯಮದತ್ತ ದೂಡಲು ಪ್ರಬಲ ಕಾರಣವಾಗಿದೆ. ಇದರಿಂದ ಎಷ್ಟು ಅನುಕೂಲ ಆಗಿದೆ, ಆಗುತ್ತದೆ ಎಂಬುದು ಮುಂದಿನ ಮಾತು.

ನಮ್ಮ ಸೃಜನಶೀಲ ವಲಯವೂ ಕನ್ನಡ ನುಡಿಯ ಬಗ್ಗೆ ಭಾವನಾತ್ಮಕವಾಗಿಯೇ ಪ್ರತಿಕ್ರಿಯಿಸಿದೆ. ಅವರ ಹಿಪೋಕ್ರಸಿಯೂ ಕನ್ನಡದ ಈ ದುಃಸ್ಥಿತಿಗೆ ಕಾರಣ ಅನ್ನಿಸುತ್ತದೆ. ಕನ್ನಡ ಎಂದರೆ ಕತೆ, ಕಾದಂಬರಿ, ಕವನ ಎನ್ನುವ ಸೀಮಿತ ದೃಷ್ಟಿಕೋನದಿಂದ ಹೊರಬರಬೇಕು. ಕನ್ನಡವನ್ನು ಜ್ಞಾನ, ವಿಜ್ಞಾನ, ತಂತ್ರಜ್ಞಾನದ ಭಾಷೆಯಾಗಿ ಯಶಸ್ಸುಗೊಳಿಸಬೇಕು. ಭಾರತದಲ್ಲಿ ಇಂಗ್ಲಿಷ್ ಹಾಗೂ ಹಿಂದಿಗೆ ಇರುವ ಎಲ್ಲಾ ಅನುಕೂಲಗಳು, ಅವಕಾಶಗಳು ಕನ್ನಡಕ್ಕೆ ಇರಬೇಕು. ಹಾಗೆ ಇಲ್ಲದಿರುವುದೇ ಹಿಂದಿಯೇತರ ಎಲ್ಲಾ ಭಾರತೀಯ ಭಾಷೆಗಳ ಸಮಸ್ಯೆಯೂ ಹೌದು. ಈ ಬಗ್ಗೆ ಕೇಂದ್ರ ಸರ್ಕಾರ ಗಮನ ಹರಿಸಬೇಕು. ಬರೀ ತಾಯ್ನುಡಿ ಶಿಕ್ಷಣದ ಬಗ್ಗೆ ಮಾತ್ರ ನಮ್ಮ ಗಮನ ಕೇಂದ್ರೀಕರಿಸಿದರೆ, ಒಳಗೆ ಕ್ಯಾನ್ಸರ್ ಗಡ್ಡೆಯನ್ನು ಬಿಟ್ಟು ಹೊರಗೆ ಮುಲಾಮು ಹಚ್ಚಿದಂತಾಗುತ್ತದೆ ಅಷ್ಟೇ!

ಗಿರೀಶ್ ಮತ್ತೇರ, ಹನುಮಂತದೇವರ ಕಣಿವೆ, ಹೊಳಲ್ಕೆರೆ

ಕೃಷಿ ಕಾಯ್ದೆ: ಬಿಹಾರ ಪಾಠವಾಗಲಿ

'ಕೃಷಿ ಕಾಯ್ದೆಗೆ ಏಕೆ ವಿರೋಧ?' ಎಂಬ ಎ.ಸೂರ್ಯಪ್ರಕಾಶ್ ಅವರ ಲೇಖನ (ಪ್ರ.ವಾ., ಫೆ. 22) ಒಂದು ಮೇಲ್ನೋಟದ, ಅತ್ಯಂತ ಸರಳವಾದ ವಿಶ್ಲೇಷಣೆಯೇ ಹೊರತು, ಆ ಕಾಯ್ದೆಯ ದೂರಗಾಮಿ ಪರಿಣಾಮಗಳನ್ನಾಗಲೀ ಖಾಸಗೀಕರಣದ ಒಳಸುಳಿಗಳನ್ನಾಗಲೀ ತೆರೆದಿಡುವ ಸೂಕ್ಷ್ಮಾವಲೋಕನವಲ್ಲ ಎಂದೆನಿಸುತ್ತದೆ. ಹೊಸ ಕಾಯ್ದೆಯು ರೈತರಿಗೆ ಮಾರುಕಟ್ಟೆಯನ್ನು ಮುಕ್ತಗೊಳಿಸಿ ಅವರನ್ನು ಸಶಕ್ತರನ್ನಾಗಿಸುತ್ತದೆ ಎಂಬುದು ಭ್ರಮೆ ಅಷ್ಟೆ. ಮೇಲ್ನೋಟಕ್ಕೆ ಹೌದೆನಿಸಿದರೂ ವಾಸ್ತವದಲ್ಲಿ ರೈತ ಬಲಿಷ್ಠ ಕಾರ್ಪೊರೇಟ್ ಕಂಪನಿಗಳ ಕಪಿಮುಷ್ಟಿಗೆ ಪಕ್ಕಾಗಿ ಇನ್ನೂ ಹೀನಾಯ ಸ್ಥಿತಿಗೆ ಹೋಗುತ್ತಾನೆ ಎಂಬುದಕ್ಕೆ ಇಂದು ಬಿಹಾರ ನಮ್ಮ ಮುಂದೆ ಜ್ವಲಂತ ನಿದರ್ಶನವಾಗಿದೆ.

2006ರಲ್ಲಿ ಅಲ್ಲಿ ಅಧಿಕಾರಕ್ಕೆ ಬಂದ ನಿತೀಶ್ ಕುಮಾರ್ ಅವರು ಎಪಿಎಂಸಿಗಳನ್ನು ರದ್ದು ಮಾಡಿ ಕೃಷಿ ಮಾರುಕಟ್ಟೆಯನ್ನು ಮುಕ್ತಗೊಳಿಸಿದರು. 14 ವರ್ಷಗಳ ನಂತರವೂ ರೈತ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ವರ್ತಕರಿಗೆ ತನ್ನ ಸರಕನ್ನು ಮಾರುವ ಅನಿವಾರ್ಯ ಸ್ಥಿತಿಗೆ ಸಿಲುಕಿದ್ದಾನೆ ಎಂದು ವರದಿಗಳು ತಿಳಿಸುತ್ತವೆ. ನ್ಯಾಷನಲ್ ಕೌನ್ಸಿಲ್ ಫಾರ್ ಅಪ್ಲೈಡ್ ಎಕನಾಮಿಕ್ ರಿಸರ್ಚ್ ಎಂಬ ಸಂಸ್ಥೆ ತನ್ನ 2019ರ ವರದಿಯಲ್ಲಿ, ಕಾಯ್ದೆಯ ಎಲ್ಲ ನಿರೀಕ್ಷೆಗಳು ಹುಸಿಗೊಂಡಿರುವುದನ್ನು ಸ್ಪಷ್ಟಪಡಿಸಿದೆ. ಸರ್ಕಾರದ ಹಿಡಿತದಲ್ಲೇ ಇರುವ ಎಪಿಎಂಸಿಗಳಲ್ಲಿ ನಡೆಯುತ್ತಿರುವ ದಲ್ಲಾಳಿಗಳ ದೌರ್ಜನ್ಯವನ್ನೇ ಸರಿಪಡಿಸಲಾಗದಿದ್ದರೆ ನಾಳೆ ಕಾರ್ಪೊರೇಟ್ ಕುಳಗಳನ್ನು ನಿರ್ವಹಿಸಲಾದೀತೆ? ಈಗಾಗಲೇ ನೂರಾರು ಎಕರೆ ಭೂಸ್ವಾಧೀನ, ಗೋದಾಮು ನಿರ್ಮಾಣ, ರೈಲ್ವೆಮಾರ್ಗ ಇತ್ಯಾದಿ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿರುವ ಕೆಲವೇ ಬಂಡವಾಳಿಗರ ಏಕಸ್ವಾಮ್ಯವು ವಿಜೃಂಭಿಸಲು ಕಾರಣವಾಗುವ ಈ ಕಾಯ್ದೆಗಳನ್ನು ಸಮರ್ಥಿಸುವುದು ಎಷ್ಟು ಸರಿ?

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಕಠಿಣ ನಿರ್ಬಂಧ ಅಗತ್ಯವೇ?

ಕೇರಳದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ನೀಡಿ ದಕ್ಷಿಣ ಕನ್ನಡ ಜಿಲ್ಲಾಡಳಿತವು ಕೇರಳದಿಂದ ರಾಜ್ಯಕ್ಕೆ ಬರುವವರಿಗೆ ತರಾತುರಿಯಿಂದ ಕೆಲವು ನಿರ್ಬಂಧಗಳನ್ನು ಹೇರಿದೆ. ತುಳುನಾಡಿನ ಅವಿಭಾಜ್ಯ ಪ್ರದೇಶವಾದ ಕಾಸರಗೋಡಿನ ಗಡಿ ಪ್ರದೇಶದ ಲಕ್ಷಾಂತರ ಜನ ಇದರಿಂದ ತಲ್ಲಣಿಸಿದ್ದಾರೆ. ಇಂತಹ ನಿರ್ಣಯವನ್ನು ವೈರಾಣು ವೈದ್ಯಕೀಯ ತಜ್ಞರ ಅಭಿಪ್ರಾಯ ಪಡೆದು ಪುನರ್‌ಪರಿಶೀಲಿಸುವುದು ಒಳ್ಳೆಯದು.

ಸೀಮಿತ ಜನಸಂಖ್ಯೆಯ ಮುಂದುವರಿದ ನಾಗರಿಕ ಸಮಾಜದ ಪಾಶ್ಚಾತ್ಯ ರಾಷ್ಟ್ರಗಳ ಕೊರೊನಾ ನಿಯಮಾವಳಿಗಳನ್ನು ಭಾರತದಂತಹ ದೇಶದಲ್ಲಿ ಕಣ್ಮುಚ್ಚಿ ಅಳವಡಿಸುವುದು ಸಾಧುವಲ್ಲ. ಐಸೊಲೇಶನ್‌ನ ಏಕಾಂಗಿತನ, ಪ್ರಯೋಗಾರ್ಥವಾಗಿ ನೀಡಿದ ಔಷಧಗಳ ಅಡ್ಡಪರಿಣಾಮ, ರೋಗಿಗೆ ಮೊದಲೇ ಇದ್ದ ಗಂಭೀರ ಸ್ವರೂಪದ ಕಾಯಿಲೆಗಳ ಕಡೆಗಣನೆಯೇ ಮೊದಲಾದ ಕಾರಣಗಳಿಂದ ಶೇಕಡ ಒಂದಕ್ಕಿಂತಲೂ ಕಡಿಮೆ ಮಾರಣಾಂತಿಕತೆಯನ್ನು ಈವರೆಗೆ ದಾಖಲಿಸಿದ ಕೋವಿಡ್ ವ್ಯಾಧಿಗೆ ಈ ಪರಿಯ ಕಠಿಣ ಕ್ರಮಗಳನ್ನು ಕೈಗೊಳ್ಳುವುದು ಸಾಧುವಲ್ಲ. ಕೋವಿಡ್ ನಿಯಂತ್ರಣಕ್ಕೆ ಭಾರತೀಯ ಲಸಿಕೆ ಇರುವಾಗ, ಮನೆಯಲ್ಲಿ ಇದ್ದುಕೊಂಡೇ ತೆಗೆದುಕೊಳ್ಳುವ ಸಾಮಾನ್ಯ ಔಷಧಗಳಿಂದಲೇ ಹೆಚ್ಚಿನ ಕೊರೊನಾ ಸೋಂಕಿತ ರೋಗಿಗಳು ಗುಣಮುಖರಾಗುತ್ತಿರುವಾಗ ಕಠಿಣ ಕ್ರಮಗಳು ಜನಾಕ್ರೋಶಕ್ಕೆ ಕಾರಣವಾಗುತ್ತವೆ.

ಈ ಹಿಂದೆ ಲಾಕ್‌ಡೌನ್ ಕಾರಣದಿಂದ ಕುಸಿತ ಕಂಡ ಆರ್ಥಿಕತೆಯನ್ನು ಸರಿದೂಗಿಸುವ ಸರ್ಕಾರದ ಪ್ರಯತ್ನದ ಪರಿಣಾಮವಾದ ಬೆಲೆ ಏರಿಕೆಯ ಬಿಸಿಯನ್ನು ಜನ ಅನುಭವಿಸುತ್ತಿದ್ದಾರೆ. ಇದನ್ನು ನಿರ್ಲಕ್ಷಿಸಿ ಆತುರದ ನಿರ್ಧಾರಗಳನ್ನು ಕೈಗೊಂಡರೆ ಜನರ ಬದುಕು ಇನ್ನಷ್ಟು ಸಂಕಷ್ಟಕ್ಕೆ ಸಿಲುಕುತ್ತದೆ.

ಡಾ. ರಾಮಚಂದ್ರ ಕೆ., ಕನ್ಯಾನ

ಗಡಿಯಲ್ಲಿ ಕಠಿಣ ಕ್ರಮವಿರಲಿ

ಕೋವಿಡ್ ಹರಡದಂತೆ ನಿಗಾ ವಹಿಸುವುದರ ಭಾಗವಾಗಿ ಕೇರಳದ ಗಡಿಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರಿಂದ ಜನರಿಗೆ ತೊಂದರೆಯಾಗಿದ್ದಾಗಿ ವರದಿಯಾಗಿದೆ (ಪ್ರ.ವಾ., ಫೆ. 23). ಆದರೆ ಇಂತಹ ಕ್ರಮಗಳಿಲ್ಲದೆ ಒಳ ನುಸುಳುವುದರಿಂದ ಉಂಟಾಗುವ ತೊಂದರೆಯನ್ನೂ ಗಮನಿಸಬೇಕು.

ಒಬ್ಬ ಕೋವಿಡ್ ಪಾಸಿಟಿವ್ ರೋಗಿಯಿಂದ ನೂರಾರು ಜನರಿಗೆ ಕಾಯಿಲೆ ಹರಡುವ ಸಾಧ್ಯತೆ ಇರುತ್ತದೆ. ಆಗ ರಾಜ್ಯದಲ್ಲಿ ಪುನಃ ಲಾಕ್‌ಡೌನ್ ಹೇರಬೇಕಾಗಿ ಬಂದರೆ ಮತ್ತೆ ಜನ ಅನೇಕಾನೇಕ ತೊಂದರೆಗಳಿಗೆ ಸಿಲುಕುವಂತೆ ಆಗುತ್ತದೆ. ಈಗತಾನೆ ಪುನರ್ ಚಾಲನೆಗೊಂಡಿರುವ ಉದ್ದಿಮೆಗಳು, ಮಕ್ಕಳ ವಿದ್ಯಾಭ್ಯಾಸ ಎಲ್ಲವನ್ನೂ ಸ್ಥಗಿತಗೊಳಿಸುವ ಕೆಲಸ ಮತ್ತೊಮ್ಮೆ ಆಗಬೇಕೇ? ಹೀಗಾಗದಂತೆ ಅಧಿಕಾರಿಗಳು ಪ್ರತೀ ಗಡಿಯಲ್ಲೂ ಕಠಿಣ ಕ್ರಮ ಕೈಗೊಂಡು ರಾಜ್ಯದ ಹಿತ ಕಾಯಲಿ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕುರುಬರನ್ನು 'ಬುಡಕಟ್ಟು' ಎಂದು ಪರಿಗಣಿಸಬೇಕೇ?

• ವಿ.ಕೆ. ನಟರಾಜ್



ಮೀಸಲಾತಿ ಪಟ್ಟಿಯಿಂದ ಹೊರಗೆ ಉಳಿದಿರುವ ಮತ್ತು ನಿರ್ದಿಷ್ಟ ವರ್ಗದಲ್ಲಿ ಸೇರಿರುವ ಕೆಲವು ಉಪಪಂಗಡಗಳನ್ನು ಮೀಸಲಾತಿ ಪಟ್ಟಿಗೆ ಸೇರಿಸಬೇಕು ಎಂಬುದು ಒಂದು ಬೇಡಿಕೆ; ಮೀಸಲಾತಿ ಪಡೆಯಲು ಸ್ಪರ್ಧೆ ಕಡಿಮೆ ಇರುವ ಪಟ್ಟಿಯಲ್ಲಿ ಇರುವಂತೆ ನೋಡಿಕೊಳ್ಳೋಣ ಎಂಬುದು ಇದರ ಹಿಂದಿನ ಚಿಂತನೆ ಆಗಿರಬಹುದು. ಆದರೆ, ಇದು ವಿಶ್ಲೇಷಣೆಯ ಆಧಾರದಲ್ಲಿ ಮುಂದಿಟ್ಟ ಚಿಂತನೆ ಅಲ್ಲ, ಬದಲಿಗೆ ಅಂದಾಜು ಮಾತ್ರ ಎಂಬುದನ್ನು ಇಲ್ಲಿ ನೆನಪಿನಲ್ಲಿ ಇರಿಸಿಕೊಳ್ಳಬೇಕು. ಇಂತಹ ಸರಣಿ ಬೇಡಿಕೆಗಳ ಪಟ್ಟಿಗೆ ಹೊಸ ಸೇರ್ಪಡೆ ಕುರುಬ ಸಮುದಾಯ. ಇಡೀ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ (ಬುಡಕಟ್ಟು) ಸೇರಿಸಬೇಕು ಎಂಬುದು ಬೇಡಿಕೆ. ಈ ಬೇಡಿಕೆಗೆ ಸಂಬಂಧಿಸಿ ವಿಶ್ಲೇಷಣೆ ನಡೆಸಬೇಕಾದ ಅಗತ್ಯ ಇದೆ.

ಮೊದಲನೆಯದಾಗಿ, 'ಬುಡಕಟ್ಟು' ಎಂಬ ಕಲ್ಪನೆಯಲ್ಲಿಯೇ ಸ್ಪಷ್ಟತೆ ಇಲ್ಲ. ಒಂದು ಸಮುದಾಯವನ್ನು 'ಬುಡಕಟ್ಟು' ಎಂದು ಪರಿಗಣಿಸಲು ಇರುವ ಮಾನದಂಡಗಳನ್ನು ಮಾನವಶಾಸ್ತ್ರಜ್ಞರು ಬದಲಿಸುತ್ತಾ ಬಂದಿದ್ದಾರೆ. ಅದರ ಹೊರತಾಗಿಯೂ ಈ ಪರಿಕಲ್ಪನೆಯಲ್ಲಿ ಈಗಲೂ ಖಚಿತತೆ ಇಲ್ಲ. ನಿಶ್ಚಿತ ವ್ಯಾಖ್ಯಾನ ಇಲ್ಲದಿದ್ದರೂ, ಕೆಲವು ಜಾತಿಗಳ ಉಪಪಂಗಡಗಳಲ್ಲಿ ಬುಡಕಟ್ಟು ಸಮುದಾಯದ ಲಕ್ಷಣಗಳು ಇರಬಹುದು. ಕೆಲವು ಉಪಪಂಗಡಗಳಲ್ಲಿ ಇಂತಹ ಲಕ್ಷಣಗಳು ಇಲ್ಲದೇ ಇರಬಹುದು. ಹಾಗಿದ್ದರೂ ಇಂಥವರನ್ನು ಬುಡಕಟ್ಟು ಎಂದು ಪರಿಗಣಿಸಲು ಸಾಧ್ಯವಿಲ್ಲ. ಕುರುಬ ಸಮುದಾಯದ ವಿಚಾರದಲ್ಲಿ ಇದು ಸತ್ಯವಾಗಿದೆ. ಅತ್ಯಂತ ಹಿಂದುಳಿದ, ಶೋಚನೀಯವಾಗಿ ಬದುಕು ಸಾಗಿಸುತ್ತಾ ಬುಡಕಟ್ಟು ಎನಿಸಿಕೊಳ್ಳಲು ಅರ್ಹತೆ ಇರುವ ಕೆಲವು ಉಪಪಂಗಡಗಳಿವೆ ಎಂಬುದು ನಿಜ. ಆದರೆ, ಇಡೀ ಸಮುದಾಯಕ್ಕೆ ಅದನ್ನು ಅನ್ವಯಿಸಲಾಗದು.

ಕುರುಬ ಸಮುದಾಯವನ್ನು ಬುಡಕಟ್ಟು ಎಂದು ಪರಿಗಣಿಸಿದರೆ, ಆ ಸಮುದಾಯದವರಿಗೆ ಆಗುವ ಒಂದು ಲಾಭವೆಂದರೆ, ರಾಜ್ಯದಲ್ಲಿ ಬುಡಕಟ್ಟು ಸಮುದಾಯದವರಿಗೆ ಮೀಸಲಿಟ್ಟಿರುವ ಎರಡು ಲೋಕಸಭಾ ಕ್ಷೇತ್ರಗಳಲ್ಲಿ ಮತ್ತು 15 ವಿಧಾನಸಭಾ ಕ್ಷೇತ್ರಗಳಲ್ಲಿ ಅವರು ಸ್ಪರ್ಧಿಸಬಹುದು. 'ತುಲನಾತ್ಮಕವಾಗಿ ನೋಡುವುದಾದರೆ, ಈ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಯಲ್ಲಿ ಕುರುಬ ಸಮುದಾಯದವರು ಪ್ರಾಬಲ್ಯ ಸಾಧಿಸಬಲ್ಲರು' ಎಂದು ಸಮಾಜಶಾಸ್ತ್ರಜ್ಞ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ ಪಾಣಿನಿ ಅವರು ಅನೌಪಚಾರಿಕ ಮಾತುಕತೆಯ ಸಂದರ್ಭದಲ್ಲಿ ಹೇಳಿದ್ದರು.

ಇದನ್ನು ಬಿಟ್ಟರೆ, ಮೀಸಲಾತಿಯಿಂದ ಈ ಸಮುದಾಯಕ್ಕೆ ಬೇರೆ ಯಾವುದೇ ನಿರ್ದಿಷ್ಟ ಲಾಭ ಗೋಚರಿಸುವುದಿಲ್ಲ. ಬುಡಕಟ್ಟು ಸಮುದಾಯಕ್ಕೆ ಹಂಚಿಕೆ ಮಾಡಿರುವ, ವೆಚ್ಚವಾಗದೆ ಉಳಿದ ಸಂಪನ್ಮೂಲಗಳ ಬಳಕೆಗೂ ಈ ಸಮುದಾಯ ಅರ್ಹತೆ ಗಳಿಸುತ್ತದೆ. ಬುಡಕಟ್ಟು ಸಮುದಾಯದ ಅಭಿವೃದ್ಧಿ ಹೊಂದಿರದ ಇತರ ಉಪಪಂಗಡಗಳಿಗೆ ಹೋಲಿಸಿದರೆ, ಈ ಸಮುದಾಯವು ಸಂಪನ್ಮೂಲಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಬಲ್ಲದು ಎಂಬುದು ಯಾರಿಗಾದರೂ ಅರ್ಥವಾಗುತ್ತದೆ. ಇಂದು ಮೀಸಲಾತಿಯ ಹೋರಾಟವು 'ಪ್ರಾತಿನಿಧ್ಯದ' ಹೋರಾಟ ಎಂಬುದು ಒಂದು ಭಾಗವಾದರೆ, ಇಂಥ ಹೋರಾಟವು ಒಂದು ಸಮುದಾಯವನ್ನು ಒಗ್ಗಟ್ಟಿನಲ್ಲಿಡುವ ಉಪಾಯವೂ ಆಗಿರುತ್ತದೆ ಎಂಬುದು

ಇನ್ನೊಂದು ಅಂಶವಾಗಿದೆ.

ಅದೇನೇ ಇರಲಿ, 'ಬುಡಕಟ್ಟು' ಸ್ಥಾನಮಾನ ಪಡೆಯುವ ಪ್ರಕ್ರಿಯೆಯು ಅತ್ಯಂತ ಕ್ಲಿಷ್ಟಕರವಾದದ್ದು. ಅದಕ್ಕೆ ಸಂಸತ್ತಿನ ಅನುಮೋದನೆ ಬೇಕಾಗುತ್ತದೆ. ಒಂದು ಸಮುದಾಯಕ್ಕೆ ಈ ಸ್ಥಾನಮಾನ ನೀಡಿದರೆ, ದೇಶದ ಬೇರೆಬೇರೆ ಭಾಗಗಳ ವಿವಿಧ ಸಮುದಾಯಗಳಿಂದ ಇಂಥದ್ದೇ ಬೇಡಿಕೆಗಳು ಬರುತ್ತವೆ ಎಂಬುದೂ ಖಚಿತ. ಯಾವುದೇ ಸಮುದಾಯದಿಂದ ಬಂದ ಇಂಥ ಬೇಡಿಕೆಯನ್ನು ಪರಿಗಣಿಸುವಾಗ ಕೇಂದ್ರ ಸರ್ಕಾರವು ಇವೆಲ್ಲವುಗಳನ್ನೂ ಚಿಂತಿಸದೆ ಇರುವುದಿಲ್ಲ.

ಸಂಖ್ಯೆಯಲ್ಲಿ ಕಡಿಮೆ ಇರುವ ಸಮುದಾಯಗಳ ಮೇಲೆ ಕುರುಬ ಸಮುದಾಯವು 'ದೊಡ್ಡಣ್ಣನಂತೆ' ವರ್ತಿಸುವ ಪ್ರವೃತ್ತಿಯನ್ನು ಹೊಂದಿದೆ ಎಂಬ ಭಾವನೆಯೂ ಇದೆ. ಚುನಾವಣಾ ಫಲಿತಾಂಶಗಳ ವಿವರವಾದ ವಿಶ್ಲೇಷಣೆಯಿಂದ ಇದರ ಸತ್ಯಾಸತ್ಯತೆಯನ್ನು ಕಂಡುಕೊಳ್ಳಬೇಕಾಗಿದೆ. ಖಚಿತವಾಗಿಯೂ ಈ ನಿಟ್ಟಿನಲ್ಲಿ ಅಧ್ಯಯನ ಆಗಬೇಕಾಗಿದೆ.

ಈ ಕೆಳಗಿನ ಕೆಲವು ಅಂಶಗಳನ್ನು ಗಮನಿಸಬೇಕಾದ ಅಗತ್ಯ ಇದೆ. ಕುರುಬ ಸಮುದಾಯದ ಸಾಮಾಜಿಕ ಸ್ಥಾನಮಾನವನ್ನು ಗುರುತಿಸಲು ಸಮೀಕ್ಷೆ ನಡೆಸಬೇಕಾದ ಅಗತ್ಯ ಇದೆ. ಇಂತಹ ಪ್ರಕ್ರಿಯೆಯಲ್ಲಿ, ಸಂಖ್ಯೆಯನ್ನು ಹೆಚ್ಚಿಸಿ ಹೇಳುವಂತಹ ಸಮಸ್ಯೆ ಎದುರಾಗಬಹುದು. ಜನಸಂಖ್ಯೆಯು ಈಗಿನ ಅಂದಾಜಿಗಿಂತ ಬಹಳ ಕಡಿಮೆ ಇದೆ ಎಂದು ಕಂಡುಬಂದರೆ, ಸಂಭಾವ್ಯ ಫಲಾನುಭವಿಗಳು (ಇಲ್ಲಿ ಕುರುಬರು) ಆ ಸಂಖ್ಯೆಯನ್ನು ಪ್ರಶ್ನಿಸಬಹುದು. ಜನಸಂಖ್ಯೆಯು ಬಹಳ ಹೆಚ್ಚು ಎಂದು ಕಂಡು ಬಂದರೆ, ಇತರ ಸಮುದಾಯಗಳು ಪ್ರತಿಭಟನೆ ನಡೆಸಬಹುದು.

ಅಂತಿಮವಾದ ಒಂದು ಅವಲೋಕನ ಹೀಗಿದೆ: ಕೊಟ್ಟ ಕೊನೆಗೆ, ತಮ್ಮ ಕನಿಷ್ಠ ನಿರೀಕ್ಷೆ ಏನು ಎಂಬ ಅಂದಾಜು ಯಾವುದೇ ಚಳವಳಿಯ ನಾಯಕರಲ್ಲಿ ಇರುತ್ತದೆ. ಈ ಸಂದರ್ಭದಲ್ಲಿ ನಾಯಕರು ಹೊಂದಿರುವ ಕನಿಷ್ಠ ನಿರೀಕ್ಷೆ ಏನು?

(ಲೇಖಕ: ಬ್ರಿಟನ್‌ನ ಯಾರ್ಕ್ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ)

ಅರ್ಹರಲ್ಲದವರಿಗೆ ಮೀಸಲಾತಿ ಬೇಡ

ರಾಜ್ಯ ಸರ್ಕಾರವು ಮೀಸಲಾತಿ ಘೋಷಿಸುವ ಮುನ್ನ ಆಯಾ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ಮತ್ತು ಸಂವಿಧಾನಾತ್ಮಕ ಸಾಧಕ–ಬಾಧಕಗಳನ್ನು ಪರಿಶೀಲಿಸಬೇಕು. ಪ್ರಬಲ ಮತ್ತು ಮೇಲ್ವರ್ಗದ ಜಾತಿಯವರಿಗಿಂತ ಹಿಂದುಳಿದ ಮತ್ತು ತಳ ಸಮುದಾಯದವರಿಗೆ ಸೌಲಭ್ಯ ಒದಗಿಸಲು ಆದ್ಯತೆ ನೀಡಬೇಕು. ಅರ್ಹರಲ್ಲದವರಿಗೆ ಮೀಸಲಾತಿ ಕೊಡಲಾಗದು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಪ್ರವರ್ಗ 2ಎದಲ್ಲಿ ಈಗಾಗಲೇ 102 ಜಾತಿಗಳಿವೆ. ಪ್ರಬಲ ಜಾತಿಯವರು ಕೂಡ ಅದೇ ಪ್ರವರ್ಗದಲ್ಲಿ ಮೀಸಲಾತಿ ಕೇಳಿದರೆ, ಅಲ್ಲಿರುವ ಇತರೆ ಜಾತಿ, ಸಮುದಾಯದವರು ಎಲ್ಲಿ ಹೋಗಬೇಕು? ಅವರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ? ನೇಕಾರರ ಸಮುದಾಯದಲ್ಲೇ 32 ಉಪಪಂಗಡಗಳು ಇವೆ. ಅವರಿಗೆ ನ್ಯಾಯಯುತವಾಗಿ ಮೀಸಲಾತಿ ಪಡೆಯಲು ಸಾಧ್ಯವಾಗುವುದೇ?

ಮೀಸಲಾತಿ ಹೋರಾಟದ ನೇತೃತ್ವ ವಹಿಸಿರುವ ಸ್ವಾಮೀಜಿಗಳು ಎಲ್ಲರ ಒಳಿತಿಗೆ ಶ್ರಮಿಸಬೇಕೆ ಹೊರತು ಕುಲಕ್ಕೊಬ್ಬ ಗುರುಗಳಂತೆ ಸರ್ಕಾರವನ್ನು ಅಂಜಿಸುವುದು ಅಥವಾ ಒತ್ತಡ ಹೇರುವುದು ಸರಿಯಲ್ಲ. ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರವು ವೈಜ್ಞಾನಿಕ ಅಧ್ಯಯನ ಮಾಡುವುದು ಕೂಡ ಅವಶ್ಯವಿದೆ. ಅರ್ಹರಿದ್ದವರಿಗೆ ಮೀಸಲಾತಿ ಸೌಲಭ್ಯ ದೊರೆಯುವಂತೆ ಮಾಡಬೇಕು.

ಛತ್ತೀಸಗಡ ಮತ್ತು ಆಂಧ್ರಪ್ರದೇಶದಲ್ಲಿ ದೇವಾಂಗ ಅಭಿವೃದ್ಧಿ ನಿಗಮ ಸ್ಥಾಪಿಸಲಾಗಿದೆ. ಅದೇ ಮಾದರಿಯಲ್ಲಿ ಕರ್ನಾಟಕದಲ್ಲೂ ಅಭಿವೃದ್ಧಿ ನಿಗಮ ಸ್ಥಾಪಿಸಿದಲ್ಲಿ ಅನುಕೂಲವಾಗುತ್ತದೆ.

ರಮೇಶ ಮಾಲಾ
ದೇವಾಂಗ ಸಮುದಾಯದ ಪ್ರಮುಖ, ಕಲಬುರ್ಗಿ

ಪ್ರತ್ಯೇಕ ಧರ್ಮದ ಮಾನ್ಯತೆ ದೊರಕಿದ್ದರೆ ಮೀಸಲಾತಿ ಸಮಸ್ಯೆ ಇರುತ್ತಿರಲಿಲ್ಲ

ಮೀಸಲಾತಿ ಹೋರಾಟದ ಹೆಸರಿನಲ್ಲಿ ಧರ್ಮ ವಿಭಜಿಸಲಾಗುತ್ತಿದೆ ಎಂದು ಅನಿಸುವುದಿಲ್ಲ. ಲಿಂಗಾಯತ ಧರ್ಮದಲ್ಲಿ ನೂರಾರು ಪಂಗಡ, ಒಳಪಂಗಡಗಳಿವೆ. ಅವುಗಳಲ್ಲಿ ಅನೇಕ ಪಂಗಡಗಳು ಈ ಮೊದಲೇ ತಮಗೆ ಬೇಕಾದ ಮೀಸಲಾತಿ ಪಡೆದುಕೊಂಡಿವೆ. ಆಗ ಧರ್ಮ ಹೋಳಾಯ್ತು ಎಂದು ಭಾವಿಸದ ನಾವು, ಈಗ ಏಕೆ ಭಾವಿಸಬೇಕು.

ಲಿಂಗಾಯತ ಪ್ರತ್ಯೇಕ ಧರ್ಮದ ಹೋರಾಟವನ್ನು ಧರ್ಮ ಒಡೆಯುವ ಕೆಲಸ ಎಂದು ಭಾವಿಸಿದವರು ಅಜ್ಞಾನಿಗಳು. ಪ್ರತ್ಯೇಕ ಧರ್ಮದ ಸ್ಥಾನಮಾನ ಹೊಂದಿದರೆ ಲಿಂಗಾಯತದ ನೂರಾರು ಪಂಗಡಗಳಲ್ಲಿ ಸಾಮರಸ್ಯ ಉಂಟಾಗಿ ಧರ್ಮ ಗಟ್ಟಿಗೊಳ್ಳುತ್ತದೆ. ಲಿಂಗಾಯತ ಧರ್ಮಕ್ಕೆ ಪ್ರತ್ಯೇಕ ಧರ್ಮದ ಮಾನ್ಯತೆ ದೊರಕಿದ್ದರೆ ಮೀಸಲಾತಿಯ ಸಮಸ್ಯೆ ಇರುತ್ತಿರಲಿಲ್ಲ. ಈಗಿರುವ ಪ್ರತ್ಯೇಕ ಧರ್ಮಗಳ ಪಂಗಡಗಳಲ್ಲಿ ಮೀಸಲಾತಿಗಾಗಿ ಹೋರಾಟ ನಡೆದ ಉದಾಹರಣೆಗಳು ಇಲ್ಲ.

ಉದಾಹರಣೆಗೆ ಕ್ರೈಸ್ತ ಧರ್ಮದಲ್ಲಿ ಪ್ರೊಟೆಸ್ಟೆಂಟ್, ಕ್ಯಾಥೋಲಿಕ್, ಇಸ್ಲಾಂ ಧರ್ಮದಲ್ಲಿ ಶಿಯಾ, ಸುನ್ನಿ, ಜೈನ ಧರ್ಮದಲ್ಲಿ ಶ್ವೇತಾಂಬರ, ದಿಗಂಬರ, ಬೌದ್ಧ ಧರ್ಮದಲ್ಲಿ ಹೀನಯಾನ, ಮಹಾಯಾನ ಪಂಥಗಳಿವೆ. ಇವರೆಲ್ಲರೂ ಅಲ್ಪಸಂಖ್ಯಾತರು ಎಂಬ ವಿಶೇಷ ಸೌಲಭ್ಯ ಪಡೆಯುತ್ತಿದ್ದಾರೆ. ಮೃಷ್ಟಾನ್ನ ಬಿಟ್ಟು ತಂಗಳೂಟಕ್ಕೆ ಹೋಗಬಹುದೇ?

ಸಿದ್ಧರಾಮ ಸ್ವಾಮೀಜಿ
ಗದುಗಿನ ತೋಂಟದಾರ್ಯ ಮಠ

ಸಿಎಂ ವಿವೇಚನೆಯಿಂದ ನಿರ್ಧಾರ ಕೈಗೊಳ್ಳಲಿ

ಪ್ರವರ್ಗ 1ರಲ್ಲೇ ಉಳಿದಿರುವ ಉಪ್ಪಾರ ಸಮುದಾಯವು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಮುಂಚೆಯೇ ಸೇರಬೇಕಿತ್ತು. ಆದರೆ, ಅದು ಸಾಧ್ಯವಾಗಿಲ್ಲ. ವಿಧಾನಸಭೆಯಲ್ಲಿ ಆಯಾ ಜಾತಿಯ ಇಬ್ಬರು ಅಥವಾ ಮೂವರು ಶಾಸಕರು ಇರುತ್ತಾರೆ. ಆದರೆ, ನಮ್ಮ ಸಮುದಾಯದಿಂದ ಒಬ್ಬ ಶಾಸಕರಿದ್ದರೆ ದೊಡ್ಡದು. ಉಪ್ಪಾರರು ಉಪ್ಪು ಮಾಡುವ, ಸುಣ್ಣ ಸುಡುವ ಮತ್ತು ಶವ ಹೂಳುವ ಕಾಯಕ ಮಾಡುತ್ತಾರೆ. ತುಂಬಾ ಹಿಂದುಳಿದಿದ್ದಾರೆ.

ಉಪ್ಪಾರ ಸಮುದಾಯದ ಕುರಿತು ರಾಜ್ಯವ್ಯಾಪಿ ಕುಲಶಾಸ್ತ್ರೀಯ ಅಧ್ಯಯನ 6 ತಿಂಗಳಿನಿಂದ ನಡೆಯುತ್ತಿದೆ. ಅದರ ವರದಿಯೂ ಸರ್ಕಾರಕ್ಕೆ ಮಾರ್ಚ್ ತಿಂಗಳಲ್ಲಿ ಸಲ್ಲಿಕೆಯಾಗಲಿದೆ. ಅಧ್ಯಯನದ ಅಂಕಿ ಅಂಶ, ವಾಸ್ತವಾಂಶಗಳನ್ನು ಸರ್ಕಾರ ಮತ್ತು ಜನಪ್ರತಿನಿಧಿಗಳಿಗೆ ಮನವರಿಕೆ ಮಾಡಲಾಗುವುದು. ಅದರ ಆಧಾರದ ಮೇಲೆ ಸೌಲಭ್ಯ ಮತ್ತು ಬೇಡಿಕೆ ಈಡೇರಿಕೆಗೆ ಸರ್ಕಾರವನ್ನು ಒತ್ತಾಯಿಸಲಾಗುವುದು.

ಮೀಸಲಾತಿ ನೀಡುವಂತೆ ಎಲ್ಲಾ ವರ್ಗ, ಸಮುದಾಯದವರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಒತ್ತಡ ಹೇರಬಹುದು. ಆದರೆ, ಮೀಸಲಾತಿ ಕಲ್ಪಿಸುವಾಗ ಸರ್ಕಾರವು ಆಯಾ ಸಮುದಾಯಗಳ ಜನಸಂಖ್ಯೆ, ಸ್ಥಿತಿಗತಿ ಸೇರಿದಂತೆ ಎಲ್ಲವನ್ನೂ ಪರಿಶೀಲಿಸಬೇಕು. ಮುಖ್ಯಮಂತ್ರಿಯವರು ವಿವೇಚನೆಯಿಂದ ಕಾರ್ಯನಿರ್ವಹಿಸಿ, ಎಲ್ಲಾ ಸಮುದಾಯದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕ್ರಮ ಕೈಗೊಳ್ಳಬೇಕು.

ಗುರುಬಸವ ರಾಜಗುರು, ನಿಜಾನಂದ ಯೋಗಾಶ್ರಮ, ಮಲದಕಲ್, ರಾಯಚೂರು ಜಿಲ್ಲೆ

ಪುದುಚೇರಿ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ನಾರಾಯಣಸ್ವಾಮಿ ಅವರು ಸೋಮವಾರ ವಿಶ್ವಾಸಮತ ಯಾಚಿಸಿದರು –ಪಿಟಿಐ ಚಿತ್ರ

'ಕೈ' ಅಧಿಕಾರಕ್ಕೆ ಮತ್ತೆ ಮತ್ತೆ ಕುತ್ತು

• ಶೆಮಿನ್ ಜಾಯ್

ನವದೆಹಲಿ: ಬಿಜೆಪಿಯ ಕಾರ್ಯತಂತ್ರದ ಭಾಗವಾಗಿ, ಕಾಂಗ್ರೆಸ್ ಪಕ್ಷವು ಮತ್ತೊಂದು ರಾಜ್ಯದಲ್ಲಿ ಅಧಿಕಾರ ಕಳೆದುಕೊಂಡಿದೆ. ಪುದುಚೇರಿ ಈಗ ಕಾಂಗ್ರೆಸ್‌ನ ಕೈ ತಪ್ಪಿ ಹೋಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು 2014ರಲ್ಲಿ ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡ ಬಳಿಕ ತನ್ನ ನಿಯಂತ್ರಣದಲ್ಲಿದ್ದ ಆರು ರಾಜ್ಯಗಳನ್ನು ಕಾಂಗ್ರೆಸ್ ಕಳೆದುಕೊಂಡಿದೆ.

ಅರುಣಾಚಲ ಪ್ರದೇಶ, ಮಧ್ಯಪ್ರದೇಶ, ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಆದರೆ ಬಿಜೆಪಿಯು ಶಾಸಕರನ್ನು ಸೆಳೆದು ಈ ಮೂರೂ ರಾಜ್ಯಗಳಲ್ಲಿ ಚುಕ್ಕಾಣಿ ಹಿಡಿಯಿತು. ಕಾಂಗ್ರೆಸ್‌ನ ಐವರು ಹಾಗೂ ಮಿತ್ರಪಕ್ಷ ಡಿಎಂಕೆಯ ಒಬ್ಬ ಶಾಸಕನ ರಾಜೀನಾಮೆಯ ಮೂಲಕ ವಿಧಾನಸಭಾ ಚುನಾವಣೆಗೆ ಎರಡು ತಿಂಗಳು ಬಾಕಿಯಿರುವಾಗ ಪುದುಚೇರಿಯಲ್ಲಿ ಕಾಂಗ್ರೆಸ್ ಸರ್ಕಾರ ಪತನವಾಗಿದೆ. ಶಾಸಕರ ರಾಜೀನಾಮೆಯ ಹಿಂದೆ ಬಿಜೆಪಿ ಇದೆ ಎಂದು ಕಾಂಗ್ರೆಸ್ ಆಪಾದಿಸಿದೆ.

ಮಣಿಪುರ ಹಾಗೂ ಗೋವಾದ ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರಕಟವಾದಾಗ ಕಾಂಗ್ರೆಸ್ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ ಈ ಎರಡೂ ರಾಜ್ಯಗಳಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷವನ್ನು ಒಡೆಯುವ ಮೂಲಕ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಏರಿತು. ಮಣಿಪುರದಲ್ಲಿ 2017ರ ಚುನಾವಣೆಯಲ್ಲಿ ಕಾಂಗ್ರೆಸ್ 27 ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ, 21 ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಜೆಪಿಗೆ ಸರ್ಕಾರ ರಚಿಸಲು ಆಹ್ವಾನ ನೀಡಲಾಗಿತ್ತು. ಕಾಂಗ್ರೆಸ್‌ನ 9 ಶಾಸಕರನ್ನು ತನ್ನತ್ತ ಸೆಳೆದು ಬಿಜೆಪಿ ಅಧಿಕಾರ ಹಿಡಿದಿತ್ತು. ಗೋವಾದಲ್ಲೂ ಸಹ ಕಾಂಗ್ರೆಸ್‌ಗಿಂತ ಕಡಿಮೆ ಸ್ಥಾನ ಪಡೆದಿದ್ದ ಬಿಜೆಪಿ ಅಧಿಕಾರ ಹಿಡಿಯಿತು.

ಅತ್ತ ಸಿಕ್ಕಿಂನದ್ದು ಅಚ್ಚರಿದಾಯಕ ವಿದ್ಯಮಾನ. 2019ರ ವಿಧಾನಸಭಾ ಚುನಾವಣೆಯಲ್ಲಿ ಒಂದೇ ಒಂದು ಸ್ಥಾನವನ್ನು ಗೆಲ್ಲದ ಮತ್ತು ಠೇವಣಿ ಕಳೆದುಕೊಂಡಿದ್ದ ಬಿಜೆಪಿ ಈಗ ಅಲ್ಲಿ ಅಧಿಕಾರ ಅನುಭವಿಸುತ್ತಿದೆ. ಮಾಜಿ ಮುಖ್ಯಮಂತ್ರಿ ಪವನ್ ಚಾಮ್ಲಿಂಗ್ ಅವರನ್ನು ಹೊರತುಪಡಿಸಿ ಸಿಕ್ಕಿಂ ಡೆಮಾಕ್ರಟಿಕ್ ಫ್ರಂಟ್‌ನ 12 ಶಾಸಕರನ್ನು ಸೆಳೆಯುವ ಮೂಲಕ ವಿಧಾನಸಭೆಯಲ್ಲಿ ಬಿಜೆಪಿ ಗದ್ದುಗೆ ಹಿಡಿಯಿತು.

ಮಧ್ಯಪ್ರದೇಶದಲ್ಲಿ ಕಮಲನಾಥ್ ನೇತೃತ್ವದ ಸರ್ಕಾರವನ್ನು ಉರುಳಿಸಲು ಜ್ಯೋತಿರಾದಿತ್ಯ ಸಿಂಧಿಯಾ ಅವರನ್ನು ದಾಳವಾಗಿ ಬಳಸಿಕೊಳ್ಳಲಾಗಿತ್ತು. 2018ರಲ್ಲಿ 121 ಸದಸ್ಯ ಬಲದೊಂದಿಗೆ ಕಾಂಗ್ರೆಸ್ ಅಧಿಕಾರ ಹಿಡಿದಿತ್ತು. ಆದರೆ ಸಿಂಧಿಯಾ ಮತ್ತು 26 ಶಾಸಕರನ್ನು ಪಕ್ಷ ಬಿಡುವಂತೆ ಮಾಡಿ ತನ್ನತ್ತ ಸೆಳೆದ ಬಿಜೆಪಿ, ಉಪಚುನಾವಣೆಯಲ್ಲಿ 26ರ ಪೈಕಿ 19ರಲ್ಲಿ ಜಯ ಸಾಧಿಸಿತು.

ಕರ್ನಾಟಕದಲ್ಲಿ 2018ರಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಬಿಜೆಪಿಗೆ ಆರಂಭದಲ್ಲಿ ಸರ್ಕಾರ ರಚಿಸಲು ಆಹ್ವಾನ ನೀಡಲಾಗಿತ್ತಾದರೂ ಬಹುಮತ ಸಾಬೀತುಪಡಿಸಲು ಪಕ್ಷ ವಿಫಲವಾಗಿತ್ತು. ಆ ಬಳಿಕ 80 ಸದಸ್ಯರಿದ್ದ ಕಾಂಗ್ರೆಸ್ ಹಾಗೂ 37 ಸದಸ್ಯರಿದ್ದ ಜೆಡಿಎಸ್ ಸೇರಿಕೊಂಡು ಸರ್ಕಾರ ರಚಿಸಿದ್ದವು. 16 ಶಾಸಕರನ್ನು ಸೆಳೆಯುವ ಮೂಲಕ ಮೈತ್ರಿ ಸರ್ಕಾರವನ್ನು ಕೆಡವಿ ಬಿ.ಎಸ್. ಯಡಿಯೂರಪ್ಪ ಅವರು ಅಧಿಕಾರಕ್ಕೆ ಏರಿದ್ದರು.

ರುಚಿ ಹತ್ತಿಸಿದ್ದ ಅರುಣಾಚಲ

2016ರಲ್ಲಿ ಅರುಣಾಚಲ ಪ್ರದೇಶದಲ್ಲಿ ಮೊದಲ ಬಾರಿಗೆ ಸರ್ಕಾರ ಬೀಳಿಸುವ ಮೂಲಕ ಬಿಜೆಪಿಗೆ ಅದರ ರುಚಿ ಹತ್ತಿತು. 2014ರ ಚುನಾವಣೆಯಲ್ಲಿ, 60 ಸದಸ್ಯಬಲದ ವಿಧಾನಸಭೆಯಲ್ಲಿ ಕಾಂಗ್ರೆಸ್ 42ರಲ್ಲಿ ಗೆದ್ದಿತ್ತು. ಬಿಜೆಪಿ 11 ಕ್ಷೇತ್ರಗಳಲ್ಲಿ ಆರಿಸಿ ಬಂದಿತ್ತು. ನಬಾಮ್ ತುಕಿ ಅವರು ಮುಖ್ಯಮಂತ್ರಿಯಾದರು. ಅವರ ಬಳಿಕ ಪೆಮಾ ಖಂಡು ಅಧಿಕಾರ ವಹಿಸಿಕೊಂಡರು. ಖಂಡು ಅವರು 40 ಕಾಂಗ್ರೆಸ್ ಶಾಸಕರ ಜೊತೆ ಪಕ್ಷ ತೊರೆದು 'ಅರುಣಾಚಲ ಪೀಪಲ್ಸ್ ಪಕ್ಷ'ಕ್ಕೆ ವಲಸೆ ಹೋದರು. ಮರುವರ್ಷ ಆ ಪಕ್ಷವು ಬಿಜೆಪಿ ಜೊತೆ ವಿಲೀನವಾಯಿತು. 2019ರವರೆಗೆ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿದರು. 2019ರಲ್ಲೂ ಅವರು ಅಧಿಕಾರಕ್ಕೆ ಮರಳಿ ಬಂದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತ ಸರ್ಕಾರದ ವಿವಿಧ ಸಚಿವಾಲಯಗಳು, ಇಲಾಖೆಗಳು ಮತ್ತು ಅಧೀನ ಕಚೇರಿಗಳಲ್ಲಿ ವಿವಿಧ ಹುದ್ದೆಗಳಿಗೆ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವ ಕರ್ತವ್ಯವನ್ನು ಸ್ಟಾಫ್ ಸೆಲೆಕ್ಷನ್ ಕಮಿಷನ್ ನಿರ್ವಹಿಸುತ್ತದೆ. @SSCorg_in ಎಂಬುದು ಅಧಿಕೃತ ಟ್ವಿಟರ್ ತಾಣದ ಹೆಸರು ಎಂಬ ಮಾಹಿತಿ ಹರಿದಾಡುತ್ತಿದೆ.

ಈ ಬಗ್ಗೆ ಪರಿಶೀಲನೆ ನಡೆಸಿದ ಪಿಐಬಿ ಫ್ಯಾಕ್ಟ್ ಚೆಕ್ ತಂಡಕ್ಕೆ ಸ್ಟಾಫ್ ಸೆಲೆಕ್ಷನ್ ಕಮಿಷನ್‌ನ ಅಧಿಕೃತ ಟ್ವಿಟರ್ ಖಾತೆ ದೊರೆತಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಓಡಾಡುತ್ತಿರುವ ಮಾಹಿತಿ ತಪ್ಪಾಗಿದೆ. ಸ್ಟಾಫ್ ಸೆಲೆಕ್ಷನ್ ಕಮಿಷನ್ ಅಧಿಕೃತವಾಗಿ ಟ್ವಿಟರ್ ಖಾತೆ ಬಳಸುತ್ತಿಲ್ಲ ಎಂದು ಸ್ಪಷ್ಟನೆ ನೀಡಿದೆ. ಹೆಚ್ಚಿನ ಮಾಹಿತಿಗೆ ಆಯೋಗದ ವೆಬ್‌ಸೈಟ್ https://ssc.nic.in ನೋಡಬಹುದು. ನಕಲಿ ಟ್ವಿಟರ್ ಖಾತೆ ಅನುಸರಿಸಿ ಮೋಸ ಹೋಗಬೇಡಿ ಎಂದು ಜನರಿಗೆ ಸಲಹೆ ನೀಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಕನಸಿನಲ್ಲಿ ಕಂಡ ಅನುಭವದ ಮೊನೆ

ಸುಳ್ಳಲ್ಲ ಕಥೆಯ ತಿರುಕನು ಕಂಡ ಸವಿಗನಸು |
ಚೆಲ್ಲಿತಲ್ಲವೆ ಹಿಟ್ಟು ಘಟವನವನೊದೆಯೆ? ||
ಜಳ್ಳು ಸುಖದು:ಖವಿರಬಹುದಾದೊಡದರ ಮೊನೆ |
ಮುಳ್ಳಹುದು ಜೀವಕ್ಕೆ – ಮಂಕುತಿಮ್ಮ || 390 ||

ಪದ-ಅರ್ಥ: ಚೆಲ್ಲಿತಲ್ಲವೆ = ಚೆಲ್ಲಿತು + ಅಲ್ಲವೆ, ಘಟವನವನೊದೆಯೆ = ಘಟವನು + ಅವನು + ಒದೆಯೆ, ಸುಖದು:ಖವಿರಬಹುದಾದೊಡದರ = ಸುಖದು:ಖ + ಇರಬಹುದು + ಆದೊಡೆ + ಅದರ,

ವಾಚ್ಯಾರ್ಥ: ತಿರುಕನ ಕನಸು ಕವನದಲ್ಲಿಯ ತಿರುಕನು ಕಂಡ ಸುಂದರವಾದ ಕನಸು ಸುಳ್ಳಲ್ಲ. ಅವನು ಮಡಕೆಯನ್ನು ಒದ್ದಾಗ ಹಿಟ್ಟು ಚೆಲ್ಲಿತಲ್ಲವೆ? ನಮಗೆ ಬರುವ ಸುಖ-ದು:ಖಗಳು ಜೊಳ್ಳೇ ಇರಬಹುದು. ಆದರೆ ಅವುಗಳ ಮೊನೆ ಬದುಕಿಗೆ ಮುಳ್ಳಾಗುತ್ತವೆ.

ವಿವರಣೆ: ನಾವು ನಮ್ಮ ಬದುಕಿನ ಸಂಧ್ಯಾಕಾಲದಲ್ಲಿ ಒಮ್ಮೆ ವಿರಾಮವಾಗಿ ಕುಳಿತು ಬದುಕನ್ನು ತಿರುಗಿ ನೋಡಿದಾಗ ಜೋಕಾಲಿಯಂಥ ಪ್ರಯಾಣ ಮನ ತುಂಬುತ್ತದೆ. ಬಾಲ್ಯದಲ್ಲಿ ಪಟ್ಟ ಕಷ್ಟ, ಬಡತನ, ಅದರಲ್ಲೇ ದೊರೆತ ಶಿಕ್ಷಣ, ಪ್ರೀತಿ ನೀಡಿದ ಗುರು, ಕಲಿಕೆಯಲ್ಲಿ ಪ್ರಶಸ್ತಿ ಪಡೆದ ಸಂಭ್ರಮ, ಆಗ ಆದ ಅಪಘಾತದ ನೋವು, ಒಳ್ಳೆಯ ಕೆಲಸ ಸಿಕ್ಕ ಸಂತೋಷ, ಮದುವೆಯ ಮಧುರಕ್ಷಣ, ಸಂಬಂಧಿಗಳ, ಆತ್ಮೀಯರ ಸಾವಿನ ದು:ಖ, ಹೊಸ ಮನೆ, ಮಕ್ಕಳು ಬೆಳೆಯುತ್ತ ನೀಡಿದ ಆನಂದ, ಕೆಲಸದಲ್ಲಿ ತೊಂದರೆ, ಮಧ್ಯವಯಸ್ಸು ದಾಟಿದಂತೆ ಬೆನ್ನತ್ತಿ ಬರುವ ಆರೋಗ್ಯ ಸಮಸ್ಯೆಗಳು, ಮಕ್ಕಳ ಸಾಧನೆಗಳು, ಅವರ ಮದುವೆ, ಹೊಂದಾಣಿಕೆಯಲ್ಲಿ ಕಿರಿಕಿರಿ, ಮನೆಬಿಟ್ಟು ಹೊರಗೆ ಹೋದ ಮಕ್ಕಳು, ಅದರಿಂದ ಅಪಾರ ಸಂಕಟ, ಮನೆಯಲ್ಲಿ ಮತ್ತೆ ಏಕಾಂಗಿ ಬದುಕು. ಸಂಭ್ರಮಿಸಿ ಕಟ್ಟಿಸಿದ ದೊಡ್ಡ ಮನೆ ಈಗ ಭೂತಬಂಗಲೆ, ಈ ಕ್ಷಣದಲ್ಲೇ ಮಕ್ಕಳು ಕಳುಹಿಸಿದ ಮೊಮ್ಮಗನ ಫೋಟೊ ಕಂಡ ಸಂತಸ, ಮತ್ತೆ ಹೊಸ ಚಿಗುರನ್ನು ಕಂಡು ಮುದಗೊಂಡ ಮನಸ್ಸು.

ಇಂದು ನಿಂತು, ಹಿಂದೆ ನೋಡಿದಾಗ ಇವೆಲ್ಲ ಆದದ್ದು ಒಂದು ಕನಸೇ ಎನ್ನಿಸುವುದಿಲ್ಲವೇ? ಎಷ್ಟು ಬೇಗ ಬದುಕು ಸರಿದು ಹೋಯಿತಲ್ಲ! ಹೋದದ್ದು ತಿಳಿಯಲೇ ಇಲ್ಲ. ಈಗ ನಮಗದು ಕನಸು ಎನ್ನಿಸಿದರೂ, ಆಗಿನ ಪ್ರತಿಯೊಂದು ಘಟನೆ ನೀಡಿದ ಸುಖದು:ಖಗಳ ಮೊನೆ ಇಂದಿಗೂ ಚುಚ್ಚುತ್ತವೆ. ದು:ಖವಂತೂ ಮೊನಚಾದ ಚುಚ್ಚಿಗೆಯೇ, ಅಂತೆಯೇ ಸುಖವೂ ಒಂದು ಚೂಪಾದ ಮೊನೆ. ಅದೊಂದು ಹಿತವಾದ ಕೆರೆತ. ಕೆರೆತ ರೋಗದ ಲಕ್ಷಣ.

ಇದು ಒಬ್ಬ ವ್ಯಕ್ತಿಯ ಜೀವನದ ಚಿತ್ರಣ. ಇದನ್ನು ಇಡೀ ಪ್ರಪಂಚಕ್ಕೆ ಅನ್ವಯಿಸಿದರೆ, ಇದುವರೆಗೂ ನಾವು ಯಾವುದನ್ನು ಇತಿಹಾಸವೆಂದು ಕರೆಯುತ್ತೇವೋ ಅದೆಲ್ಲ ಒಂದು ಕನಸಿನಂತೆ ಭಾಸವಾಗುತ್ತದೆ. ರಾಮ ನಿಜವಾಗಿ ಇದ್ದಾನೇ? ಕೃಷ್ಣ? ಬುದ್ಧ, ಮಹಾವೀರ? ಅವರೆಲ್ಲ ಬಂದು, ಬೆಳಕು ನೀಡಿ ಹೋದದ್ದು ಸತ್ಯವೇ ಎಂದು ಕೇಳುವಂತಾಗುತ್ತದೆ. ಅದರಂತೆ ಮನುಷ್ಯರು ಮನುಷ್ಯತ್ವವನ್ನು ಮರೆತು ರಾಕ್ಷಸರಂತೆ ಮಲೆತು ಲಕ್ಷಾಂತರ ಬದುಕುಗಳನ್ನು ಆಹುತಿಕೊಟ್ಟಿದ್ದೂ ನಿಜವೇ?

ಬದುಕು ಕನಸಲ್ಲ. ಕನಸಿನಂತೆ ಕಂಡರೂ ಅದು ನೀಡಿದ ಸುಖದು:ಖಗಳ ಅನುಭವ ನಮ್ಮ ಬದುಕನ್ನು ಬದಲಿಸುತ್ತದೆ. ಈ ಕಗ್ಗ ಮುಪ್ಪಿನ ಷಡಕ್ಷರಿ ಬರೆದ ತಿರುಕನ ಕನಸಿನ ಪದ್ಯವನ್ನು ಹಿನ್ನೆಲೆಯಾಗಿಟ್ಟುಕೊಂಡು ಬಹುದೊಡ್ಡ ಸತ್ಯವನ್ನು ಹೇಳುತ್ತದೆ. ತಿರುಕ ಕಂಡದ್ದು ಸುಂದರವಾದ ಕನಸೇ ಇರಬಹುದು. ಆದರೆ ಒದ್ದಾಗ ಮಡಕೆ ಒಡೆದು ಹಿಟ್ಟು ಚೆಲ್ಲಿದ್ದು ಸುಳ್ಳಲ್ಲ. ಅಂತೆಯೇ ಬದುಕಿನಲ್ಲಿ ಕನಸಿನಂತೆ ಬಂದು ಹೋದ ಸಂತೋಷ ಮತ್ತು ದು:ಖದ ಘಟನೆಗಳು ಮುಳ್ಳಿನಂತೆ ಮನವನ್ನು ತಟ್ಟುವುದು ಸತ್ಯ. ❖

ದಿನ ಭವಿಷ್ಯ

ಬುಧವಾರ 24 ಫೆಬ್ರುವರಿ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಶತಭಿಷ ದ್ವಾದಶೀ ಗಂ. 22-1 (ಹ. 3-34) ಬುಧವಾರ ನಿತ್ಯ ನಕ್ಷತ್ರ ಪುನರ್ವಸು ಗಂ 10-52 (ಹ. 11-07) ಸೌಭಾಗ್ಯ ನಾಮ ಯೋಗ ಗಂ 47-3 ಬಾಲವ ಕರಣ ಗಂ 22-1 ವಿಷ. ಗಂ. 31-24 ಅಮೃತ ಗಂ. 3-25 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-42 ಸೂರ್ಯಾಸ್ತ: 6-24 ಅದೃಷ್ಟ ಸಂಖ್ಯೆ 14

ಮೇಷ: ಸ್ವಯಂ ಉದ್ಯೋಗದ ಗುರಿ ಸಾಧನೆಗೆ ಹೊಸ ಹಾದಿಯೊಂದರಲ್ಲಿ ಕ್ರಮಿಸಲಿದ್ದೀರಿ. ಹತ್ತಿರದ ಬಂಧುಗಳಿಂದ ಕಾರ್ಯಾನುಕೂಲ. ಕಾರ್ಯಕ್ಷೇತ್ರದಲ್ಲಿ ಅನೇಕ ಸ್ನೇಹ, ವಿಶ್ವಾಸಗಳು ನೆರವಾಗಲಿದೆ.

ವೃಷಭ: ಕುಟುಂಬದ ಕ್ಲಿಷ್ಟ ಸಮಸ್ಯೆಗಳನ್ನು ಜಾಣ್ಮೆಯಿಂದ ಬಗೆಹರಿಸಿಕೊಳ್ಳುವುದರಿಂದ ಹಿರಿಯರ ಪ್ರಶಂಸೆಗೆ ಪಾತ್ರರಾಗುವಿರಿ. ಅಧಿಕ ಧನಾಗಮನ. ಹೂಡಿಕೆ ಮಾಡುವ ಸಾಧ್ಯತೆ.

ಮಿಥುನ: ಉದ್ಯೋಗಾಕಾಂಕ್ಷಿಗಳಿಗೆ ಸದವಕಾಶ. ವೈಯುಕ್ತಿಕ ಸಮಸ್ಯೆಗಳು ಬಗೆಹರಿದು ಮನೋಲ್ಲಾಸ. ಆರೋಗ್ಯ ಉತ್ತಮಗೊಳ್ಳಲಿದೆ. ಮನೆಮಂದಿಯೊಂದಿಗೆ ಪ್ರವಾಸ ಹೋಗುವ ಬಗ್ಗೆ ಚಿಂತನೆ.

ಕರ್ಕಾಟಕ: ಉದ್ಯೋಗದಲ್ಲಿ ಮಹತ್ತರ ಬದಲಾವಣೆಯಾಗುವ ವಿಚಾರವಾಗಿ ಹಿರಿಯರೊಂದಿಗೆ ಚರ್ಚೆ. ವಿದ್ಯಾರ್ಥಿಗಳಿಗೆ ಉತ್ತಮ ದಿನ. ಉತ್ತಮ ಅವಕಾಶಗಳು ನಿಮ್ಮಪಾಲಿಗೆ ಒದಗಲಿದೆ.

ಸಿಂಹ: ಕಲಾವಿದರಿಗೆ ಹೆಚ್ಚಿನ ಸ್ಥಾನಮಾನ ಲಭ್ಯ. ಕೃಷಿ ಕೆಲಸದಲ್ಲಿ ಹೆಚ್ಚಿನ ಲಾಭ. ಆಸ್ತಿ ಖರೀದಿಯ ಬಗ್ಗೆ ಚಿಂತನ ಮಂಥನ ನಡೆಸಲಿದ್ದೀರಿ. ಕೆಲಸಕಾರ್ಯಗಳಲ್ಲಿ ಶ್ವಾಸದ ಕೊರತೆ ಕಂಡುಬಂದೀತು.

ಕನ್ಯಾ: ದೀರ್ಘಕಾಲದ ಪ್ರಯಾಣ ಮಾಡುವ ಸಾಧ್ಯತೆ. ಆರಕ್ಷಕರು/ ರಕ್ಷಣಾ ಕಾರ್ಯದಲ್ಲಿರುವವರಿಗೆ ಬಿಡುವಿಲ್ಲದ ಕೆಲಸ. ಹಣ್ಣು, ಹೂವು, ತರಕಾರಿ ವ್ಯಾಪಾರದಲ್ಲಿ ಲಾಭ.

ತುಲಾ: ಹಿತೈಷಿಗಳ ಭೇಟಿಯ ಸಾಧ್ಯತೆ. ವ್ಯಾಪಾರದಲ್ಲಿ ಅಧಿಕ ಲಾಭ. ಸ್ನೇಹಿತರು, ಕುಟುಂಬದ ಸದಸ್ಯರಿಂದ ನೆರವು. ದೂರ ಪ್ರಯಾಣ ಮಾಡುವ ಸಾಧ್ಯತೆ.

ವೃಶ್ಚಿಕ: ಸಾಮಾಜಿಕ ಕಾರ್ಯಚಟುವಟಿಕೆಗಳು, ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸುವ ವಿಚಾರವಾಗಿ ಚರ್ಚೆ ನಡೆಸಲಿದ್ದೀರಿ. ಭೋಜನಕೂಟದಲ್ಲಿ ಭಾಗಿಯಾಗುವ ಸಾಧ್ಯತೆ. ಮಿತ್ರರಿಂದ ಉತ್ತಮ ಸಹಕಾರ.

ಧನು: ಕರ್ತವ್ಯ ನಿರ್ವಹಣೆಯಲ್ಲಿ ಸ್ಪಷ್ಟ ನಿಲುವು ತಳೆಯುವುದರಿಂದ ಯಶಸ್ಸು. ಸಂಶೋಧನೆಗಳಲ್ಲಿ ತೊಡಗಿದವರಿಗೆ ಉತ್ತಮ ಪ್ರೋತ್ಸಾಹ ದೊರಕಲಿದೆ. ಬರವಣಿಗೆಯಿಂದಾಗಿ ಆದಾಯ.

ಮಕರ: ಬಹುದಿನಗಳ ಕಾರ್ಯಬಾಹುಳ್ಯದಿಂದಾಗಿ ದೇಹಕ್ಕೆ ಆಯಾಸ. ಪ್ರೀತಿಪಾತ್ರರೊಂದಿಗೆ ಸಮಯ ಕಳೆಯಲಿದ್ದೀರಿ. ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗುವ ಅವಕಾಶ.

ಕುಂಭ: ಸನ್ಮಾರ್ಗದಲ್ಲಿ ಸಾಗುವುದರಿಂದ ಕುಟುಂಬದ ಬಾಧ್ಯತೆಗಳ ನಿರ್ವಹಣೆ ಸರಾಗ. ಮಹಿಳಾ ಉದ್ಯೋಗಾಕಾಂಕ್ಷಿಗಳಿಗೆ ಅವಕಾಶಗಳು ತೆರೆದುಕೊಳ್ಳಲಿವೆ.

ಮೀನ: ವಾಹನ ವಹಿವಾಟುದಾರರಿಗೆ ಉತ್ತಮ ಆದಾಯ. ಔದ್ಯೋಗಿಕ ವಿಷಯದಲ್ಲಿ ಅನುಕೂಲತೆಗಳು ಒದಗಿಬರುವವು. ಸಾಮಾಜಿಕ ಕಾರ್ಯಕರ್ತರಿಗೆ ಹೆಚ್ಚಿನ ಕಾರ್ಯಬಾಹುಳ್ಯ.

ನಿಮ್ಮ ಜನ್ಮದಿನ 24-ಫೆಬ್ರುವರಿ ಈ ದಿನವು ಅತ್ಯಂತ ಶುಭಕರವಾಗಿದ್ದು, ವಿದೇಶದಲ್ಲಿ ಶಿಕ್ಷಣ ವಿಚಾರದಲ್ಲಿ ಮನೆಯಲ್ಲಿ ಮಾತುಕತೆ ನಡೆಯುವುದರಲ್ಲಿ ಸಂಶಯವಿಲ್ಲ. ವ್ಯವಹಾರದಲ್ಲಿ ಪಾಲುದಾರರನ್ನಾಗಿ ಸೇರಿಸಿಕೊಳ್ಳಲು ಸೂಕ್ತ ವ್ಯಕ್ತಿಗಳ ಹುಡುಕಾಟ ಫಲ ನೀಡಲಿದೆ. ಸಂಪಾದನೆ ಹೆಚ್ಚುವುದು. ವೈದ್ಯಕೀಯ ರಂಗದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಉತ್ತಮ ಭವಿಷ್ಯ.

ಪದಬಂಧ 4518

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸರಾಗವಾದ ಹಂಚಿಕೆಯಿದು (5)
4.ಕೆಟ್ಟ ಹಂಚಿಕೆಯಿದು (3)
5.ಹರುಷದಿಂದ ವೀಕ್ಷಿಸಿದ ಪಟ್ಟಣ (3)
6.ಒಳ್ಳೆ ಕಾರಣಕ್ಕಾಗಿ ತನ್ನ ಪ್ರಾಣ ಅರ್ಪಿಸಿದವನು (3)
8.ರಾಕ್ಷಸರ ಶಿಲ್ಪಿ (2)
9.ತಂಬಾಕು ಕೊಯ್ಯಲು ಬಳಸಿರುವ ಕಿರುಗತ್ತಿ (2)
11.ಮಂದಿ ಪ್ರವೇಶಿಸಿದ ಗುಡಿ (3)
14.ಕನ್ನಡಿಗ ಪತ್ತೆ ಹಚ್ಚಿರುವ ಅಡ್ರೆಸ್! (3)
15.ಭತ್ತ ಕುಟ್ಟುವ ಸಾಧನ (3)
16.ಹಳೆಯದನ್ನು ಪುನಃ ಹೊಸದು ಮಾಡುವಿಕೆ (5)

ಮೇಲಿಂದ ಕೆಳಕ್ಕೆ
1.ಇದು ಒಳ್ಳೆಯ ಗಳಿಗೆ (4)
2.ಜನರೆಲ್ಲ ಕುಳಿತಿರುವ ಊಟದ ಮನೆ (5)
3.ಕೀರ್ತಿ ಈ ರೀತಿ ಬಂದಿದೆ (3)
4.ಕುರುವಿರುವ ಜಾಗದಲ್ಲಿನ ಚಿಹ್ನೆ (3)
7.ತಾರೀಫು ಮಾಡಿದ ತೇದಿ (3)
8.ಬಿಡದಿ ಬಳಿಯಿರುವ ಪತ್ನಿ (3)
9.ಲಾಂಗೂಲ ಹಿಡಿದು ಬಂದ ಹಿಂಬಾಲಕ (5)
10.ಹೂವಿನ ಶರವಿದು (4)
12.ಕುಪ್ಪಸವನ್ನು ಹೀಗೂ ಹೇಳುವರು (3)
13.ವ್ಯವಸಾಯಗಾರನ ದುಃಖ (3)



4517ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕನ್ನಡಕ 3.ಲವಾಜಮೆ 5.ನಸುಕು 6.ತಿಲೋದಕ 8.ನನಸು 10.ಮಮತೆ 12.ಪಾದರಸ 15.ಪವನ 16.ಹರಿಕಾರ 17.ಕಸರತ್ತು

ಮೇಲಿಂದ ಕೆಳಕ್ಕೆ: 1.ಕಸೂತಿ 2.ಕನಕ 3.ಲಕುನ 4.ಮೆಳೆ 7.ಲೋಕಾಭಿರಾಮ 9.ಸುಮನೋಹರ 11.ತಪರ 12.ಪಾನಕ 13.ಸಮಿತ್ತು 14.ದಾಹ

ಸುಡೊಕು 4904

	7			6			5	3
2					5			
		1	2			4		9
		2					4	
4				9				5
	1		3		2		7	
	2			1		8		
1			8					4
	8			3	7		1	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4903 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ವೈಕುಂಠ ಸಮಾರಾಧನೆ

ಶ್ರೀ ಎ ಬಾಲಕೃಷ್ಣ ರೆಡ್ಡಿ

ಇವರು ದಿನಾಂಕ 15.02.2021 ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇವರ 11ನೇ ದಿನದ ತತ್ಸಂಬಂಧ ಕಾರ್ಯವನ್ನು ಮೃತರ ಸ್ವಗೃಹದಲ್ಲಿ ದಿನಾಂಕ 25.02.2021ರಂದು ಬೆಳಿಗ್ಗೆ 12.00 ಗಂಟೆಗೆ ಏರ್ಪಡಿಸಲಾಗಿದೆ

ಇಂತಿ ದುಃಖತಪ್ತರು: ಕುಟುಂಬ ವರ್ಗದವರು
ಮೊಬೈಲ್ : 94484 11745

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಭಾರತ–ಚೀನಾ ಸೇನೆ ವಾಪಸ್ ಪ್ರಕ್ರಿಯೆ ಮೇಲೆ ನಿಗಾ: ಅಮೆರಿಕ

ನೆಡ್ ಪ್ರೈಸ್

ವಾಷಿಂಗ್ಟನ್(ಪಿಟಿಐ): 'ಭಾರತ–ಚೀನಾ ಸೇನೆ ಹಿಂಪಡೆಯುವಿಕೆ ಪ್ರಕ್ರಿಯೆಯ ವರದಿಗಳನ್ನು ಗಮನಿಸಲಾಗುತ್ತಿದೆ' ಎಂದು ಅಮೆರಿಕ ತಿಳಿಸಿದೆ.

'ಚೀನಾ ಮತ್ತು ಭಾರತ, ಪರಿಸ್ಥಿತಿಯನ್ನು ತಿಳಿಗೊಳಿಸಲು ಕೈಗೊಂಡಿರುವ ಪ್ರಯತ್ನಗಳು ಸ್ವಾಗತಾರ್ಹ. ಸೇನಾ ಪಡೆಗಳನ್ನು ವಾಪಸ್ ಕರೆಯಿಸಿಕೊಳ್ಳುತ್ತಿರುವ ವರದಿಗಳನ್ನು ಗಮನಿಸಲಾಗುತ್ತಿದೆ. ಎರಡೂ ರಾಷ್ಟ್ರಗಳ ಮಧ್ಯ ಉದ್ಭವಿಸಿರುವ ಪರಿಸ್ಥಿತಿಯ ಮೇಲೆ ನಿಗಾವಹಿಸಲಾಗಿದೆ' ಎಂದು ಅಮೆರಿಕದ ವಿದೇಶಾಂಗ ಇಲಾಖೆಯ ವಕ್ತಾರ ನೆಡ್ ಪ್ರೈಸ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪೂರ್ವ ಲಡಾಖ್‌ನಲ್ಲಿ 8 ತಿಂಗಳ ಕಾಲ ಚೀನಾ ಮತ್ತು ಭಾರತ ಸೇನಾಪಡೆಗಳನ್ನು ಜಮಾವಣೆ ಮಾಡಿದ್ದವು. ಇತ್ತೀಚೆಗೆ ಒಮ್ಮತಕ್ಕೆ ಬಂದ ಉಭಯ ರಾಷ್ಟ್ರಗಳು ಪ್ಯಾಂಗಾಂಗ್ ಸರೋವರದಿಂದ ಸೇನಾ ಪಡೆಗಳನ್ನು ವಾಪಸ್ ಕರೆಸಿಕೊಳ್ಳಲು ನಿರ್ಧರಿಸಿದ್ದವು.

ಅದಿರುಗಣಿ ಪ್ರಕರಣ ರಾವ್‌ಗೆ ಜಾಮೀನು

ವರವರ ರಾವ್

ನಾಗಪುರ (ಪಿಟಿಐ): ಸಾಮಾಜಿಕ ಕಾರ್ಯಕರ್ತ, ಕವಿ ವರವರ ರಾವ್ ಅವರಿಗೆ ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠವು, 2016ರ ಸೂರಜ್‌ಗರ್ ಕಬ್ಬಿಣ ಅದಿರು ಗಣಿ ಪ್ರಕರಣ ಸಂಬಂಧ ವೈದ್ಯಕೀಯ ಪರಿಸ್ಥಿತಿ ಆಧಾರದಲ್ಲಿ ಜಾಮೀನು ನೀಡಿದೆ.

82 ವರ್ಷದ ವರವರ ರಾವ್ ಮತ್ತು ವಕೀಲ ಸುರೇಂದ್ರ ಗಡ್ಲಿಂಗ್ ಅವರನ್ನು ಗಡಚಿರೋಲಿ ಠಾಣೆ ಪೊಲೀಸರು ಫೆಬ್ರುವರಿ 2019ರಲ್ಲಿ ಬಂಧಿಸಿದ್ದರು. ನಾಗಪುರ ಪೀಠದ ನ್ಯಾಯಮೂರ್ತಿ ಸ್ವಪ್ನಾ ಜೋಷಿ ಜಾಮೀನು ನೀಡಿದರು. ಇದೇ ಕಾರಣ ಆಧರಿಸಿ ಬಾಂಬೆ ಹೈಕೋರ್ಟ್ ಸೋಮವಾರ ಎಲ್ಗರ್ ಪ್ರಕರಣದಲ್ಲಿ ವರವರ ರಾವ್ ಅವರಿಗೆ ಜಾಮೀನು ನೀಡಿತ್ತು. ವರವರ ರಾವ್ ಆರೋಗ್ಯದ ವಿವಿಧ ಸಮಸ್ಯೆಗಳಿಂದ ಬಳಲುತ್ತಿದ್ದಾರೆ.

ಅಭಿಷೇಕ್ ಬ್ಯಾನರ್ಜಿ ಪತ್ನಿ ವಿಚಾರಣೆ

ಕೋಲ್ಕತ್ತ: ಕಲ್ಲಿದ್ದಲು ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಪತ್ನಿ ರುಜೀರಾ ಬ್ಯಾನರ್ಜಿ ಅವರನ್ನು ಸಿಬಿಐ ಅಧಿಕಾರಿಗಳು ಮಂಗಳವಾರ ವಿಚಾರಣೆಗೆ ಒಳಪಡಿಸಿದರು.

ವಿಚಾರಣೆಗೆ ಹಾಜರಾಗಲು ರುಜಿರಾ ಅವರಿಗೆ ಸಿಬಿಐ ಭಾನುವಾರ ನೋಟಿಸ್ ಜಾರಿ ಮಾಡಿತ್ತು. ರುಜಿರಾ ಅವರು, ಮನೆಯಲ್ಲೇ ವಿಚಾರಣೆ ನಡೆಸುವಂತೆ ಮನವಿ ಮಾಡಿದ್ದು. ಮನವಿ ಪುರಸ್ಕರಿಸಿದ ತಂಡ, ಮಂಗಳವಾರ ಅವರ ಮನೆಗೆ ಭೇಟಿ ನೀಡಿ ವಿಚಾರಣೆ ನಡೆಸಿತು.

ಮಥುರಾದಲ್ಲಿ ಆಯೋಜಿಸಿದ್ದ ಕಿಸಾನ್ ಮಹಾಪಂಚಾಯತ್‌ನಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಟಿಕ್ರಿ ಗಡಿಯಲ್ಲಿ ಎಚ್ಚರಿಕೆಯ ಪೋಸ್ಟರ್ ಅಂಟಿಸಿದ ದೆಹಲಿ ಪೊಲೀಸರು

ಜಾಗ ತೆರವು: ರೈತರ ಆಕ್ಷೇಪ

ನವದೆಹಲಿ (ಪಿಟಿಐ): ಕೃಷಿ ಕಾನೂನುಗಳನ್ನು ವಿರೋಧಿಸಿ ರೈತರು ಪ್ರತಿಭಟನೆಗೆ ಕುಳಿತಿರುವ ಟಿಕ್ರಿ ಗಡಿಪ್ರದೇಶವನ್ನು ತೆರವುಗೊಳಿಸುವಂತೆ ಸೂಚಿಸಿ ದೆಹಲಿ ಪೊಲೀಸರು ಎಚ್ಚರಿಕೆಯ ಫಲಕಗಳನ್ನು ಹಾಕಿರುವುದು ತೀವ್ರ ವಿರೋಧಕ್ಕೆ ಕಾರಣವಾಗಿದೆ.

ಇಂಥ ಫಲಕಗಳನ್ನು ಹಾಕಿರುವುದಕ್ಕೆ ರೈತ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿದ್ದರೆ, 'ಇದು ಹೊಸದೇನೂ ಅಲ್ಲ, ದೆಹಲಿ ಗಡಿಯೊಳಗೆ ಪ್ರವೇಶಿಸಲು ಅವಕಾಶ ನೀಡುವುದಿಲ್ಲ ಎಂದು ಪ್ರತಿಭಟನಕಾರರಿಗೆ ತಿಳಿಸುವುದಷ್ಟೇ ಇದರ ಉದ್ದೇಶ' ಎಂದು ಪೊಲೀಸರು ಹೇಳಿದ್ದಾರೆ. ಜಾಗ ತೆರವು ಮಾಡಲು ಯಾವುದೇ ಗಡುವನ್ನು ಪೊಲೀಸರು ನೀಡಲಿಲ್ಲ.

'ಪ್ರತಿಭಟನಾ ಪ್ರದೇಶವನ್ನು ಖಾಲಿ ಮಾಡುವಂತೆ ಟಿಕ್ರಿ ಗಡಿಯಲ್ಲಿ ಕೆಲವೆಡೆ ಫಲಕಗಳನ್ನು ಹಾಕಿ ಪೊಲೀಸರು ಎಚ್ಚರಿಕೆ ನೀಡಿದ್ದಾರೆ. ಶಾಂತಿಯುತವಾಗಿ ಪ್ರತಿಭಟನೆ ಮಾಡುವುದು ನಮ್ಮ ಸಾಂವಿಧಾನಿಕ ಹಕ್ಕು. ಬೆದರಿಕೆ ಹಾಗೂ ಎಚ್ಚರಿಕೆಗಳ ಮೂಲಕ ಪ್ರತಿಭಟನೆಯನ್ನು ಕೊನೆಗೊಳಿಸುವ ಸಂಚು ನಡೆಸಲಾಗುತ್ತಿದೆ. ಇದನ್ನು ನಾವು ವಿರೋಧಿಸುತ್ತೇವೆ' ಎಂದು ಸಂಯುಕ್ತ ಕಿಸಾನ್ ಮೋರ್ಚಾ ಪ್ರಕಟಣೆಯಲ್ಲಿ ಹೇಳಿದೆ.

'ಪ್ರತಿಭಟನೆ ಆರಂಭವಾದ ನಂತರ ಗಡಿಯಲ್ಲಿ ಇಂಥ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ. ಇದೊಂದು ಸಾಮಾನ್ಯ ಪ್ರಕ್ರಿಯೆ. ನೀವು ಹರಿಯಾಣ ರಾಜ್ಯದ ವ್ಯಾಪ್ತಿಯಲ್ಲಿದ್ದೀರಿ, ರಾಷ್ಟ್ರದ ರಾಜಧಾನಿಯೊಳಗೆ ಕಾನೂನುಬಾಹಿರವಾಗಿ ಪ್ರವೇಶಿಸಲು ಅವಕಾಶ ನೀಡುವುದಿಲ್ಲ' ಎಂದು ಪ್ರತಿಭಟನಕಾರರಿಗೆ ಸೂಚಿಸಲಾಗಿದೆ ಅಷ್ಟೇ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಉಪವಾಸದ ಮೂಲಕ ಸಂದೇಶ: 'ಉತ್ತರಪ್ರದೇಶದ ಪ್ರತಿ ಗ್ರಾಮದಲ್ಲಿ ತಲಾ ಐವರು ರೈತರು ಪ್ರತಿದಿನ ಎಂಟು ಗಂಟೆ ಉಪವಾಸವಿದ್ದು, ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವಂತೆ ಮತ್ತು ಕನಿಷ್ಠ ಬೆಂಬಲಬೆಲೆಯನ್ನು ಕಾನೂನು ಮೂಲಕ ಖಾತರಿಪಡಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಲಿದ್ದಾರೆ' ಎಂದು ರಾಷ್ಟ್ರೀಯ ಕಿಸಾನ್ ಮಜ್ದೂರ್ ಸಂಘಟನ್ ಅಧ್ಯಕ್ಷ ವಿ.ಎಂ. ಸಿಂಗ್ ತಿಳಿಸಿದ್ದಾರೆ.

ಗಣರಾಜ್ಯೋತ್ಸವ ದಿನದಂದು ದೆಹಲಿಯಲ್ಲಿ ನಡೆದ ಹಿಂಸಾಚಾರದ ಬಳಿಕ ಈ ಸಂಘಟನೆಯು ರೈತರ ಪ್ರತಿಭಟನೆಗೆ ನೀಡಿದ್ದ ಬೆಂಬಲವನ್ನು ಹಿಂಪಡೆದಿತ್ತು. ಈಗ ಉತ್ತರ ಪ್ರದೇಶದ 21 ರೈತ ಸಂಘಟನೆಗಳ ಜತೆ ಸೇರಿ 'ಉತ್ತರ ಪ್ರದೇಶ ಕಿಸಾನ್ ಮಜ್ದೂರ್ ಮೋರ್ಚಾ' ಆರಂಭಿಸಿದೆ.

'ಉತ್ತರ ಪ್ರದೇಶದ ಪ್ರತಿ ಗ್ರಾಮದಲ್ಲಿ ತಲಾ ಐವರು ರೈತರು, ಬೆಳಿಗ್ಗೆ 9ರಿಂದ ಸಂಜೆ 5ಗಂಟೆಯವರೆಗೆ ಉಪವಾಸ ನಡೆಸುವರು. ಮಧ್ಯಾಹ್ನ 3 ಗಂಟೆಗೆ ಇವರು, ತಮ್ಮ ಪರಿಚಯ ಮಾಡಿಕೊಂಡು, ತಮ್ಮ ಸಂಕಷ್ಟಗಳನ್ನು ಹೇಳಿಕೊಳ್ಳುವ ಎರಡು ನಿಮಿಷಗಳ ಸಂದೇಶವನ್ನು ಧ್ವನಿಮುದ್ರಣ ಮಾಡುವರು. ಅದನ್ನು ಪ್ರಧಾನಿ ಮೋದಿ ಅವರಿಗೆ ಕಳುಹಿಸಲಾಗುವುದು. ಅಲ್ಲದೆ, ಸಂಘಟನೆಯ ವೆಬ್‌ಸೈಟ್‌ನಲ್ಲೂ ಅಪ್‌ಲೋಡ್ ಮಾಡಲಾಗುವುದು. ಹೀಗೆ ಪ್ರತಿನಿತ್ಯ ಕನಿಷ್ಠ ಒಂದು ಲಕ್ಷ ಧ್ವನಿಮುದ್ರಿಕೆಗಳು ಪ್ರಧಾನಿಗೆ ರವಾನೆಯಾಗಲಿವೆ' ಎಂದು ಸಿಂಗ್ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

ಮೋದಿ ದುರಹಂಕಾರಿ: ಪ್ರಿಯಾಂಕಾ ಗಾಂಧಿ ಆರೋಪ

ಲಖನೌ: ಮಥುರಾದಲ್ಲಿ ನಡೆದ ರೈತ ಮಹಾಪಂಚಾಯಿತಿಯಲ್ಲಿ ಭಾಗವಹಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು, ಪ್ರಧಾನಿ ನರೇಂದ್ರ ಮೋದಿ ರೈತ ವಿರೋಧಿ ಎಂದು ಆರೋಪಿಸಿದ್ದಾರೆ.

ಮೋದಿ ಅವರು ದುರಹಂಕಾರಿ ಎಂದಿರುವ ಅವರು, ಕೃಷ್ಣನ ಈ ಪವಿತ್ರ ಭೂಮಿಯು ಹಲವರ ಸೊಕ್ಕನ್ನು ಇಳಿಸಿದೆ. ಮೋದಿ ಅವರ ಸೊಕ್ಕನ್ನು ಕೂಡ ಇಳಿಸಲಿದೆ. ಇಂದ್ರನ ಸೊಕ್ಕನ್ನು ಕೂಡ ಕೃಷ್ಣ ಇಳಿಸಿದ್ದಾನೆ. ಮೋದಿಯವರ ಸೊಕ್ಕನ್ನು ಕೂಡ ಇಳಿಸಲಿದ್ದಾನೆ ಎಂದು ಪ್ರಿಯಾಂಕಾ ಹೇಳಿದ್ದಾರೆ.

ಹಿಂದೂ ಪುರಾಣಗಳ ಪ್ರಕಾರ, ಮಥುರಾದ ಜನರ ಮೇಲೆ ಸಿಟ್ಟಾದ ಇಂದ್ರನು ನಿರಂತರವಾಗಿ ಮಳೆ ಸುರಿಸಿದ್ದಾನೆ. ಗೋವರ್ಧನಗಿರಿಯನ್ನು ಎತ್ತಿ ಹಿಡಿದ ಕೃಷ್ಣನು ಜನರನ್ನು ರಕ್ಷಿಸಿದ್ದಾನೆ.

ಇಲ್ಲಿನ ಜನರು ಅನ್ನಕೂಟವನ್ನು (ಗೋವರ್ಧನಗಿರಿಯನ್ನು ಆರಾಧಿಸುವ ಹಬ್ಬ, ಈ ಹಬ್ಬದಲ್ಲಿ ಜನರು ಆಹಾರ ತಯಾರಿಸಿ ಕೃಷ್ಣನಿಗೆ ಅರ್ಪಿಸುತ್ತಾರೆ) ಆಚರಿಸಿದ್ದಾರೆ. ಆದರೆ, ಪ್ರಧಾನಿ ಮೋದಿಯವರು ಅನ್ನದಾತನನ್ನು ಅವಮಾನಿಸುತ್ತಿದ್ದಾರೆ ಎಂದು ಪ್ರಿಯಾಂಕಾ ಆರೋಪಿಸಿದ್ದಾರೆ.

ಇರುವ ಎಲ್ಲವನ್ನೂ ಮಾರಾಟ ಮಾಡಲು ಈ ಸರ್ಕಾರ ಮುಂದಾಗಿದೆ. ಗೋವರ್ಧನಗಿರಿಯನ್ನು ಕಾಯಿರಿ, ಇಲ್ಲವಾದರೆ, ಅದನ್ನೂ ಸರ್ಕಾರ ಮಾರಾಟ ಮಾಡಬಹುದು ಎಂದು ಅವರು ಹೇಳಿದರು.

ಪ್ರಿಯಾಂಕಾ ಅವರು ಕಳೆದ ಕೆಲವು ದಿನಗಳಿಂದ ರೈತರ ಕೆಲವು ಸಭೆಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಹಲವು ದೇವಾಲಯಗಳಿಗೆ ಭೇಟಿ ಕೊಟ್ಟಿದ್ದಾರೆ ಮತ್ತು ಮೌನಿ ಅಮಾವಾಸ್ಯೆಯ ದಿನ ಸಂಗಮದಲ್ಲಿ ಸ್ನಾನ ಮಾಡಿದ್ದಾರೆ.

ದೆಹಲಿ ಗಲಭೆ: ಇನ್ನಿಬ್ಬರ ಬಂಧನ

ಗಣರಾಜ್ಯೋತ್ಸವ ದಿನದಂದು ದೆಹಲಿಯಲ್ಲಿ ನಡೆದ ಗಲಭೆಗೆ ಸಂಬಂಧಿಸಿದಂತೆ ಇನ್ನೂ ಇಬ್ಬರು ಆರೋಪಿಗಳನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಯುನೈಟೆಡ್ ಕಿಸಾನ್ ಫ್ರಂಟ್ ಅಧ್ಯಕ್ಷ ಮೊಹಿಂದರ್ ಸಿಂಗ್ (45) ಹಾಗೂ ಮನ್‌ದೀಪ್ ಸಿಂಗ್ ಅವರು ಬಂಧಿತರು. ಇವರನ್ನು ದೆಹಲಿ ಗಲಭೆಯ ಪ್ರಮುಖ ಸಂಚುಕೋರರು ಎಂದು ಗುರುತಿಸಲಾಗಿದೆ ಎಂದು ದೆಹಲಿ ಪೊಲೀಸ್ ಇಲಾಖೆಯ ಹೆಚ್ಚುವರಿ ಪಿಆರ್‌ಒ ಅನಿಲ್ ಮಿತ್ತಲ್ ತಿಳಿಸಿದ್ದಾರೆ.

ದೆಹಲಿ ಪೊಲೀಸರ ಅಪರಾಧ ವಿಭಾಗದವರು ಸೋಮವಾರ ರಾತ್ರಿ ಇವರನ್ನು ವಶಕ್ಕೆ ಪಡೆದು, ವಿಚಾರಣೆಗಾಗಿ ದೆಹಲಿಗೆ ಕರೆತಂದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೀಪ್‌ಸಿಧುಗೆ ನ್ಯಾಯಾಂಗ ಬಂಧನ: ಗಣರಾಜ್ಯೋತ್ಸವ ದಿನದಂದು ನಡೆದ ಗಲಭೆಯ ಆರೋಪಿಯಾಗಿರುವ ನಟ ದೀಪ್ ಸಿಧು ಅವರನ್ನು ದೆಹಲಿಯ ಮೆಟ್ರೊಪಾಲಿಟನ್ ನ್ಯಾಯಾಲಯವು ಮಂಗಳವಾರ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ರ್‍ಯಾಲಿಯಲ್ಲಿ ಕಾಣಿಸಿದ ಸಿಧಾನಾ (ಭಟಿಂಡ ವರದಿ): ಗಲಭೆಗೆ ಸಂಬಂಧಿಸಿದಂತೆ ಪೊಲೀಸರಿಗೆ ಬೇಕಾಗಿರುವ ಆರೋಪಿ ಲಖ್ಖಾ ಸಿಧಾನಾ ಮಂಗಳವಾರ ಇಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಕಾಣಿಸಿಕೊಂಡಿದ್ದಾರೆ.

ರೈತರ ಪ್ರತಿಭಟನೆಯನ್ನು ಬೆಂಬಲಿಸಿ ಭಟಿಂಡದ ಮೆಹರಾಜ್ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮವೊಂದರ ವೇದಿಕೆಯ ಮೇಲೆ ಸಿಧಾನಾ ಕುಳಿತಿರುವುದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿರುವ ವಿಡಿಯೊ ಒಂದರಲ್ಲಿ ಕಂಡುಬಂದಿದೆ.

ರೈತರ ಪ್ರತಿಭಟನೆಯನ್ನು ಬೆಂಬಲಿಸಿ ಸಾರ್ವಜನಿಕ ಸಭೆ ಆಯೋಜಿಸುವಂತೆ ಸಿಧಾನಾ ಕಳೆದ ವಾರ ಜನರಿಗೆ ಕರೆ ನೀಡಿದ್ದರು. ಆದ್ದರಿಂದ ಈ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಳ್ಳಬಹುದು ಎಂದು ಊಹಿಸಲಾಗಿತ್ತು. ಹೋರಾಟಗಾರನಾಗಿ ಬದಲಾಗಿರುವ ಈ ವ್ಯಕ್ತಿಗಳ ಮೇಲೆ ಪಂಜಾಬ್‌ನಲ್ಲಿ ಹಿಂದೆ ಹಲವು ದೂರುಗಳು ದಾಖಲಾಗಿದ್ದವು.

ಅನೇಕ ಬಾರಿ ಜೈಲಿಗೂ ಹೋಗಿ ಬಂದಿದ್ದಾರೆ. 2012ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವನ್ನೂ ಸಾಧಿಸಿದ್ದರು.

ಭಾರತದ ಮೂಲಕ ಪಾಕ್ ಪ್ರಧಾನಿ ಪಯಣ

ನವದೆಹಲಿ: ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಮಂಗಳವಾರ ಶ್ರೀಲಂಕಾಗೆ ಅಧಿಕೃತ ಭೇಟಿಗಾಗಿ ಭಾರತದ ವಾಯುಪ್ರದೇಶದ ಮೂಲಕ ಪ್ರಯಾಣಿಸಿದರು. ಇದಕ್ಕೆ ಭಾರತವು ಅನುಮತಿ ನೀಡಿತ್ತು. ಪಾಕಿಸ್ತಾನ ವಾಯುಪಡೆಯ ವಿಮಾನದಲ್ಲಿ ಅವರು ಪ್ರಯಾಣಿಸಿದ್ದು, ವಿಮಾನ ಲಕ್ಷದ್ವೀಪವನ್ನು ಹಾದುಹೋಗುವಾಗ ಭಾರತದ ವಾಯುಪ್ರದೇಶದ ವ್ಯಾಪ್ತಿಯಲ್ಲಿ ಇತ್ತು.

ನಿಧನ ವಾರ್ತೆ

ಬಿ. ರಾಘವನ್

ತಿರುವನಂತಪುರ: ಸಿಪಿಐ(ಎಂ) ಹಿರಿಯ ನಾಯಕ ಮತ್ತು ಮಾಜಿ ಶಾಸಕ ಬಿ.ರಾಘವನ್(69) ಕೋವಿಡ್‌ನಿಂದಾಗಿ ಮಂಗಳವಾರ ನಿಧನರಾದರು.

'ಕೊಲ್ಲಂನ ಪಾರಿಪ್ಪಳ್ಳಿ ಮೆಡಿಕಲ್ ಕಾಲೇಜಿನಲ್ಲಿ ರಾಘವನ್ ಮತ್ತು ಅವರ ಕುಟುಂಬದ ಸದಸ್ಯರು ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದರು. ರಾಘವನ್ ಅವರ ಪರಿಸ್ಥಿತಿ ಗಂಭೀರವಾಗಿದ್ದರಿಂದ ಅವರನ್ನು ಸರ್ಕಾರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಗೆ ವರ್ಗಾಯಿಸಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಮ್ಯಾನ್ಮಾರ್‌ನಲ್ಲಿ ಮಿಲಿಟರಿ ದಂಗೆಯನ್ನು ವಿರೋಧಿಸಿ ಜನರು ಯಾಂಗೂನ್ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು –ಎಎಫ್‌ಪಿ ಚಿತ್ರ

ಮ್ಯಾನ್ಮಾರ್: ಮಿಲಿಟರಿ ದಂಗೆ ವಿರೋಧಿಸಿ ಮತ್ತೆ ಬೀದಿಗಿಳಿದ ಜನ

ಯಾಂಗೂನ್(ಎಪಿ): ದೇಶದಲ್ಲಿ ಮಿಲಿಟರಿ ದಂಗೆಯನ್ನು ವಿರೋಧಿಸಿ ಜನರು ಮತ್ತೆ ಪ್ರತಿಭಟನೆ ಆರಂಭಿಸಿದ್ದಾರೆ.

ದೇಶದ ದೊಡ್ಡ ನಗರವಾದ ಯಾಂಗೂನ್‌ನಲ್ಲಿ ಮಂಗಳವಾರ ಪ್ರತಿಭಟನಕಾರರು ಬೀದಿಗಿಳಿದಿದ್ದಾರೆ. ಪ್ರಮುಖ ಸ್ಥಳವಾದ ಹೇಡನ್ ಸೆಂಟರ್ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಜಮಾಯಿಸಿರುವ ಜನರು, ಮಿಲಿಟರಿ ನಡೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸೋಮವಾರವೂ ದೇಶದಾದ್ಯಂತ ಪ್ರತಿಭಟನೆ ನಡೆದಿತ್ತು. ಅಂದಿನ ಸಂಖ್ಯೆಗೆ ಹೋಲಿಸಿದರೆ ಮಂಗಳವಾರ ಪ್ರತಿಭಟನಕಾರರ ಸಂಖ್ಯೆ ಕಡಿಮೆ ಇತ್ತು.

ಗುಂಪನ್ನು ಚದುರಿಸಲು ಶನಿವಾರ ಭದ್ರತಾ ಪಡೆಗಳು ಹಾರಿಸಿದ ಗುಂಡಿಗೆ ಇಬ್ಬರು ಮೃತಪಟ್ಟಿದ್ದರು. ಈ ಪೈಕಿ 37 ವರ್ಷದ ಥೆಟ್ ನೈಂಗ್ ವಿನ್ ಎಂಬುವವರ ಅಂತ್ಯಸಂಸ್ಕಾರ ಮಂಡಲೇ ನಗರದಲ್ಲಿ ನೆರವೇರಿತು.

'ಎಲ್‌ಎಸ್‌ಡಿ: ಕರ್ನಾಟಕ ಮಾದರಿ ಪಾಲನೆ ಅಗತ್ಯ'

ಬೆಂಗಳೂರು: ಅಪರೂಪದ ಆನುವಂಶಿಕ ಮಾರಣಾಂತಿಕ ಕಾಯಿಲೆ 'ಲೈಸೊಸೋಮಲ್ ಸ್ಟೋರೇಜ್ ಡಿಸಾರ್ಡರ್' (ಎಲ್‌ಎಸ್‌ಡಿ) ಇರುವ ರೋಗಿಗಳಿಗೆ ಕರ್ನಾಟಕ ಸರ್ಕಾರವು ಚಿಕಿತ್ಸೆ ನೀಡಲು ಪ್ರಾರಂಭಿಸಿ 5 ವರ್ಷಗಳು ಸಂದಿವೆ. ರಾಜ್ಯದ ಈ ಮಾದರಿಯನ್ನು ದೇಶದ ಉಳಿದ ರಾಜ್ಯಗಳು ಪಾಲಿಸಬೇಕಿದೆ ಎಂದು ವೈದ್ಯಕೀಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಗ್ರೂಪ್ 3 ಕಾಯಿಲೆಗಳ (ಎಲ್‌ಎಸ್‌ಡಿಗಳಾದ ಪೊಂಪೆ ಕಾಯಿಲೆ, ಗೌಚರ್ ಕಾಯಿಲೆ, ಫ್ಯಾಬ್ರಿ ಕಾಯಿಲೆ ಮತ್ತು ಎಂಪಿಎಸ್ 1) ಚಿಕಿತ್ಸೆಗೆ ಇತರೆ ಸರ್ಕಾರಗಳು ಅಗತ್ಯ ಸಹಕಾರ ನೀಡಬೇಕಿದೆ.

ರೋಗಿಗಳಿಗೆ ಚಿಕಿತ್ಸೆ ಒದಗಿಸಲು ಕರ್ನಾಟಕ ಸರ್ಕಾರವು ಸುಮಾರು ₹40 ಕೋಟಿ ಖರ್ಚು ಮಾಡಿದೆ. ಇಂತಹ ಮಾದರಿ ಹಾಕಿಕೊಟ್ಟಿರುವ ಕರ್ನಾಟಕವೂ ಸೇರಿ ಎಲ್ಲ ರಾಜ್ಯಗಳಿಗೆ ಕೇಂದ್ರ ಸರ್ಕಾರವು ಅನುದಾನ ನೀಡಬೇಕಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಎಸ್‌ಎಸ್‌ಡಿಗಳಿಗೆ ಭಾರತೀಯ ಔಷಧ ನಿಯಂತ್ರಕರು ಅನುಮೋದನೆ ನೀಡಿರುವ ಚಿಕಿತ್ಸಾ ಪದ್ಧತಿ ಲಭ್ಯವಿದೆ.

ಮಾತುಕತೆ ಫಲಪ್ರದ: ಆಸ್ಟ್ರೇಲಿಯಾ ಸರ್ಕಾರ ಮಂಗಳವಾರ ಘೋಷಣೆ

ಸುದ್ದಿ ನಿರ್ಬಂಧ ತೆರವಿಗೆ ಫೇಸ್‌ಬುಕ್ ಸಮ್ಮತಿ



ಕ್ಯಾನ್‌ಬೆರಾ (ಎಪಿ): ಆಸ್ಟ್ರೇಲಿಯಾದಲ್ಲಿನ ತನ್ನ ಬಳಕೆದಾರರು ಸುದ್ದಿಗಳ ವೀಕ್ಷಣೆ ಮತ್ತು ಹಂಚಿಕೆ ಮಾಡುವುದರ ಮೇಲೆ ಹೇರಿದ್ದ ನಿರ್ಬಂಧವನ್ನು ಹಿಂಪಡೆಯಲು ಫೇಸ್‌ಬುಕ್ ಒಪ್ಪಿದೆ ಎಂದು ಆಸ್ಟ್ರೇಲಿಯಾ ಸರ್ಕಾರ ಮಂಗಳವಾರ ಘೋಷಿಸಿದೆ.

'ಸುದ್ದಿಗಳನ್ನು ಹಂಚಿಕೊಂಡಾಗ ಹಣ ಪಾವತಿಸಬೇಕು ಎಂಬ ಷರತ್ತಿಗೆ ಸಂಬಂಧಿಸಿದಂತೆ ಪ್ರಸ್ತಾವಿತ ಮಸೂದೆಯಲ್ಲಿ ಕೆಲವು ತಿದ್ದುಪಡಿ ತರುವ ನಿಟ್ಟಿನಲ್ಲಿ ಸರ್ಕಾರ ಹಾಗೂ ಫೇಸ್‌ಬುಕ್ ಒಮ್ಮತಕ್ಕೆ ಬಂದಿವೆ' ಎಂದು ಸಚಿವ ಜೋಶ್ ಫ್ರೈಡೆನ್‌ಬರ್ಗ್ ಹಾಗೂ ಫೇಸ್‌ಬುಕ್ ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

'ತನ್ನ ಜಾಲತಾಣದ ಪುಟಗಳಲ್ಲಿ ಆಸ್ಟ್ರೇಲಿಯಾದ ಸುದ್ದಿಗಳ ಅಳವಡಿಕೆಯನ್ನು ಶೀಘ್ರವೇ ಪುನಃ ಆರಂಭಿಸಲಾಗುವುದು ಎಂಬುದಾಗಿ ಫೇಸ್‌ಬುಕ್ ತಿಳಿಸಿದೆ' ಎಂದು ಸಚಿವ ಫ್ರೈಡೆನ್‌ಬರ್ಗ್ ಹಾಗೂ ಸಂವಹನ ಸಚಿವ ಪೌಲ್ ಫ್ಲೆಚರ್ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಫೇಸ್‌ಬುಕ್‌ನಲ್ಲಿ ಹಂಚಿಕೊಳ್ಳಲಾಗುವ ಸುದ್ದಿಗಳಿಗೆ ಪ್ರತಿಯಾಗಿ ಸಂಬಂಧಿಸಿದ ಮಾಧ್ಯಮ ಸಂಸ್ಥೆಗಳಿಗೆ ಅದು ತನ್ನ ಲಾಭಾಂಶದಲ್ಲಿ ಪಾಲು ನೀಡಬೇಕು ಎಂದು ಆಸ್ಟ್ರೇಲಿಯಾ ಸರ್ಕಾರ ಹೇಳಿತ್ತು. ಈ ವಿಷಯಕ್ಕೆ ಸಂಬಂಧಿಸಿದ ಮಸೂದೆಯನ್ನು ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್ ಅಂಗೀಕರಿಸಿದೆ. ಸೆನೆಟ್‌ನಲ್ಲಿ ಈ ಮಸೂದೆ ಕುರಿತು ಮಂಗಳವಾರ ಚರ್ಚೆ ನಡೆಯಲಿದೆ.

ಈ ಮಸೂದೆಗೆ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್ ಅಂಗೀಕಾರ ನೀಡಿದ ಬೆನ್ನಲ್ಲೇ, ಆಸ್ಟ್ರೇಲಿಯಾದ ಬಳಕೆದಾರರು ತನ್ನ ವೇದಿಕೆ ಮೂಲಕ ಸುದ್ದಿಗಳನ್ನು ವೀಕ್ಷಿಸುವುದನ್ನು ಫೇಸ್‌ಬುಕ್ ನಿರ್ಬಂಧಿಸಿತ್ತು.

ತನ್ನ ವೇದಿಕೆಗಳ ಮೂಲಕ ಸುದ್ದಿ ಹಂಚಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಗೂಗಲ್ ಸಂಸ್ಥೆ ಆಸ್ಟ್ರೇಲಿಯಾದ ಮಾಧ್ಯಮ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ಮುಂದಾಗಿದೆ.

'ಶೋಕೇಸ್ ಎಂಬ ತನ್ನ ವೇದಿಕೆ ಮೂಲಕ ಸುದ್ದಿ, ಮಾಹಿತಿ ಹಂಚಿಕೆಗೆ 500ಕ್ಕೂ ಅಧಿಕ ಪ್ರಕಾಶಕರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ಗೂಗಲ್ ತಿಳಿಸಿದೆ.

ಪ್ರಕಾಶಕರೊಂದಿಗೆ ಶೀಘ್ರವೇ ಒಪ್ಪಂದ ಮಾಡಿಕೊಳ್ಳಲಾಗುವುದು ಎಂದು ಫೇಸ್‌ಬುಕ್‌ನ ಪ್ರಾದೇಶಿಕ ವ್ಯವಸ್ಥಾಪಕ ನಿರ್ದೇಶಕ ವಿಲಿಯಮ್ ಈಸ್ಟನ್ ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

power-one Micro Systems Pvt.Ltd.
A leading Manufacturers of Solar Inverters & Solar Power Plants Requires
Sales / Service Engineers for the following Offices :
Bagalkote, Belguam, Bijapur, Davangere, Hubli, Karwar, Raichur, Mangalore, Mysore
Experience in Government Department preferred
Powerone Micro Systems Pvt. Ltd. GF-3 & 12, KSSIDC Building, 5th Cross, 1st Stage, Peenya, Bangalore - 560058
For Walk-in Interview Call: 6366947362
Email: careers@poweroneups.com

CIVIL ENGINEER/ DME Required with minimum 1yrs Experience for a Factory behind Sri Sri Ravi Shankar Ashram, Kanakapura Road, Call HR: 8971025555

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ.9739993386, 9916016092

ಚಿಕ್ಕಬಳ್ಳಾಪುರ ಜಿಲ್ಲೆಯ ಮಂಚೇನಹಳ್ಳಿಯಲ್ಲಿರುವ ಜಮೀನಿನಲ್ಲಿ ಕೆಲಸ ಮಾಡಲು, ಆಗ್ರೋ ಕಂಪನಿಯೊಂದಕ್ಕೆ, 10+ವರ್ಷ ಅನುಭವ ಹೊಂದಿರುವ ಕೃಷಿ ಮೇಲ್ವಿಚಾರಕರು ಹಾಗೂ ಕೃಷಿ ಕೆಲಸಗಾರರು ಬೇಕಾಗಿದ್ದಾರೆ.ಸಂಬಳ 15 ಸಾವಿರ+ ವಸತಿ. ಸಂಪರ್ಕಿಸಿ: 9606111195/ 080-26611101

A FAST growing Derma division of a pharmaceutical Co requires experienced/ freshers, male and female candidates, for Bangalore, Mangalore, Hubli and Shimoga HQ Minimum qualification graduation. Send resume to www.amwillhealthcare.com/ jobs contact Mr Shine 9447677939/ 9387330229.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್‌ಗಾಗಿ ಸೌತ್ ಇಂಡಿಯನ್ ವೆಜ್ /ನಾನ್ ವೆಜ್ ಕುಕ್ ಗಳು ತಕ್ಷಣ ಬೇಕಾಗಿದ್ದಾರೆ.ಆಕರ್ಷಕ ಸಂಬಳ. ಸಂಪರ್ಕಿಸಿ:9538785122, 9900098105

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

VIDEOCON, ಟಯೋಟಾ, TVS, ಬ್ರಿಟಾನಿಯಾ ಕಂಪನಿಗಳಿಗೆ SSLC, PUC, ITI, ಡಿಗ್ರಿಯವರು, ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,600-56,000/- ವಸತಿಯೂಟವಿದೆ. 9611715755

Marketing & Sales

SALES EXECUTIVE Bike & Smart PhoneMust Jain Bearings 09343381877, 09986781877

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

WORK FROM HOME: ಮನೆಯಿಂದಲೇ ಕುಳಿತು ಫಾರಂ ತುಂಬುವ ಕೆಲಸ, ಗಳಿಸಿ ತಿಂಗಳಿಗೆ 15000-22000/- ಕೊರಿಯರ್ ಸೌಲಭ್ಯವಿದೆ. 8970861643, 9844978728

WORK FROM HOME: ಮನೆಯಿಂದಲೇ ಕುಳಿತು ಫಾರಂ ತುಂಬುವ ಕೆಲಸ, ಗಳಿಸಿ ತಿಂಗಳಿಗೆ 15000-22000/- ಕೊರಿಯರ್ ಸೌಲಭ್ಯವಿದೆ. 7338376317, 8749014431

Wanted

ತಕ್ಷಣ ಬೇಕಾಗಿದ್ದಾರೆ ಕಂಪನಿ ಹಾಗು ಆಫೀಸ್ ಕೆಲಸಗಳಿಗೆ SSLC PUC Any degree ಯುವಕ ಯುವತಿಯರಿಗೆ ವಸತಿಯೂಟದೊಂದಿಗೆ Rs.16600 -Rs.60000 7259261011, 9902839010

ತಕ್ಷಣ ಬೇಕಾಗಿದ್ದಾರೆ :TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಕೆಲಸಕ್ಕೆ ಬೇಕಾಗಿದ್ದಾರೆ.ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ +OT 15,800 -86,000 8884054160, 9739544856

24 ಗಂಟೆ ಮನೆಕೆಲಸಗೋಸ್ಕರ ಮಹಿಳಾ ಅಭ್ಯರ್ಥಿ ಅಗತ್ಯವಿದೆ ಸಂಬಳ 20000/-ಊಟ +ಇರಲಿಕ್ಕೆ ಸ್ಥಳ ಸಭ್ಯ ಪರಿವಾರದಲ್ಲಿ ಬೆಂಗಳೂರಿನಲ್ಲಿ ಸಂಪರ್ಕಿಸಿ:8879178843, 7045875963

ಬೆಂಗಳೂರಿನ ನಾಗಸಂದ್ರ ಮೆಟ್ರೋ ಸ್ಟೇಷನ್ ಹತ್ತಿರವಿರುವ ತೋಟ ಮತ್ತು ಮನೆ ಕೆಲಸ ಮಾಡಲು ಗಂಡ-ಹೆಂಡತಿ ಬೇಕಾಗಿದ್ದಾರೆ. ವಸತಿ ಉಚಿತ. ಸಂಪರ್ಕಿಸಿ : 9845026475, 9845510722

ವ್ಯಾಪಾರ

Business to Business

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು/ ಎನ್.ಪಿ.ಎ/ ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 96257-68775.

Business Offers

Finance

★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲದೊರೆಯುತ್ತದೆ. ಸಂಪರ್ಕಿಸಿ:09499457849/ 09953286082.ಏಜೆಂಟರು ಸಂಪರ್ಕಿಸಬಹುದು.

ಭವಿಷ್ಯ

Astrology

★ಕೊಳ್ಳೆಗಾಲದಿಂದ★ ನೇರಪರಿಹಾರ.ಕೊಳ್ಳೆಗಾಲದ ನಂ.1ಸ್ಪೆಷಲಿಸ್ಟ್ ಪಂಡಿತ್.ಕಾಳಿಪ್ರಸಾದ್ ಗುರೂಜಿ.9740286807 ವಿದ್ಯೆ,ಉದ್ಯೋಗ,ಸ್ತ್ರೀಪುರುಷ ಪ್ರೇಮ,ಸಂತಾನ,ವಿವಾಹ, ಶತ್ರುದೋಷ,ಸಾಲಭಾದೆ, ವ್ಯಾಪಾರ,ಪ್ರೇತಬಾದೆ, ದೈವದೋಷ,ನಾಗದೋಷ, ದಾಂಪತ್ಯ ಸಮಸ್ಯೆ ಇನ್ನೂ ಅನೇಕ ಕಠಿಣವಾದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ.#12,ಅಂಬೇಡ್ಕರ್ ಮುಖ್ಯರಸ್ತೆ,ಗೀತಭವನ,ಕೊಳ್ಳೆಗಾಲ

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ, ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 9ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

★॥ಶ್ರೀಆದಿಶಕ್ತಿ ಅಣ್ಣಮ್ಮ ದೇವಿ॥★ ಜ್ಯೋತಿಷ್ಯರು ಜನವಶೀಕರಣ, ಸ್ತ್ರೀ ಪುರುಷ ವಶೀಕರಣ, ಶತ್ರುವಶೀಕರಣ, ಇನ್ನೂಯಾವುದೇ ಸಮಸ್ಯೆಗಳಿದ್ದರೂ 24ಗಂಟೆಗಳಲ್ಲಿ ಶಾಶ್ವತ ಪರಿಹಾರ. 'ಪಂಡಿತ್.ಸಹದೇವ್‌ಭಟ್'. 9008968867

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ನಿಮ್ಮಾವುದೇ ಘೋರ ನಿಗೂಢ ಗುಪ್ತ ಸಮಸ್ಯೆಗಳಿಗೆ ಕೇವಲ 30ನಿಮಿಷಗಳಲ್ಲಿ ಪರಿಹಾರ ಸೂಚಿಸುತ್ತಾರೆ. ಉಚಿತವಾಗಿ ಸ್ತ್ರೀಪುರುಷ ವಶೀಕರಣವನ್ನು ಮಾಡಿಕೊಡುತ್ತಾರೆ. ಅಯ್ಯಪ್ಪ ಟೆಂಪಲ್ ಪಕ್ಕದಲ್ಲಿ ಮೆಟ್ರೋ ಸ್ಟೇಶನ್ ಹತ್ತಿರ, ಶ್ರೀರಾಂಪುರ ಬೆಂಗಳೂರು. 9845702800

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★100%ವಶೀಕರಣ ಸ್ಪೆಷಲಿಸ್ಟ್★ ಗಂಡಹೆಂಡತಿ ಸಮಸ್ಯೆ,ಮದುವೆ, ಹಣಕಾಸು, ಇನ್ನೂ ಅನೇಕ ಸಮಸ್ಯೆಗಳಿಗೆ ತುಳಸಿದಾಸಭಟ್ ಅವರಿಂದ ಶೀಘ್ರದಲ್ಲಿ ಶಾಶ್ವತ ಪರಿಹಾರ. 9916733308

ಸಮಾಜಸೇವೆ

Others

ಪಾರಂಪರಿಕ ವೈದ್ಯ ಪದ್ಧತಿ ಹಾಗೂ ನಾಟಿ ಆಯುರ್ವೇದ ಅದ್ಭುತ ಪ್ರಾವೀಣ್ಯತೆ ಪಡೆದ ವೈದ್ಯರುಗಳ ಕಿರುಪುಸ್ತಕ ಪ್ರಕಟಿಸುತ್ತೇವೆ ನೊಂದಾಯಿಸುವವರು ಸಂಪರ್ಕಿಸಿ: 8892501007/ 9606701007

ಪ್ರವಾಸ

Travel

29-05-2021, 13 ದಿನಗಳ ಚಾರ್‌ಧಮ್‌ಯಾತ್ರ. 18-03-2021, 9 ದಿನಗಳ ಸಂಪೂರ್ಣ ಗುಜರಾತ್ ಪ್ರವಾಸ. 12-07-2021, 11 ದಿನಗಳ ಅಮರನಾಥಯಾತ್ರ. 18-04-2021, 13 ದಿನಗಳ ಕಾಶಿ,,ನೇಪಾಳ, ಮುಕ್ತಿನಾಥ ಪ್ರವಾಸ. 21-04-2021,12 ದಿನಗಳ ಮನಾಲಿ,ವೈಷ್ಣೋದೇವಿ ಪ್ರವಾಸ. 24-04-2021,10 ದಿನಗಳ ಲೇಹ್‌ಲಡಾಕ್ ಪ್ರವಾಸ. 27-03-2021,5 ದಿನಗಳ ಅಂಡಮಾನ್ ಪ್ರವಾಸ. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು-40. 9880847001, 9342848791

ಮಾರ್ಚ್, ಏಪ್ರಿಲ್,ಮೇನಲ್ಲಿ 5 ದಿನಗಳು ಅಂಡಮಾನ್ ಹವಳದ್ವೀಪ. 26/03/2021 15ದಿನಗಳು ರೈಲು/ಬಸ್ಸಿನಲ್ಲಿ ದೆಹಲಿ, ಅಗ್ರ,ಅಲಹಾಬದ್, ಕಶಿ,ಗಯ, ಹರಿದ್ವರ್, ಇತ್ಯಾದಿ 15000/=(ಕೆಲವೇ ಸೀಟುಗಳಿವೆ). ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219.

ರಿಯಾಯಿತಿ ದರದಲ್ಲಿ 12 ದಿನಗಳ ಕಾಶಿ,ದೆಹಲಿ ಪ್ರವಾಸ. 17 ದಿನಗಳ ಚಾರ್‌ಧಾಮ್, 6 ದಿನಗಳ ಅಂಡಮಾನ್ ಮತ್ತು 6 ದಿನಗಳ ದಕ್ಷಿಣಭಾರತ ಪ್ರವಾಸ. ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರಿ ಸೇವಾಸಂಘ, ಗಿರಿನಗರ,ಬೆಂಗಳೂರು. 9916473906, 8861111568

7-3-2021 ರಿಂದ 2ದಿನ ಮಾಘ ಮಾಸದಲ್ಲಿ ಕಾವೇರಿ ನದಿ ಸ್ನಾನ ಮಲೈ ಮಹದೇಶ್ವರ - ನಂಜನಗೂಡು, ಮೈಸೂರು- 13-3-2021 ರಿಂದ 4ದಿನ 9 ನವಗ್ರಹ ದರ್ಶನ ಮತ್ತು ಇತರೆ ಸ್ಥಳಗಳು 18-3-2021 ರಿಂದ 9ದಿನ ವಿಮಾನದಲ್ಲಿ ವೈಷ್ಣೋದೇವಿ, ಡೆಲ್ಲಿ, ಅಮೃತ್‌ಸರ್, ಹರಿದ್ವಾರ, ಆಗ್ರಾ 23-3-2021 ರಿಂದ 6ದಿನಗಳ ರಾಮೇಶ್ವರ, ಕನ್ಯಾಕುಮಾರಿ, ತ್ರಿವೆಂಡ್ರಂ- ಶ್ರೀ ಗುರುರಾಜ ಟ್ರಾವೆಲ್ಸ್: 9900124333, 8123099913, 9611082432

★02.05.2021 16ದಿನಗಳು★ ರೈಲು, AC ಬಸ್ಸಿನಲ್ಲಿ, ರೂಂ ವಸತಿಯೊಂದಿಗೆ, ಕುಲುಮನಾಲಿ,ವೈಷ್ಣೋದೇವಿ, ಶಿಮ್ಲಾ, ಸಪ್ತಶಕ್ತಿಪೀಠಗಳು, ವಾಘಗಡಿ, ಧರ್ಮಶಾಲ, ಜಮ್ಮು,ಇತ್ಯಾದಿ. ಆರ್.ಗಾಂಧಿ ಟೂರ್ಸ್.9902433500, 9945445809.

2-4-2021 ಪಾತಾಳ ಭುವನೇಶ್ವರ್,ನೈನಿತಾಲ್ ಕೌಸನಿ 9 ದಿನಗಳು. 14-4-2021 ಗ್ಯಾಂಗ್‌ಟಾಕ್, ಡಾರ್ಜಿಲಿಂಗ್, ಕಲ್ಕತ್ತಾ, ಪೂರಿ 12ದಿನಗಳು. 1-5-2021 ಮುಕ್ತಿನಾಥ್, ಕಟ್ಮಂಡು, ಕಾಶಿ, 11ದಿನಗಳು. 16-5-2021 ಚಾರ್ ಧಾಮ್ ಯಾತ್ರೆ 13ದಿನಗಳು.14-6-2021 ಸಿಂಧೂ ನದಿ ಮಹಾಕುಂಭ ವೈಷ್ಣೋದೇವಿ,ಕಾಶ್ಮೀರ, ಕಾರ್ಗಿಲ್, ಲಡಾಕ್, 12ದಿನಗಳು. ನಂದಿನಿ ಟೂರಿಸ್ಟ್: 9916574089.

ವಾಹನ

Four Wheelers Selling

Others

INTRA V10 ವಾಹನ ಈಗ 3.99% ಬಡ್ಡಿದರ ಲಾಭದ ಭರವಸೆಯೊಂದಿಗೆ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ
INTRA V10
1000 Kg Payload
8.2 x 5.3 ft
33 kW ಇಂಜಿನ್
₹50,000/-* ದವರೆಗೆ ಗ್ರಾಹಕರ ಕೊಡುಗೆಗಳು
ಅಥವಾ
3.99%* ಬಡ್ಡಿದರ / 47 ತಿಂಗಳು
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95384 14448
Tumkur/Davanagere/ Chitradurga-7829055525
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223
* ಷರತ್ತುಗಳು ಅನ್ವಯಿಸುತ್ತದೆ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Classifieds
Book Your Classifieds Ads
Online Log in to dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,676
ಇಂದಿನ ಅಂತ್ಯ	14,708
▲	32
ದಿನದ ಗರಿಷ್ಠ	14,854

ವಿನಿಮಯ ದರ

$ ಡಾಲರ್	72.46
£ ಪೌಂಡ್	101.73
€ ಯುರೊ	88.05
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1520 (1500)
ಸೋಯಾ (ರಿಫೈನ್ಡ್)	₹1170 (1160)
ಸೂರ್ಯಕಾಂತಿ (ರಿಫೈನ್ಡ್)	₹1520 (1500)
ಪಾಮೋಲಿನ್	₹1145 (1130)

ಕೊಬ್ಬರಿ ಧಾರಣೆ

ಅರಸೀಕೆರೆ	₹15000-15275
ಗುಬ್ಬಿ	₹13000-16000
ಪುತ್ತೂರು	₹5000-14000
ತುರುವೇಕೆರೆ	₹15200-15500

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ರಾಜೇಂದ್ರ, ಬೆಂಗಳೂರು

● **ಪ್ರಶ್ನೆ: ನನ್ನ ವಯಸ್ಸು 28 ವರ್ಷ. ತಿಂಗಳ ಸಂಬಳ ₹ 85,000. ನಾನು ಬಾಡಿಗೆ ₹ 30 ಸಾವಿರ ಬರುವ ಒಂದು ಸ್ಥಿರ ಆಸ್ತಿ ಕೊಳ್ಳಬೇಕೆಂದಿದ್ದೇನೆ. ನನ್ನೊಡನೆ ₹ 50 ಲಕ್ಷ ನಗದು ಹಣವಿದೆ. ನನಗೆ ಬ್ಯಾಂಕ್‌ನಿಂದ ₹ 25 ಲಕ್ಷ ಸಾಲ ಬೇಕಾದೀತು. ಸಾಲ ತೀರಿಸಲು 10–15 ವರ್ಷ ಅವಧಿ ಬೇಕು. ನನಗೆ ಸರಿಯಾದ ಮಾರ್ಗದರ್ಶನ ಮಾಡಿರಿ.**

ಉತ್ತರ: ನೀವು ತಿಂಗಳಿಗೆ ₹ 30 ಸಾವಿರ ಬಾಡಿಗೆ ಬರುವ ಸ್ಥಿರ ಆಸ್ತಿ ಕೊಂಡುಕೊಳ್ಳುವ ವಿಚಾರ ನನಗೆ ಖುಷಿ ಕೊಟ್ಟಿದೆ. ನಿಮ್ಮೊಡನೆ ₹ 50 ಲಕ್ಷ ಇದ್ದಲ್ಲಿ ಬ್ಯಾಂಕ್‌ನಿಂದ ₹ 25 ಲಕ್ಷ ಸಾಲ ಬೇಕಾದೀತು. ನೀವು ತಿಂಗಳಿಗೆ ₹ 85 ಸಾವಿರ ಸಂಬಳ ಪಡೆಯುವುದರಿಂದ ಹಾಗೂ ಕೊಂಡುಕೊಳ್ಳುವ ಆಸ್ತಿ ಅಡಮಾನ ಮಾಡಲು ಸಾಧ್ಯತೆ ಇರುವುದರಿಂದ ನಿಮಗೆ ₹ 25 ಲಕ್ಷ ಸಾಲ ಬ್ಯಾಂಕ್‌ನಲ್ಲಿ ದೊರೆಯುತ್ತದೆ. ನೀವು ಯಾವ ಬ್ಯಾಂಕ್ ಮುಖಾಂತರ ಸಂಬಳ ಪಡೆಯುವಿರೋ ಅದೇ ಬ್ಯಾಂಕ್‌ನಲ್ಲಿ ವಿಚಾರಿಸಿರಿ. ಅವಧಿ 10 ವರ್ಷ ಹಾಗೂ ಮಾಸಿಕ ಸಮಾನ ಕಂತುಗಳಿಂದ ಸಾಲ ತೀರಿಸಬಹುದು. ಇದೊಂದು ಉತ್ತಮ ಹೂಡಿಕೆ. ಜೊತೆಗೆ ಉತ್ತಮ ಬಾಡಿಗೆ ಕೂಡ ಬರುವುದರಿಂದ ಮುಂದೆ ಅನುಕೂಲವಾಗುತ್ತದೆ. ಹಣದುಬ್ಬರದ ಪರಿಣಾಮ ನಿಭಾಯಿಸಲು ಸ್ಥಿರ ಆಸ್ತಿ ಮೇಲಿನ ಹೂಡಿಕೆಗಿಂತ ಮಿಗಿಲಾದ ಹೂಡಿಕೆ ಬೇರೊಂದಿಲ್ಲ. ನಿಮ್ಮ ಸಾಹಸಕ್ಕೆ ನನ್ನ ಮೆಚ್ಚುಗೆ. ಆದಷ್ಟೂ ಬೇಗ ಈ ವ್ಯವಹಾರ ಮಾಡಿಕೊಳ್ಳಿ.

ರವಿಕುಮಾರ್, ಮೈಸೂರು

● **ಪ್ರಶ್ನೆ: ನನ್ನ ಮಗನಿಗೆ 7 ವರ್ಷ ವಯಸ್ಸು. ಪಿಪಿಎಫ್–ಆರ್‌ಡಿ ವಿಚಾರದಲ್ಲಿ ಸಂಪೂರ್ಣ ಮಾಹಿತಿ ನೀಡಿ. ನನ್ನ ಮಗನಿಗೆ ಮುಂದಿನ ಅನುಕೂಲಕ್ಕೆ ತಿಂಗಳಿಗೆ ₹ 4 ಸಾವಿರ ತುಂಬಲು ತಿಳಿಸಿ ಹೇಳಿರಿ.**

ಉತ್ತರ: ಪಿಪಿಎಫ್ 15 ವರ್ಷಗಳ ಯೋಜನೆ. ಈ ಖಾತೆ ಮುಂದುವರಿಸಲು ವಾರ್ಷಿಕ ಕನಿಷ್ಠ ₹ 500–ಗರಿಷ್ಠ ₹ 1.50 ಲಕ್ಷ ಹಣ ತುಂಬಬಹುದು. ಆದಾಯ ತೆರಿಗೆಗೆ ಒಳಗಾಗುವವರು, ಸೆಕ್ಷನ್ 80ಸಿ ಆಧಾರದ ಮೇಲೆ ಇಲ್ಲಿ ಹೂಡಿದ ಗರಿಷ್ಠ ₹ 1.50 ಲಕ್ಷ ಮಿತಿಯಲ್ಲಿ ಒಟ್ಟು ಆದಾಯದಿಂದ (Gross Income) ಕಳೆದು ತೆರಿಗೆ ಕೊಡಬಹುದು. ಜೊತೆಗೆ ಸೆಕ್ಷನ್ 10(II) ಆಧಾರದ ಮೇಲೆ ಇಲ್ಲಿ ಬರುವ ಬಡ್ಡಿ ಆದಾಯ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ಹೊಂದಿದೆ. ಖಾತೆ ಪ್ರಾರಂಭಿಸಿದ 7 ವರ್ಷಗಳ ನಂತರ ಭಾಗಶಃ ಹಣ ವಾಪಾಸು ಪಡೆಯಬಹುದು. ಇಂದಿನ ಬಡ್ಡಿದರ ಶೇ 7.1ರಷ್ಟಿದೆ. ಆರ್.ಡಿ ಖಾತೆ 1ರಿಂದ 10 ವರ್ಷಗಳ ಯೋಜನೆ. ಪ್ರತಿ ತಿಂಗಳೂ ಒಂದೇ ಮೊತ್ತ ಕಟ್ಟುತ್ತಾ ಬರಬೇಕು. ಇದೊಂದು ಅವಧಿ ಠೇವಣಿಯಾದರೂ ಅವಧಿಗೆ ಮುನ್ನ ಠೇವಣಿದಾರ ಯಾವಾಗ ಬೇಕಾದರೂ ಕಟ್ಟಿದ ಹಣವನ್ನು ಯಾವ ಕಡಿತವಿಲ್ಲದೆ ವಾಪಾಸು ಪಡೆಯಬಹುದು. ಒಮ್ಮೆ ಪ್ರಾರಂಭದಲ್ಲಿ ನಿರ್ಧರಿಸಿದ ಬಡ್ಡಿದರ ಅವಧಿ ಮುಗಿಯುವ ತನಕ ಬದಲಾಯಿಸುವಂತಿಲ್ಲ.

ಶರತ್‌ಚಂದ್ರ, ಊರುಬೇಡ.

● **ಪ್ರಶ್ನೆ: ನಾನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ತಿಂಗಳಿಗೆ ₹ 50 ಸಾವಿರ ವಿದ್ಯಾರ್ಥಿವೇತನ ಬರುತ್ತದೆ. ಈ ಆದಾಯಕ್ಕೆ ಆದಾಯ ತೆರಿಗೆ ವಿನಾಯಿತಿ ಇದೆಯೇ ತಿಳಿಸಿರಿ.**

ಉತ್ತರ: ಸೆಕ್ಷನ್ 10 (16) ಪ್ರಕಾರ, ಯಾವುದೇ ಸ್ಕಾಲರ್‌ಶಿಪ್ ಇದ್ದರೂ ಓರ್ವ ವಿದ್ಯಾರ್ಥಿ ತನ್ನ ಓದುವಿಕೆಗೆ (ಅದು ಸಂಶೋಧನಾ ಕಾಯಕ ಇರಬಹುದು) ಪಡೆಯುವ ಸಹಾಯಧನವಾದಲ್ಲಿ ಅಂತಹ ಸಂಭಾವನೆಗೆ ಆದಾಯ ತೆರಿಗೆ ಇರುವುದಿಲ್ಲ. ಹೀಗೆ ಬರುವ ಹಣ ಓದುವಿಕೆಗೆಂದೇ ಸ್ಪಷ್ಟವಾಗಿ ಕೊಟ್ಟಿರಬೇಕು ಹಾಗೂ ಅದೇ ಉದ್ದೇಶಕ್ಕೆ ಸೀಮಿತವಾಗಿರಬೇಕು. ಸೆಕ್ಷನ್ 10(16)ನಲ್ಲಿ ಈ ಕೆಳಗಿನಂತೆ ವಿವರಣೆ ನೀಡಿರುತ್ತಾರೆ 'Scholarship granted to meet the cost of Education' (ಶಿಕ್ಷಣದ ವೆಚ್ಚಗಳಿಗೆ ನೀಡಿದ ವಿದ್ಯಾರ್ಥಿವೇತನ). ಈ ಸೆಕ್ಷನ್ ಆಧಾರದ ಮೇಲೆ ನೀವು ಪಡೆಯುವ ವಿದ್ಯಾರ್ಥಿವೇತನ ಆದಾಯ ತೆರಿಗೆಯಿಂದ ಮುಕ್ತವಾಗಿದೆ. ಇದೇ ವೇಳೆ ಸೆಕ್ಷನ್ 10 (21) ಆಧಾರದ ಮೆಲೆ ಕೂಡ ಸಂಶೋಧನಾ ಕಾರ್ಯಕ್ಕೆ ಬರುವ ಸ್ಕಾಲರ್‌ಶಿಪ್ ಆದಾಯ ತೆರಿಗೆಯಿಂದ ಮುಕ್ತವಾಗಿದೆ. ಸರ್ಕಾರ ನಿಮಗೆ ಕೊಟ್ಟಿರುವ ಸದವಕಾಶವನ್ನು ಚೆನ್ನಾಗಿ ಬಳಸಿಕೊಂಡು ಉತ್ತಮ ರಿಸರ್ಚ್ ಸ್ಕಾಲರ್ ಆಗಿ ದೇಶಕ್ಕೆ ಒಳ್ಳೆ ಹೆಸರು ಬರುವಂತಾಗಲಿ ಎಂದು ಹಾರೈಸುತ್ತೇನೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–56001.
ಇ–ಮೇಲ್: businessdesk@prajavani.co.in

ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಅಭಿಪ್ರಾಯ

ಇಂಧನ ತೆರಿಗೆ ಇಳಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ತಗ್ಗಿಸಲು ಸುಂಕ ಕಡಿಮೆ ಮಾಡುವ ಪ್ರಸ್ತಾವನೆ ಕೇಂದ್ರ ಸರ್ಕಾರದ ಮುಂದೆ ಇಲ್ಲ ಎಂದು ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ ಸ್ಪಷ್ಟನೆ ನೀಡಿದ್ದರೂ, ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ತೈಲೋತ್ಪನ್ನಗಳ ಮೇಲಿನ ತೆರಿಗೆ, ಸುಂಕವನ್ನು ಕಡಿಮೆ ಮಾಡಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ಪೆಟ್ರೋಲ್ ಮತ್ತು ಡೀಸೆಲ್‌ನ ಮಾರುಕಟ್ಟೆ ಬೆಲೆಯು ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಯನ್ನು ತಗ್ಗಿಸುವುದರಿಂದ ಬೆಲೆ ಹೆಚ್ಚಳದ ಒತ್ತಡ ತುಸು ತಗ್ಗಬಹುದು. ಹಣದುಬ್ಬರ ದರವು ಹೆಚ್ಚಿನ ಅವಧಿಗೆ ಕಡಿಮೆ ಮಟ್ಟದಲ್ಲಿ ಇರುವಂತಹ ಪರಿಸ್ಥಿತಿ ಸೃಷ್ಟಿಯಾಗಬೇಕಿರುವುದು ಈ ಸಂದರ್ಭದ ಅಗತ್ಯ' ಎಂದು ಎಂಪಿಸಿ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

ಫೆಬ್ರುವರಿ 3ರಿಂದ 5ರವರೆಗೆ ನಡೆದ ಎಂಪಿಸಿ ಸಭೆಯ ವಿವರಗಳನ್ನು ಆರ್‌ಬಿಐ ಸೋಮವಾರ ಬಹಿರಂಗಪಡಿಸಿದೆ. ರೆಪೊ ದರ ಎಷ್ಟಿರಬೇಕು ಎಂಬುದನ್ನು ತೀರ್ಮಾನಿಸಲು ಎಂಪಿಸಿ ಸಭೆ ಸೇರಿತ್ತು. ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಸೇರಿ ಆರು ಜನ ಈ ಸಮಿತಿಯ ಸದಸ್ಯರು.

'ಆಹಾರ ಮತ್ತು ಇಂಧನವನ್ನು ಹೊರತುಪಡಿಸಿದರೆ, ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರವು ಡಿಸೆಂಬರ್ ತಿಂಗಳಲ್ಲಿ ಶೇ 5.5ರ ಮಟ್ಟದಲ್ಲಿ ಇದೆ. ಇದಕ್ಕೆ ಒಂದು ಕಾರಣ ಕಚ್ಚಾ ತೈಲದ ಬೆಲೆಯಲ್ಲಿ ಏರಿಕೆ ಆಗುತ್ತಿರುವುದು ಹಾಗೂ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ದೊಡ್ಡ ಪ್ರಮಾಣದಲ್ಲಿ ಪರೋಕ್ಷ ತೆರಿಗೆಗಳು ಇರುವುದು...' ಎಂದು ದಾಸ್ ಅವರು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಬೆಲೆ ಹೆಚ್ಚಳದ ಒತ್ತಡವನ್ನು ನಿಗ್ರಹಿಸಬೇಕು ಎಂದಾದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನ್ವಯದಿಂದ ತೆರಿಗೆ ತಗ್ಗಿಸುವುದು ಮುಖ್ಯವಾಗುತ್ತದೆ' ಎಂದು ಕೂಡ ದಾಸ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಆರ್‌ಬಿಐ ಬೇರೆ ಮಾರ್ಗ ಬಳಸಿಯೂ ಹಣದುಬ್ಬರ ನಿಯಂತ್ರಿಸಬಹುದು. ಆದರೆ, ಹಾಗೆ ಮಾಡಿದರೆ ವ್ಯವಸ್ಥೆಯಲ್ಲಿ ಹಣದ ಹರಿವು ಕಡಿಮೆಯಾಗುತ್ತದೆ. ಸಾಂಕ್ರಾಮಿಕ ತಂದ ಸಂಕಷ್ಟದಿಂದ ಹೊರಬರುವ ಹಂತದಲ್ಲಿ ಆರ್ಥಿಕತೆ ಇರುವಾಗ, ಹಣದ ಸರಾಗ ಹರಿವು ಇರಬೇಕಿರುವುದು ಮಹತ್ವದ್ದು. ಹಣದ ಹರಿವಿಗೆ ತಡೆ ಒಡ್ಡಿದರೆ ಆರ್ಥಿಕ ಬೆಳವಣಿಗೆ ಕುಸಿಯುತ್ತದೆ' ಎಂದು ಬೆಂಗಳೂರಿನ ತಕ್ಷಶಿಲಾ ಇನ್‌ಸ್ಟಿಟ್ಯೂಷನ್‌ನ ಅಸೋಸಿಯೇಟ್ ಫೆಲೊ ಸಾರ್ಥಕ್ ಪ್ರಧಾನ್ ಅಭಿಪ್ರಾಯ ವ್ಯಕ್ತಪಡಿಸಿದರು.

ತೈಲ ಬೆಲೆ ಹೆಚ್ಚಳದ ಪರಿಣಾಮವಾಗಿ ಫೆಬ್ರುವರಿ ಮತ್ತು ಮಾರ್ಚ್‌ನಲ್ಲಿ ಹಣದುಬ್ಬರ ಪ್ರಮಾಣ ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಣದುಬ್ಬರ ಹೆಚ್ಚಳವಾದರೆ ರೆಪೊ ದರ ತಗ್ಗಿಸಲು ಆರ್‌ಬಿಐಗೆ ಅವಕಾಶ ಸಿಗದಂತೆ ಆಗುತ್ತದೆ. 'ತೈಲೋತ್ಪನ್ನಗಳ ಮೇಲಿನ ಮೌಲ್ಯವರ್ಧಿತ (ವ್ಯಾಟ್) ತೆರಿಗೆಯನ್ನು ತಕ್ಷಣಕ್ಕೆ ಇಳಿಸುವ ಸಾಧ್ಯತೆ ಇಲ್ಲ' ಎಂದು ರಾಜ್ಯ ಹಣಕಾಸು ಇಲಾಖೆಯ ಮೂಲಗಳು ತಿಳಿಸಿವೆ.

ಮುಂಬೈ: ₹ 97ರ ಗಡಿ ದಾಟಿದ ಪೆಟ್ರೋಲ್

ನವದೆಹಲಿ (ಪಿಟಿಐ): ಎರಡು ದಿನಗಳ ವಿರಾಮದ ನಂತರ ಪೆಟ್ರೋಲ್, ಡೀಸೆಲ್ ಬೆಲೆ ಮಂಗಳವಾರ ಮತ್ತೆ ಹೆಚ್ಚಳವಾಗಿದೆ. ಇದರ ಪರಿಣಾಮವಾಗಿ ಲೀಟರ್ ಪೆಟ್ರೋಲ್ ಬೆಲೆಯು ಮುಂಬೈನಲ್ಲಿ ₹ 97.34 ಆಗಿದೆ. ದೆಹಲಿಯಲ್ಲಿ ಪೆಟ್ರೋಲ್ ಬೆಲೆ ₹ 90.93ಕ್ಕೆ ತಲುಪಿದೆ.

ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್ ₹ 93.98ಕ್ಕೆ, ಡೀಸೆಲ್ ₹ 86.21ಕ್ಕೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಮಂಗಳವಾರ 66 ಅಮೆರಿಕನ್ ಡಾಲರ್ ಗಡಿಯನ್ನು ದಾಟಿದೆ. ದೇಶಿ ಮಾರುಕಟ್ಟೆಯಲ್ಲಿ ಫೆಬ್ರುವರಿಯಲ್ಲಿ ಪೆಟ್ರೋಲ್ ಬೆಲೆಯು ₹ 4.63ರಷ್ಟು, ಡೀಸೆಲ್ ಬೆಲೆಯು ₹ 4.84ರಷ್ಟು ಹೆಚ್ಚಳವಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1050
ನಡುಗೋಲು	1150-1250
ರಾಶಿ	1450-1500
ರಾಶಿ ಉತ್ತಮ	1500-1600
ಜರಡಿ	1700-1750
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	2000-2050
ಕಾಳು ಮೆಣಸು	325
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41500
ಹಳತು	42500-51000
ಬೆಳ್ತಂಗಡಿ	
ಕೋಕ	15000-26000
ಹೊಸತು	20300-40000
ಚಿತ್ರದುರ್ಗ	
ಆಪಿ	42739-43169
ಬೆಟ್ಟೆ	33119-33579
ಕೆಂಪುಗೋಟು	29300-29700
ರಾಶಿ	42229-42659
ಪುತ್ತೂರು	
ಕೋಕ	9500-23000
ಹೊಸತು	29000-42500
ಸಿದ್ದಾಪುರ	
ಬಿಳಿಗೋಟು	21099-29989
ಕೋಕ	20199-30569
ಚಾಲಿ	35102-38899
ಕೆಂಪುಗೋಟು	25313-30289
ರಾಶಿ	40689-42209
ತಟ್ಟಿಬೆಟ್ಟೆ	31089-39099
ಯಲ್ಲಾಪುರ	
ಬಿಳಿಗೋಟು	22919-31476
ಕೋಕ	20122-28612
ಚಾಲಿ	32122-41769
ಕೆಂಪುಗೋಟು	25108-34699
ರಾಶಿ	39969-46769
ತಟ್ಟಿಬೆಟ್ಟೆ	35860-39819
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	255-410
ದ್ವಿತಳಿ (ಬಿ.ವಿ)	317-525

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10100	10200	10150	134.95 ಸೆಂಟ್ಸ್
ಎಸಿ	4060	4000	4025	
ಆರ್‌ಪಿ	5250	5150	5250	
ಆರ್‌ಸಿ	3000	2950	2975	1416 ಡಾಲರ್ಸ್



ಬಂಧನ ಬ್ಯಾಂಕ್‌ನ ಸುರಕ್ಷ ಹೋಮ್ ಲೋನ್‌ನಿಂದ ನಿಮ್ಮ ಮನೆಯ ಕನಸನ್ನು ನನಸಾಗಿಸಿಕೊಳ್ಳಿ

ಕ್ರೆಡಿಟ್ ಸ್ಕೋರ್‌ನಿಂದ ಬಡ್ಡಿ ದರವನ್ನು ನಿರ್ಧರಿಸಲಾಗುವುದು

Suraksha
ಹೆಚ್ಚಿನ ವಿವರಗಳಿಗಾಗಿ
56070 ಗೆ HOME ಎಂದು SMS ಮಾಡಿ

ಮುಂಬೈ ಧಾರಣೆ

ಶೇಂಗಾ

23-2-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9850-9900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1510)
ಒಂದು ವಾರದ ಡೆಲಿವರಿ	1525 (1505)
ಸೋಯಾ ಕಚ್ಚಾ	1132 (1120)
ಪಾಮ್ ವಾರದ ಡೆಲಿವರಿ	1143 (1128)
ಸೂರ್ಯಕಾಂತಿ ಎಣ್ಣೆ ಕಚ್ಚಾ	1480 (1460)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,700 (46,500)
ಬೆಳ್ಳಿ ಕೆ.ಜಿ
69,800 (69,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚಿನ್ನ ₹ 337, ಬೆಳ್ಳಿ ₹ 1,149 ರಷ್ಟು ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ 10 ಗ್ರಾಂ ಚಿನ್ನದ ದರ ₹ 337ರಷ್ಟು ಹೆಚ್ಚಾಗಿ ₹ 46,372ಕ್ಕೆ ಏರಿಕೆ ಯಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಕಂಡಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ದರದಲ್ಲಿ ಹೆಚ್ಚಳವಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹ 1,149 ರಷ್ಟು ಏರಿಕೆ ಕಂಡು ₹ 69,667ರಂತೆ ಮಾರಾಟವಾಯಿತು.

ಮಾಧ್ಯಮ, ಮನರಂಜನಾ ವಲಯದ ವರಮಾನ ಶೇ 27ರಷ್ಟು ಹೆಚ್ಚಳ ನಿರೀಕ್ಷೆ

ನವದೆಹಲಿ (ಪಿಟಿಐ): ದೇಶದ ಮಾಧ್ಯಮ ಮತ್ತು ಮನರಂಜನಾ ವಲಯದ ವರಮಾನವು 2021–22ರಲ್ಲಿ ಶೇಕಡ 27ರಷ್ಟು ಬೆಳವಣಿಗೆ ಕಾಣಲಿದ್ದು ₹ 1.37 ಲಕ್ಷ ಕೋಟಿಗಳಿಗೆ ಏರಿಕೆಯಾಗುವ ನಿರೀಕ್ಷೆ ಇದೆ ಎಂದು ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಈ ವಲಯದ ವರಮಾನ ಶೇ 26ರಷ್ಟು ಇಳಿಕೆ ಕಂಡಿದೆ.

ಮುಂದಿನ ಹಣಕಾಸು ವರ್ಷದಲ್ಲಿ ಆರ್ಥಿಕತೆ ಚೇತರಿಕೆ ಕಂಡುಕೊಳ್ಳಲಿದ್ದು, ವರ್ಷದಿಂದ ವರ್ಷಕ್ಕೆ ಮಾಧ್ಯಮ ಮತ್ತು ಮನರಂಜನಾ ವಲಯದ ವರಮಾನ ಶೇ 31ರಷ್ಟು ಬೆಳವಣಿಗೆ ಕಾಣಲಿದೆ. ಚಂದಾದಾರಿಕೆಯ ವರಮಾನ ಶೇ 24ರಷ್ಟು ಹೆಚ್ಚಾಗಲಿದೆ ಎಂದು ಕ್ರಿಸಿಲ್ ರೇಟಿಂಗ್ಸ್‌ನ ನಿರ್ದೇಶಕ ನಿತೇಶ್ ಜೈನ್ ತಿಳಿಸಿದ್ದಾರೆ.

We are looking for talented, competent and qualified faculty for MBA programme affiliated to Bangalore University
- The Institution provides professional work environment and ample opportunities for career development.
- Eligible candidates may please forward their profile with copies of testimonials and recent passport size photo to the Secretary within 10 days of this advertisement by post/courier. Alternatively, eligible candidates may also forward their profiles to **directordbims@gmail.com**.
- Emoluments will be as per AICTE pay scales.
- While forwarding the application, candidates are requested to superscribe on the envelope, the position for which the application is being made.
- Candidates should appear for interview at their cost.

Secretary

Kumbalagodu, Mysore Road, Bangalore 560 074.
Ph: 080-28437025/27 Website: www.donboscobangalore.education

ಜಯದ ಓಟದತ್ತ ಸಮರ್ಥ್ ನೋಟ

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್: ಕರ್ನಾಟಕ–ಒಡಿಶಾ ಹಣಾಹಣಿ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಮವಾರ ಬಿಹಾರದ ವಿರುದ್ಧ ಶತಕ ಗಳಿಸಿ ತಂಡಕ್ಕೆ ಜಯದ ಕಾಣಿಕೆ ನೀಡಿದ ಆರ್. ಸಮರ್ಥ್ ಈಗ ಮತ್ತೊಂದು ಗೆಲುವಿನ ಮೇಲೆ ಕಣ್ಣಿಟ್ಟಿದ್ದಾರೆ.

ಗುರುವಾರ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಮೂರನೇ ಪಂದ್ಯದಲ್ಲಿ ಕರ್ನಾಟಕ ತಂಡವು ಒಡಿಶಾ ಎದುರು ಆಡಲಿದೆ. ಗುಂಪಿನ ಮೊದಲ ಪಂದ್ಯದಲ್ಲಿ ಸೋತಿದ್ದ ಕರ್ನಾಟಕ ತಂಡವು ಎರಡನೇ ಪಂದ್ಯದಲ್ಲಿ ಎದುರಾಳಿಯನ್ನು ಸುಲಭವಾಗಿ ಮಣಿಸಿತ್ತು. ಸಮರ್ಥ್ ಶತಕ ಗಳಿಸಿದ್ದರು. ದೇವದತ್ತ ಪಡಿಕ್ಕಲ್ ಮೂರು ರನ್‌ಗಳಿಂದ ಶತಕ ತಪ್ಪಿಸಿಕೊಂಡಿದ್ದರು. ಸಿದ್ಧಾರ್ಥ್ 78 ರನ್ ಗಳಿಸಿದ್ದರು. ಇದರಿಂದಾಗಿ ಬ್ಯಾಟಿಂಗ್ ಲಯ ಕಂಡುಕೊಂಡಿರುವ ಈ ಮೂವರೂ ಮುಂದಿನ ಪಂದ್ಯದಲ್ಲಿ ಮಿಂಚುವ ವಿಶ್ವಾಸದಲ್ಲಿದ್ದಾರೆ.

ಬೌಲಿಂಗ್‌ನಲ್ಲಿ ಪ್ರಸಿದ್ಧ ಕೃಷ್ಣ ಮತ್ತು ಶ್ರೇಯಸ್ ಗೋಪಾಲ್ ಮಿಂಚಿದ್ದರು. ಅದರಿಂದಾಗಿ ಬಿಹಾರ ತಂಡವನ್ನು ಅಲ್ಪಮೊತ್ತಕ್ಕೆ ಮಣಿಸಿತ್ತು. ಆದರೆ, ಶಾಂತನು ಮಿಶ್ರಾ ನಾಯಕತ್ವದ ಒಡಿಶಾ ತಂಡವು ಆಡಿರುವ ಎರಡೂ ಪಂದ್ಯಗಳಲ್ಲಿ ಸೋಲನುಭವಿಸಿದೆ. ಪುಟಿದೇಳುವ ಪ್ರಯತ್ನದಲ್ಲಿದೆ. ಆದ್ದರಿಂದ ಕರ್ನಾಟಕಕ್ಕೆ ಅನಿರೀಕ್ಷಿತ ಪೆಟ್ಟು ನೀಡುವ ಸಾಧ್ಯತೆಯೂ ಇದೆ. ಇದರಿಂದ ಸಮರ್ಥ್ ಬಳಗವು ತನ್ನ ಸಂಪೂರ್ಣ ಸಾಮರ್ಥ್ಯ ಮತ್ತು ಅನುಭವ ಪಣಕ್ಕೊಡ್ಡಿ ಆಡಬೇಕಿದೆ.

ಕೆ.ವಿ. ಸಿದ್ಧಾರ್ಥ್, ಆರ್. ಸಮರ್ಥ್ ಮತ್ತು ದೇವದತ್ತ ಪಡಿಕ್ಕಲ್

ಹಾಲಿ ಚಾಂಪಿಯನ್ ಕರ್ನಾಟಕವು ಎಂಟರ ಘಟ್ಟಕ್ಕೆ ಸಾಗಲು ಇನ್ನುಳಿದಿರುವ ಮೂರು ಪಂದ್ಯಗಳಲ್ಲಿಯೂ ಉತ್ತಮ ರನ್ ರೇಟ್‌ನೊಂದಿಗೆ ಗೆದ್ದರೆ ಉತ್ತಮ. ಒಂದು ಸೋಲು ಕೂಡ ದುಬಾರಿಯಾಗುತ್ತದೆ. ಕೊನೆಯ ಎರಡು ಪಂದ್ಯಗಳಲ್ಲಿ ಎದುರಾಗಲಿರುವ ಕೇರಳ ಮತ್ತು ರೈಲ್ವೆಸ್ ತಂಡಗಳು ಬಲಿಷ್ಠವಾಗಿದ್ದು, ಅವುಗಳನ್ನು ಮಣಿಸಲು ಒಡಿಶಾ ಪಂದ್ಯವನ್ನು ಅಭ್ಯಾಸದ ಕಣವಾಗಿ ಬಳಸಿಕೊಳ್ಳಲು ಆತಿಥೇಯರು ಸಿದ್ಧರಾಗಿದ್ದಾರೆ.

ತಂಡಗಳು: ಕರ್ನಾಟಕ: ಆರ್. ಸಮರ್ಥ್ (ನಾಯಕ), ದೇವದತ್ತ ಪಡಿಕ್ಕಲ್, ಕೆ.ವಿ. ಸಿದ್ಧಾರ್ಥ್, ಕರುಣ್ ನಾಯರ್, ಶ್ರೇಯಸ್ ಗೋಪಾಲ್, ಬಿ.ಆರ್. ಶರತ್, ಜೆ. ಸುಚಿತ್, ಅನಿರುದ್ಧ ಜೋಶಿ, ರೋನಿತ್ ಮೋರೆ, ಪ್ರಸಿದ್ಧ ಕೃಷ್ಣ, ಅಭಿಮನ್ಯು ಮಿಥುನ್, ಡಿ. ನಿಶ್ಚಲ್, ರೋಹನ್ ಕದಂ, ಕೆ.ಎಲ್. ಶ್ರೀಜಿತ್, ಆದಿತ್ಯ ಸೋಮಣ್ಣ, ನಿಕಿನ್ ಜೋಸ್, ವೈಶಾಖ ವಿಜಯಕುಮಾರ್, ಎಂ.ಬಿ. ದರ್ಶನ್.

ಒಡಿಶಾ: ಶಾಂತನು ಮಿಶ್ರಾ (ನಾಯಕ), ರಾಜೇಶ್ ಧುಪರ್ (ವಿಕೆಟ್‌ಕೀಪರ್), ಗೌರವ್ ಚೌಧರಿ, ಸಂದೀಪ್ ಪಟ್ನಾಯಕ್, ಶುಭ್ರಾಂಶು ಸೇನಾಪತಿ, ಅಭಿಷೇಕ್ ಯಾದವ್, ಅಂಕಿತ್ ಯಾದವ್, ದೇವವ್ರತ್ ಪ್ರಧಾನ್, ಸೂರ್ಯಕಾಂತ್ ಪ್ರಧಾನ್, ಸೌರವ್ ಕನೋಜಾ, ರಾಜೇಶ್ ಮೊಹಾಂತಿ, ಪ್ರಯಶ್ ಸಿಂಗ್, ದೇವಾಶಿಶ್ ಸಾಮಂತ್ರೆ, ಪ್ರಬೀನ್ ಲುನಾ, ತರಾಣಿ ಸಾ, ಕಾರ್ತಿಕ್ ಬಿಸ್ವಾಲ್.

ಪಂದ್ಯ ಆರಂಭ ಬೆಳಗ್ಗೆ 9.

ಸಂಕ್ಷಿಪ್ತ ಸುದ್ದಿ

ಮಾರ್ಚ್ 5ರಿಂದ ಕುಸ್ತಿ ಟ್ರಯಲ್ಸ್

ಬೆಂಗಳೂರು: ರಾಷ್ಟ್ರೀಯ ಬಾಲಕ ಹಾಗೂ ಬಾಲಕಿಯರ ಜೂನಿಯರ್ ಹಾಗೂ ಸಬ್‌ಜೂನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡದ ಆಯ್ಕೆಗಾಗಿ ಟ್ರಯಲ್ಸ್ ಮಾರ್ಚ್ 5ರಿಂದ ಗದುಗಿನ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ.

ರಾಷ್ಟ್ರೀಯ ಚಾಂಪಿಯನ್‌ಷಿಪ್ ಬಳ್ಳಾರಿಯಲ್ಲಿ ಮಾರ್ಚ್ 19ರಿಂದ 21ರವರೆಗೆ ಆಯೋಜನೆಯಾಗಿದೆ.

ಬಾಲಕಿಯರ ಸಬ್‌ಜೂನಿಯರ್, ಜೂನಿಯರ್, ಬಾಲಕರ ಸಬ್ ಜೂನಿಯರ್, ಜೂನಿಯರ್ ಫ್ರೀಸ್ಟೈಲ್ ಹಾಗೂ ಗ್ರೀಕೋ ರೋಮನ್ ವಿಭಾಗಗಳಿಗೆ ಟ್ರಯಲ್ಸ್ ನಡೆಯಲಿದೆ.

ಹೆಚ್ಚಿನ ಮಾಹಿತಿಗೆ ಕೋಚ್‌ಗಳಾದ ಶರಣಗೌಡ (ಮೊ.ಸಂ. 9632052765) ಹಾಗೂ ರಮೇಶ್ (ಮೊ.ಸಂ. 7019909528) ಅವರನ್ನು ಸಂಪರ್ಕಿಸಬೇಕೆಂದು ಕರ್ನಾಟಕ ಕುಸ್ತಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎನ್.ಆರ್.ನರಸಿಂಹ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಕಿ ಟ್ರಯಲ್ಸ್ ಇಂದು

ಬೆಂಗಳೂರು: ಜಾರ್ಖಂಡ್‌ನಲ್ಲಿ ಏಪ್ರಿಲ್ 3ರಿಂದ 12ರವರೆಗೆ ಆಯೋಜನೆಯಾಗಿರುವ ಹಾಕಿ ಇಂಡಿಯಾ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ಜೂನಿಯರ್ ಮಹಿಳಾ ತಂಡದ ಆಯ್ಕೆ ಟ್ರಯಲ್ಸ್ ಬುಧವಾರ ನಡೆಯಲಿದೆ.

ನಗರದ ಶಾಂತಿನಗರದಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಅರೆನಾದಲ್ಲಿ ಟ್ರಯಲ್ಸ್ ನಡೆಯಲಿದೆ ಎಂದು ಹಾಕಿ ಕರ್ನಾಟಕದ ಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರಿಕೆಟ್ ಆಟಗಾರನಿಗೆ ಕೋವಿಡ್–19

ಮುಂಬೈ (ಪಿಟಿಐ): ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುತ್ತಿರುವ ಬಿಹಾರ ತಂಡದ ಆಟಗಾರರೊಬ್ಬರಿಗೆ ಕೋವಿಡ್–19 ತಗುಲಿರುವುದು ದೃಢಪಟ್ಟಿದೆ. ತಂಡದ ಇತರ ಆಟಗಾರರನ್ನೂ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.

'ಆಟಗಾರನಿಗೆ ಕೋವಿಡ್ ದೃಢಪಟ್ಟಿದೆ. ಆತನನ್ನು ಪ್ರತ್ಯೇಕ ವಾಸದಲ್ಲಿರಿಸಲಾಗಿದೆ. ಸೋಂಕಿತ ಆಟಗಾರ ಬೆಂಗಳೂರಿನಲ್ಲಿದ್ದಾರೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾರ್ಚ್ 24ರಿಂದ ರಾಷ್ಟ್ರೀಯ ಈಜು

ಬೆಂಗಳೂರು: ರಾಜ್‌ಕೋಟ್‌ನಲ್ಲಿ ಮಾರ್ಚ್ 24ರಿಂದ 27ರವರೆಗೆ ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಯೋಜಿಸುವುದಾಗಿ ಭಾರತ ಈಜು ಫೆಡರೇಷನ್ (ಎಸ್‌ಎಫ್‌ಐ) ಮಂಗಳವಾರ ತಿಳಿಸಿದೆ.

'ಇದು 2020ರ ಚಾಂಪಿಯನ್‌ಷಿಪ್. ಈಜುಪಟುಗಳು ಈಗಷ್ಟೇ ಕೋವಿಡ್ ಲಾಕ್‌ಡೌನ್‌ನಿಂದ ಹೊರಬಂದಿದ್ದಾರೆ. ಹಾಗಾಗಿ ಇದನ್ನು ಒಲಿಂಪಿಕ್ಸ್ ಅರ್ಹತಾ ಚಾಂಪಿಯನ್‌ಷಿಪ್ ಆಗಿಸುವುದಿಲ್ಲ. ಈ ವರ್ಷದ ಜೂನ್‌ನಲ್ಲಿ ನಡೆಯುವ ಚಾಂಪಿಯನ್‌ಷಿಪ್‌ಗೆ ಅಂತರರಾಷ್ಟ್ರೀಯ ಈಜು ಮಂಡಳಿಯ (ಫಿನಾ) ಮಾನ್ಯತೆ ಪಡೆಯಲು ಯತ್ನಿಸಲಾಗುವುದು ಎಂದು ಎಸ್‌ಎಫ್‌ಐ ಕಾರ್ಯದರ್ಶಿ ಮೋನಾಲ್ ಚೋಕ್ಷಿ ಹೇಳಿದ್ದಾರೆ.

ಕರ್ನಾಟಕ ರಾಜ್ಯ ಈಜು ಚಾಂಪಿಯನ್‌ಷಿಪ್ ಮಾರ್ಚ್ 4ರಿಂದ ನಡೆಯಲಿದೆ.

ನಗರಸಭಾ ಕಾರ್ಯಾಲಯ, ಉಡುಪಿ
ಸಂ: ಉನಸ:ಬಿ2:ಸಿಆರ್:ಟೆಂ.ಪ್ರ:2020–21 ದಿನಾಂಕ: 20.02.2021

ಟೆಂಡರ್ ಪ್ರಕಟಣೆ
(ಕರ್ನಾಟಕ ಸರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಉಡುಪಿ ನಗರಸಭೆಯು 2020–21ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿಯಲ್ಲಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standard Bid Document K.W-4 ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ www.udupicity.mrc.gov.in ನಿಂದ ಪಡೆದುಕೊಳ್ಳಬಹುದು.

(1) Queries/Clarifications ಕೊನೆಯ **ದಿನಾಂಕ: 25.02.2021 ಪೂರ್ವಾಹ್ನ 11.00 ಗಂಟೆಗೆ.** (2) ಪ್ರಿ ಬಿಡ್ ಮೀಟಿಂಗ್ **ದಿನಾಂಕ: 25.02.2021 ಪೂರ್ವಾಹ್ನ 11.00 ಗಂಟೆಗೆ.** (3) ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಕೊನೆಯ **ದಿನಾಂಕ: 05.03.2021 ಸಂಜೆ 5.00 ಗಂಟೆಗೆ.** (4) ತುಂಬಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 05.03.2021 ಸಂಜೆ 5.00 ಗಂಟೆಗೆ.** (5) ಸ್ವೀಕರಿಸಲಾದ ಟೆಂಡರುಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 06.03.2021 ಸಂಜೆ 5.01 ಗಂಟೆಗೆ.** (6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಅರ್ಹ ಬಿಡ್ಡುದಾರರಿಗೆ ಪ್ರತ್ಯೇಕ ತಿಳಿಸಲಾಗುವುದು.

ಕಾಮಗಾರಿಗಳ ವಿವರ: ಉಡುಪಿ ನಗರಸಭಾ ವ್ಯಾಪ್ತಿಯ ಅಲೆವೂರು ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ನಿರ್ವಹಣಾ ಘಟಕದಲ್ಲಿ 10 ಟಿ.ಪಿ.ಡಿ ಸಾಮರ್ಥ್ಯದ ಎಂ.ಆರ್.ಎಫ್ ಘಟಕ ನಿರ್ಮಾಣ. **DMA/2020-21/BD/WORK INDENT112997.** ಅಂದಾಜು ಮೊತ್ತ **ರೂ.177.75 ಲಕ್ಷ,** ಇಎಂಡಿ ಮೊತ್ತ **ರೂ.2.67 ಲಕ್ಷ,** ಗುತ್ತಿಗೆದಾರರ ದರ್ಜೆ: 1ನೇ ದರ್ಜೆ, ಟ್ರಾನ್ಸಾಕ್ಷನ್ ಫೀ: ಇ–ಪೋರ್ಟಲ್‌ನಂತೆ, ಕಾಮಗಾರಿ ಪೂರ್ತಿಗೊಳಿಸುವ ಅವಧಿ: 6 ತಿಂಗಳು. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ **https://eproc.karnataka.gov.in/eportal/index.seam** ನಿಂದ ಟೆಂಡರು ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಇದಕ್ಕೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಪಟ್ಟವರಿಂದ ಪಡೆದುಕೊಳ್ಳಬಹುದು.

ಸಹಿ/– ಅಧ್ಯಕ್ಷರು, ಉಡುಪಿ ನಗರಸಭೆ ಸಹಿ/– ಪೌರಾಯುಕ್ತರು, ಉಡುಪಿ ನಗರಸಭೆ
ವಾಪಾಇ/ಸನಿಉ/ಎಂಸಿಎ/753/20–21 ದಿ: 23.2.2021

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
(www.kpwd.gov.in)

ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. 560001. ದೂರವಾಣಿ ಸಂಖ್ಯೆ: 080–22133370, ಫ್ಯಾಕ್ಸ್ ಸಂಖ್ಯೆ: 080–22133365,
Email ID: eepwdbngdn@yahoo.com, E-Portal : https://eproc.karnataka.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 28/2020–21
ದಿನಾಂಕ: 22.02.2021

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನಂ.1 ದಕ್ಷಿಣ ತಾಲ್ಲೂಕಿಗೆ ಸಂಬಂಧಿಸಿದಂತೆ 1 ಸಂಖ್ಯೆಯ ರೂ. 495.00 ಲಕ್ಷದ ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ: 22.02.2021 ರಿಂದ.
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯದಿ: 01.03.2021 ಸಂಜೆ 4.00 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ 02.03.2021 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋ.ಇ, ಬೆಂಗಳೂರು ವಿಭಾಗ, ಬೆಂಗಳೂರು.

DIPR/DDU/Zen/R.O:2765/2020-21

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕ್ವಾರ್ಟರ್‌ಫೈನಲ್‌ಗೆ ಗಂಧರ್ವ, ದಿಶಾ

ಬೆಂಗಳೂರು: ನಾಲ್ಕನೇ ಶ್ರೇಯಾಂಕದ ಅಭಿಷೇಕ್ ಸುಬ್ರಮಣ್ಯಂಗೆ ಆಘಾತ ನೀಡಿದ ಗಂಧರ್ವ ಕೊತಪಲ್ಲಿ ಕೆಎಸ್‌ಎಲ್‌ಟಿಎ 14 ವರ್ಷದೊಳಗಿನವರ ಟ್ಯಾಲೆಂಟ್ ಸಿರೀಸ್ ಟೆನಿಸ್ ಟೂರ್ನಿಯ ಎಂಟರಘಟ್ಟ ತಲುಪಿದರು. ಮಂಗಳವಾರ ನಡೆದ ಬಾಲಕರ ಸಿಂಗಲ್ಸ್ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 13 ವರ್ಷದ ಗಂಧರ್ವ 6–1, 6–0ಯಿಂದ ಅಭಿಷೇಕ್‌ಗೆ ಸೋಲುಣಿಸಿದರು.

ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಅರ್ಹತಾ ಸುತ್ತಿನಿಂದ ಗೆದ್ದುಬಂದ ದಿಶಾ ಖಂಡೋಜಿ ತಮ್ಮ ಜಯದ ಓಟ ಮುಂದುರಿಸಿದರು. 6–4, 6–0ರಿಂದ ಎಂಟನೇ ಶ್ರೇಯಾಂಕದ ಉಮಾಮ್ ಅಹಮದ್ ವಿರುದ್ಧ ಗೆದ್ದು ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು. ಬಾಲಕಿಯರ ವಿಭಾಗದಲ್ಲಿ ಜಾನಾ ಅಂಬರ್ ಸಾಲಾರ್ 6-1, 4-6, 7-5ರಿಂದ ಸಾನ್ವಿ ಮಿಶ್ರಾ ಎದುರು ಗೆದ್ದು ಕ್ವಾರ್ಟರ್‌ಫೈನಲ್ ತಲುಪಿದರು.

ವಿಶ್ವಕಪ್ ಟೂರ್ನಿ: ಭಾರತದ ಶೂಟರ್‌ಗಳ ಮೇಲೆ ನಿರೀಕ್ಷೆ

ಕೈರೊ (ಪಿಟಿಐ): ಈಜಿಪ್ಟ್‌ನ ಕೈರೊದಲ್ಲಿ ಅಂತರರಾಷ್ಟ್ರೀಯ ಶೂಟಿಂಗ್ ವಿಶ್ವಕಪ್ ಟೂರ್ನಿಗೆ ಬುಧವಾರ ವೇದಿಕೆ ಸಜ್ಜುಗೊಂಡಿದೆ. ಕೋವಿಡ್–19 ಕಾಲದಲ್ಲಿ ನಡೆಯುತ್ತಿರುವ ಮೊದಲ ಅಂತರರಾಷ್ಟ್ರೀಯ ಶೂಟಿಂಗ್ ಸ್ಪೋರ್ಟ್ಸ್ ಫಡರೇಷನ್ (ಐಎಸ್‌ಎಸ್‌ಎಫ್) ಸ್ಪರ್ಧೆ ಇದಾಗಿದ್ದು, ಭಾರತದ 13 ಮಂದಿಯ ತಂಡವು ಮಿಂಚುವ ನಿರೀಕ್ಷೆಯಿದೆ. ಬಹುತೇಕ ಒಂದು ವರ್ಷದ ಬಳಿಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಶೂಟಿಂಗ್ ಕೂಟ ನಡೆಯುತ್ತಿದೆ.

ಎಂಟು ದಿನಗಳ ಟೂರ್ನಿ ಇದಾಗಿದ್ದು, ಮೊದಲ ದಿನ ಪುರುಷ ಮತ್ತು ಮಹಿಳೆಯರ ವಿಭಾಗದ ಸ್ಕೀಟ್ ಸ್ಪರ್ಧೆಗಳ ಮೂಲಕ ಆರಂಭವಾಗಲಿದೆ. ಒಟ್ಟು 10 ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ.

33 ದೇಶಗಳ 191 ಶೂಟರ್‌ಗಳು ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ.

ಮುಖ್ಯಾಂಶಗಳು
- ವರ್ಷದ ಬಳಿಕ ಅಂತರರಾಷ್ಟ್ರೀಯ ಮಟ್ಟದ ಶೂಟಿಂಗ್
- ಒಟ್ಟು 10 ವಿಭಾಗಗಳಲ್ಲಿ ಸ್ಪರ್ಧೆ
- 33 ದೇಶಗಳ 191 ಶೂಟರ್‌ಗಳಿಂದ ಅದೃಷ್ಟ ಪರೀಕ್ಷೆ

ಕಳೆದ ವರ್ಷ ಐಎಸ್‌ಎಸ್‌ಎಫ್ ರೂಪಿಸಿರುವ, ತಂಡ ವಿಭಾಗಗಳ ಹೊಸ ಮಾದರಿಯನ್ನು ಮೊದಲ ಬಾರಿ ಇಲ್ಲಿ ಪರಿಚಯಿಸಲಾಗುತ್ತಿದೆ.

ವಿಶ್ವ ರ್‍ಯಾಂಕಿಂಗ್ ಪಾಯಿಂಟ್ಸ್ ಆಧಾರದಲ್ಲಿ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಲು ಕೊನೆಯ ಅವಕಾಶ ಆಗಿರುವುದರಿಂದ ಕೈರೊ ವಿಶ್ವಕಪ್ ಇನ್ನಷ್ಟು ಮಹತ್ವ ಎನಿಸಿದೆ.

ಭಾರತದ ಪುರುಷರ ಸ್ಕೀಟ್ ತಂಡದಲ್ಲಿ ಅಂಗದ್ ಬಾಜ್ವಾ, ಮೈರಾಜ್ ಅಹಮ್ಮದ್ ಖಾನ್ ಹಾಗೂ ಗುರುಜೋವತ್ ಖಂಗುರಾ ಇದ್ದಾರೆ. ಗನೆಮತ್ ಶೆಕೋನ್, ಪರಿನಾಜ್ ಧಲಿವಾಲ್ ಹಾಗೂ ಕಾರ್ತಿಕಿ ಸಿಂಗ್ ಅವರು ಮಹಿಳಾ ತಂಡದಲ್ಲಿದ್ದು ಪದಕಗಳಿಗೆ ಗುರಿಯಿಡಲಿದ್ದಾರೆ.

'ಇದು ಈ ವರ್ಷದ ಮೊದಲ ವಿಶ್ವಕಪ್ ಟೂರ್ನಿಯಾಗಿದ್ದು, ಕೋವಿಡ್–19 ಲಾಕ್‌ಡೌನ್ ಬಳಿಕ ನಡೆಯುತ್ತಿರುವುದಿಂದ ಮಹತ್ವ ಎನಿಸಿದೆ. ಈ ಟೂರ್ನಿಯ ಮೂಲಕ ಶುಭಾರಂಭವನ್ನು ನಿರೀಕ್ಷಿಸುತ್ತಿದ್ದೇವೆ' ಎಂದು ಭಾರತ ಶಾಟ್‌ಗನ್ ತಂಡದ ಮುಖ್ಯ ಕೋಚ್ ಮನ್‌ಶೇರ್ ಸಿಂಗ್ ಹೇಳಿದ್ದಾರೆ.

'ಹತ್ತೂ ವಿಭಾಗಗಳ ಫೈನಲ್ಸ್‌ಗಳನ್ನು ತನ್ನ ಸಾಮಾಜಿಕ ಜಾಲತಾಣಗಳಲ್ಲಿ ನೇರ ಪ್ರಸಾರ ಮಾಡಲಾಗುವುದು' ಎಂದು ಐಎಸ್‌ಎಸ್‌ಎಫ್ ತಿಳಿಸಿದೆ.

ಎಫ್‌ಸಿಬಿಯು ಜಯಭೇರಿ

ಬೆಂಗಳೂರು: ಉತ್ತಮ ಆಟವಾಡಿದ ಎಫ್‌ಸಿ ಬೆಂಗಳೂರು ಯುನೈಟೆಡ್ (ಎಫ್‌ಸಿಬಿಯು) ತಂಡವು 2–1ರಿಂದ ಎಎಸ್‌ಸಿ ಸೆಂಟರ್ ತಂಡವನ್ನು ಸೋಲಿಸಿತು. ಇಲ್ಲಿ ನಡೆಯುತ್ತಿರುವ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಎಫ್‌ಸಿಬಿಯು ಪರ ಚೇತನ್ ಕೋಮಾರ್ ಪಂತ್ (75ನೇ ನಿಮಿಷ) ಹಾಗೂ ಮೊಹಮ್ಮದ್ ಅಸ್ರರ್ ರೆಹಬರ್ (90 + 4) ಗೋಲು ದಾಖಲಿಸಿದರು.

ಎಎಸ್‌ಸಿ ಸೆಂಟರ್ ತಂಡದ ತ್ಯಾಗರಾಜನ್ ಅವರು 11ನೇ ನಿಮಿಷದಲ್ಲಿ ಯಶಸ್ಸು ಸಾಧಿಸಿದ್ದರು.

ಮತ್ತೊಂದು ಹಣಾಹಣಿಯಲ್ಲಿ ಬೆಂಗಳೂರು ಈಗಲ್ಸ್ ಎಫ್‌ಸಿ ತಂಡವು 2–1ರಿಂದ ಯಂಗ್ ಚಾಲೆಂಜರ್ಸ್ ತಂಡವನ್ನು ಮಣಿಸಿತು.

ಕ್ಲೀಟಸ್ ಡಾಮ್ನಿಕ್ ಜಾಕಬ್ ಪಾಲ್ (21ನೇ ನಿಮಿಷ) ಹಾಗೂ ಗೋಪಿ ಕೆ. (47ನೇ ನಿಮಿಷ) ಈಗಲ್ಸ್ ತಂಡದ ಗೆಲುವಿನ ರೂವಾರಿಗಳಾದರು.

ಯಂಗ್ ಚಾಲೆಂಜರ್ಸ್‌ನ ಅಂಕಿತ್ ಪಿ. 71ನೇ ನಿಮಿಷದಲ್ಲಿ ಗೋಲು ಹೊಡೆದು ತಂಡದ ಹಿನ್ನಡೆಯನ್ನು ತಗ್ಗಿಸಿದರು.

ಅಹ್ಮದಾಬಾದ್, ವಿಶ್ವದ ಅತಿದೊಡ್ಡ ಕ್ರಿಕೆಟ್ ಸ್ಟೇಡಿಯಂನಲ್ಲಿ ಮೂರನೆಯ ಟೆಸ್ಟ್ ಪಂದ್ಯ ಆಯೋಜಿಸುತ್ತಿದೆ!

ಭಾರತ–ಇಂಗ್ಲೆಂಡ್ ಮೂರನೇ ಟೆಸ್ಟ್ ಕ್ರಿಕೆಟ್ ಪಂದ್ಯ ಇಂದಿನಿಂದ: ವಿರಾಟ್–ರೂಟ್ ಪಡೆಗಳ ಹಣಾಹಣಿ

ಮೊಟೇರಾ ಸಂಜೆಗಳಿಗೆ ನಸುಗೆಂಪಿನ ರಂಗು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಮೊಟೇರಾದ ಸರ್ದಾರ್ ವಲ್ಲಭಭಾಯಿ ಪಟೇಲ್ ಕ್ರೀಡಾಂಗಣದಲ್ಲಿ ಬುಧವಾರ ಭಾರತ ಮತ್ತು ಇಂಗ್ಲೆಂಡ್ ನಡುವೆ ಆರಂಭವಾಗಲಿರುವ ಮೂರನೇ ಟೆಸ್ಟ್‌ನಲ್ಲಿ ನಸುಗೆಂಪು ಚೆಂಡು ಪುಟಿಯಲಿದೆ.

ವಿಶ್ವದ ಬೃಹತ್ ಕ್ರಿಕೆಟ್ ಮೈದಾನವಾಗಿ ಪರಿವರ್ತನೆಗೊಂಡಿರುವ ಈ ತಾಣದಲ್ಲಿ ಮೊದಲ ಹಗಲು–ರಾತ್ರಿ ಟೆಸ್ಟ್ ನಡೆಯಲಿದೆ.

ಈ ಹಿಂದೆ ಇಲ್ಲಿ ಇದ್ದ ಕ್ರೀಡಾಂಗಣದಲ್ಲಿ ಹಲವು ಅವಿಸ್ಮರಣೀಯ ದಾಖಲೆಗಳು ಇತಿಹಾಸದ ಪುಟ ಸೇರಿವೆ. ಸುನಿಲ್ ಗಾವಸ್ಕರ್ ಟೆಸ್ಟ್ ಕ್ರಿಕೆಟ್‌ನಲ್ಲಿ 10 ಸಾವಿರ ರನ್ ಮೈಲುಗಲ್ಲು ಮುಟ್ಟಿದ್ದು ಇದೇ ಕ್ರೀಡಾಂಗಣದಲ್ಲಿ. ಕಪಿಲ್ ದೇವ್ ತಮ್ಮ ಜೀವನಶ್ರೇಷ್ಠ ಬೌಲಿಂಗ್ (83ಕ್ಕೆ9) ಸಾಧನೆ ಮಾಡಿದ ಜಾಗ ಇದು. ಅದೇ ಸಂದರ್ಭದಲ್ಲಿ ರಿಚರ್ಡ್ ಹ್ಯಾಡ್ಲಿಯ ವಿಕೆಟ್ ಗಳಿಕೆಯ (ಆಗಿನ ವಿಶ್ವದಾಖಲೆ)ನ್ನು ಕಪಿಲ್ ಮೀರಿದ್ದರು.

ಇದೀಗ ಇಂಗ್ಲೆಂಡ್ ವಿರುದ್ಧ ಕಣಕ್ಕಿಳಿಯಲಿರುವ ಭಾರತದ ಮಧ್ಯಮವೇಗಿ ಇಶಾಂತ್ ಶರ್ಮಾ ತಮ್ಮ ನೂರನೇ ಟೆಸ್ಟ್ ಆಡಲಿದ್ದಾರೆ. 1.10 ಲಕ್ಷ ಆಸನ ಸಾಮರ್ಥ್ಯ ಇರುವ ಕ್ರೀಡಾಂಗಣದಲ್ಲಿ ಕೋವಿಡ್ ಕಾರಣದಿಂದ ಶೇ 50ರಷ್ಟು ಸಂಖ್ಯೆಯ ಜನರಿಗೆ ಅವಕಾಶ ನೀಡಲಾಗುತ್ತಿದೆ. ಅದರಿಂದಾಗಿ 55 ಸಾವಿರ ಪ್ರೇಕ್ಷಕರು ಸೇರುವ ಸಾಧ್ಯತೆ ಇದೆ. ಚೆನ್ನೈನಲ್ಲಿ ನಡೆದಿದ್ದ ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಉಭಯ ತಂಡಗಳು 1–1ರ ಸಮಬಲ ಸಾಧಿಸಿವೆ. ಇದೀಗ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪ್ರವೇಶಕ್ಕಾಗಿ ಭಾರತ ತಂಡವು ಇನ್ನುಳಿದಿರುವ ಎರಡು ಪಂದ್ಯಗಳಲ್ಲಿ ಕನಿಷ್ಠ ಒಂದರಲ್ಲಿ ಜಯಿಸಬೇಕು. ಯಾವುದೇ ಪಂದ್ಯದಲ್ಲಿಯೂ ಸೋಲಬಾರದು. ಅದರಿಂದಾಗಿ ಈ ಪಂದ್ಯವು ವಿರಾಟ್ ಕೊಹ್ಲಿ ಬಳಗಕ್ಕೆ ಮಹತ್ವದ್ದಾಗಿದೆ.

ಸರಣಿಯ 2ನೇ ಟೆಸ್ಟ್‌ನಲ್ಲಿ ಆರ್. ಅಶ್ವಿನ್ ಅವರ ಆಲ್‌ರೌಂಡ್ ಆಟಕ್ಕೆ ಇಂಗ್ಲೆಂಡ್ ಬಸವಳಿದಿತ್ತು. ಆ ಪಂದ್ಯದಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಶತಕ ಗಳಿಸಿದ್ದರು. ಪದಾರ್ಪಣೆ ಮಾಡಿದ್ದ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಕೂಡ ಐದು ವಿಕೆಟ್‌ಗಳ ಗೊಂಚಲು ಗಳಿಸಿದ್ದರು. ಅವರಿಗೆ ಮೊಟೇರಾ ಮೈದಾನವು ತವರಿನಂಗಳ. ಇಲ್ಲಿಯೂ ಸ್ಪಿನ್ನರ್‌ಗಳಿಗೆ ನೆರವು ಸಿಗುವುದು ಬಹುತೇಕ ಖಚಿತವಾಗಿದೆ. ಮುಸ್ಸಂಜೆಯ ಇಬ್ಬನಿಯಲ್ಲಿ ಚೆಂಡಿನ ಮೇಲೆ ಕೈಹಿಡಿತ ಸಾಧಿಸುವ ಬೌಲರ್‌ಗಳಿಗೆ ಹೆಚ್ಚು ಯಶಸ್ಸು ಸಿಗಲಿದೆ.

ಉಮೇಶ್ ಯಾದವ್ ತಂಡಕ್ಕೆ ಮರಳಿದ್ದು ಸ್ಥಾನ ಪಡೆಯುವ ಸಾಧ್ಯತೆ ಇದೆ. ಹೋದ ಪಂದ್ಯದಲ್ಲಿ ವಿಶ್ರಾಂತಿ ಪಡೆದಿದ್ದ ಜಸ್‌ಪ್ರೀತ್ ಬೂಮ್ರಾ ಹನ್ನೊಂದರ ಬಳಗದಲ್ಲಿ ಜಾಗ ಪಡೆದರೆ, ಮೊಹಮ್ಮದ್ ಸಿರಾಜ್ ವಿಶ್ರಾಂತಿ ಪಡೆಯಬಹುದು. ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಕೂಡ ಬೆಂಚ್‌ಗೆ ಮರಳಬಹುದು. ಅಶ್ವಿನ್ ಮತ್ತು ಅಕ್ಷರ್ ಸ್ಪಿನ್ ಹೊಣೆ ನೋಡಿಕೊಳ್ಳುವುದು ಖಚಿತ. ಆರಂಭಿಕ ಬ್ಯಾಟ್ಸ್‌ಮನ್ ಶುಭಮನ್ ಗಿಲ್ ಕಳೆದೆರಡೂ ಪಂದ್ಯಗಳಲ್ಲಿ ಆಡಿದ್ದಾರೆ. ಅವರಿಗೆ ವಿಶ್ರಾಂತಿ ಕೊಟ್ಟು ಮಯಂಕ್ ಅಗರವಾಲ್ ಅವರನ್ನು ಕಣಕ್ಕಿಳಿಸುವ ಸಾಧ್ಯತೆ ಇದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯಗೆ ಸ್ಥಾನ ಲಭಿಸುವ ಬಗ್ಗೆ ಖಚಿತತೆ ಇಲ್ಲ. ಇಂಗ್ಲೆಂಡ್ ತಂಡಕ್ಕೆ ಜಾನಿ ಬೆಸ್ಟೊ ಮರಳಿರುವುದರಿಂದ ಬ್ಯಾಟಿಂಗ್ ವಿಭಾಗ ಮತ್ತಷ್ಟು ಬಲಗೊಂಡಿದೆ. ಮೋಯಿನ್ ಅಲಿ ಸ್ವದೇಶಕ್ಕೆ ಮರಳಿರುವುದರಿಂದ ಡಾಮ್ ಬೆಸ್ ಕಣಕ್ಕಿಳಿಯುವರು. ರೋರಿ ಬರ್ನ್ಸ್ ಬದಲು ಜ್ಯಾಕ್ ಕ್ರಾಲಿ ಸ್ಥಾನ ಪಡೆಯಲಿದ್ದಾರೆ. ಜೇಮ್ಸ್ ಆ್ಯಂಡರ್ಸನ್ ಮತ್ತೆ ಕಣಕ್ಕಿಳಿಯಲಿದ್ದಾರೆ. ಅವರಿಗೆ ಜೋಫ್ರಾ ಆರ್ಚರ್ ಅಥವಾ ಸ್ಟುವರ್ಟ್ ಬ್ರಾಡ್ ಜೊತೆಗೂಡಬಹುದು.

ಧೋನಿ ದಾಖಲೆ ಮೀರುವರೆ ಕೊಹ್ಲಿ?: ಈ ಪಂದ್ಯದಲ್ಲಿ ಭಾರತ ಗೆದ್ದರೆ ನಾಯಕನಾಗಿ ತವರಿನಲ್ಲಿ ಅತಿ ಹೆಚ್ಚು ಪಂದ್ಯ ಗೆಲ್ಲಿಸಿದ ಮಹೇಂದ್ರಸಿಂಗ್ ಧೋನಿ (21 ಪಂದ್ಯ) ದಾಖಲೆಯನ್ನು ವಿರಾಟ್ ಕೊಹ್ಲಿ ಮೀರಲಿದ್ದಾರೆ.

ಅಭ್ಯಾಸ ನಡೆಸಿದ ಸಂದರ್ಭದಲ್ಲಿ ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಆರ್. ಅಶ್ವಿನ್ ವಿಶ್ವದರ್ಜೆಯ ಸ್ಪಿನ್ನರ್. ಅವರ ಎಸೆತಗಳನ್ನು ಎದುರಿಸುವುದು ಸವಾಲಿನದ್ದು. ಅದರಲ್ಲೂ ಭಾರತದಲ್ಲಿ ಅವರು ಮತ್ತಷ್ಟು ಪರಿಣಾಮಕಾರಿಯಾಗುತ್ತಾರೆ

–ಜೋ ರೂಟ್

ಇಂಗ್ಲೆಂಡ್ ತಂಡದ ನಾಯಕ

ವೇಗಿಗಳನ್ನು ನಿರ್ಲಕ್ಷಿಸುವಂತಿಲ್ಲ: ಕೊಹ್ಲಿ

ಅಹಮದಾಬಾದ್ (ಪಿಟಿಐ): ಈ ಪಂದ್ಯದಲ್ಲಿ ಸ್ಪಿನ್ನರ್‌ಗಳ ಪಾತ್ರ ಮಹತ್ವದ್ದಾಗುವ ಸಾಧ್ಯತೆ ಹೆಚ್ಚು. ಆದರೆ, ಇದು ಪಿಂಕ್ ಬಾಲ್ ಟೆಸ್ಟ್ ಆಗಿರುವುದರಿಂದ ವೇಗಿಗಳನ್ನೂ ನಿರ್ಲಕ್ಷಿಸುವಂತಿಲ್ಲ ಎಂದು ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚೆಂಡು ಸ್ವಿಂಗ್ ಆಗುವುದಿಲ್ಲ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. 2019ರಲ್ಲಿ ಪಿಂಕ್ ಬಾಲ್ ಟೆಸ್ಟ್ ಆಡಿದ್ದಾಗ ಇಂತಹ ಅನುಭವ ಆಗಿದೆ' ಎಂದರು.

ಮೊಟೇರಾದಲ್ಲಿ ಮುಖಾಮುಖಿ ಫಲಿತಾಂಶ	
ಪಂದ್ಯ	2
ಭಾರತ ಜಯ	1
ಡ್ರಾ	1

ಮೊಟೇರಾ ಕ್ರೀಡಾಂಗಣದಲ್ಲಿ ಗರಿಷ್ಠ ಮೊತ್ತ

ಸ್ಕೋರು	ದೇಶ	ಎದುರಾಳಿ	ವರ್ಷ
7ಕ್ಕೆ760ಡಿ.	ಶ್ರೀಲಂಕಾ	ಭಾರತ	2009
7ಕ್ಕೆ583ಡಿ.	ಭಾರತ	ನ್ಯೂಜಿಲೆಂಡ್	1999
8ಕ್ಕೆ521ಡಿ.	ಭಾರತ	ಇಂಗ್ಲೆಂಡ್	2012

ಮೊಟೇರಾದಲ್ಲಿ ಗರಿಷ್ಠ ರನ್ ಸಾಧನೆ (ಇನಿಂಗ್ಸ್‌ವೊಂದರಲ್ಲಿ)

ಬ್ಯಾಟ್ಸ್‌ಮನ್	ರನ್	ದೇಶ	ಎದುರಾಳಿ	ವರ್ಷ
ಮಹೇಲ ಜಯವರ್ಧನೆ	275	ಶ್ರೀಲಂಕಾ	ಭಾರತ	2009
ರಾಹುಲ್ ದ್ರಾವಿಡ್	222	ಭಾರತ	ನ್ಯೂಜಿಲೆಂಡ್	2003
ಎಬಿ ಡಿವಿಲಿಯರ್ಸ್	217*	ದ. ಆಫ್ರಿಕಾ	ಭಾರತ	2008
ಸಚಿನ್ ತೆಂಡೂಲ್ಕರ್	217	ಭಾರತ	ನ್ಯೂಜಿಲೆಂಡ್	1999

ಮೊಟೇರಾದಲ್ಲಿ ಶ್ರೇಷ್ಠ ವಿಕೆಟ್ ಸಾಧನೆ (ಇನಿಂಗ್ಸ್‌ವೊಂದರಲ್ಲಿ)

ಬೌಲರ್	ವಿಕೆಟ್	ದೇಶ	ಎದುರಾಳಿ	ವರ್ಷ
ಕಪಿಲ್ ದೇವ್	83ಕ್ಕೆ9	ಭಾರತ	ವೆಸ್ಟ್ ಇಂಡೀಸ್	1983
ಹರ್ಭಜನ್ ಸಿಂಗ್	62ಕ್ಕೆ7	ಭಾರತ	ಶ್ರೀಲಂಕಾ	2005
ಅನಿಲ್ ಕುಂಬ್ಳೆ	115ಕ್ಕೆ7	ಭಾರತ	ಇಂಗ್ಲೆಂಡ್	2001
ಜಾವಗಲ್ ಶ್ರೀನಾಥ್	21ಕ್ಕೆ6	ಭಾರತ	ದಕ್ಷಿಣ ಆಫ್ರಿಕಾ	1996

100 ವೇಗಿ ಇಶಾಂತ್ ಶರ್ಮಾ ಅವರಿಗೆ ಇದು 100ನೇ ಟೆಸ್ಟ್ ಪಂದ್ಯ. ಭಾರತದ ಮಧ್ಯಮವೇಗಿಗಳ ಪೈಕಿ ಕಪಿಲ್ ದೇವ್ (131) ಮಾತ್ರ ನೂರಕ್ಕಿಂತ ಹೆಚ್ಚು ಪಂದ್ಯಗಳನ್ನು ಆಡಿದ್ದಾರೆ.

ಇಂಗ್ಲೆಂಡ್ ತಂಡಕ್ಕೆ ಅತಿ ಹೆಚ್ಚು ಟೆಸ್ಟ್ ಪಂದ್ಯ ಗೆದ್ದುಕೊಟ್ಟ ನಾಯಕ ಎನಿಸಿಕೊಳ್ಳಲು ಜೋ ರೂಟ್ ಅವರಿಗೆ ಇನ್ನು ಒಂದು ಪಂದ್ಯದ ಜಯ ಬೇಕಿದೆ. ಈ ದಾಖಲೆ ಮೈಕೆಲ್ ವಾನ್ (26) ಹೆಸರಿನಲ್ಲಿದೆ. 48 ಟೆಸ್ಟ್ ಪಂದ್ಯಗಳ ಪೈಕಿ ರೂಟ್ 26 ಟೆಸ್ಟ್‌ಗಳನ್ನು ಗೆದ್ದುಕೊಂಡಿದ್ದಾರೆ.

ತಂಡಗಳು: ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ, ಮಯಂಕ್ ಅಗರವಾಲ್, ಶುಭಮನ್ ಗಿಲ್, ಚೇತೇಶ್ವರ್ ಪೂಜಾರ, ಅಜಿಂಕ್ಯ ರಹಾನೆ (ಉಪನಾಯಕ), ಕೆ.ಎಲ್. ರಾಹುಲ್, ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್ (ವಿಕೆಟ್‌ಕೀಪರ್), ವೃದ್ಧಿಮಾನ್ ಸಹಾ (ವಿಕೆಟ್‌ಕೀಪರ್), ಆರ್. ಅಶ್ವಿನ್, ಕುಲದೀಪ್ ಯಾದವ್, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಇಶಾಂತ್ ಶರ್ಮಾ, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಉಮೇಶ್ ಯಾದವ್.

ಇಂಗ್ಲೆಂಡ್: ಜೋ ರೂಟ್ (ನಾಯಕ), ಜೇಮ್ಸ್ ಆ್ಯಂಡರ್ಸನ್, ಜೋಫ್ರಾ ಆರ್ಚರ್, ಜಾನಿ ಬೆಸ್ಟೊ, ಡಾಮ್ನಿಕ್ ಬೆಸ್, ಸ್ಟುವರ್ಟ್ ಬ್ರಾಡ್, ರೋರಿ ಬರ್ನ್ಸ್, ಜ್ಯಾಕ್ ಕ್ರಾಲಿ, ಬೆನ್ ಫೋಕ್ಸ್, ಡ್ಯಾನ್ ಲಾರೆನ್ಸ್, ಜ್ಯಾಕ್ ಲೀಚ್, ಒಲಿ ಪೋಪ್, ಡಾಮ್ ಸಿಬ್ಲಿ, ಬೆನ್ ಸ್ಟೋಕ್ಸ್, ಒಲಿ ಸ್ಟೋನ್, ಕ್ರಿಸ್ ವೋಕ್ಸ್, ಮಾರ್ಕ್ ವುಡ್

ಪಂದ್ಯ ಆರಂಭ: ಮಧ್ಯಾಹ್ನ 2.30ರಿಂದ

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಕ್ರಿಕೆಟ್‌ಗೆ ವಿದಾಯ ಹೇಳಿದ ಉಪುಲ್ ತರಂಗ

ಕೊಲಂಬೊ (ಪಿಟಿಐ): ಶ್ರೀಲಂಕಾದ ಅನುಭವಿ ಆಟಗಾರ ಉಪುಲ್ ತರಂಗ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಮಂಗಳವಾರ ನಿವೃತ್ತಿ ಘೋಷಿಸಿದ್ದಾರೆ. 36 ವರ್ಷದ ತರಂಗ, ಎಡಗೈ ಬ್ಯಾಟ್ಸ್‌ಮನ್ ಆಗಿದ್ದರು. ಕೆಲವು ಪಂದ್ಯಗಳಲ್ಲಿ ತಂಡದ ನಾಯಕನಾಗಿಯೂ ಜವಾಬ್ದಾರಿ ನಿಭಾಯಿಸಿದ್ದರು.

2005ರಲ್ಲಿ ಭಾರತ ವಿರುದ್ಧದ ಟೆಸ್ಟ್ ಪಂದ್ಯದೊಂದಿಗೆ ತರಂಗ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ್ದರು. 2017ರಲ್ಲಿ ಪಲ್ಲೆಕೆಲೆಯಲ್ಲಿ ಅದೇ ತಂಡದ ವಿರುದ್ಧ ಅವರು ಕೊನೆಯ ಟೆಸ್ಟ್ ಆಡಿದ್ದರು.

'ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಲು ನಿರ್ಧರಿಸಿದ್ದೇನೆ' ಎಂದು ತರಂಗ ತಮ್ಮ ಟ್ವಿಟರ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ರಾಷ್ಟ್ರೀಯ ತಂಡದ ಪರ ತರಂಗ, 31 ಟೆಸ್ಟ್ ಪಂದ್ಯಗಳಲ್ಲಿ 1754 ರನ್ ಗಳಿಸಿದ್ದರು. ಅದರಲ್ಲಿ ಮೂರು ಶತಕ ಮತ್ತು ಐದು ಅರ್ಧಶತಕಗಳಿವೆ.

235 ಏಕದಿನ ಪಂದ್ಯಗಳಲ್ಲಿ 15 ಶತಕಗಳುಳ್ಳ 6951 ರನ್, 26 ಟಿ20 ಪಂದ್ಯಗಳಿಂದ 407 ರನ್ ಕಲೆಹಾಕಿದ್ದಾರೆ. ತರಂಗ ಕಡೇ ಏಕದಿನ ಪಂದ್ಯ ಆಡಿದ್ದು 2019ರಲ್ಲಿ ದಕ್ಷಿಣ ಆಫ್ರಿಕಾ ತಂಡದ ವಿರುದ್ಧ.

ಉಪುಲ್ ತರಂಗ–ಎಎಫ್‌ಪಿ ಚಿತ್ರ

ಬಿಷನ್ ಬೇಡಿಗೆ ಹೃದಯ ಶಸ್ತ್ರಚಿಕಿತ್ಸೆ

ನವದೆಹಲಿ (ಪಿಟಿಐ): ಕ್ರಿಕೆಟ್ ದಂತಕಥೆ ಬಿಷನ್ ಸಿಂಗ್ ಬೇಡಿ ಅವರಿಗೆ ಬೈಪಾಸ್ ಸರ್ಜರಿ ಮಾಡಲಾಗಿದೆ. ಅವರ ಆರೋಗ್ಯ ಸ್ಥಿರವಾಗಿದೆ.

ಬಿಷನ್ ಸಿಂಗ್ ಬೇಡಿ

74 ವರ್ಷದ ಬೇಡಿ ಅವರು ಮೂರು ದಿನಗಳ ಹಿಂದೆ ತೀವ್ರ ಎದೆನೋವಿನಿಂದ ಬಳಲಿದ್ದರು. ಕೂಡಲೇ ಅವರನ್ನು ನಗರದ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಗಲೇ ಅವರಿಗೆ ಬೈಪಾಸ್ ಸರ್ಜರಿ ನಡೆಸಲಾಯಿತು ಎಂದು ಬೇಡಿ ಕುಟುಂಬದ ಆಪ್ತರು ತಿಳಿಸಿದ್ದಾರೆ.

'ಅವರೀಗ ಚೇತರಿಸಿಕೊಳ್ಳುತ್ತಿದ್ದಾರೆ. ಶೀಘ್ರದಲ್ಲಿಯೇ ಆಸ್ಪತ್ರೆಯಿಂದ ಮನೆಗೆ ತೆರಳುವ ನಿರೀಕ್ಷೆ ಇದೆ' ಎಂದೂ ಹೇಳಿದ್ದಾರೆ.

ಎಡಗೈ ಸ್ಪಿನ್ನರ್ ಬೇಡಿ ಅವರು, ಭಾರತ ತಂಡವನ್ನು 67 ಟೆಸ್ಟ್, 10 ಏಕದಿನ ಪಂದ್ಯಗಳಲ್ಲಿ ಪ್ರತಿನಿಧಿಸಿದ್ದರು. ಟೆಸ್ಟ್‌ನಲ್ಲಿ 266 ಮತ್ತು ಏಕದಿನ ಕ್ರಿಕೆಟ್‌ನಲ್ಲಿ ಏಳು ವಿಕೆಟ್‌ಗಳನ್ನು ಪಡೆದಿದ್ದಾರೆ.

ಐಎಸ್‌ಎಲ್ ಟೂರ್ನಿ: ನಾರ್ತ್ ಈಸ್ಟ್‌ಗೆ ಜಯ

ಫತೋರ್ಡ: ನಾರ್ತ್ ಈಸ್ಟ್ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ 2–1 ಗೋಲುಗಳಿಂದ ಈಸ್ಟ್ ಬೆಂಗಾಲ್ ವಿರುದ್ಧ ಜಯಿಸಿತು.

ಫತೋರ್ಡ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ನಾರ್ತ್‌ಈಸ್ಟ್ ತಂಡವು ವಿ.ಪಿ. ಸುಹೇರ್ (48ನೇ ನಿ) ಗಳಿಸಿದ ಮತ್ತು ಸಾರ್ಥಕ್ ಗೊಲಿಯೇ ಅವರು 55ನೇ ನಿಮಿಷದಲ್ಲಿ ನೀಡಿದ ಉಡುಗೊರೆ ಗೋಲಿನಿಂದ ಜಯಿಸಿತು. 86ನೇ ನಿಮಿಷದಲ್ಲಿ ಸಾರ್ಥಕ್ ಅವರು ತಮ್ಮ ತಂಡದ ಪರ ಒಂದು ಗೋಲು ಹೊಡೆದರು